₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಬುಧವಾರ 20.08.2025** **ಸಂಪುಟ:** 10 **ಸಂಚಿಕೆ:** 218 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ



→10

ಮಣಿಕಾ ಮಿಸ್ ಯುನಿವರ್ಸ್ ಇಂಡಿಯ

ರಾಜಸ್ಥಾನದ ಶ್ರೀ ಗಂಗಾ ನಗರದ ನಿವಾಸಿ ಮಣಿಕಾ ವಿಶ್ವಕರ್ಮ 'ಮಿಸ್ ಯೂನಿವರ್ಸ್ ಇಂಡಿಯಾ- 2025' ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. ನ.21ರಂದು ಥಾಯ್ಲೆಂಡ್‌ನಲ್ಲಿ 74ನೇ ಮಿಸ್ ಯೂನಿವರ್ಸ್ ಸ್ಪರ್ಧೆ ನಡೆಯಲಿದ್ದು, ಮಣಿಕಾ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಮುಸುಕುಧಾರಿ ಆರೋಪಗಳ ಬಗ್ಗೆ ವೀರೇಂದ್ರ ಹೆಗ್ಗಡೆ ಮೊದಲ ಪ್ರತಿಕ್ರಿಯೆ

ಹೊಸ ಪೀಳಿಗೆ, ಯುವಜನತೆಯನ್ನು ಕ್ಷೇತ್ರದಿಂದ ದೂರವಾಗಿಸುವ ಸಂಚು

ಧರ್ಮಸ್ಥಳ: ಕ್ಷೇತ್ರದ ವಿರುದ್ಧ, ಕುಟುಂಬದ ವಿರುದ್ಧ ಸುಳ್ಳು ಆರೋಪ, ಅಪ ಪ್ರಚಾರ ನಡೆದಿದ್ದರಿಂದ ಬಹಳ ನೋವಾಗಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ಅವರು ಮಂಗಳವಾರ ಹೇಳಿದ್ದಾರೆ.

ರಾಜ್ಯ ಪೊಲೀಸರ ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಯನ್ನು ಸ್ವಾಗತಿಸುವೆ ಎಂದಿರುವ ವಿರೇಂದ್ರ ಹೆಗ್ಗಡೆ ಅವರು, ಸತ್ಯ ಹೊರಬರಬೇಕು. ಆಧಾರ ರಹಿತ ಆರೋಪಗಳ ಸತ್ಯಾಸತ್ಯತೆ ತನಿಖೆಯಿಂದ ಗೊತ್ತಾಗಲಿದೆ. ಮುಕ್ತವಾಗಿ ತನಿಖೆ ನಡೆಯುತ್ತಿದೆ. ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇವೆ. ಧರ್ಮಸ್ಥಳ ಮೇಲಿನ ಕಾರ್ಮೋಡ ಸರಿಯಲಿದೆ ಎಂದು 'ಪಿಟಿಐ' ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಭಕ್ತರ ನಂಬಿಕೆ: ಮುಸುಕುಧಾರಿ ದೂರುದಾರನ ಆರೋಪಗಳೆಲ್ಲವೂ ಸತ್ಯಕ್ಕೆ ದೂರವಾಗಿವೆ. ಇಂಥ ಸುಳ್ಳು ಆರೋಪ, ದೂರುಗಳಿಂದ ಮನಸ್ಸಿಗೆ ಬಹಳ ನೋವಾಗಿದೆ. ಧರ್ಮಸ್ಥಳ ಕ್ಷೇತ್ರದ ಬಗ್ಗೆ, ನನ್ನ ಬಗ್ಗೆ ಭಕ್ತರಿಗೆ ಭಾರೀ ನಂಬಿಕೆ ಇದೆ. ಹಾಗಾಗಿ ಈ ಆರೋಪಗಳಿಂದ ಅವರಿಗೂ ತುಂಬಾ ನೋವಾಗಿದೆ. ಭಕ್ತರಿಗೆ ಕ್ಷೇತ್ರದ ಮೇಲೆ ಸ್ವಲ್ಪವೂ ಅಪನಂಬಿಕೆ ಇಲ್ಲ. ಅವರು ಪೂರ್ಣ ವಿಶ್ವಾಸವಿರಿಸಿದ್ದಾರೆ. ಹಾಗಾಗಿಯೇ ಈಗಲೂ ಭಕ್ತರು ಮಂಜುನಾಥನ ದರ್ಶನಕ್ಕಾಗಿ ದೇವಸ್ಥಾನಕ್ಕೆ ಬರುತ್ತಿದ್ದಾರೆ ಎಂದು ರಾಜ್ಯಸಭೆ ಸದಸ್ಯರೂ ಆಗಿರುವ ವೀರೇಂದ್ರ ಹೆಗ್ಗಡೆ ಹೇಳಿದ್ದಾರೆ.

ಆರೋಪ ಆಧಾರ ರಹಿತ: ಮುಸುಕುದಾರಿಯ ಆರೋಪಿಸಿದಂತಹ ಯಾವುದೇ ಪ್ರಕರಣಗಳು ಕ್ಷೇತ್ರದಲ್ಲಿ ನಡೆದಿಲ್ಲ. ಸುಳ್ಳನ್ನೇ ಬೇಕಾದಂತೆ ಹೆಣೆದು ವ್ಯವಸ್ಥಿತವಾಗಿ ಸರಣಿ ಆರೋಪ ಮಾಡಲಾಗಿದೆ. ಈ ಎಲ್ಲಾ ಸುಳ್ಳುಗಳನ್ನೂ ಎಸ್‌ಐಟಿ ಅಧಿಕಾರಿಗಳು ತನಿಖೆ ಮೂಲಕ ಬಹಿರಂಗಪಡಿಸಬೇಕು ಎಂದು ಹೆಗ್ಗಡೆ ಅವರು ಆಗ್ರಹಿಸಿದ್ದಾರೆ. ಧರ್ಮಸ್ಥಳದ ಬಗ್ಗೆ ಸತತ ಅಪಪ್ರಚಾರ ಮಾಡಲಾಗುತ್ತಿದೆ. ಹಿಂದೆಯೂ ಬೇರೆ ಬೇರೆ ಕಾರಣಗಳಿಗಾಗಿ ಅಪಪ್ರಚಾರ ಮಾಡಲಾಗಿತ್ತು. ಪ್ರತಿ ಬಾರಿ ಧರ್ಮಸ್ಥಳ ಕ್ಷೇತ್ರವನ್ನೇ ಗುರಿಯಾಗಿರಿಸಿ ಆರೋಪ ಮಾಡಲು ಕಾರಣ ಏನು ಎನ್ನುವುದೇ ತಿಳಿಯುತ್ತಿಲ್ಲ. ಅದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತೇವೆ ಎಂದಿದ್ದಾರೆ. →4

ಸೌಜನ್ಯ ಪ್ರಕರಣದಲ್ಲೂ ಸುಳ್ಳು ಆರೋಪ

ವರ್ಷಗಳ ಹಿಂದೆ ಸೌಜನ್ಯ ಪ್ರಕರಣದಲ್ಲೂ ಸುಳ್ಳು ಆರೋಪ ಮಾಡ ಲಾಗಿತ್ತು. ನಮ್ಮ ಕುಟುಂಬದ ಸದಸ್ಯರ ಮೇಲೆಯೇ ಆರೋಪ ಮಾಡಿ ದ್ದರಿಂದ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿತ್ತು. ಆದರೆ ಕುಟುಂಬ ಸದಸ್ಯರು ಘಟನೆ ನಡೆದಾಗ ವಿದೇಶದಲ್ಲಿ ಇದ್ದರು. ವಿನಾಕಾರಣ ಪ್ರಕರಣದಲ್ಲಿ ಧರ್ಮಸ್ಥಳ ಹಾಗೂ ನಮ್ಮ ಕುಟುಂಬದ ವರನ್ನು ಸಿಲುಕಿಸುವ ಹುನ್ನಾರ ನಡೆಯಿತು ಎಂದು ವಿರೇಂದ್ರ ಹೆಗ್ಗಡೆ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಸೊಂಪಾದ ಪುಟಗಳು



ರಾಮನು ಕಾಡಿಗೆ ಹೋದಮೇಲೆ ದಶರಥನೇಕೆ ಸತ್ತ?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಬುರುಡೆ ಬಿಟ್ಟವರ ನಂಬಿ ಭಕ್ತರ ನಂಬಿಕೆ ಮೇಲೆ ಸವಾರಿ

ಲೋಕಮತ
ಎಚ್. ಆರ್. ಶ್ರೀಪಾದ ಭಾಗಿ 7

ದಾರಿದೀಪೋಕ್ತಿ

ಹಿಂದಕ್ಕೆ ಹೋಗಿ ಹೊಸ ಆರಂಭವನ್ನು ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಯಾರು ಬೇಕಾದರೂ ಇಂದೇ ಆರಂಭ ಮಾಡಿ ಹೊಸ ಕೊನೆಯನ್ನು ತಲುಪಲು ಸಾಧ್ಯವಿದೆ. ಆಗದ ಸಂಗತಿಯ ಬಗ್ಗೆ ಚಿಂತಿಸಿ ಫಲವಿಲ್ಲ.

ವಕ್ರತುಂಡೋಕ್ತಿ

ಜ್ಞಾನದ ಆಳಕ್ಕಿಂತ ಮಾತಿನ ವೇಗವೇ ಮೇಲು ಎಂದು ಭಾವಿಸಿದರೆ ನೀವು ಟಿವಿ ಡಿಬೇಟುಗಳಲ್ಲಿ ಭಾಗವಹಿಸಬಹುದು.

20 ವರ್ಷಗಳಿಗೆ ಎಸ್ಮಾ ವಿಸ್ತರಣೆ

ವಿಧಾನಸಭೆ: ಪದೆಪದೇ ಮುಷ್ಕರದ ಬೆದರಿಕೆ ಒಡ್ಡುವ ಸಾರಿಗೆ ನೌಕರರಿಗೆ 'ಬ್ರಹ್ಮಾಸ್ತ್ರ' ಎನಿಸಿರುವ ಎಸ್ಮಾ ಕಾಯಿದೆ 20 ವರ್ಷದ ಅವಧಿಗೆ ವಿಸ್ತರಣೆಗೆ ವಿಧಾನ ಸಭೆ ಅನುಮೋದನೆ ದೊರಕಿದೆ. ವಿಧಾನಸಭೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ತಿದ್ದುಪಡಿ ವಿಧೇಯಕ 2025 ಅನ್ನು ಮಂಡಿಸಿದರು. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯವ್ಯ ಕರ್ನಾಟಕ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ನೌಕರರು ಮುಷ್ಕರ ಮಾಡುವಂತಿಲ್ಲ ಎಂಬುದನ್ನು 2015 ರಲ್ಲಿ ಎಸ್ಮಾ ಹೇರುವ ಮೂಲಕ ನಿರ್ಬಂಧಿಸಲಾಗಿತ್ತು. ಆಗಲೂ ರಾಮ ಲಿಂಗಾರೆಡ್ಡಿ ಅವರೇ ಸಾರಿಗೆ ಸಚಿವ ರಾಗಿದ್ದರು. 2025ರ ಮೇ ತಿಂಗಳಲ್ಲಿ ಎಸ್ಮಾ ಅವಧಿ ಮುಗಿದಿತ್ತು. ಆದ್ದರಿಂದ ಇದನ್ನು ಮುಂದಿನ 20 ವರ್ಷಗಳಿಗೆ ವಿಸ್ತರಿಸಲಾಗಿದೆ. ಇದೇ ವೇಳೆ ಗಿಗ್ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಸಾಮಾಜಿಕ ಭದ್ರತೆ, ವೃತ್ತಿಜನ್ಯ ಆರೋಗ್ಯ ಮತ್ತು ಸುರಕ್ಷತೆಗೆ ಒತ್ತು ನೀಡುವ 2025ನೇ ಸಾಲಿನ ಕರ್ನಾಟಕ ವೇದಿಕೆ ಆಧರಿತ ಗಿಗ್ ಕಾರ್ಮಿಕರ ವಿಧೇಯಕಕ್ಕೆ ಅನುಮೋದನೆ ದೊರಕಿದೆ.

ಪರಿಶಿಷ್ಟರ ಮೀಸಲಿಗೆ ಸಂಪುಟ ಕೊನೆಗೂ ಒಪ್ಪಿಗೆ

ಎಡಗೈ, ಬಲಗೈಗೆ 6%, ಇತರೇ ವರ್ಗಕ್ಕೆ 5%

ಒಳಮೀಸಲಿಗೆ ಜೈ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಲಿತ ಸಮುದಾಯದ ಒಳಮೀಸಲಾತಿಗೆ ವಿಚಾರ ಸಂಬಂಧ ರಾಜ್ಯ ಸರಕಾರ ಐತಿಹಾಸಿಕ ಹೆಜ್ಜೆ ಇಟ್ಟಿದ್ದು, ನಾಗಮೋಹನ ದಾಸ್ ವರದಿಯಲ್ಲಿನ ಶಿಫಾರಸಿನಂತೆ ಒಟ್ಟು ಶೇ.17 ರಷ್ಟು ಮೀಸಲಾತಿ ನೀಡಲು ಅಸ್ತು ಎಂದಿದ್ದು, ಐದು ದಶಕಗಳ ಕನಸು ನನಸಾಗುವಂತಾಗಿದೆ.

ಮೀಸಲಾತಿ ಸಂಬಂಧ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆಯಾಗಿದ್ದು, ವರದಿಯಲ್ಲಿನ ವಿಚಾರ ಸಂಬಂಧ ಮೂರು ಪ್ರವರ್ಗಗಳಾಗಿ ವಿಂಗಡಿಸಿ ಮೀಸಲಾತಿ ಜಾರಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಇಂದು ಸಿಎಂ ಸಿದ್ದರಾಮಯ್ಯ ಸದನದಲ್ಲಿ ಘೋಷಣೆ ಮಾಡಲಿದ್ದಾರೆ ಎನ್ನಲಾಗಿದೆ. ಮೀಸಲಾತಿಯನ್ನು 3 ಗುಂಪುಗಳಾಗಿ ವರ್ಗೀಕರಿಸಿ, ಎಡಗೈಗೆ ಶೇ.6, ಬಲಗೈಗೆ ಶೇ. 6 ಹಾಗೂ ಅಸ್ಪೃಶ್ಯ ಜನಾಂಗಕ್ಕೆ ಶೇ.5 ಮೀಸಲಾತಿ ಹಂಚಿಕೆ ಮಾಡಲು ಸಭೆ ನಿರ್ಧರಿಸಿದೆ ಎನ್ನಲಾಗಿದೆ.

ಇದರಿಂದಾಗಿ ಎಡಗೈ ಸಮುದಾಯದ ಒಟ್ಟು 18 ಜಾತಿಗೆ ಅನುಕೂಲವಾಗಲಿದ್ದು, ಬಲಗೈ ಸಮುದಾಯದ ಒಟ್ಟು 20 ಜಾತಿ ಹಾಗೂ ಇತರೆ(ಅಸ್ಪೃಶ್ಯ) ಸಮುದಾಯದ ಒಟ್ಟು 63 ಜಾತಿಗಳಿಗೆ ಈ ಅನುಪಾತ ಹಂಚಿಕೆಯಾಗಲಿದೆ ಎನ್ನಲಾಗಿದೆ.

ಸಭೆಯಲ್ಲಿ ಬಿರುಸಿನ ಚರ್ಚೆಯಾಗಿದ್ದು, ಸಚಿವ ಶಿವರಾಜ್ ತಂಗಡಗಿ ಭೋವಿ ಸಮುದಾಯಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ ಎನ್ನಲಾಗಿದೆ. ಸಚಿವರಾದ ಡಾ.ಜಿ.ಪರಮೇಶ್ವರ್ ಹಾಗೂ ಎಚ್.ಸಿ.ಮಹದೇವಪ್ಪ ಅವರು ನಮಗೂ ಸಮಾನ ಮೀಸಲಾತಿ ಇರಲಿ ಎಂದು ತಮ್ಮ ವಾದ ಮಂಡಿಸಿದ್ದಾರೆ. ಅಂತಿಮವಾಗಿ ಹೊಸ ಸೂತ್ರ ಸಂಪುಟ ಸಭೆಯಲ್ಲಿ ಪ್ರಸ್ತಾಪವಾಗಿದ್ದು, ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಸಮುದಾಯಕ್ಕೆ ಮೀಸಲಾದ ಪ್ರಮಾಣ ವಿಭಜನೆ ಪ್ರಸ್ತಾಪವಾಗಿದೆ. ಶೇ.1ರಷ್ಟಿರುವ ಮೀಸಲಾತಿ ಶೇ.0.50ರಂತೆ ಎಡ ಮತ್ತು ಬಲ ಸಮುದಾಯಕ್ಕೆ ಹಂಚುವ ಸೂತ್ರದ ಬಗ್ಗೆಯೂ ಗಂಭೀರ ಚರ್ಚೆಗಳಾಗಿದೆ.

ಪರಿಶಿಷ್ಟ ಕುಟುಂಬಗಳ ದತ್ತಾಂಶ ಸಂಗ್ರಹಿಸಲು ರಾಜ್ಯಾದ್ಯಂತ ಮೇ 5 ರಿಂದ ವಿವಿಧ ಹಂತಗಳಲ್ಲಿ ಪರಿಶಿಷ್ಟ ಜಾತಿ, ಉಪ ಜಾತಿ ಸಮಗ್ರ ಸಮೀಕ್ಷೆ ನಡೆಸಿತ್ತು. ಅದರಂತೆ ಆ.3 ರಂದು ಪರಿಶಿಷ್ಟ ಜಾತಿ ಒಳ ಮೀಸಲಾತಿ ಆಯೋಗದ ಅಧ್ಯಕ್ಷ ಎಚ್.ಎನ್.ನಾಗಮೋಹನದಾಸ್ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸಿದ್ದರು.

ಒಳ ಮೀಸಲಾತಿ ವರ್ಗೀ ಕರಣಕ್ಕೆ ಜಾತಿಗಳ ಶೈಕ್ಷಣಿಕ ಹಿಂ ದುಳಿದಿರುವಿಕೆ, ಸರ್ಕಾರಿ ಉದ್ಯೋಗದಲ್ಲಿ ಅಗತ್ಯ ಪ್ರಾತಿನಿಧ್ಯದ ಕೊರತೆ, ಸಾಮಾಜಿಕ ಹಿಂದುಳಿದಿರುವಿಕೆಯ ಮಾನದಂಡಗಳನ್ನು ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆ ಮಾನದಂಡಗಳ ಆಧಾರದಲ್ಲಿಯೇ ಮೀಸಲಾತಿ ಹಂಚಿಕೆ ಮಾಡಲಾಗಿದೆ ಎಂದು ಆಯೋಗ ತನ್ನ ವರದಿಯಲ್ಲಿ ತಿಳಿಸಿತ್ತು. →4

ಯಾರಿಗೆಷ್ಟು ಪಾಲು?

ಎಡಗೈಗೆ ಶೇ.6 ಬಲಗೈಗೆ ಶೇ.6, ಲಂಬಾಣಿ, ಭೋವಿ, ಕೊರಚ, ಕೊರಮ, ಅಲೆಮಾರಿ ಸೇರಿದಂತೆ ಇತರೆ ಉಪಪಂಗಡಗಳಿಗೆ ಶೇ.5ಮೀಸಲಾತಿ ಕಲ್ಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ಹಿಂದೆ ಎಡಗೈಗೆ ಶೇ.6, ಬಲಗೈಗೆ ಶೇ.5, ಲಂಬಾಣಿ ಭೋವಿ ಸಮುದಾಯಕ್ಕೆ ಶೇ.4, ಅಲೆಮಾರಿಗಳಿಗೆ ಶೇ.1, ಆದಿ ಕರ್ನಾಟಕ, ಅದಿ ದ್ರಾವಿಡ ಸಮುದಾಯಗಳಿಗೆ ಶೇ.1 ಮೀಸಲಾತಿಗೆ ನಾಗಮೋಹನ್ ದಾಸ್ ಆಯೋಗ ಶಿಫಾರಸು ಮಾಡಿತ್ತು.

ತಿಮ್ಮಪ್ಪನಿಗೆ 121 ಕೆಜಿ ಚಿನ್ನ ಕಾಣಿಕೆ

ಅಮರಾವತಿ: ಉದ್ಯಮಿಯೊಬ್ಬರು ತಿರುಪತಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನಕ್ಕೆ 140 ಕೋಟಿ ರೂ. ಮೌಲ್ಯದ 121 ಕೆಜಿ ಚಿನ್ನ ಕಾಣಿಕೆ ನೀಡುತ್ತಿದ್ದಾರೆ ಎಂದು ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಮಂಗಳವಾರ ತಿಳಿಸಿದ್ದಾರೆ. ತಮ್ಮ ಗುರುತನ್ನು ಬಹಿರಂಗಪಡಿಸಲು ಇಚ್ಛಿಸದ ಆ ಭಕ್ತ, ತಮ್ಮ ಕಂಪನಿಯ ಶೇ.60ರಷ್ಟು ಷೇರುಗಳನ್ನು ಮಾರಾಟ ಮಾಡುವ ಮೂಲಕ 1.5 ಬಿಲಿಯನ್ ಅಮೆರಿಕ ಡಾಲರ್ ಅಥವಾ ಸುಮಾರು 6,000 ಕೋಟಿಯಿಂದ 7,000 ಕೋಟಿ ರು. ಗಳಿಸಿದ್ದಾರೆ. ತಮಗೆ ಈ ಸಂಪತ್ತನ್ನು ವೆಂಕಟೇಶ್ವರ ಸ್ವಾಮಿಯೇ ಕರುಣಿಸಿದ್ದಾರೆ ಎಂಬ ನಂಬಿಕೆಯಿಂದ ಅವರು ಇದೀಗ ಈ ಬೃಹತ್ ದೇಣಿಗೆಯನ್ನು ನೀಡಲು ನಿರ್ಧರಿಸಿದ್ದಾರೆ ಎಂಬುದಾಗಿ ನಾಯ್ಡು ತಿಳಿಸಿದ್ದಾರೆ. ಬಾಲಾಜಿ ವಿಗ್ರಹವನ್ನು ಪ್ರತಿದಿನ 120 ಕೆಜಿ ತೂಕದ ಚಿನ್ನದ ಆಭರಣಗಳಿಂದ ಅಲಂಕರಿಸಲಾಗುತ್ತದೆ.

ಇಂಡಿ ಪರ ನಿವೃತ್ತ ನ್ಯಾ.ಮೂರ್ತಿ ರೆಡ್ಡಿ ಸ್ಪರ್ಧೆ

ವಿಪಿ ಹುದ್ದೆ ದಕ್ಷಿಣಾಪಥ

ದೆಹಲಿ: ಮುಂದಿನ ಸೆ.19 ರಂದು ನಡೆಯುವ ಉಪ ರಾಷ್ಟ್ರಪತಿ ಚುನಾವಣೆಗೆ ಪ್ರತಿಪಕ್ಷಗಳ ನೇತೃತ್ವದ ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿಯಾಗಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರು ಅಭ್ಯರ್ಥಿಯಾಗಿದ್ದಾರೆ.

ಇದರೊಂದಿಗೆ ದೇಶದ 2ನೇ ಅತೀ ಉನ್ನತ ಹುದ್ದೆಯಾದ ಉಪರಾಷ್ಟ್ರಪತಿ ಆಯ್ಕೆಗೆ ಚುನಾವಣೆ ನಡೆಯಲು ವೇದಿಕೆ ಬಹುತೇಕ ಸಿದ್ಧಗೊಂಡಂತಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ನಡೆದ ಇಂಡಿಯಾ ಮೈತ್ರಿಕೂಟಗಳ ಸಭೆಯಲ್ಲಿ ಸುಪ್ರೀಂಕೋರ್ಟ್ ಮಾಜಿ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರನ್ನು ಕಣಕ್ಕಿಳಿಸಲು ಸಭೆ ಒಮ್ಮತದ ತೀರ್ಮಾನವನ್ನು ಕೈಗೊಂಡಿತು.

ಈ ಬಾರಿಯ ಉಪರಾಷ್ಟ್ರಪತಿ ಚುನಾವಣೆ ದಕ್ಷಿಣ ಭಾರತದ ಇಬ್ಬರು ಅಭ್ಯರ್ಥಿಗಳ ನಡುವೆ ನಡೆಯುತ್ತಿರುವುದು ವಿಶೇಷವಾಗಿದೆ. ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಮಹಾರಾಷ್ಟ್ರದ ಹಾಲಿ ರಾಜ್ಯಪಾಲ, ತಮಿಳುನಾಡು ಮೂಲದ ಸಿ.ಪಿ.ರಾಧಾಕೃಷ್ಣನ್ ಅವರನ್ನು ಕಣಕ್ಕಿಳಿಸಲಾಗಿದೆ. ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ ರೆಡ್ಡಿ ಅವರು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ 2008ರಿಂದ 2011ರವರೆಗೆ ಸೇವೆ ಸಲ್ಲಿಸಿದ್ದಾರೆ. ಇದಕ್ಕೂ ಮುಂಚೆ, ಅವರು ಆಂಧ್ರ ಪ್ರದೇಶ ಹೈಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದ್ದರು. ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳು, ಮತ್ತು ಸಾಂವಿಧಾನಿಕ ವಿಷಯಗಳಿಗೆ ಸಂಬಂಧಿಸಿ ಅವರು ಹಲವು ಮಹತ್ವದ ಆದೇಶ ನೀಡಿದ್ದಾರೆ. ತಮ್ಮ ಕಾನೂನು ಜ್ಞಾನ ಮತ್ತು ನ್ಯಾಯಾಂಗದ ಸೇವೆಯಿಂದಾಗಿ ಅವರು ಗುರುತಿಸಿಕೊಂಡಿದ್ದಾರೆ. ಮೂಲಗಳ ಪ್ರಕಾರ, ಆಂಧ್ರ ಪ್ರದೇಶದ ಎನ್‌ಡಿಎ ಮಿತ್ರಪಕ್ಷಗಳಾದ ಚಂದ್ರಬಾಬು ನಾಯ್ಡು ಅವರ ಟಿಡಿಪಿ ಮತ್ತು ಪವನ್ ಕಲ್ಯಾಣ್ ಅವರ ಜನಸೇನಾ ಮೇಲೆ ಒತ್ತಡ ಹೇರಲು ಪ್ರತಿಪಕ್ಷಗಳು ನ್ಯಾಯಮೂರ್ತಿ ರೆಡ್ಡಿ ಅವರನ್ನು ಆಯ್ಕೆ ಮಾಡಿಕೊಂಡಿವೆ.

- ಎನ್‌ಡಿಎ ಪರ ತಮಿಳುನಾಡು ಅಭ್ಯರ್ಥಿ
- ಇಂಡಿ ಪರ ಆಂಧ್ರ ಮೂಲದ ಅಭ್ಯರ್ಥಿ

ಮಳೆ ಅಬ್ಬರ: ಶಾಲಾ ಕಾಲೇಜುಗಳಿಗೆ ರಜೆ

ಬೆಂಗಳೂರು: ಕಳೆದ 3 ದಿನಗಳಿಂದ ರಾಜ್ಯದ ಹಲವೆಡೆ ಬಿಟ್ಟೂ ಬಿಡದೆ ಸುರಿಯುತ್ತಿರುವ ಮಳೆ ಮಂಗಳವಾರವೂ ಮುಂದುವರಿದಿದೆ. ಮಲೆನಾಡು ಮತ್ತು ಕರಾವಳಿಯಲ್ಲಿ ಅಬ್ಬರಿಸಿದ್ದ ಮಳೆ ಈಗ ಉತ್ತರ ಕರ್ನಾಟಕದಲ್ಲಿ ಗರ್ಜಿಸುತ್ತಿದೆ. ಭಾರೀ ಮಳೆ ಹಿನ್ನೆಲೆಯಲ್ಲಿ ಉ.ಕನ್ನಡ, ಬೆಳಗಾವಿ, ಹಾವೇರಿ, ಬಾಗಲಕೋಟ, ಯಾದಗಿರಿ ಜಿಲ್ಲೆಗಳಲ್ಲಿ ಬುಧವಾರ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಗೋಡೆ ಕುಸಿದು ನಾಲ್ವರಿಗೆ ಗಾಯ: ಬೈಲಹೊಂಗಲ ನಗರದಲ್ಲಿ ಭಾರೀ ಮಳೆಗೆ ಇಂದಿರಾ ನಗರ ಹಾಗೂ ಹರಳಯ್ಯ ಕಾಲೋನಿ ಯಲ್ಲಿ ಮನೆಗಳು ಕುಸಿದು ನಾಲ್ವರು ಗಾಯಗೊಂಡಿದ್ದಾರೆ. ಕೃಷ್ಣಾ ನದಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆ ಹಿನ್ನೆಲೆ ಬಸವ ಸಾಗರ, ನಾರಾಯಣಪುರ ಜಲಾಶಯದಿಂದ ನದಿಗೆ ನೀರು ಬಿಡಲಾಗುತ್ತಿದೆ.

ಬಿಹಾರದಲ್ಲಿ 80 ಸಾವಿರ ಮತದಾರರ ವಿಳಾಸ ನಕಲಿ

ಪಟನಾ: ಬಿಹಾರದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು 80,000 ಮತ ದಾರರು, ನಕಲಿ ಅಥವಾ ತಪ್ಪು ವಿಳಾಸಗಳನ್ನು ನೀಡಿ ನೋಂದಾಯಿಸಿಕೊಂಡಿದ್ದಾರೆ ಎಂದು ಅಂತರರಾಷ್ಟ್ರೀಯ ಪತ್ರಕರ್ತರ ಗುಂಪು ದಿ ರಿಪೋರ್ಟರ್ಸ್ ಕಲೆಕ್ಟಿವ್ ನಡೆಸಿದ ತನಿಖೆಯಲ್ಲಿ ತಿಳಿದು ಬಂದಿದೆ. ಕೇಂದ್ರ ಚುನಾವಣಾ ಆಯೋಗವು ಇತ್ತೀಚೆಗೆ ಬಿಹಾರ ದಲ್ಲಿ ವಿವಾದಾತ್ಮಕ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಆರಂಭಿಕ ಹಂತವನ್ನು ಪೂರ್ಣ ಗೊಳಿಸಿದೆ. ಆಗಸ್ಟ್ 1 ರಂದು ಚುನಾವಣಾ ಆಯೋಗ ಪ್ರಕಟಿಸಿದ ಕರಡು ಪಟ್ಟಿಯ ಪ್ರಕಾರ, ಭಾನುವಾರ ಬಿಡುಗಡೆಯಾದ ರಿಪೋರ್ಟರ್ಸ್ ಕಲೆಕ್ಟಿವ್ ವರದಿಯು ಪಿಪ್ರಾ, ಬಾಗಾಹಾ ಮತ್ತು ಮೋತಿಹಾರಿ ವಿಧಾನಸಭಾ ಕ್ಷೇತ್ರಗಳಲ್ಲಿ 3,590 ವಂಚನೆ ನೋಂದಣಿ ಪ್ರಕರಣಗಳನ್ನು ಬಹಿರಂಗಪಡಿಸಿದೆ.



ಬಿರಿಯಾನಿ ಬೆನ್ನಿಗೇ ಶಿಸ್ತಿನ ಪಾಠ ಕಲಿಸಲು ಬೆಂಗಳೂರು ಮಹಾನಗರ ಪಾಲಿಕೆ ಯೋಜನೆ

ಬೀದಿ ನಾಯಿಗಳಿಗೆ ಬಿಬಿಎಂಪಿ ಪಾಠ

ನಿಯಂತ್ರಣ ತಗ್ಗಿಸಲು ತರಬೇತಿ

ರಾಜಧಾನಿಯಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸುವ ಸಲುವಾಗಿ ತರಬೇತುದಾರರನ್ನು ನಿಯೋಜನೆ ಮಾಡಲು ತೀರ್ಮಾನಿಸಲಾಗಿದೆ ಎಂದು ಬಿಬಿಎಂಪಿ ಮೂಲಗಳಿಂದ ತಿಳಿದು ಬಂದಿದೆ.

- ಬಿರಿಯಾನಿ ಭಾಗ್ಯ ನೀಡುವ ಆಲೋಚನೆ ಬಳಿಕ ಇದೀಗ ತರಬೇತಿ ಭಾಗ್ಯ
- ದೇಶಾದ್ಯಂತ ಬೀದಿ ನಾಯಿಗಳ ನಿಯಂತ್ರಣಕ್ಕೆ ಯೋಚನೆ; ಬೆಂಗಳೂರಿನಲ್ಲಿ ತರಬೇತಿಗೆ ಚಿಂತನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇನ್ನು ಮುಂದೆ ಬೀದಿ ನಾಯಿಗಳೂ ಪೊಲೀಸ್ ನಾಯಿಗಳಂತೆ ಶಿಸ್ತಿ ಸಿಪಾಯಿಗಳಂತೆ ಇರಲಿದೆ! ಅವುಗಳ ಪಕ್ಕ ಹೋದರೂ ಕಚ್ಚಲು ಬರುವುದಿಲ್ಲವೆನ್ನುವಷ್ಟರ ಮಟ್ಟಿಗೆ ಶಿಸ್ತನ್ನು ಕಾಪಾಡಿಕೊಂಡು, ತಮ್ಮಷ್ಟಕ್ಕೆ ತಾವಾಯಿತು, ತಮ್ಮ ಏರಿಯಾ ಸರ್ವೆಯಾಯಿತು ಎನ್ನುವಂತೆ ಓಡಾಡಿಕೊಂಡಿರಲಿವೆ.

ಅರೇ, ಇದೇನು ಬೀದಿನಾಯಿಗಳಿಗೆ ಇಷ್ಟೊಂದು ಬುದ್ಧಿ ಎಲ್ಲಿಂದ ಬಂತು ಎಂದು ಅಚ್ಚರಿಯಾಗಬಹುದು. ಆದರೆ ಇದು ಬಿಬಿಎಂಪಿಯ ಕನಸಿನ ಯೋಜನೆಯಂತೆ. ಹೌದು, ಈ ಹಿಂದೆ ಬೀದಿನಾಯಿಗಳಿಗೆ ಬಿರಿಯಾನಿ ಭಾಗ್ಯ ಕೊಡಲು ಹೋಗಿ ಎಡವಟ್ಟು ಮಾಡಿಕೊಂಡಿದ್ದ ಬಿಬಿಎಂಪಿ ಇದೀಗ, ಇದೇ ರೀತಿಯ ಮತ್ತೊಂದು ಎಡವಟ್ಟು ಮಾಡಿಕೊಳ್ಳಲು ಸಕಲ ಸಿದ್ಧತೆ ನಡೆಸಿಕೊಂಡಿದೆ. ದೇಶಾದ್ಯಂತ ಬೀದಿನಾಯಿಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪರ- ವಿರೋಧ ಚರ್ಚೆಯಾಗುತ್ತಿರುವ ನಡುವೆ ಬಿಬಿಎಂಪಿ ಅಧಿಕಾರಿಗಳು, ರಾಜಧಾನಿಯ ಬೀದಿ ನಾಯಿಗಳಿಗೆ ಪೊಲೀಸ್ ಡಾಗ್ ಟ್ರೇನಿಂಗ್ ಕೊಟ್ಟರೆ ಹೇಗೆ? ಎನ್ನುವ ಭರ್ಜರಿ ಆಲೋಚನೆಯನ್ನು ಮಾಡಿದ್ದಾರೆ. ಈ ಯೋಜನೆ ಎಷ್ಟರ ಮಟ್ಟಿಗೆ ಯಶಸ್ವಿ ಯಾಗುತ್ತದೆ ಎನ್ನುವುದಕ್ಕಿಂತ ತರಬೇತಿ ಕೊಟ್ಟು ಏನು ಮಾಡುತ್ತಾರೆ ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಅಷ್ಟಕ್ಕೂ ಬೀದಿನಾಯಿಗಳಿಗೆ ತರಬೇತಿ ನೀಡಬೇಕು ಎನ್ನುವ ಐಡಿಯಾ ಯಾವ ಅಧಿಕಾರಿಗೆ ಬಂದಿದೆಯೋ ಗೊತ್ತಿಲ್ಲ. →4

ಸಮಾಚಾರ ಸಣ್ಣದಲ್ಲ

ವಿವಿಗೆ ಡಾ.ಶಿವಕುಮಾರ ಸ್ವಾಮೀಜಿ ಹೆಸರಿಡಬೇಕು

ತುಮಕೂರು: ತುಮಕೂರು ವಿಶ್ವವಿದ್ಯಾಲಯಕ್ಕೆ ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿಗಳ ಹೆಸರು ಇಡಬೇಕು ಎಂದು ಗ್ರಾಮಾಂತರದ ಶಾಸಕ ಬಿ.ಸುರೇಶ್ ಗೌಡ ಮಂಗಳವಾರ ಸದನದಲ್ಲಿ ಸರಕಾರಕ್ಕೆ ಒತ್ತಾಯಿಸಿ ದರು. ಡಾ. ಶಿವಕುಮಾರ ಸ್ವಾಮೀಜಿಗಳು ಸಿದ್ಧಗಂಗಾ ಮಠದಲ್ಲಿ ಲಕ್ಷಾಂತರ ಬಡ ಮಕ್ಕಳಿಗೆ ಅನ್ನ, ಆಶ್ರಯ, ಅಕ್ಷರ ನೀಡಿ ಅವರು ಬದುಕು ಕಟ್ಟಿಕೊಳ್ಳಲು ನೆರವಾಗಿ ದ್ದಾರೆ. ಅವರ ಹಾಕಿಕೊಟ್ಟ ಹಾದಿಯಲ್ಲೇ ಇಂದೂ ಸಿದ್ಧಗಂಗಾ ಮಠದಲ್ಲಿ ಹತ್ತು ಸಾವಿರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಡಾ.ಶಿವಕುಮಾರ ಸ್ವಾಮೀಜಿಗಳ ಸೇವಾ ಕಾರ್ಯಕ್ಕೆ ರಾಜ್ಯ ಸರಕಾರ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಇಂತಹ ಮಹನೀಯರ ಹೆಸರನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ಇಡುವುದ ರಿಂದ ವಿ.ವಿ.ಯ ಘನತೆ, ಗೌರವ ಹೆಚ್ಚುತ್ತದೆ ಹಾಗೂ ಬಡ ಮಕ್ಕಳ ಶಿಕ್ಷಣ ಸೇವೆ ಒದಗಿಸಿದ ಪೂಜ್ಯರ ಸೇವೆಯನ್ನು ಶಾಶ್ವತವಾಗಿ ಸ್ಮರಿಸುವಂತಾಗುತ್ತದೆ ಎಂದು ಸುರೇಶ್‌ಗೌಡರು ಉನ್ನತ ಶಿಕ್ಷಣ ಸಚಿವ ಸುಧಾಕರ್ ಅವರಿಗೆ ಹೇಳಿದರು.

ಸಿದ್ಧಾರ್ಥ ಬಿಸ್‌ನೆಸ್ ಎಕ್ಸ್ಪೋ 21ರಿಂದ

ತುಮಕೂರು: ನಗರದ ಶ್ರೀ ಸಿದ್ಧಾರ್ಥ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (ಎಂಬಿಎ ವಿಭಾಗ) ವತಿಯಿಂದ 'ಸಿದ್ಧಾರ್ಥ ಬಿಸ್‌ನೆಸ್ ಎಕ್ಸ್ಪೋ' ಮತ್ತು 'ಏಲೀಷಿಯಾ-2025' ಉತ್ಸವವನ್ನು ಆ.21 ಮತ್ತು 22ರಂದು ಎಸ್‌ಎಸ್‌ಐಟಿ ಕ್ಯಾಂಪಸ್‌ನಲ್ಲಿ ಆಯೋಜಿಸಿದೆ. ಆ.21ರಂದು ಬೆಳಗ್ಗೆ 10ಕ್ಕೆ ಎಸ್‌ಎಸ್‌ಐಟಿ ಕ್ಯಾಂಪಸ್‌ನ ಡೈನಿಂಗ್ ಹಾಲ್‌ನಲ್ಲಿ ಬಿಸ್‌ನೆಸ್ ಎಕ್ಸ್ಪೋವನ್ನು ಸಾಹೇ ವಿವಿಯ ಕುಲಾಧಿಪತಿ ಡಾ.ಜಿ.ಪರಮೇಶ್ವರ ಉದ್ಘಾಟಿಸಲಿದ್ದಾರೆ. ಟೆಡ್‌ಕ್ಸ್ ಭಾಷಣಕಾರ, ಉದ್ಯಮಿ ಮತ್ತು ಲೇಖಕರಾದ ವಿಲ್‌ಫ್ರೆಡ್ ಶ್ರೇಯಸ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದ್ಯಸರಾದ ಕನ್ನಿಕಾ ಪರಮೇಶ್ವರಿ, ಸಾಹೇ ವಿವಿಯ ಕುಲಾಧಿಪತಿಗಳ ಸಲಹೆಗಾರರಾದ ಡಾ. ವಿವೇಕ್ ವೀರಯ್ಯ, ಸಾಹೇ ವಿವಿಯ ಉಪ ಕುಲಪತಿ ಡಾ.ಕೆ.ಬಿ.ಲಿಂಗೇಗೌಡ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

ದಲಿತ ಸಂಘರ್ಷ ಸಮಿತಿ ಮಾದಿಗ ಸಂಘಟನೆಗಳಿಂದ ಮೆರವಣಿಗೆ, ಆಕ್ರೋಶ

ಒಳಮೀಸಲು ಜಾರಿಗೆ ಪ್ರತಿಭಟನೆ

ಬಾಗೇಪಲ್ಲಿ: ಕಳೆದ 30 ವರ್ಷಗಳಿಂದ ಒಳಮೀಸಲಾತಿ ಜಾರಿಗಾಗಿ ಹೋರಾಟ ಮಾಡುತ್ತಿರುವ ಮಾದಿಗ ಜನಾಂಗಕ್ಕೆ ರಾಜ್ಯ ಕಾಂಗ್ರೆಸ್ ಸರಕಾರ ಮೋಸ ಮಾಡಲು ಹೊರಟಿದ್ದು ರಾಜ್ಯ ಸಚಿವ ಸಂಪುಟದ ಕೆಲ ಸಚಿವರ ಪಿತೂರಿಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆದುಕೊಳ್ಳುತ್ತಿದ್ದಾರೆಂದು ಮಾದಿಗ ದಂಡೋರಾ ತಾಲೂಕು ಅಧ್ಯಕ್ಷ ಚಿನ್ನಪೂಜಪ್ಪ ಕಿಡಿಕಾರಿದರು.

ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಒಳಮೀಸಲಾತಿ ವರದಿಯನ್ನು ಜಾರಿಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಾದಿಗ ಸಂಘಟನೆಗಳ ಒಕ್ಕೂಟದ ನೂರಾರು ಕಾರ್ಯಕರ್ತರು ಬಾಗೇಪಲ್ಲಿ ಪಟ್ಟಣ ಮುಖ್ಯರಸ್ತೆಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ತಾಲೂಕು ಕಚೇರಿ ಮುಂಭಾಗದಲ್ಲಿ ಜಮಾಯಿಸಿ ತಹಸೀಲ್ದಾರ್ ಮನೀಷಾ ಪತ್ರಿ ಅವರಿಗೆ ಮನವಿಪತ್ರ ಸಲ್ಲಿಸಿದರು.

ರಾಜ್ಯ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗ ಒಳಮೀಸಲಾತಿಯನ್ನು ಜಾರಿಗೆ ತರುವುದಾಗಿ ಮಾತುಕೊಟ್ಟಿತ್ತು.

ಎಲ್ಲಾ ಆಯೋಗಗಳ ವರದಿ ಆಧಾರಿತ ಹಾಗೂ ನ್ಯಾಯಾಲಯದ ಸೂಚನೆಯಂತೆ ಮಾದಿಗರಿಗೆ ಒಳಮೀಸಲಾತಿ ನೀಡಬಹುದೆಂದು ಆಯೋಗಗಳು ವರದಿ ಸಲ್ಲಿಸಿದ್ದರೂ ಸರಕಾರ ಮೀನಾಮೇಷ ಎಣಿಸುತ್ತಿದೆ. ಮಾದಿಗರ ಮತಗಳಿಂದ ಅಧಿಕಾರಕ್ಕೆ ಬರುತ್ತಿರುವ ಕಾಂಗ್ರೆಸ್ ಮಾದಿಗರಿಗೆ ಅನ್ಯಾಯ ಮಾಡುತ್ತಲೇ ಬಂದಿದೆ.

ದ.ಸಂ.ಸ ಸಂಘಟನಾ ಸಂಚಾಲಕ ಎನ್.ಗಿರೀಶ್ ಮಾತನಾಡಿ, ಮಾದಿಗ ಜನಾಂಗದ ಮಕ್ಕಳ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಭವಿಷ್ಯತ್ತಿನ ದೃಷ್ಠಿಯಿಂದ 3 ದಶಗಳಿಂದ ಹೋರಾಟ ನಡೆಸುತ್ತಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಒಳಮೀಸಲಾತಿ ಜಾರಿ ಮಾಡುವ ಮನಸ್ಸಿಲ್ಲ ಇದರಿಂದ ಮಾದಿಗ ಸಮುದಾಯ ಅತ್ಯಂತ ನೋವು ಅನುಭವಿಸುತ್ತಿದೆ ಎಂದರು.

ಈ ವೇಳೆ ದಸಂಸ ಮುಖಂಡರಾದ ಅಚೇಪಲ್ಲಿ ಆಧಿ, ಬಿ.ಎನ್.ಕೃಷ್ಣಮೂರ್ತಿ, ಎನ್.ವೆಂಕಟೇಶ್, ಪರಗೋಡು ಗಂಗರಾಜು, ಕೃಷ್ಣಪ್ಪ, ಮಹೇಶ್, ಆನಂದ, ವೆಂಕಟೇಶ್, ನರಸಿಂಹಪ್ಪ, ವಿಜಯ್, ಗಂಗಾಧರ, ಈರಪ್ಪ, ನವೀನ್, ಸಿ.ವಿ.ವೆಂಕಟೇಶ್, ಸುನೀಲ್ ಕುಮಾರ್, ನವೀನ್ ಕುಮಾರ್, ನಾಗಪ್ಪ ಮತ್ತಿತರರು ಇದ್ದರು.

ಬಾಗೇಪಲ್ಲಿ ಪಟ್ಟಣ ಮುಖ್ಯರಸ್ತೆಯಲ್ಲಿ ಬೃಹತ್ ಮೆರವಣಿಗೆ ನಡೆಸಿ ತಾಲೂಕು ಕಚೇರಿ ಮುಂಭಾಗದಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿದರು.

ಸಂಜೆ ನ್ಯಾಯಾಲಯಗಳ ಸ್ಥಾಪನೆ ನಿಲುವು ಸೂಕ್ತವಲ್ಲ

ಕೋಲಾರ: ರಾಜ್ಯದಲ್ಲಿ ಸಂಜೆ ನ್ಯಾಯಾಲಯಗಳ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿರುವ ಹಿರಿಯ ವಕೀಲ ಮುಳಬಾಗಲು ಕೆ.ಪಿ.ವಿಶ್ವನಾಥ್ ತಕ್ಷಣವೇ ಈ ಪ್ರಸ್ತಾವನೆಯನ್ನು ಹಿಂಪಡೆಯಬೇಕೆಂದು ಆಗ್ರಹಿಸಿದ್ದಾರೆ.

ಬೆಂಗಳೂರು ಸೇರಿದಂತೆ ರಾಜ್ಯದಲ್ಲಿರುವ ಸಮಸ್ತ ವಕೀಲ ವೃಂದ ದಿನದಲ್ಲಿ 12 ಗಂಟೆಗಳಿಗೂ ಹೆಚ್ಚಿನ ಸಮಯದ ಹೊರೆಯನ್ನು ಹೊಂದಿರುತ್ತಾರೆ. ಕೆಲವು ದಿನಗಳಲ್ಲಿ ನಿತ್ಯ 16 ಗಂಟೆ ಕಠಿಣ ಪರಿಶ್ರಮ ಪಡೆಬೇಕಾದ ಅನಿವಾರ್ಯತೆ ಇರುತ್ತದೆ. ಭಾನುವಾರದ ಬಿಡುವೂ ಸಹಾ ಇರುವುದಿಲ್ಲ, ವಾರಾಂತ್ಯದಲ್ಲೂ ವೃತ್ತಿ ಸಂಬಂಧಿತ ಕೆಲಸಗಳ ಭಾರ ಇರುತ್ತದೆ. ಪ್ರತಿದಿನ ಬೆಳಗ್ಗೆ 9 ರಿಂದ 8 ಗಂಟೆವರೆಗೆ ಕಚೇರಿ ಮತ್ತು ನ್ಯಾಯಾಲಯಕ್ಕೆ ಹಾಜರಾದ ನಂತರ ಸಂಜೆ ಪುನಃ ನ್ಯಾಯಾಲಯಗಳಿಗೆ ಹಾಜರಾಗಿ ಕೆಲಸ ಮಾಡಬಲ್ಲರು ಎಂಬ ನಿರೀಕ್ಷೆ ಒಪ್ಪತಕ್ಕದಲ್ಲ.

ಕೋರ್ಟ್ ಸಮಯದ ನಂತರ ವಕೀಲರು ಸಂಜೆ ಸಮಯದಲ್ಲಿ ತಮ್ಮ ಕಚೇರಿಗಳಲ್ಲಿ ಇದ್ದುಕೊಂಡು ಕಕ್ಷಿದಾರರನ್ನು ಭೇಟಿ ಮಾಡಬೇಕಾಗುತ್ತದೆ. ಮುಂದಿನ ಪ್ರಕರಣಗಳಿಗೆ ತಯಾರಿ, ಕರಡು ರೂಪಿಸುವುದು ಮತ್ತು ಇತರೆ ದಸ್ತಾವೇಜಿನ ಅಗತ್ಯ ಕೆಲಸಗಳನ್ನು ಪೂರೈಸಬೇಕಾಗುತ್ತದೆ. ಒಂದು ವೇಳೆ ಸಂಜೆ ನ್ಯಾಯಾಲಯಗಳನ್ನು ಆರಂಭಿಸಿದರೆ ಮರುದಿನದ ಕೆಲಸಗಳಿಗೆ ಅಣಿಯಾಗುವ ಪ್ರಕ್ರಿಯೆ ಮತ್ತು ಅಗತ್ಯ ಚಟುವಟಿಕೆಗಳಿಗೆ ತಡೆ ಒಡ್ಡಿದಂತಾಗುತ್ತದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ವಕೀಲರ ಮೇಲಿರುವ ಒತ್ತಡಗಳ ನಿವಾರಣೆಗೆ ಮಾರ್ಗೋಪಾಯ ಕಂಡುಕೊಳ್ಳುವ ಬದಲು ಸಂಜೆ ನ್ಯಾಯಾಲಯಗಳ ಪ್ರಸ್ತಾವನೆ ಮುಂದಿರಿಸಿರುವುದು ತರವಲ್ಲ. ಈ ಪ್ರಸ್ತಾವನೆ ನಿರ್ಧಾರವನ್ನು ತಕ್ಷಣವೇ ಕೈಬಿಡಬೇಕು ಎಂದು ಲಾಯರ್ ಕೆ.ಪಿ.ವಿಶ್ವನಾಥ್ ಒತ್ತಾಯಿಸಿದ್ದಾರೆ.

ದೇಶದ 75 ವಿವಿಗಳ ಪೈಕಿ ತುಮಕೂರು ವಿವಿಗೆ ಸ್ಥಾನ



ತುಮಕೂರು: ಔಟ್ ಲುಕ್-ಐಕೇರ್ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ದೇಶದ ಅತ್ಯುತ್ತಮ ಸರಕಾರಿ 75 ವಿಶ್ವವಿದ್ಯಾನಿಲಯಗಳ ಪಟ್ಟಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯ 53ನೇ ಸ್ಥಾನ ಪಡೆದಿದೆ. ದೇಶದ 75 ಅತ್ಯುತ್ತಮ ಸರಕಾರಿ ವಿವಿಗಳ ಪಟ್ಟಿ ಬಿಡುಗಡೆಮಾಡಿದ್ದು, ರಾಜ್ಯದ 6 ವಿವಿಗಳು ಸ್ಥಾನಪಡೆದಿವೆ.

ಸಮೀಕ್ಷೆಯಲ್ಲಿ ವಿವಿಗಳ ಅಕಾಡೆಮಿಕ್ ಕಾರ್ಯ ಚಟುವಟಿಕೆ, ಸಂಶೋಧನೆ, ಕೈಗಾರಿಕಾ ಸಂಪರ್ಕ, ಕ್ಯಾಂಪಸ್ ಪ್ಲೇಸ್ಮೆಂಟ್ , ಮೂಲ ಸೌಲಭ್ಯ, ಆಡಳಿತ ಹಾಗೂ ಔಟ್ ರೀಜ್ ಕಾರ್ಯಕ್ಷೇತ್ರಗಳಿಗೆ ನಿರ್ದಿಷ್ಟ ಅಂಕಗಳ ಮಾನದಂಡದಡಿ ವಿವಿಗಳ ಸ್ಥಾನ ಕ್ರಮಾಂಕವನ್ನು ನಿಗದಿಪಡಿಸಲಾಗುತ್ತದೆ. ಈ ಪೈಕಿ ತುಮಕೂರು ವಿವಿ 808.61ಅಂಕಗಳೊಂದಿಗೆ 53ನೇ ಕ್ರಮಾಂಕದಲ್ಲಿ ಸ್ಥಾನ ಪಡೆದಿದೆ. ರಾಜ್ಯದಲ್ಲಿ 42 ಸರಕಾರಿ ವಿಶ್ವವಿದ್ಯಾಲಯಗಳಿದ್ದು ಇವುಗಳಲ್ಲಿ ತುಮಕೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿರುವುದು ಹೆಮ್ಮೆಯ ಸಂಗತಿಯೆನಿಸಿದೆ ಎಂದು ಕುಲಪತಿ ಪ್ರೊ. ವೆಂಕಟೇಶ್ವರಲು, ಕುಲಸಚಿವರು, ಸಿಂಡಿಕೇಟ್ ಸದಸ್ಯರು, ಬೋಧಕ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದರು ದೇಶದ 75 ಅತ್ಯುತ್ತಮ ಸರಕಾರಿ ವಿವಿಗಳ ಪಟ್ಟಿಯಲ್ಲಿ ತುಮಕೂರು ವಿವಿ ಸ್ಥಾನಪಡೆದಿರುವುದು ಶ್ಲಾಘನೀಯ. ರಾಜ್ಯ, ಕೇಂದ್ರ ಸರಕಾರಗಳ ಸಹಕಾರ, ಜಿಲ್ಲೆಯ ಜನಪ್ರತಿನಿಧಿಗಳು, ಹಿಂದಿನ ಕುಲಪತಿಗಳು, ಕುಲಸಚಿವರು, ಸಿಂಡಿಕೇಟ್, ಸೆನೆಟ್ ಸದಸ್ಯರು, ಬೋಧಕ-ಬೋಧಕೇತರ ವರ್ಗ, ವಿದ್ಯಾರ್ಥಿಗಳ ಪರಿಶ್ರಮವಿದೆ ಎಂದು ತುಮಕೂರು ವಿವಿಯ ಕುಲಪತಿ ಪ್ರೊ.ಎಂ. ವೆಂಕಟೇಶ್ವರಲು ಹೇಳಿದರು.

ಶಾಲಾವರಣ ಸ್ವಚ್ಛತೆ ವಿಚಾರಕ್ಕೆ ನಾರಿಯರ ಕದನ !

ತಳ್ಳಾಟ ನೂಕಾಟ, ಕೈಕೈ ಮೇಲಾಟ | ಆಸ್ಪತ್ರೆಗೆ ದಾಖಲು | ದೂರು ಪ್ರತಿ ದೂರು

ಚಿಕ್ಕಬಳ್ಳಾಪುರ: ವರ್ಷಗಳಿಂದ ಬೆಳೆದುಕೊಂಡಿದ್ದ ಸರಕಾರಿ ಶಾಲಾವರಣದ ಕಸ, ಕಳೆ ಮತ್ತು ಕುರುಚಲುಗಿಡಗಳನ್ನು ಜೆಸಿಬಿ ಮೂಲಕ ಸ್ವಚ್ಛಗೊಳಿಸಿದ ವಿಚಾರದಲ್ಲಿ ಎರಡು ಗುಂಪುಗಳ ನಡುವೆ ಮಾತುಕತೆ ವಿಕೋಪಕ್ಕೆ ತಿರುಗಿ ತಳ್ಳಾಟ ನೂಕಾಟದೊಂದಿಗೆ ಕೈಕೈ ಮಿಲಾಯಿಸಿ ದೂರು ಪ್ರತಿದೂರು ದಾಖಲಿಸಿಕೊಂಡ ಘಟನೆ ತಾಲೂಕಿನ ಲಿಂಗಶೆಟ್ಟಿಪುರ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಆವುಲಗುರ್ಕಿ ಪಂಚಾಯಿತಿಗೆ ಸೇರಿದ ಲಿಂಗಶೆಟ್ಟಿಪುರ ಗ್ರಾಮದಲ್ಲಿ ಸೋಮವಾರ ಗ್ರಾಮ ಪಂಚಾಯಿತಿ ಹಾಲಿ ಸದಸ್ಯ, ಮಾಜಿ ಅಧ್ಯಕ್ಷ ಎಲ್‌ಜಿಎಂ ಮಂಜುನಾಥ್ ಮತ್ತು ವೈಷ್ಣವಿ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ ಕೃಷ್ಣವೇಣಿ ನಡುವೆ ಶಾಲಾ ಆವರಣಕ್ಕೆ ಸೇರಿದ ಜಾಗದಲ್ಲಿ ಬೆಳೆದಿದ್ದ ಲಂಟಾನ,ಕಾಂಗ್ರೆಸ್‌ಗಿಡಗಳನ್ನು ಸ್ವಚ್ಛಗೊಳಿಸುವ ವಿಚಾರ ಪ್ರಕ್ಷುಬ್ಧ ವಾತಾವರಣ ತಂದಿದೆ.

ಏನಿದು ಘಟನೆ?: ಈಶಾ ರಸ್ತೆಯಲ್ಲಿರುವ ಲಿಂಗಶೆಟ್ಟಿಪುರ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆಯಾದ ಕೃಷ್ಣವೇಣಿ ಈಶಾ ಸಂಸ್ಥೆಯು ನಡೆಸುವ ಕ್ರೀಡಾ ಕೂಟಕ್ಕೆ ಶಾಲಾ ಆವರಣ ಸ್ವಚ್ಛಗೊಳಿಸಲು ಮುಂದಾಗಿದ್ದಾರೆ.ಈ ವಿಚಾರ ಗ್ರಾಮ ಪಂಚಾಯಿತಿ ಸದಸ್ಯ ಮಂಜುನಾಥ್ ಮತ್ತು ಈಕೆಯ ನಡುವೆ ಬಿರುಸಿನ ಮಾತುಕತೆಗೆ ನಾಂದಿಹಾಡಿದೆ.

ಹಾಲಿ ಗ್ರಾಮ ಪಂಚಾಯಿತಿ ಸದಸ್ಯನಾಗಿ ಗ್ರಾಮದ ಅಭಿವೃದ್ಧಿಗೆ ಟೊಂಕಕಟ್ಟಿ ನಿಂತಿದ್ದೇನೆ. ಈ ಗ್ರಾಮದಲ್ಲಿ ಏನೇ ಸಮಸ್ಯೆ ಆದರೂ ನಾನೇ ಮುಂದೆ ನಿಂತು ಪರಿಹಾರ ಕಲ್ಪಿಸಿದ್ದೇನೆ. ಹೀಗಿದ್ದರೂ ನನ್ನ ಗಮನಕ್ಕೆ ತಾರದೆ ಜೆಸಿಬಿ ತರಿಸಿ ನೀವೇ ಸ್ವಚ್ಛತೆಯ ಕೆಲಸಕ್ಕೆ ಇಳಿದಿದ್ದು ತಪ್ಪು, ಸದಸ್ಯರ ಗಮನಕ್ಕೆ ತರುವ ಸೌಜನ್ಯವಿರಬೇಕು ಅಲ್ಲವೆ ಎಂಬಂತೆ ಸದಸ್ಯ ಮತ್ತು ಕೃಷ್ಣವೇಣಿ ಗುಂಪಿನ ನಡುವೆ ಜಗಳ ಶುರುವಾಗಿದೆ. ಇದರಿಂದ ಮನನೊಂದ ಕೃಷ್ಣವೇಣಿ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದಾರೆ.ಮಹಿಳಾ ಠಾಣೆ ಪೊಲೀಸ್ ಸಬ್‌ಇನ್ಸ್ಪೆಕ್ಟರ್ ಸಣ್ಣ ವಿಚಾರಕ್ಕೆ ಹೀಗೆ ಪೊಲೀಸ್‌ಠಾಣೆ ಮೆಟ್ಟಿಲೇರುವುದು ತಪ್ಪು ಎಂದು ತಿಳಿ ಹೇಳಿದ್ದಾರೆ.ಇದರಿಂದ ಕುಪಿತರಾದ ಕೃಷ್ಣವೇಣಿ ಗ್ರಾಮಕ್ಕೆ ವಾಪಸ್ಸಾದವರೇ ನಡುರಸ್ತೆಯಲ್ಲಿ ನ್ಯಾಯಕೋರಿ ಅಂಬೇಡ್ಕರ್ ಪೋಟೋ ಹಿಡಿದು ಧರಣಿ ಕುಳಿತಿದ್ದಾರೆ.

ಗ್ರಾಪಂ ಸದಸ್ಯ ಮಂಜುನಾಥ್ ಕೂಡ ತನ್ನ ಪತ್ನಿ ಜತೆ ಧರಣಿ ಕುಳಿತಿದ್ದಾರೆ. ಈ ವೇಳೆ ಕೈಕೈ ಮಿಲಾಯಿಸಿಕೊಂಡಿದ್ದಾರೆ. ಈ ವೇಳೆ

ಗಾಯಗೊಂಡ ಕೃಷ್ಣವೇಣಿ ಮಂಜುನಾಥ್ ಪತ್ನಿ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ದೂರಲಾಗಿದೆ.

ಇದನ್ನು ನೋಡಿದ ಗ್ರಾಮದ ಹಿರಿಯರು, ಹಳ್ಳಿಗಳು ಹಳ್ಳಿಗಳಾಗಿ ಉಳಿದಿಲ್ಲ,ರಾಜಕಾರಣದ ಅಖಾಡಗಳಾಗಿ ಬದಲಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಕೃಷ್ಣವೇಣಿ ಅವರು ನಡುರಸ್ತೆಯಲ್ಲಿ ನ್ಯಾಯಕೋರಿ ಅಂಬೇಡ್ಕರ್ ಪೋಟೋ ಹಿಡಿದು ಧರಣಿ ಕುಳಿತಿರುವುದು.

ಆಗಸ್ಟ್ 30ರಂದು ಸಿಂಧೂರ ವಿಜಯೋತ್ಸವ

ತುಮಕೂರು: ನಗರದಲ್ಲಿ ಈ ತಿಂಗಳ 30ರಂದು ನಡೆಯುವ ಆಪರೇಷನ್ ಸಿಂಧೂರ ವಿಜಯೋತ್ಸವ ಸಮಾರಂಭದಲ್ಲಿ ಶಾಲಾಕಾಲೇಜು ಮಕ್ಕಳು ಭಾಗವಹಿಸಲು ಕಳುಹಿಸಿಕೊಡಬೇಕೆಂದು ವಿಜಯೋತ್ಸವ ಸಮಿತಿ ಅಧ್ಯಕ್ಷ, ಮಾಜಿ ಸಚಿವ ಸೊಗಡು ಶಿವಣ್ಣ ಮಂಗಳವಾರ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರಿಗೆ ಮನವಿ ಮಾಡಿದರು.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ಅಮಾಯಕ ಪ್ರವಾಸಿಗಳನ್ನು ಹತ್ಯೆ ಮಾಡಿದ್ದರ ವಿರುದ್ಧ ಭಾರತ ಸರ್ಕಾರ ಪ್ರತೀಕಾರ ತೀರಿಸಿಕೊಂಡ ಆಪರೇಷನ್ ಸಿಂಧೂರದ ವಿಜಯೋತ್ಸವ ಆಚರಿಸುತ್ತಿದ್ದು, ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಜತೆ ದೇಶಭಕ್ತಿ ಜಾಗೃತಿಗೊಳಿಸುವ ಉದ್ದೇಶವೂ ಇದೆ ಎಂದು ಹೇಳಿದರು.

ನಗರದ ಪದವಿಪೂರ್ವ ಕಾಲೇಜು ಮೈದಾನದಲ್ಲಿ ವಿಜಯೋತ್ಸವ ನಡೆಯಲಿದೆ. ಇದರಲ್ಲಿ ಹಲವು ಸಚಿವರು ಭಾಗವಹಿಸುವರು. ಹಾಗಾಗಿ ವಿದ್ಯಾರ್ಥಿಗಳು ಪಾಲ್ಗೊಳ್ಳುವುದೂ ಸೂಕ್ತವೆಂದು ಸೊಗಡು ಶಿವಣ್ಣ ಜಿಲ್ಲಾಧಿಕಾರಿಗೆ ಹೇಳಿದರು. ಈ ವೇಳೆ ಸಮಿತಿ ಮುಖಂಡರಾದ ಆಶಾ ಪ್ರಸನ್ನಕುಮಾರ್, ಬಾವಿಕಟ್ಟೆ ಗಣೇಶ್ ಹಾಜರಿದ್ದರು.

ಪೆಂಡಾಲ್‌ಗೆ ಸಿಸಿ ಕ್ಯಾಮರಾ ಕಡ್ಡಾಯ



ಗುಬ್ಬಿ: ಗೌರಿ ಗಣೇಶ ಹಬ್ಬದ ಸಮಯ ಗಣೇಶ ಪ್ರತಿಷ್ಠಾಪನೆ ಮಾಡುವ ಸಂಘ ಸಂಸ್ಥೆಗಳು ಸಿಸಿ ಕ್ಯಾಮರಾ ಅಳವಡಿಕೆ ಕಡ್ಡಾಯ ಮಾಡಿಸಿದ್ದಲ್ಲಿ ಪೆಂಡಾಲ್ ಕಾವಲಿಗೆ ಪೊಲೀಸ್ ಇದ್ದಂತೆ ಕ್ಯಾಮರಾ ಕೆಲಸ ಮಾಡುತ್ತದೆ ಎಂದು ಸಿಪಿಐ ರಾಘವೇಂದ್ರ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗೌರಿ ಗಣೇಶ ಹಾಗೂ ಈದ್ ಮಿಲಾದ್ ಹಬ್ಬದ ಹಿನ್ನಲೆ ಆಯೋಜಿಸಿದ್ದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು ದಿನದ 24 ಗಂಟೆ ಕರ್ತವ್ಯ ನಿರತ ಪೊಲೀಸ್ ಇರುವ ರೀತಿ ಕ್ಯಾಮರಾ ಕೆಲಸ ಮಾಡುತ್ತದೆ ಎಂದು ಹೇಳಿದರು.

ಗಣೇಶ ವಿಸರ್ಜನೆ ಉತ್ಸವಕ್ಕೆ ಸಾಕಷ್ಟು ನಿಯಮ ಪಾಲನೆಗೆ ಮಾಡಬೇಕಿದೆ. ಇತ್ತೀಚಿಗೆ ವಿಸರ್ಜನಾ ಸಮಯ ಜೀವಕ್ಕೆ ಅಪಾಯ ಬಂದ ಘಟನೆ ಕಣ್ಮುಂದೆ ಇರುವ ಕಾರಣ. ಮಧ್ಯಾಹ್ನ ವೇಳೆ ವಿಸರ್ಜನಾ ಉತ್ಸವ ಆರಂಭಿಸಿ ಸಂಜೆಯೊಳಗೆ ಸಂಪೂರ್ಣ ಗೊಳಿಸಬೇಕು. ಸಂಘದ ಮುಖ್ಯಸ್ಥರ ಮಾಹಿತಿ, ಪೆಂಡಾಲ್ ಇರುವ ಸ್ಥಳ ಸುರಕ್ಷತೆ, ಸ್ಥಳೀಯ ಪಟ್ಟಣ ಪಂಚಾಯಿತಿ, ಬೆಸ್ಕಾಂ ಹಾಗೂ ಪೊಲೀಸ್ ಇಲಾಖೆ ಅನುಮತಿ ಕಡ್ಡಾಯ ಪಡೆಯಬೇಕು. ಅನುಮತಿ ಪಡೆಯಲು ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಏಕ ಗವಾಕ್ಷಿ ಪದ್ಧತಿ ಮೂಲಕ ಮೂರು ಇಲಾಖೆಯ ಸಿಬ್ಬಂದಿಗಳು ಪರಿಶೀಲಿಸಿ ಅನುಮತಿ ಪತ್ರ ನೀಡಲಿದ್ದಾರೆ ಎಂದ ಅವರು ಪರಿಸರ ಸಂರಕ್ಷಣೆ ಹಿನ್ನಲೆ ಬಣ್ಣ ರಹಿತ ಮಣ್ಣಿನ ವಿಗ್ರಹ ಪ್ರತಿಷ್ಠಾಪನೆ ಮಾಡುವಂತೆ ಮನವಿ ಮಾಡಿದರು.

ಪಪಂ ಸದಸ್ಯ ಜಿ.ಆರ್.ಶಿವಕುಮಾರ್ ಮಾತನಾಡಿ, ಪಟ್ಟಣ ಪಂಚಾಯಿತಿ ಈಗಾಗಲೇ ಸಭೆ ನಡೆಸಿ ಗಣೇಶ ವಿಸರ್ಜನೆಗೆ ತೊರೆಮಠದ ತೊರೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಲಿ ಲೈಟ್ ವ್ಯವಸ್ಥೆ ಜೊತೆ ಎಲ್ಲಾ ಸುರಕ್ಷತಾ ಜಾಗೃತಿ ಕ್ರಮ ವಹಿಸಲಾಗಿದೆ. ಲಕ್ಷಾಂತರ ಬೆಲೆಯ ಚಿನ್ನಾಭರಣ ಹಾಡಹಗಲೇ ಕಳ್ಳತನ ನಡೆದಿದೆ. ತಡರಾತ್ರಿ ವೇಳೆ ಬೈಕ್ ನಲ್ಲಿ ಮುಸುಕುಧಾರಿ ಕಳ್ಳರ ಓಡಾಟ, ಬೈಕ್ ಕಳ್ಳತನ ಹೀಗೆ ಅನೇಕ ಘಟನೆ ಭಯ ಉಂಟು ಮಾಡಿದೆ. ಪೊಲೀಸ್ ಇಲಾಖೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಪಪಂ ಸದಸ್ಯ ಮಹಮದ್ ಸಾದಿಕ್ ಮಾತನಾಡಿ ಸ್ಥಳೀಯ ಪಟ್ಟಣ ಪಂಚಾಯಿತಿ ಚಿಕ್ಕ ಗಣೇಶ ವಿಸರ್ಜನೆಗೆ ಟ್ರ್ಯಾಕ್ಟರ್ ಮೂಲಕ ಟ್ಯಾಂಕ್ ವ್ಯವಸ್ಥೆ ಮಾಡಲಿದೆ. ದೊಡ್ಡ ಗಣೇಶ ವಿಸರ್ಜನೆಗೆ ತೊರೆಯಲ್ಲಿ ಅವಕಾಶ ಮಾಡಲಾಗಿದೆ. ಈ ಜೊತೆಗೆ ಈದ್ ಮಿಲಾದ್ ಹಬ್ಬ ಹಿನ್ನಲೆ ಹಿಂದೂ ಮುಸ್ಲಿಂ ಭಾವೈಕ್ಯತೆಯಲ್ಲಿ ಹಬ್ಬ ಆಚರಣೆ ಮಾಡಲಿದ್ದೇವೆ ಎಂದರು.

ಕ್ರೀಡಾ ಪ್ರೋತ್ಸಾಹಕ ಸಿ.ಆರ್.ಶಂಕರ್ ಕುಮಾರ್ ಮಾತನಾಡಿ ಪಟ್ಟಣದಲ್ಲಿ ಸುಮಾರು 25 ಕಡೆ ಗಣೇಶ ಪ್ರತಿಷ್ಠಾಪನೆ ಮಾಡಲಿದ್ದಾರೆ. ಎಲ್ಲರೂ ಒಟ್ಟಾಗಿ ಮಾತನಾಡಿಕೊಂಡು ಸಾಮೂಹಿಕ ಗಣೇಶ ವಿಸರ್ಜನೆಗೆ ಮುಂದಾಗಬೇಕು. ಒಂದೇ ದಿನ ಎಲ್ಲರೂ ಒಟ್ಟಾಗಿ ಸೇರಿದರೆ ಉತ್ಸವ ಅದ್ದೂರಿಯಾಗಿ ಸಾವಿರಾರು ಮಂದಿ ಭಾಗಿಯಾಗುತ್ತಾರೆ. ಈ ಹಿಂದೆ ಒಮ್ಮೆ 17 ಗಣೇಶ ವಿಸರ್ಜನೆ ಮಾಡಲಾಗಿತ್ತು ಎಂದು ಸ್ಮರಿಸಿದರು.

ಗುಬ್ಬಿ ಪಿಎಸ್‌ಐ ಸುನೀಲ್ ಕುಮಾರ್ ಮಾತನಾಡಿ, ಗಣೇಶ ವಿಸರ್ಜನೆಗೆ ಡಿಜೆ ಸಂಸ್ಕೃತಿಗೆ ಅನುಮತಿ ನೀಡುವುದಿಲ್ಲ. ಸಾಂಪ್ರದಾಯಕ ರೀತಿ ಗಣೇಶ ಉತ್ಸವ ನಡೆಸಿ ಸಂಜೆಯೊಳಗೆ ವಿಸರ್ಜನೆ ಮುಗಿಸಬೇಕು. ಅನುಮತಿ ಕಡ್ಡಾಯ ಪಡೆಯಬೇಕು ಎಂದರು.

ಸಚಿವ ಮುನಿಯಪ್ಪಗೆ ನಿಂದನೆ: ಕೇಸು ದಾಖಲು

ಬಾಗೇಪಲ್ಲಿ: ಆಹಾರ ಖಾತೆ ಸಚಿವ ಕೆ.ಎಚ್ ಮುನಿಯಪ್ಪರವರನ್ನು ದ್ಯಾವರಹಳ್ಳಿ ಚಂದ್ರು ಎಂಬಾತ ದೂರವಾಣಿಯಲ್ಲಿ ಕೇವಲವಾಗಿ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿರುತ್ತಾನೆ. ಆ ಸಂಭಾಷಣೆಯಲ್ಲಿ ಕೆಟ್ಟ ಪದಗಳನ್ನು ಬಳಕೆ ಮಾಡಿದ್ದು, ಆತನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ಮಂಗಳವಾರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಹಾಗೇಯೆ ಸಂಭಾಷಣೆಯಲ್ಲಿ ಜಾತಿ ನಿಂದನೆಯನ್ನು ಮಾಡಿದ್ದು,ಕ್ರಮ ಜರುಗಿಸಲು ಕೋರಿದ್ದಾರೆ.

ಪಾವಗಡ ಪೊಲೀಸ್ ಪ್ರಕಟಣೆ



ಮುತ್ಯಾಲಪ್ಪ

ಫಿರ್ಯಾಧಿ ರಾಜು ಬಿನ್ ಸುಬ್ಬರಾಯಪ್ಪ, 36ವರ್ಷ, ಬಲಜಿಗ ಜನಾಂಗ, ವೆಂಕಟಾಪುರ ಗ್ರಾಮ,ಪಾವಗಡ ತಾ॥ ರವರು ನೀಡಿದ ದೂರಿನ ಅಂಶವೇನೆಂದರೆ ನನ್ನ ತಮ್ಮನಾದ ಮುತ್ಯಾಲಪ್ಪರವರು ನನ್ನ ತಮ್ಮ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದು, ಚಿಕಿತ್ಸೆ ಕೊಡಿಸಿದ್ದೆವು, ನನ್ನ ತಮ್ಮ ಪ್ಲಾಸ್ಟಿಕ್ ವಸ್ತುಗಳ ಮಾರಾಟ ಮಾಡಿಕೊಂಡು ಜೀವನ ಸಾಗಿಸುತ್ತಿದ್ದನು. ದಿನಾಂಕ:10/06/2025ರಂದು ಬೆಳಿಗ್ಗೆ 6:00ಗಂಟೆಗೆ ವೆಂಕಟಾಪುರ ಗ್ರಾಮದ ತನ್ನ ಮನೆಯಿಂದ ಹೋದವನು ಈ ವರೆವಿಗೂ ಸಿಕ್ಕಿರುವುದಿಲ್ಲ, ನನ್ನ ತಮ್ಮ ಮಾಮೂಲಿಯಂತೆ ವಾಪಸ್ ಬರುತ್ತಾನೆಂದು ನಾವು ಕಾದಿದ್ದು ಒಂದು ವಾರವಾದರೂ ಮನೆಗೆ ಬಾರದ ಕಾರಣ ನಾನು ಮತ್ತು ನಮ್ಮ ಮನೆಯವರು ಈ ವರೆವಿಗೂ ಎಲ್ಲಾ ಕಡೆಗೆ ಹೋಗಿ ಹುಡುಕಾಡಿದರೂ ಸಹ ನನ್ನ ತಮ್ಮ ಪತ್ತೆಯಾಗಿರುವುದಿಲ್ಲ. ಕಾಣೆಯಾಗಿರುವ ನನ್ನ ತಮ್ಮನನ್ನು ಪತ್ತೆ ಮಾಡಿಕೊಡಬೇಕೆಂದು ಇತ್ಯಾದಿಯಾಗಿ ನೀಡಿದ ದೂರನ್ನು ಪಡೆದು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತದೆ.

ಕಾಣೆಯಾಗಿರುವ ವ್ಯಕ್ತಿಯ ವಿವರ :-

ಹೆಸರು	: ಮುತ್ಯಾಲಪ್ಪ
ತಂದೆ	: ಸುಬ್ಬರಾಯಪ್ಪ,
ತಾಯಿ	: ರಾಮಾಂಜಿನಮ್ಮ
ವಿಳಾಸ	: 8217608101
ವಯಸ್ಸು	: 31 ವರ್ಷ
2503	: ಬಲಜಿಗ
ಎತ್ತರ	: 4.5 ಪೈ
ಚಹರೆಗುರುತು	: ಕೋಲುಮುಖ, ಎಣ್ಣೆಗೆಂಪು ಬಣ್ಣ

ಇತರೆ ಗುರುತುಗಳು: ದೃಢಕಾಯ ಶರೀರ,
ವಿಳಾಸ:-8217608101
ತಂದೆ ಸುಬ್ಬರಾಯಪ್ಪ- 95385 36390
ಮೇಲ್ಕಂಡ ಕಾಣೆಯಾಗಿರುವ ವ್ಯಕ್ತಿಯು ಪತ್ತೆಯಾದಲ್ಲಿ ಮಾಹಿತಿ ನೀಡಲು ಕೋರಿದೆ

ಮಾಹಿತಿ ನೀಡಲು ಸಂಪರ್ಕಿಸಬೇಕಾದ ಅಧಿಕಾರಿಗಳ ವಿವರ
ಮತ್ತು ಮೊಬೈಲ್ ನಂ:
ಪಾವಗಡ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ:- 08136-245666
ಪಿ.ಎಸ್.ಐ,ಪಾವಗಡ ಠಾಣೆ 94808 02977
ರೀ ಪಿ.ಐ ಪಾವಗಡ ಪೊಲೀಸ್ ಠಾಣೆ 9480802941
ರೀ ಡಿವೈ ಎಸ್.ಪಿ. ಮಧುಗಿರಿ ಉಪ ವಿಭಾಗ 9480802924
ರೀ ಜಿಲ್ಲಾ ಪೊಲೀಸ್ ಕಚೇರಿ ಕಂಟ್ರೋಲ್ ರೋಂ ನಂ:9480802900

IN THE COURT OF THE CIVIL JUDGE & JMFC AT KORATAGERE
C.MIS.No.106/2025

Petitioners :- 1.Parveen taj w/o Late Mahamed rahamat Ulla, a/a 48 years, **2. Sami ulla** s/o Late, Mahamad Emam Sab,A/a 52 years, **3.Ruksan H.R.** S/o Mahamad rahamat ulla, A/a 22 years, All are r/o Hulikunte, Kasaba Hobli, Koratagere Taluk.

-: V/S :-

Respondents:-
The Tahasildar The Registar of Birth & death, Koratagere Taluk.

PUBLIC NOTIFICATION

Whereas the petitioners have filed the above petition to obtain the death certificate of the 3rd petitioner's Grand-Grand-Mother by name Hayath Bi @ Hayad Bhi W/o Peerusab died on 15-04-1990 at Koratagere Taluk, Kasaba Hobli, Hulikunte. It is hereby notify that whoever has interest or objection to obtain the death certificate of the 3rd petitioner's Grand-Grand-Mother may appear in person or through your advocate on:-26-09-2025 in the above case. Failing which the matter will be herd written mined in your absence.

BY ORDER OF THE COURT SD/ by SHERISTADAR CIVIL JUDGE AND JMFC COURT at KORATAGERE
H.V.Shivakumar, Advocate for petitioner, Koratagere

IN THE COURT OF THE CIVIL JUDGE & JMFC AT KORATAGERE
C.MIS.No. 228/2025

Petitioners :- 1) Nagarathnamma w/o Krishnamurthy Aged about 53 years. **2)Sharadamma** w/o Late Sanjeevaiah, Aged about 75 years **3) Hanumantharayappa** s/o Late, Sanjeevaiah, Aged about 65 years All are Residing at Huluvangala Village Kolala Hobli, Koratagere Taluk, Tumkur District

-: V/S :-

Respondents:-
The Deputy Tahasildhar Kolala Nada Kacheri, Kolala Hobli, Koratagere Taluk, Tumkur dist

PUBLIC NOTIFICATION

Where as the petitioners have filed the above petition to obtain the death certificate of the 1 st petitioner father in law and 2 nd petitioner husband and 3 rd petitioner father by name Sanjeevaiah s/o Late Venkatappa,died on 25/09/1991 at Huluvangala Village Kolala Hobli, Koratagere Taluk, Tumkur District .It is hearby notify that whoever has interest or objection to obtain the death Certificate of the 1 st petitioner Father -in-law and 2 nd petitioner Husband and 3 rd petititoner Father may appear in person or through your advocate 13-10-2025 in the above case failing which the matter will be herd and place in exparte.

BY ORDER OF THE COURT SD/ by SHERISTADAR CIVIL JUDGE AND JMFC COURT at KORATAGERE
K.B.Anil ,
Anusha K Yadav
Thimmesh R.H.
Advocate for petitioners, Koratagere

IN THE COURT OF THE CIVIL JUDGE & JMFC AT KORATAGERE
C.MIS.No. 105/2025

Petitioners :- 1.Ravishankar.D.N. S/o Late Narayanappa,59 years, **2.Renukamma** W/o Late, Narayanappa,A/a 55 years, **3.Jayaprakash Narayana.D.N.** S/o Late Narayanappa,A/a 53 years, P-No.1 to 3 are r/o, Dogganahalli, C.N.Durga Hobli, Koratagere Taluk. **4.Lakshmikantha .D.N.** S/o Late Narayanappa A/a 51 years, R/o Sri.Anjaneya Swamy Nilaya, Koratagere Taluk.

-: V/S :-

Respondents:-
The Deputy- Tahasildar The Registar of Birth & death, Thovinaker Koratagere Taluk.

PUBLIC NOTIFICATION

Whereas the petitioners have filed the above petition to obtain the death certificate of the 1st to 3rd petitioner's Mother by name Rangamma W/o Narayanappa died on 02-12-1976 at Koratagere Taluk, C.N.Durga Hobli, Dogganahalli. It is hereby notify that whoever has interest or objection to obtain the death certificate of the 1st to 3rd petitioner's mother may appear in person or through your advocate on-26-09-2025 in the above case. Failing which the matter will be herd written mined in your absence.

BY ORDER OF THE COURT SD/ by SHERISTADAR CIVIL JUDGE AND JMFC COURT at KORATAGERE
H.V.Shivakumar, Advocate for petitioner, Koratagere

IN THE COURT OF THE CIVIL JUDGE & JMFC AT KORATAGERE
C.MIS.No. 257/2025

Petitioners :- 1) Rangaswamy s/o Late, Doddarangaiah Aged about 47 years Residing at Madavara Village Kasaba Hobli,Koratagere Taluk. Tumkur District. **2) Hanumakka** w/o Late Doddaiah Aged about 54 years Residing at Venkatapura Village,Chinnenahalli Hobli, Sira Taluk, Tumkur District

-: V/S :-

Respondents:-
The Tahasildhar, Birth and Death Register Koratagere, Koratagere Taluk.

PUBLIC NOTIFICATION

Where as the petitioners have filed the above petition to obtain the death certificate of the petitioners mother by name Thimmakka W/o Late Doddarangaiah, died on. 23/06/1998 at Madavara Village Kasaba Hobli, Koratagere Taluk, Tumkur District .It is hearby notify that whoever has interest or objection to obtain the death certificate of the petitioners Mother may appear in person or through your advocate 0n: 6/10/25 in the above case, failing which the matter will be herd and place in exparte.

BY ORDER OF THE COURT SD/ by SHERISTADAR CIVIL JUDGE AND JMFC COURT at KORATAGERE
K.B.Anil ,
Anusha K Yadav
Thimmesh R.H.
Advocate for petitioners, Koratagere

IN THE COURT OF THE CIVIL JUDGE & JMFC AT KORATAGERE
C.MIS.No. 259/2025

Petitioners :- 1. Veeranna C.B S/o Late Bhimaiah aged about 41 years, **2. Gollalaiah** s/o, Late Bhimaiah aged about 48 years **3. Ramalakshmamma.** W/o Banaiah D/o Late Bhimaiah aged about 55years Bhaktharahalli, Holavanahalli Hobli Koratagere Taluk. Petitioner No.1 and 2 R/o Chimpuganahalli Holavanahalli Hobli, Koratagere Taluk

-: V/S :-

Respondents:-
Thasildar Registrar of Birth and Death, Koratagere Taluk office, Koratagere Taluk

PUBLIC NOTIFICATION

Where as the petitioners has filed the above petition for obtain the death certificate of petitioner's Grand Father and Grand Mother i.e. Veeranna S/o Veeranna he died on 06-03-1965 and Grand Mother i.e Rangamma W/o Late Veeranna she died on 12-03-1972 at Chikkannanahally village Holavanahalli Hobli Koratagere Taluk. Is there any other L.R.'s are hereby summoned to appear in the above court in person or by pleader on 6-10-2025 at 11 A.M. to answer to the same failing which the petition will be disposed of exparte.

BY ORDER OF THE COURT SD/ by SHERISTADAR CIVIL JUDGE AND JMFC COURT at KORATAGERE
Shivaramaiah
Advocate for Petitioner . Koratagere. Dated 05-08-2025

IN THE COURT OF THE CIVIL JUDGE & JMFC AT KORATAGERE
C.MIS.No. 202/2025

Petitioners :- 1.Bheemaiah s/o Late, **2. Sanjeevaiah** s/o Late, Chikkarangappa, Aged about 63 years a/a 49 years; Both are r/o Kyashavara Village, Holavanahalli Hobli, Koratagere Taluk.

-: V/S :-

Respondents:-
The Tahasildar The Registar of Birth & Death, Koratagere Taluk.

PUBLIC NOTIFICATION

Whereas the petitioners have filed the above petition to obtain the death certificate of the petitioner's grand-father by name Chikkarangappa S/o late Bheemaiah died on 01-06-1968 and grand-mother by name Puttahanumakka w/o Chikkarangappa died on 04-08-1976 at Tumakuru Dist, Koratagere Taluk, Holavanahalli Hobli, Kyashavara. It is hereby notify that whoever has interest or objection to obtain the death certificate of the Petitioners grandfather and grand-mother may appear in person or through your advocate on:- 09-10-2025 in the above case. Failing which the matter will be herd written mined in your absence.

BY ORDER OF THE COURT SD/ by SHERISTADAR CIVIL JUDGE AND JMFC COURT at KORATAGERE
M.H.Manjunatha Advocate for petitioner, Koratagere.

N THE COURT OF THE ASST. COMMISSIONER AT KOLA
RA.NO.781/2024

Appellant:- Amjadh Khan and others
V/s
Respondents: The Tahsildar & others

NOTICE UNDER ORDER 5 RULE 20 OF CPC TO respondent No.3

Haji Khan, S/o Valli Ahmed Khan Aged about 55 years, R/at Hussain Manzil, Mr.Shaik Shamshuddin # 274, 2nd Cross, Baddagiri Umar Faruq Masid, Modi Garden Arabic college post Bangalore-560032.

Whereas, the appellants have instituted the above appeal against appeal against the orders passed by the 1st respondent in respect of Sy No.167 measuring 0.29 guntas including 1 gunta of karab situated at Yechanapalli village, Ronur Hobli, Srinivaspur Taluk, Kolar district This Hon'ble court be pleased to issued notice to the respondent No.3 is intentionally evading and avoiding to receive the are all summons issued by this Hor 'ble court. Hence you hereby notice to appear in this court in person or by an advocate on at 7/8/25 3 p.m. to file objections to the appeal, in default of your appearance on the same day the court take as exparte.

Given under my hand Seal and Signature on this day:7/8/2025 at Kolar . Kolar Date: 17/07/202
BY ORDER OF THE COURT S/D., ASST. COMMISSIONER KOLAR.
Advocate of appellants **Ranjith Kumar S.H.** Advocate, kolar. Mob: 6363080107

IN THE COURT OF THE CIVIL JUDGE & JMFC AT KORATAGERE
C.MIS.No. 242/2025

Petitioners :- 1. Javregowda S/o Late Narasimhaiah a/a 68 years, **2. Doddegowda R. N.** s/o Late Narasimhaiah, a/a 59 years, Both are r/o Kabbigere, C.N.Durga Hobli, Koratagere Taluk.

-: V/S :-

Respondents:-
The Deputy-Tahasildar The Registar of Birth & Death, Nadakacheri, Thovinakere,

PUBLIC NOTIFICATION

Whereas the petitioners have filed the above petition to obtain the death certificate of the petitioner's Grand-mother by name Thimmajamma w/o Doddegowda died on 25-06-1942 at Koratagere taluk, C.N.Durga Hobli, Kabbigere. It is hereby notify that whoever has interest or objection to obtain the death certificate of the petitioner Grand-mother may appear in person or through your advocate on: 22-09-2025 in the above case. Failing which the matter will be herd written mined in your absence.

BY ORDER OF THE COURT SD/ by SHERISTADAR CIVIL JUDGE AND JMFC COURT at KORATAGERE
D.G.Thimmaraju, Advocate for petitioner, Koratagere.

ಸಮಾಚಾರ ಸಣ್ಣದಲ್ಲ

ದಸರಾ ಕ್ರೀಡಾಕೂಟಕ್ಕೆ ನೋಂದಣಿ ಪ್ರಕ್ರಿಯೆ

ಚಿಕ್ಕಬಳ್ಳಾಪುರ: ಜಿಲ್ಲೆಯ ತಾಲೂಕು ಮತ್ತು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಪುರುಷ ಮತ್ತು ಮಹಿಳೆಯರಿಗಾಗಿ ಇದೇ ತಿಂಗಳ ಕೊನೆಯ ವಾರದಲ್ಲಿ ಆಯೋಜಿಸಲಾಗುವುದು. ಭಾಗವಹಿಸುವ ಕ್ರೀಡಾಪಟುಗಳು ಕಡ್ಡಾಯವಾಗಿ ಆನ್ ಲೈನ್ ನಲ್ಲಿ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ ಸಂಖ್ಯೆ ನಮೂದಿಸುವ ಮೂಲಕ ನೋಂದಾಣಿ ಮಾಡಿಕೊಳ್ಳಬೇಕು. ಅಥ್ಲೆಟಿಕ್ಸ್: ಪುರುಷರು 100ಮೀ, 200ಮೀ, 400ಮೀ, 80ಮೀ, 1500ಮೀ, 5000ಮೀ, 10000ಮೀ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 110ಮೀ ಹಡಲ್ಸ್, 4ಥ100ಮೀ ರಿಲೇ, 4ಥ400ಮೀ ರಿಲೇ. ಅಥ್ಲೆಟಿಕ್ಸ್: ಮಹಿಳೆಯರು 100ಮೀ, 200ಮೀ, 400ಮೀ, 80ಮೀ, 1500ಮೀ, 3000ಮೀ, ಉದ್ದಜಿಗಿತ, ಎತ್ತರಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 110ಮೀ ಹಡಲ್ಸ್, 4ಥ100ಮೀ ರಿಲೇ, 4ಥ400ಮೀ ರಿಲೇ. ತಾಲ್ಲೂಕು ಮಟ್ಟದಲ್ಲಿ ಆಯ್ಕೆ ಮಾಡಬೇಕಾದ ಕ್ರೀಡೆಗಳು: ಅಥ್ಲೆಟಿಕ್ಸ್, ವಾಲಿಬಾಲ್, ಪುಟ್ಬಾಲ್, ಖೋ-ಖೋ, ಕಬ್ಬಡಿ, ಥ್ರೋಬಾಲ್, ಯೋಗ. ಮಾಹಿತಿಗಾಗಿ ಮೊ. 7975558324 ಗೆ ಸಂಪರ್ಕಿಸಬಹುದು.

ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಆಹ್ವಾನ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಕೃಷಿ ಪಂಡಿತ ಪ್ರಶಸ್ತಿಯಲ್ಲಿ ಭಾಗವಹಿಸಲು ಇಚ್ಛಿಸುವವರು ಕೃಷಿಯಲ್ಲಿ ವಿನೂತನ/ ಹೊಸ ಅನ್ವೇಷಣೆ ಮತ್ತು ಸೃಜನಾತ್ಮಕ ಕಾರ್ಯಗಳಿಂದ ಗಮನಾರ್ಹ ಸಾಧನೆ ಮಾಡಿರುವ ಮತ್ತು ರೈತ ಸಮುದಾಯದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡುತ್ತಿರುವ, ಕೃಷಿಯಲ್ಲಿ ಸಾಧನೆ ಮಾಡುತ್ತಿರುವ ರೈತರು ಮತ್ತು ರೈತ ಮಹಿಳೆಯರಿಂದ ಕೃಷಿ ಪಂಡಿತ ಪ್ರಶಸ್ತಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಆಗಸ್ಟ್ 30 ರೊಳಗೆ ಸಲ್ಲಿಸಬಹುದು. ಕೃಷಿ ಪಂಡಿತ ಪ್ರಶಸ್ತಿಗೆ ಭಾಗವಹಿಸುವವರ ಸಂಶೋಧನೆ/ಸಾಧನೆಗಳು ಮೂಲ ಸ್ವರೂಪವಾಗಿದ್ದು, ಬೇರೆಯವರ ಸಾಧನೆಗಿಂತ ವಿಭಿನ್ನವಾಗಿ ಕೃಷಿ ಕ್ಷೇತ್ರದ ಏಳಿಗೆಗೆ ಕಾರಣವಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಬಹುದೆಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿವಿಧ ಸಂಘಟನೆಯ ಭಕ್ತವೃಂದ ಮಾನವ ಸರಪಳಿ ರಚಿಸಿ ಆಕ್ರೋಶ

ಧರ್ಮಸ್ಥಳಕ್ಕೆ ಕಳಂಕ, ಪ್ರತಿಭಟನೆ

ಕೊರಟಗೆರೆ; ಶ್ರೀಕ್ಷೇತ್ರ ಧರ್ಮಸ್ಥಳದ ಪಾವಿತ್ರ್ಯತೆ ಹಾಳು ಮಾಡಲು ಹಾಗೂ ಧರ್ಮಾಧಿಕಾರಿಗಳಾದ ಡಾ.ವೀರೇಂದ್ರ ಹೆಗ್ಗಡೆ ಹೆಸರಿಗೆ ಕಳಂಕ ತರಲು ಹಲವು ಪಟ್ಟಭದ್ರ ಹಿತಾಶಕ್ತಿಗಳು ಮಾಡುತ್ತಿರುವ ಹುನ್ನಾರದ ವಿರುದ್ಧ ಧರ್ಮಸ್ಥಳ ಕ್ಷೇತ್ರದ ಭಕ್ತರು ಕೊರಟಗೆರೆ ಪಟ್ಟಣದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಿಂದ ಪ್ರಾರಂಭವಾದ ಪ್ರತಿಭಟನೆ ಮೆರವಣಿಗೆಯಲ್ಲಿ ನೂರಾರು ಮಹಿಳೆಯರು ಹಾಗೂ ಭಕ್ತವೃಂದ ಮಾನವ ಸರಪಳಿಯನ್ನು ರಚಿಸಿ ಧರ್ಮಸ್ಥಳದ ಪರ ನಾವಿದ್ದೇವೆ ಹೆಗ್ಗಡೆಯವರ ಪರ ಹೋರಾಡುತ್ತೇವೆ ಎಂದು ಘೋಷಣೆ ಕೂಗಿ, ನಂತರ ತಹಶೀಲ್ದಾರ್ ಮಂಜುನಾಥ್ ರವರಿಗೆ ಮನವಿ ಪತ್ರ ಸಲ್ಲಿಸಿದರು.

ಅಖಿಲ ಭಾರತ ವೀರಶೈವ ಮಹಿಳಾ ಸಂಘದ ಜಿಲ್ಲಾ ಅಧ್ಯಕ್ಷೆ ಮಮತಾ ದಿವಾಕರ್ ಮಾತನಾಡಿ, ಈ ರಾಜ್ಯದಲ್ಲಿ ಮೂಲಭೂತವಾದಿಗಳು ಹಿಂದು ಧಾರ್ಮಿಕ ಕೇಂದ್ರಗಳನ್ನು ಹಾಳು ಮಾಡುವ ಗುರಿಯಾಗಿಸಿಕೊಂಡು ಹೊರಗಿನ ಶಕ್ತಿಗಳೊಂದಿಗೆ ಕೈ ಜೋಡಿಸಿ ಧರ್ಮಸ್ಥಳ ಕ್ಷೇತ್ರಕ್ಕೆ ಕಳಂಕ ಹಚ್ಚುವ ಹೊನ್ನಾರಗಳು ನಡೆಯುತ್ತಿವೆ, ಸಮಾಜ ಘಾತಕ ಶಕ್ತಿಗಳಾದ ಮಹೇಶ್‌ಶೆಟ್ಟಿ ತಿಮ್ಮರೋಡಿ, ಗಿರೀಶ್ ಮಟ್ಟಣ್ಣನವರ್, ಸಮೀರ್ ಧರ್ಮಸ್ಥಳವನ್ನು ಹಾಳುಮಾಡುವ ಕೆಲಸಕ್ಕೆ ಕೈಹಾಕಿದ್ದಾರೆ ಎಂದರು.

ಕೊರಟಗೆರೆ ಪಟ್ಟಣದಲ್ಲಿ ಧರ್ಮಸ್ಥಳದ ವಿರುದ್ಧದ ಹುನ್ನಾರವನ್ನು ವಿರೋಧಿಸಿ ತಾಲೂಕಿನ ಭಕ್ತರು ಪ್ರತಿಭಟನೆ ಮಾಡಿದರು.

ಹಿಂದುಳಿದವರ್ಗಗಳ ಮುಖಂಡ ಎಸ್.ಪವನ್ ಕುಮಾರ್ ಮಾತನಾಡಿ, ಈ ದೇಶದಲ್ಲಿ ಪದೇ-ಪದೇ ಹಿಂದು ಧಾರ್ಮಿಕ ಕೇಂದ್ರಗಳ ಮೇಲೆ ಹೊರಗಿನ ಅನ್ಯ ಧರ್ಮದ ಶಕ್ತಿಗಳು ಒಳಗಿನ ಕೆಲವು ಧರ್ಮವಿರೋಧಿ ಕುಯುಕ್ತಿಗಳ ಜೊತೆಗೂಡಿ ಹಣದ ಪ್ರಭಾವ ಬಳಸಿ ಕ್ಷೇತ್ರದ ಮಹಿಮೆಯನ್ನು ಹಾಳು ಮಾಡುವ ಕೆಲಸಗಳು ನಡೆಯುತ್ತಿವೆ, ಇವುಗಳನ್ನು ಹಿಂದುಗಳು ಒಟ್ಟಾಗಿ ಮೆಟ್ಟಿನಿಲ್ಲಬೇಕು ಧರ್ಮಸ್ಥಳದ ಪರ ನಾವಿದ್ದೇವೆ ಎಂದು ತಿಳಿಸಿದರು.

ಅಖಿಲ ಭಾರತ ವಿರಶೈವ ಸಂಘದ ಜಿಲ್ಲಾ ಯುವಾಧ್ಯಕ್ಷ ದರ್ಶನ್ ಮಾತನಾಡಿದರು. ಪ್ರತಿಭಟನೆಯಲ್ಲಿ ಪಟ್ಟಣ ಪಂಚಾಯಿತಿ ಸದಸ್ಯ ಪ್ರದೀಪ್‌ಕುಮಾರ್, ಮಾಜಿ ಸದಸ್ಯರುಗಳಾದ ಕೋಟೆ ರಂಗನಾಥ್, ಸುಶೀಲಮ್ಮ, ಮಾಜಿ ಗ್ರಾ.ಪಂ.ಅಧ್ಯಕ್ಷ ನಾಗರಾಜು, ಜೆಡಿಎಸ್ ತಾಲೂಕು ಅಧ್ಯಕ್ಷ ಕಾಮರಾಜು, ಬಿಜೆಪಿ ಮಂಡಲ ಅಧ್ಯಕ್ಷ ರುದ್ರೇಶ್, ಮುಖಂಡರುಗಳಾದ ಆರ್.ಎಸ್.ರಾಜಣ್ಣ, ಗುರುಪ್ರಸಾದ್, ಚಿಕ್ಕರಂಗಯ್ಯ, ರಾಜೇಶ್ವರಿ, ಶೀತಲ್, ವಿಜಯ್‌ಕುಮಾರ್, ದಿನೇಶ್, ಸಿದ್ದರಾಜು, ಇತರರು ಭಾಗವಹಿಸಿದ್ದರು.

ಪ್ರಸಾದದ ಮೇಲೆ ಹೆಲ್ಪ್ ಲೈನ್ ಸಂಖ್ಯೆಯ ಜಾಗೃತಿ

ಚಿಕ್ಕನಾಯಕನಹಳ್ಳಿ: ಪಟ್ಟಣದ ಪ್ರಸಿದ್ದ ದೇವಸ್ಥಾನ ಶ್ರೀ ಮಹಾಲಕ್ಷ್ಮೀ ಮದ್ದರ ಲಕ್ಕಮ್ಮ ದೇವಾಲಯ ಸಮಿತಿ ದೇವಸ್ಥಾನದ ಪ್ರಸಾದದ ಬಾಕ್ಸ್ ಮೇಲೆ ಮಕ್ಕಳು ತೊಂದರೆಯಲ್ಲಿದ್ದಾಗ ಸಹಾಯ ಪಡೆಯಲು ಇರುವ ಸಹಾಯವಾಣಿ ಸಂಖ್ಯೆ 1098 ಮುದ್ರಿಸಿ ಅದನ್ನು ಭಕ್ತರಿಗೆ ವಿತರಿಸಲಾಗುತ್ತಿದೆ.

ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮಕ್ಕಳ ಸಹಾಯವಾಣಿ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ವಿನೂತನ ಕ್ರಮ ಕೈಗೊಳ್ಳಲಾಗಿದೆ. ದೇವಸ್ಥಾನವು ಕೇವಲ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿರದೆ ಸಮಾಜದಲ್ಲಿ ಒಳ್ಳೆಯ ಸಂದೇಶಗಳನ್ನು ತಲುಪಿಸುವ ವೇದಿಕೆಯಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆ, ಮತ್ತು ಮಕ್ಕಳ ಮೇಲೆ ನಡೆಯುವ ಶೋಷಣೆಗಳನ್ನು ತಡೆಯಲು ಸಹಾಯವಾಣಿ ಸಂಖ್ಯೆಗೆ ಮಾಹಿತಿ ನೀಡಬಹುದಾಗಿದೆ. ದೇವಸ್ಥಾನದ ಆಡಳಿತ ಮಂಡಳಿ ಕಾರ್ಯದರ್ಶಿ ಲಕ್ಷ್ಮೀಶ ಮಾತನಾಡಿ, ಮಕ್ಕಳು ದೇವರ ಸ್ವರೂಪ ಮಕ್ಕಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಎಂದು ತಿಳಿಸಿದರು. ದೇವಾಲಯ ಪೂಜಾ ಸ್ಥಳವಾಗಿರದೆ ಸಾಮಾಜಿಕ ಜಾಗೃತಿ ಕೇಂದ್ರವಾಗಿ ರೂಪಾಂತರಗೊಂಡಿರುವುದಕ್ಕೆ ಇದು ಉತ್ತಮ ಉದಾಹರಣೆ ಎಂದು ಯುನಿಸೆಫ್‌ನ ಪ್ರಾದೇಶಿಕ ಸಂಯೋಜಕರಾದ ಡಾ. ಕೋಣಿಲ ರಾಘವೇಂದ್ರ ಭಟ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಹೆಬ್ಬಾಳ್ಕರ್ ಪ್ರಶಂಸೆ

ದೇವಾಸ್ಥಾನಗಳು ಧಾರ್ಮಿಕ ವಿಷಯಗಳ ಜೊತೆಗೆ ಇಂತಹ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವುದು ಶ್ಲಾಘನೀಯ. ಪ್ರಸಾದವನ್ನು ಸ್ವೀಕರಿಸುವಾಗ ಮಕ್ಕಳ ಸಹಾಯವಾಣಿ ಸಂಖ್ಯೆ ತಿಳಿದುಕೊಳ್ಳುವುದು, ಮಕ್ಕಳ ರಕ್ಷಣೆ ಬಗ್ಗೆ ಮಾಹಿತಿ ಒದಗಿಸುವುದು ನಿಜಕ್ಕೂ ಶ್ಲಾಘನೀಯ ಎಂದು ಈ ಕಾರ್ಯಕ್ರಮಕ್ಕೆ ಮಹಿಳಾ ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಂತೋಷ ವ್ಯಕ್ತಪಡಿಸಿದ್ದಾರೆ.

ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಿಸಿ

ಮಧುಗಿರಿ: ಗೌರಿ -ಗಣೇಶೋತ್ಸವ ಹಾಗೂ ಈದ್ ಮಿಲಾದ್ ಆಚರಣೆ ವೇಳೆ ಅನಾಹುತ ಸಂಭವಿಸಿದರೆ ಆಯೋಜಕರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಡಿವೈಎಸ್ಪಿ ಜಿ. ಮಂಜುನಾಥ್ ತಿಳುವಳಿಕೆ ನೀಡಿದರು.

ಪಟ್ಟಣದ ಪೊಲೀಸ್ ಠಾಣಾ ಆವರಣದಲ್ಲಿ ಶಾಂತಿ ಸಭೆಯಲ್ಲಿ ಮಾತನಾಡಿ, ಕಾಲ ಬದಲಾದಂತೆ ಆಚರಣೆಗಳು ಸಹ ಬದಲಾಗಬೇಕು, ಪೊಲೀಸ್ ಹಾಗೂ ಇತರೆ ಇಲಾಖೆಗಳಿಂದ ಕಡ್ಡಾಯವಾಗಿ ಪರವಾನಗಿ ಪಡೆಯಬೇಕು. ಆಯೋಜಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈದ್ ಮಿಲಾದ್ ಹಾಗೂ ಗಣೇಶ ಹಬ್ಬ ಶಾಂತಿ ಸೌಹಾರ್ದತೆಯಿಂದ ಆಚರಣೆ ಮಾಡಿ,ಗಣೇಶನನ್ನು ಕಾಯಲು ಪ್ರಾಯೋಜಕರು ಕ್ರಮ ವಹಿಸಿದರೆ ಯಾವುದೇ ಅನಾಹುತಗಳು ಆಗುವುದಿಲ್ಲಾ ಎಂದು ಸಿಪಿಐ ಹನುಮಂತರಾಯಪ್ಪ ಸಲಹೆ ನೀಡಿದರು.

ಧಾರ್ಮಿಕ ಮುಖಂಡರು ಹಾಗೂ ಮುಸ್ಲಿಂ ಮುಖಂಡರು ಸಭೆಯಲ್ಲಿ ಸಲಹೆಗಳನ್ನು ನೀಡಿದರು. ಪುರಸಭಾಧ್ಯಕ್ಷ ಲಾಲಪೇಟೆ ಮಂಜುನಾಥ್, ಮುಖ್ಯಾಧಿಕಾರಿ ಸುರೇಶ್, ಜಾಮಿಯಾ ಮಸೀದಿ ಅಧ್ಯಕ್ಷ ಅಲಿಮುಲ್ಲಾ, ಪುರಸಭಾ ಸದಸ್ಯರು,ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಒಳ ಮೀಸಲು ಬಗ್ಗೆ ಗಮನ ಸೆಳೆಯಲು ಶಾಸಕರಿಗೆ ಮನವಿ

ಗೌರಿಬಿದನೂರು: ಒಳಮೀಸಲಾತಿಯನ್ನು ತರಲು ಈ ಶಾಸನ ಸಭೆಯ ಅಧಿವೇಶದಲ್ಲಿ ಸರ್ಕಾರ ಗಮನ ಸೆಳಿಯಲು ಪ್ರಶ್ನೆ ಕೇಳಬೇಕಾಗಿ ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕರಾದ ಹುದುಗೂರು ನಂಜುಂಡಪ್ಪ ಶಾಸಕ ಪುಟ್ಟಸ್ವಾಮಿ ಗೌಡ ರವರಿಗೆ ವಿನಂತಿಸಿದರು.

ಅವರು ತಮ್ಮ ಸದಸ್ಯರೊಂದಿಗೆ ಶಾಸಕ ಪುಟ್ಟಸ್ವಾಮಿಗೌಡ ರವರನ್ನು ಬೇಟಿ ಮಾಡಿ ಮನವಿ ಪತ್ರ ನೀಡಿ, ಕಳದ 35 ವರ್ಷಗಳಿಂದ ಮಾದಿಗ ಸಮುದಾಯಕ್ಕೆ ಅನ್ಯಾಯ ವಾಗುತ್ತಿದೆ.ಜಸ್ಟೀಸ್ ನಾಗಮೋಹನ್ ದಾಸ್ ಕಮಿಟಿ ವರದಿ ಯನ್ನು ನೀಡಿದೆ.ಒಳ ಮೀಸಲಾತಿ ಬಗ್ಗೆ ರಾಜ್ಯ ಸಕಾರಗಳು ಜನಸಂಖ್ಯೆಗೆ ಅನುಗುಣವಾಗಿ, ಜಾತಿ ಆಧಾರವಾಗಿ ಒಳಮೀಸಲಾತಿಯನ್ನು ಜಾರೀ ಮಾಡಬಹುದು ಎಂದು ತಿಳಿಸಿದೆ. ಕರ್ನಾಟಕ ಸರ್ಕಾರ ಈ ವಿಷಯವಾಗಿ ಸ್ಪಂದಿಸುತ್ತಿಲ್ಲ. ಆದಕಾರಣ ನೀವು ಶಾಸನ ಸಭೆಯ ಅದಿವೇಶದಲ್ಲಿ ಈ ವಿಷಯವಾಗಿ ಸರ್ಕಾರದ ಗಮನ ಸೆಳಿಯಬೇಕೆಂದು ಶಾಸಕ ಪುಟ್ಟಸ್ವಾಮಿ ಗೌಡರಲ್ಲಿ ವಿನಂತಿಸಿದರು. ಮನವಿ ಪತ್ರ ನೀಡುವಾಗ ಮಧುಕುಮಾರ್, ಗಂಗಾಧರಪ್ಪ, ವೆಂಕಟೇಶ್, ಕೃಷ್ಣಪ್ಪ, ರಾಮಕೃಷ್ಣ, ಲಕ್ಷ್ಮೀನಾರಾಯಣ , ಲಕ್ಷ್ಮಣ್ ರಾವ್ , ಇಡಗೂರು ಪ್ರಸನ್ನ,ಅಂಬರೀಶ್ ಮುಂತಾವರು ಹಾಜರಿದ್ದರು.

ಪ್ರಕರಣ: ಆರೋಪಿಗಳ ಬಂಧನ

ಮಡಿಕೇರಿ: ಕರ್ನಾಟಕ ಸೇರಿದಂತೆ ದೇಶದ ವಿವಿಧೆಡೆ ಅಪರಾಧ ಕೃತ್ಯಗಳನ್ನು ನಡೆಸಿ ಕಾನೂನಿನ ಕಣ್ಣಿನಿಂದ ತಪ್ಪಿಸಿಕೊಳ್ಳುತ್ತಿದ್ದ ಆರೋಪಿಗಳನ್ನು ಸೆರೆಹಿಡಿಯುವಲ್ಲಿ ಕೊಡಗು ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಕೊಡಗು ಜಿಲ್ಲೆಯ ಕೇಂದ್ರ ಸ್ಥಾನ ಮಡಿಕೇರಿಯಲ್ಲಿ ಪೊಲೀಸ್ ವಸತಿ ಗೃಹದಲ್ಲಿ ಇತ್ತೀಚೆಗೆ ನಡೆದ ಕಳವು ಪ್ರಕರಣದ ತನಿಖೆ ಕೈಗೊಂಡ ಪೊಲೀಸರಿಗೆ ಇಬ್ಬರು ಆರೋಪಿಗಳು ಸೆರೆ ಸಿಕ್ಕಿದ್ದಾರೆ.

ಕಳೆದ ಎರಡು ತಿಂಗಳಿನಿಂದ ನೂರಕ್ಕೂ ಹೆಚ್ಚಿನ ಪೊಲೀಸ್ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಮಧ್ಯಪ್ರದೇಶದ ಆಧಾ ರ್ ಜಿಲ್ಲೆಯ ಇಬ್ಬರು ಆರೋಪಿಗಳನ್ನು ಬಂಧಿಸಿ ರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ತಮ್ಮ ಕಛೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬಂಧಿತ ಆರೋಪಿಗಳನ್ನು ಮಧ್ಯಪ್ರದೇಶದ ಧಾರ್ ಜಿಲ್ಲೆಯ ನಾರ್ವಲ್ಲಿ ಗ್ರಾಮದ ಸುರೇಶ್ ಸೆಂಗಾರ್(23) ಹಾಗೂ ಮಾಲ್‌ಪುರ ಗ್ರಾಮದ ಮನೀಶ್ ಭಗೇಲ್ (27) ಎಂದು ಗುರುತಿಸಲಾಗಿದೆ. ಸುರೇಶ್ ವಿರುದ್ಧ ಕರ್ನಾಟಕ ಮತ್ತು ಹೊರ ರಾಜ್ಯಗಳಲ್ಲಿ 25 ಕ್ಕೂ ಹೆಚ್ಚಿನ ಅಪರಾಧ ಪ್ರಕರಣಗಳು ದಾಖಲಾಗಿದೆ. ತಲೆ ಮರೆಸಿಕೊಂಡಿರುವ ಉಳಿದ ಆರೋಪಿಗಳ ಸೆರೆಗೆ ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು.

ಮಡಿಕೇರಿ ನಗರದ ಓಲ್ಡ್ ರೈಫಲ್ ರೇಂಜ್ ಪೊಲೀಸ್ ವಸತಿ ಗೃಹ ಸಮುಚ್ಚಯದಲ್ಲಿ ಇದೇ ಸಾಲಿನ ಜೂ.17 ರಂದು ರಾತ್ರಿ 8 ಮನೆಗಳ ಬಾಗಿಲನ್ನು ಮುರಿದು ಕಳ್ಳತನ ಮಾಡಲಾಗಿತ್ತು.

ಮೂರು ಮನೆಗಳಿಂದ 95 ಸಾವಿರ ರೂ. ನಗದು ಮತ್ತು 5.5 ಗ್ರಾಂ ಚಿನ್ನಾಭರಣಗಳನ್ನು ಕಳವು ಮಾಡಲಾಗಿತ್ತು.

ಬಂಧಿತರ ಬಳಿಯಿಂದ 50,480 ರೂ. ನಗದು, 9 ಮೊಬೈಲ್ ಫೋನ್ ಗಳು, ಒಂದು ಬೋಲ್ಟ್ ಕಟ್ಟರ್, ಒಂದು ಕಬ್ಬಿಣದ ರಾಡ್ ಮತ್ತು ಒಂದು ಬ್ಯಾಕ್ ಪ್ಯಾಕ್ ಬ್ಯಾಗ್ ನ್ನು ವಶಪಡಿಸಿಕೊಂಡಿರುವುದಾಗಿ ಎಸ್‌ಪಿ ಕೆ. ರಾಮರಾಜನ್ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಾರಿಕೆ ದಿನೇಶ್, ಡಿವೈಎಸ್‌ಪಿ ಸೂರಜ್, ತನಿಖಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಗುಹೆಯೊಳಗೆ ಹೆಣ್ಣು ಚಿರತೆ ಸಾವು

ಚಾಮರಾಜನಗರ: ಹೆಣ್ಣು ಚಿರತೆ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ. ಜಿಲ್ಲೆಯ ಹನೂರು ತಾಲೂಕಿನ ಕಾವೇರಿ ವನ್ಯಜೀವಿ ವಿಭಾಗದ ಬಂಡೆಯ ಗುಹೆಯೊಳಗೆ ಹೆಣ್ಣು ಚಿರತೆಯ ಮೃತ ಪಟ್ಟಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಹನೂರು ವನ್ಯಜೀವಿ ವಲಯದ ಮೇಕೆದಾಟು ಅರಣ್ಯ ಪ್ರದೇಶದಲ್ಲಿ ಸುಮಾರು ಐದು-ಆರು ವರ್ಷ ವಯಸ್ಸಿನ ಚಿರತೆ ಮೃತ ಪಟ್ಟಿದೆ. ಹಿರಿಯ ಅರಣ್ಯ ಅಧಿಕಾರಿಯೊಬ್ಬರು ಆ. 17 ರಂದು ಇಲಾಖೆ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ಬಂಡೆಯ ಗುಹೆಯೊಳಗೆ ಚಿರತೆ ಮೃತಪಟ್ಟಿರುವುದು ಕಂಡುಬಂದಿದೆ ಎಂದು ಅವರು ತಿಳಿಸಿದ್ದಾರೆ. ಪ್ರಸ್ತುತ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಶವಪರೀಕ್ಷೆ ವರದಿ ಮಾತ್ರ ಸಾವಿಗೆ ನಿಖರವಾದ ಕಾರಣವನ್ನು ಕಂಡುಹಿಡಿಯಲು ಸಾಧ್ಯ ಎಂದು ಅಧಿಕಾರಿ ಹೇಳಿದ್ದಾರೆ.

ಅಪ್ಪನನ್ನೇ ಕೊಂದ ಮಗ

ಚಿಕ್ಕಮಗಳೂರು: ಕುಡಿದ ಮತ್ತಿನಲ್ಲಿ ಮಗನೇ ತಂದೆಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಚಿಕ್ಕಮಗಳೂರು ತಾಲೂಕಿನ ಆಲ್ದೂರು ಸಮೀಪದ ಗುಪ್ತಶೆಟ್ಟಿಹಳ್ಳಿಯಲ್ಲಿ ನಡೆದಿದೆ. ಗ್ರಾಮದ ಮಂಜುನಾಥ್ (51) ಮಗನಿಂದಲೇ ಕೊಲೆಯಾದ ದುರ್ದೈವಿ, ರಂಜನ್ (21) ಕೊಲೆಗೈದ ಆರೋಪಿಯಾಗಿದ್ದಾನೆ. ಪೋಷಕರ ನಡುವೆ ನಡೆದ ಗಲಾಟೆಯ ವೇಳೆ ಆರೋಪಿ ಈ ಕೃತ್ಯ ಎಸಗಿದ್ದಾನೆ. ಬಳಿಕ ಸದ್ದಿಲ್ಲದೇ ತಂದೆಯ ಅಂತ್ಯಸಂಸ್ಕಾರಕ್ಕೆ ಮುಂದಾಗಿದ್ದ ಎಂದು ತಿಳಿದು ಬಂದಿದೆ.

ವಿರಾಮ
ಪ್ರತಿ ಭಾನುವಾರ

ನಾರಾಯಣಪುರ ಡ್ಯಾಮ್‌ನಿಂದ 1.55 ಲಕ್ಷ ಕ್ಯುಸೆಕ್ ನೀರು ನದಿಗೆ, ಸೇತುವೆಗಳು ಜಲಾವೃತ | ಗೋಕಾಕ್‌ನಲ್ಲಿ ಮನೆ ಬಿದ್ದು ಮಹಿಳೆ ಸಾವು

ವರುಣನ ಆರ್ಭಟಕ್ಕೆ ರಾಜ್ಯ ತತ್ತರ

ಬೆಂಗಳೂರು: ಕೊಡಗು, ಮಲೆನಾಡು, ಉತ್ತರ ಕರ್ನಾಟಕ, ಕರಾವಳಿ ಸೇರಿದಂತೆ ರಾಜ್ಯದಾದ್ಯಂತ ಮುಂಗಾರು ಮಳೆ ಅಬ್ಬರಿಸುತ್ತಿದ್ದು, ನಿರಂತರ ಮಳೆಯಿಂದಾಗಿ ರಾಜ್ಯದ ಹಲವು ನದಿಗಳು, ಜಲಾಶಯಗಳು ಅಪಾಯ ಮಟ್ಟ ಮೀರಿ ಹರಿಯುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ಪ್ರವಾಹದ ಎಚ್ಚರಿಕೆ ನೀಡಲಾಗಿದೆ.

ಕೃಷ್ಣಾ ನದಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾದ ಹಿನ್ನೆಲೆ ಬಸವಸಾಗರ ಜಲಾಶಯದಿಂದ ನದಿಗೆ ನೀರು ಬಿಡಲಾಗುತ್ತಿದ್ದು, ಪರಿಣಾಮ ಲಿಂಗಸುಗೂರು ತಾಲೂಕಿನ ಶೀಲಹಳ್ಳಿ ಸೇತುವೆ ಮುಳುಗಡೆಯಾಗಿದೆ. ಭಾರೀ ಮಳೆಯ ಪರಿಣಾಮ ನಾರಾಯಣಪುರದ ಬಸವಸಾಗರ ಜಲಾಶಯಕ್ಕೆ ಸದ್ಯ 1.55 ಲಕ್ಷ ಕ್ಯೂಸೆಕ್ ಒಳಹರಿವು ಇದ್ದು, ಜಲಾಶಯದ ಸುರಕ್ಷತಾ ದೃಷ್ಟಿಯಿಂದ 1.60 ಲಕ್ಷ ಕ್ಯೂಸೆಕ್ ನೀರನ್ನು ಕೃಷ್ಣಾ ನದಿಗೆ ರಿಲೀಸ್ ಮಾಡಲಾಗಿದೆ. ಪರಿಣಾಮ ರಾಯಚೂರಿನ ಲಿಂಗಸುಗೂರು ತಾಲೂಕಿನ ಶೀಲಹಳ್ಳಿ ಸೇತುವೆ ಮುಳುಗಡೆಯಾಗಿ, ಐದಾರು ಗ್ರಾಮಗಳ ರಸ್ತೆ ಸಂಪರ್ಕ ಕಡಿತವಾಗಿದೆ.

ಕಂಪ್ಲಿ ಸೇತುವೆ ಮುಳುಗಡೆ: ತುಂಗಭದ್ರಾ ಜಲಾಶಯಕ್ಕೆ ಒಳ ಹರಿವು ಹೆಚ್ಚಳವಾಗಿದ್ದರಿಂದ ಜಲಾಶಯದಿಂದ ನದಿಗೆ 1,17,057 ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದೆ. ತುಂಗಭದ್ರಾ ನದಿ ಪಾತ್ರದಲ್ಲಿ ಪ್ರವಾಹದ ಭೀತಿ ಎದುರಾಗಿದೆ. ಸದ್ಯ ತುಂಗಭದ್ರಾ ಜಲಾಶಯಕ್ಕೆ 1,15,722 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಅಪಾರ ಪ್ರಮಾಣದ ನೀರು ಹರಿದು ಬರ್ತಿರೋದ್ರಿಂದ ಜಲಾಶಯದಿಂದ ನದಿಗೆ 1,17,057 ಕ್ಯೂಸೆಕ್ ನೀರು ರಿಲೀಸ್ ಮಾಡಲಾಗಿದೆ. ಲಕ್ಷಕ್ಕೂ ಅಧಿಕ ಕ್ಯೂಸೆಕ್ ನೀರು ರಿಲೀಸ್ ಮಾಡಿರುವುದರಿಂದ ಬಳ್ಳಾರಿ-ಗಂಗಾವತಿ ಸಂಪರ್ಕ ಕಲ್ಪಿಸುವ ಕಂಪ್ಲಿ ಸೇತುವೆ ಮುಳುಗಡೆಯಾಗಿದ್ದು, ಬಳ್ಳಾರಿ-ಗಂಗಾವತಿ ಸಂಪರ್ಕ ಕಡಿತಗೊಂಡಿದೆ.

ಮನೆ ಬಿದ್ದು ಮಹಿಳೆ ಸಾವು: ನಿರಂತರ ಮಳೆಗೆ ಮನೆ ಗೋಡೆ ಕುಸಿದು ಮಹಿಳೆ ಮೃತಪಟ್ಟ ಘಟನೆ ಗೋಕಾಕ್ ಸಂಗಮ ನಗರದಲ್ಲಿ ನಡೆದಿದೆ. ಪರೀದಾಬಾನು ಕನವಾಡ (50) ಮೃತ ಮಹಿಳೆ. ಕಳೆದ ಎರಡು ದಿನಗಳಿಂದ ನಿರಂತರ ಮಳೆಗೆ ಮನೆ ಗೋಡೆ ಕುಸಿದು ಘಟನೆ ಸಂಭವಿಸಿದೆ. ಮಣ್ಣಿನ ಅಡಿಯಲ್ಲಿ ಸಿಲುಕಿದ್ದ ರಿಯಾಜ್ ಶಕೀಲ ಖನವಾಡ(26) ಎಂಬಾತನನ್ನು ಸ್ಥಳೀಯರು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಕೆಆರ್‌ಎಸ್‌ನಿಂದ 91 ಸಾವಿರ ಕ್ಯೂಸೆಕ್ ನೀರು ಹೊರಕ್ಕೆ: ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆ ಬೀಳುತ್ತಿರುವ ಕಾರಣ ಕೃಷ್ಣರಾಜಸಾಗರ ಜಲಾಶಯದಿಂದ 91 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಮಳೆ ಮತ್ತೆ ಜಾಸ್ತಿಯಾದರೆ 1 ಲಕ್ಷಕ್ಕೂ ಹೆಚ್ಚು ಕ್ಯೂಸೆಕ್ ನೀರು ಹೊರ ಬಿಡುವ ಸಾಧ್ಯತೆಯಿದೆ. 124.80 ಅಡಿ ಎತ್ತರದ ಜಲಾಶಯಕ್ಕೆ ಸದ್ಯ 70 ಸಾವಿರ ಕ್ಯೂಸೆಕ್ ನೀರು ಒಳ ಹರಿವಿದೆ.

ಘಟಪ್ರಭಾ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಭಾರೀ ಪ್ರಮಾಣದ ಮಳೆಯಿಂದಾಗಿ ಗೋಕಾಕ ಜಲಪಾತ ತುಂಬಿ ಹರಿಯುತ್ತಿರುವುದು.

ಭಾರೀ ಪ್ರಮಾಣದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಘಟಪ್ರಭಾ ನದಿಯು ತುಂಬಿ ಹರಿಯುತ್ತಿರುವ ಪರಿಣಾಮ ಗದ್ದೆಗಳಿಗೆ ನೀರು ನುಗ್ಗಿರುವುದು.

ಜೋಗ ಜಲಪಾತಕ್ಕೆ ಜೀವಕಳೆ

ಮಲೆನಾಡು ಭಾಗದಲ್ಲಿ ನಿರಂತರ ಮಳೆಯಾಗುತ್ತಿರುವ ಹಿನ್ನೆಲೆ ವಿಶ್ವವಿಖ್ಯಾತ ಜೋಗ ಜಲಪಾತಕ್ಕೆ ಜೀವಕಳೆ ಬಂದಿದ್ದು, ಫಾಲ್ಸ್ ಸೌಂದರ್ಯ ಕಂಡು ಪ್ರವಾಸಿಗರು ಮನಸೋತಿದ್ದಾರೆ. ನಿರಂತರ ಮಳೆಯಿಂದಾಗಿ ಲಿಂಗನಮಕ್ಕಿ ಜಲಾಶಯದ ಮೂಲಕ ಶರಾವತಿ ನದಿಗೆ ನೀರು ಹರಿದುಬಂದಿದ್ದು, ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿರುವ ಜೋಗ ಜಲಪಾತದ ಸೌಂದರ್ಯ ಇಮ್ಮಡಿಯಾಗಿದೆ. ಜಲಪಾತ ಧುಮ್ಮಿಕ್ಕಿ ಹರಿಯುತ್ತಿದ್ದು, ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ.

ಬೀಗಾರ ಗ್ರಾಮದಲ್ಲಿ ಭೂಕುಸಿತ

ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತೆ ಭೂಕುಸಿತ ಮುಂದುವರಿದಿದೆ. ಜಿಲ್ಲೆಯ ಯಲ್ಲಾಪುರದ ವಜ್ರಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಬೀಗಾರ ಗ್ರಾಮದಲ್ಲಿ ಭೂಕುಸಿತವಾಗಿದೆ. ಇಲ್ಲಿನ ತಾರಗಾರ-ಬೀಗಾರ ಮತ್ತು ಬಾಗಿನ ಕಟ್ಟಾ ಗ್ರಾಮ ಸಂಪರ್ಕಿಸುವ ರಸ್ತೆ ತಳಭಾಗದಲ್ಲಿ ಭೂಮಿ ಕುಸಿತ ಕಂಡಿದೆ. ಹೆಚ್ಚಿನ ಮಳೆಯಾದರೆ ಸಂಪೂರ್ಣ ರಸ್ತೆ ಕುಸಿಯುವ ಆತಂಕ ತಂದೊಡ್ಡಿದೆ.

- ಯಾದಗಿರಿ, ಬೆಳಗಾವಿ,ಧಾರವಾಡ, ಹಾವೇರಿ, ಬಾಗಲಕೋಟೆ ಜಿಲ್ಲೆಯ ಶಾಲೆಗಳಿಗೆ ಮಳೆ ಹಿನ್ನೆಲೆ ಇಂದು ರಜೆ
- ನಾರಾಯಣಪುರ ಡ್ಯಾಮ್‌ನಿಂದ ಅಪಾರ ಪ್ರಮಾಣದ ನೀರು ನದಿಗೆ ಬಿಟ್ಟಿದ್ದು, ಶೀಲಹಳ್ಳಿ ಸೇತುವೆ ಮುಳುಗಡೆ

ಭಾರೀ ಪ್ರಮಾಣದಲ್ಲಿ ನೀರು ಹೊರ ಬಿಡುತ್ತಿರುವ ಕಾರಣ ಜಲಾಶಯದ ಕೆಳ ಭಾಗದಲ್ಲಿರುವ ಜನರು ನದಿಗೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ಅಪಾಯ ಮಟ್ಟ ಮೀರಿ ಹರಿಯುತ್ತಿವೆ ನದಿಗಳು

ಮಹಾರಾಷ್ಟ್ರದ ಘಟ್ಟಪ್ರದೇಶ ಹಾಗೂ ಬೆಳಗಾವಿ ಜಿಲ್ಲೆಯಾದ್ಯಂತ ಸುರಿಯುತ್ತಿರುವ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಜಿಲ್ಲೆಯ ಕೃಷ್ಣಾ , ಘಟಪ್ರಭಾ, ಮಲಪ್ರಭಾ ವೇದಗಂಗಾ, ದೂದಗಂಗಾ ಹಾಗೂ ಹಿರಣ್ಯಕೇಶಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು ಕೆಳಹಂತದ ಸೇತುವೆಗಳು ಜಲಾವೃತವಾಗಿವೆ. ಘಟಪ್ರಭಾ, ಹಿರಣ್ಯಕೇಶಿ ಮತ್ತು ಮಾರ್ಕಂಡೇಯ ನದಿಗಳು ಹರಿವು ಹೆಚ್ಚಿದ್ದು ಗೋಕಾಕ ನಗರಕ್ಕೆ ಪ್ರವಾಹದ ಆತಂಕ ಎದುರಾಗಿದೆ. ಪ್ರಮುಖ ಸೇತುವೆಗಳಾದ ಜತ್ತ ಜಾಂಬೋಟಿ ರಾಜ್ಯ ಹೆದ್ದಾರಿಯ ಲೋಳಸೂರ ಸೇತುವೆ ಘಟಪ್ರಭಾ ನದಿಯ ಪ್ರವಾಹದಿಂದ ಮುಳುಗಡೆಯ ಸನಿಹದಲ್ಲಿದೆ. ಗೋಕಾಕ ನಗರದಿಂದ ಹಿಡಕಲ್ ಡ್ಯಾಂ ಸಂಪರ್ಕ ಕಲ್ಪಿಸುವ ಚಿಕ್ಕಹೊಳಿ ಸೇತುವೆ ಸಹ ಮಾರ್ಕಂಡೇಯ ನದಿಯ ಪ್ರವಾಹದಿಂದ ಮುಳುಗಡೆಯ ಹಂತದಲ್ಲಿದೆ. ಘಟಪ್ರಭಾ ನದಿಗೆ ಸದ್ಯ ಹಿಡಕಲ್ ಜಲಾಶಯ, ಹಿರಣ್ಯಕೇಶಿ, ಮಾರ್ಕಂಡೇಯ ನದಿ ಹಾಗೂ ಬಳ್ಳಾರಿ ನಾಲಾ ಸೇರಿ ಸುಮಾರು 56ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದ್ದು ನದಿ ದಡದ ಜನರು ಪ್ರವಾಹದ ಆತಂಕ ಎದುರಿಸುತ್ತಿದ್ದಾರೆ. ನಗರದ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯ(ಎಂಎಚ್‌ಎಸ್) ಮತ್ತು ಎಪಿಎಂಸಿ ಆವರಣದ ರೈತ ಭವನಕ್ಕೆ ಪ್ರವಾಹ ಪೀಡಿತ ಜನರಿಗಾಗಿ ಕಾಳಜಿ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಜಿಲ್ಲೆಯಲ್ಲಿ ಬಿತ್ತನೆ ಮಾಡಿದ್ದ 1.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಸೋಯಾಬಿನ್ ಬೆಳೆ ಕೀಟ ಬಾಧೆಗೆ ಬಲಿಯಾಗಿದೆ. ಇದರಿಂದಾಗಿ ರೈತರು ಮತ್ತೆ ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಮಳೆಯಿಂದಾಗಿ ಅಲ್ಲಲ್ಲಿ ಗಿಡಮರಗಳು ನೆಲಕ್ಕುರುಳಿವೆ. ಖಾನಾಪುರ ತಾಲೂಕಿನ ಕಣಕುಂಬಿ ಪ್ರದೇಶದಲ್ಲಿ ಉತ್ತಮ ಮಳೆ ಆಗಿದ್ದು, ಮಲಪ್ರಭಾ ನದಿ ಉಕ್ಕಿ ಹರಿಯುತ್ತಿದೆ.

ಧಾರಾಕಾರ ಮಳೆಗೆ ಶಾಲೆಯ ಗೋಡೆ ಕುಸಿತ

ಭಾರೀ ಗಾಳಿ ಮಳೆಗೆ ಸಕಲೇಶಪುರದ ಕಡಗರವಳ್ಳಿ ಗ್ರಾಮದ ಶಾಲೆಯ ಗೋಡೆ ಕುಸಿದುಬಿದ್ದಿದೆ. ಭಾರೀ ಮಳೆಯಿಂದ ಶಾಲೆಗೆ ರಜೆ ಘೋಷಣೆ ಮಾಡಿದ್ದರಿಂದ ವಿದ್ಯಾರ್ಥಿಗಳಾಗಲಿ, ಶಿಕ್ಷಕರಾಗಲಿ ಇರಲಿಲ್ಲ. ಇದರಿಂದ ನಡೆಯಬೇಕಿದ್ದ ಭಾರೀ ಅನಾಹುತವೊಂದು ತಪ್ಪಿದಂತಾಗಿದೆ. ಹಾಸನ ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಿಂದ ಧಾರಾಕಾರ ಮಳೆ ಸುರಿಯುತ್ತಿದೆ. ಪರಿಣಾಮ ಶಾಲೆಯ ಕಟ್ಟಡದ ಗೋಡೆ ಹಾಗೂ ಹೆಂಚುಗಳು ಬಿದ್ದಿವೆ.

ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ ವರುಣನ ಅಬ್ಬರಕ್ಕೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಹೊಸ ಪೀಳಿಗೆ, ಯುವಜನತೆಯನ್ನು ಕ್ಷೇತ್ರದಿಂದ ದೂರವಾಗಿಸುವ ಸಂಚು

← ಮೊದಲಪುಟದಿಂದ

ಧರ್ಮಸ್ಥಳ ಕ್ಷೇತ್ರವು ನೂರಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಗ್ರಾಮೀಣ ಜನರ ಬದುಕು ಸುಧಾರಿಸಲು ಗ್ರಾಮಾಭಿವೃದ್ಧಿ ಯೋಜನೆ ನಡೆಸುತ್ತಿದೆ. ಗ್ರಾಮೀಣ ಮಹಿಳೆಯರ ಸ್ವಾವಲಂಬಿಗಳನ್ನಾಗಿಸಲು ಹಲವು ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದೆ. ಈ ಜನೋಪಕಾರಿ ಕಾರ್ಯಕ್ರಮಗಳಿಗೆ ಅಸೂಯೆ ಪಡುವವರು ಈ ರೀತಿ ಸುಳ್ಳು ಆರೋಪಗಳನ್ನು ಮಾಡಿಸಿರಬಹುದು. ಎಲ್ಲಾ ಸತ್ಯಗಳು ಹೊರಗೆ ಬರಬೇಕು. ತಪ್ಪಿತಸ್ಥರು ಯಾರು ಎಂಬುದು ತನಿಖೆಯಿಂದ ತಿಳಿದುಬಂದು ಅವರಿಗೆ ಶಿಕ್ಷೆಯಾಗಲಿ ಎಂದು ಹೆಗ್ಗಡೆ ಆಗ್ರಹಿಸಿದ್ದಾರೆ.

ಧಾರ್ಮಿಕ ನಂಬಿಕೆ ಅಳಿಸುವ ಹುನ್ನಾರ: ಧರ್ಮಸ್ಥಳ ಕ್ಷೇತ್ರ ಧಾರ್ಮಿಕವಾಗಿ ಬಲು ಪ್ರಸಿದ್ಧ. ಶೈಕ್ಷಣಿಕ ಸಾಧನೆ, ಸಾಮಾಜಿಕ ಕಾರ್ಯಗಳ ಮೂಲಕವೂ ಕ್ಷೇತ್ರ ಗುರುತಿಸಿಕೊಂಡಿದೆ. ಹಾಗಾಗಿಯೆ ಕ್ಷೇತ್ರದ ಪ್ರಭಾವ ತಗ್ಗಿಸಲು, ಹಿರಿಮೆ ಹಾಳುಗೆಡವಲು ಕೆಲವರು ಸುಳ್ಳು ಆರೋಪಗಳ ಸರಣಿ ಮುಂದುವರಿಸುತ್ತಲೇ ಇದ್ದಾರೆ. ಆ ಮೂಲಕ ಕ್ಷೇತ್ರದ ಮಹಿಮೆ, ಧಾರ್ಮಿಕ ನಂಬಿಕೆಯನ್ನು ಹಾಳುಗೆಡವಿ ಹೊಸ ಪೀಳಿಗೆಯ ಜನರು, ಯುವಜನತೆಯನ್ನು ದೇವಸ್ಥಾನವಾಗಿಸುವ, ಧಾರ್ಮಿಕ ನಂಬಿಕೆಗೆ ಘಾಸಿಗೊಳಿಸುವ ದುಷ್ಟ ಪ್ರಯತ್ನ ನಡೆಯುತ್ತಿದೆ. ಸಾಮಾಜಿಕ ಮಾಧ್ಯಮ ಮತ್ತಿತರ ವೇದಿಕೆಗಳ ಮೂಲಕ ಜನರಲ್ಲಿ ಕ್ಷೇತ್ರದ ಕುರಿತು ಅಪನಂಬಿಕೆ ಮೂಡುವಂತೆ ಮಾಡಲಾಗುತ್ತಿದೆ. ಯುವ ಸಮೂಹ ದೇವಸ್ಥಾನದ ಮೇಲಿಟ್ಟ ನಂಬಿಕೆ ಕಳೆದುಕೊಳ್ಳುವಂತೆ ಮಾಡಲಾಗುತ್ತಿದೆ ಎಂದು ವೀರೇಂದ್ರ ಹೆಗ್ಗಡೆ ಬೇಸರ ವ್ಯಕ್ತಪಡಿಸಿದ್ದಾರೆ.

ಒಳಮೀಸಲಿಗೆ ಜೈ

← ಮೊದಲಪುಟದಿಂದ

ಒಳಮೀಸಲಾತಿ ಆಗ್ರಹಿಸಿ ನ್ಯಾಯಾಲಯಗಳ ಒಳಗೆ ಮತ್ತು ಹೊರಗೆ ದಲಿತ ಸಂಘಟನೆಗಳು ಕಳೆದ 30-40 ವರ್ಷಗಳಿಂದ ಹೋರಾಟ ನಡೆಸುತ್ತಲೇ ಬಂದಿವೆ. 2024ರ ಆಗಸ್ಟ್ 1 ರಂದು ದವಿಂದರ್ ಸಿಂಗ್ ಪ್ರಕರಣದಲ್ಲಿ ತೀರ್ಪು ನೀಡಿದ್ದ ಸುಪ್ರೀಂಕೋರ್ಟ್, ಉಪವರ್ಗೀಕರಣ ಮಾಡಲು ಸಂವಿಧಾನದ ಅನುಚ್ಛೇದ 14ರಲ್ಲಿ ಅವಕಾಶವಿದೆ. ಉಪವರ್ಗೀಕರಣ ಸಾಮಾಜಿಕ ನ್ಯಾಯದ ವಿಸ್ತರಣೆಯಾಗಿದೆ. ರಾಜ್ಯ ಸರ್ಕಾರಕ್ಕೆ ಒಳಮೀಸಲಾತಿ ನೀಡುವ ಅಧಿಕಾರವಿದೆ. ಉಪವರ್ಗೀಕರಣ ಮಾಡಿದರೆ ಮೀಸಲಾತಿ ಅನುಭವಿಸುತ್ತಿರುವ ಯಾರನ್ನೂ ಹೊರಗಿಡುವುದಿಲ್ಲ. ಅಗತ್ಯ ದತ್ತಾಂಶ ಸಂಗ್ರಹಿಸಿ ಒಳಮೀಸಲಾತಿ ವರ್ಗೀಕರಣ ಮಾಡಬೇಕು ಎಂದು ಹೇಳಿದೆ.

ಪ್ರತ್ಯೇಕ ಅಪಘಾತ: ನಾಲ್ವರು ಸಾವು

ಹಾವೇರಿ/ಕೋಲಾರ: ಜಿಲ್ಲೆಯ ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರು ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಸಗಿ ಬಸ್ ಅಪಘಾತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ. 6 ಮಂದಿ ತೀವ್ರ ಗಾಯಗೊಂಡಿದ್ದಾರೆ. ಅರ್ನವಿ (11) ಹಾಗೂ ಯಶ್ (20) ಮೃತರು. ಗಾಯಾಳುಗಳನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಹಾರಾಷ್ಟ್ರದ ಸಾಂಗ್ಲಿಯಿಂದ ತಮಿಳುನಾಡು ಕಡೆಗೆ ಖಾಸಗಿ ಬಸ್ ಹೊರಟಿತ್ತು. ಮೋಟೇಬೆನ್ನೂರು ಗ್ರಾಮದ ಬಳಿ ಬಸ್‌ಗೆ ಕಾರು ಅಡ್ಡಬಂದಿತ್ತು. ಕಾರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಖಾಸಗಿ ಬಸ್ ಚಾಲಕ ದಿಢೀರ್ ಬ್ರೇಕ್ ಹಾಕಿದ್ದ. ಅದರಿಂದಾಗಿ ಬಸ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಉರುಳಿ ಬಿದ್ದಿದೆ. ಬಸ್ ಭಾಗಶಃ ಜಖಂಗೊಂಡಿದೆ. ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಣ್ಣ, ತಂಗಿ ದುರ್ಮರಣ: ಅದೇ ರೀತಿ ತಂಗಿಯ ಅಡ್ಮಿಷನ್ ಮುಗಿಸಿ ಮನೆಗೆ ತೆರಳುತ್ತಿದ್ದ ವೇಳೆ ಅಣ್ಣ-ತಂಗಿಯಿದ್ದ ಬೈಕ್‌ಗೆ ಇನ್ನೋವಾ ಡಿಕ್ಕಿ ಹೊಡೆದ ಪರಿಣಾಮ ಇಬ್ಬರೂ ಮೃತಪಟ್ಟಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಕೋಲಾರ ತಾಲೂಕು ಶ್ರೀನಿವಾಸಪುರ ರಸ್ತೆಯಲ್ಲಿರುವ ವೀರಾಪುರ ಗೇಟ್ ಬಳಿಯ ಮಹರ್ಷಿ ಶಾಲೆ ಬಳಿ ಈ ಘಟನೆ ನಡೆದಿದೆ. ಕೊಂಡೇನಹಳ್ಳಿ ನಿವಾಸಿಗಳಾದ ಯಶಸ್ವಿನಿ ಬಾಯಿ (16) ಹಾಗೂ ಹರ್ಷಿತ್ ಸಿಂಗ್ (20) ಮೃತ ಅಣ್ಣ-ತಂಗಿ ಎಂದು ಗುರುತಿಸಲಾಗಿದೆ. ಹರ್ಷಿತ್ ಕಾಲೇಜು ಮುಗಿಸಿಕೊಂಡು ತಂಗಿ ಯಶಸ್ವಿನಿಯನ್ನು ಕಾಲೇಜಿಗೆ ದಾಖಲು ಮಾಡಿ, ವಾಪಸ್ ತೆರಳುವ ವೇಳೆ ಈ ಅಪಘಾತ ಸಂಭವಿಸಿದೆ.

ಬೀದಿ ನಾಯಿಗಳಿಗೆ ಬಿಬಿಎಂಪಿ ಪಾಠ

← ಮೊದಲಪುಟದಿಂದ

ಆದರೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು, ಬೆಂಗಳೂರಿನ ಬೀದಿನಾಯಿಗಳ ಉಪಟಳವನ್ನು ನಿಯಂತ್ರಿಸಲು ತರಬೇತಿ ನೀಡುವುದಾಗಿ ಹೇಳಿದ್ದಾರೆ. ಆದರೆ ಈ ತರಬೇತಿಗೆ ನೇಮಿಸುವ 'ಶಿಕ್ಷಕರ' ಯಾರು? ಎಷ್ಟು ದಿನಗಳ ಕಾಲ ತರಬೇತಿ ನೀಡಲಾಗುತ್ತದೆ? ಎಲ್ಲಿ ತರಬೇತಿ ನೀಡುತ್ತಾರೆ ಎನ್ನುವುದು ಈಗಲೂ ನಿಗೂಢ!

ನಿಯಂತ್ರಣ ತಗ್ಗಿಸಲು ತರಬೇತಿ: ರಾಜಧಾನಿಯಲ್ಲಿ ಬೀದಿನಾಯಿಗಳನ್ನು ನಿಯಂತ್ರಿಸುವ ಸಲುವಾಗಿ ತರಬೇತುದಾರರನ್ನು ನಿಯೋಜನೆ ಮಾಡಲು ತೀರ್ಮಾನಿಸಲಾಗಿದೆ. ಪೊಲೀಸ್ ನಾಯಿಗಳಿಗೆ ತರಬೇತಿ ನೀಡುತ್ತಿದ್ದ ಟ್ರೈನರ್‌ಗಳನ್ನು ಬಳಸಿಕೊಂಡು ಬೀದಿ ನಾಯಿಗಳಿಗೆ ತರಬೇತಿ ನೀಡಿ ನಿಯಂತ್ರಿಸಲು ಪಾಲಿಕೆ ಸದ್ಯಸಿದ್ಧತೆ ನಡೆಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆದರೆ ಬಿಬಿಎಂಪಿಯ ಈ ತೀರ್ಮಾನ ಅನೇಕರ ಕೆಂಗಣ್ಣಿಗೆ ಗುರಿಯಾಗಿದ್ದು, ಕಂಡವರ ಮೇಲೆರಗಿ ಆಕ್ರಮಣ ಮಾಡುತ್ತಿರುವ ನಾಯಿಗಳ ದಾಳಿಗೆ ಮುಕ್ತಿ ಹಾಡಲು ಹಾಗೂ ಬೀದಿ ನಾಯಿಗಳು ಹಾವಳಿಯನ್ನು ನಿಯಂತ್ರಿಸುವ ಸಲುವಾಗಿ ಈ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಮೂಲಕ ಬೀದಿ ನಾಯಿಗಳ ಉಪಟಳವನ್ನು ತಪ್ಪಿಸಲು ಪಾಲಿಕೆ ಮುಂದಾಗಿದೆ. ದಾಳಿ ಮಾಡುವ ನಾಯಿಯನ್ನು ನಿಯಂತ್ರಿಸುವ ಬದಲಾಗಿ ಅವುಗಳನ್ನು ಪತ್ತೆ ಹೆಚ್ಚಿ ತರಬೇತಿ ನೀಡುತ್ತೇವೆ ಎನ್ನುವ ಪಾಲಿಕೆಯ ನಿರ್ಧಾರವು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮದ್ಯ ಸೇವಿಸಿ ಕಿರಿಕ್: ಇನ್ಸ್‌ಪೆಕ್ಟರ್ ಅಮಾನತು

ಮೈಸೂರು: ಪಬ್ ನಲ್ಲಿ ಮದ್ಯ ಸೇವಿಸಿ ಗಲಾಟೆ ಮಾಡಿದ ಘಟನೆಗೆ ಸಂಬಂಧಿಸಿದಂತೆ ಸಿಸಿಬಿ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ಅವರನ್ನು ಅಮಾನತು ಮಾಡಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಆದೇಶ ಹೊರಡಿಸಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ಜೆಸಿ ನಗರದ ಪಬ್ ಒಂದಕ್ಕೆ ತೆರಳಿ ಕುಡಿದ ಮತ್ತಿನಲ್ಲಿ ಸಿಬ್ಬಂದಿಗಳ ಜತೆ ಜಗಳವಾಡಿದ್ದ ವಿಡಿಯೊ ವೈರಲ್ ಆಗಿತ್ತು. ಅವಾಚ್ಯ ಶಬ್ದಗಳನ್ನು ಬಳಸಿ ಆವಾಜ್ ಹಾಕಿದ್ದರು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕಮಿಷನರ್ ಸೀಮಾ ಲಾಟ್ಕರ್ ರವರು ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಮೋಹನ್ ಕುಮಾರ್‌ನ್ನು ಅಮಾನತು ಪಡಿಸಿ ಶಿಸ್ತು ಕ್ರಮ ಕೈಗೊಂಡಿದ್ದಾರೆ.

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ: 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560009.
ಫೋನ್ ನಂ: 080 22341230/35 ಇ-ಮೈಲ್ : bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ-04/21/2025-26/786 ದಿನಾಂಕ: 19.08.2025
ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ)
ಶ್ರೀಮತಿ ಎಸ್.ಟಿ.ಪ್ರಮೀಳಾ ಕೋಂ ಹೆಚ್.ಎಸ್.ಲಿಂಗೇಗೌಡ ಇವರು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ. ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 185/1ರ 01ಎ-28ಗು ಮತ್ತು ಸರ್ವೆ ಸಂಖ್ಯೆ: 185/2ರ 01ಎ-29ಗು ಒಟ್ಟು 03ಎ-17ಗು ವಿಸ್ತೀರ್ಣದ ಜಮೀನುಗಳನ್ನು ಕೆಟಿಪಿಸಿ ಕಾಯ್ದೆ, 1961ರ ಕಲಂ 14(ಎ) ರಡಿಯಲ್ಲಿ "ವ್ಯವಸಾಯ" ವಲಯದಿಂದ "ವಸತಿ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
1. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಪಡಿಸುವುದರಿಂದ, ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ.
2. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು, ಒಳಚರಂಡಿ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ-ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/- ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2377/ಆಕಾರ್/2025-26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ,
ಕಾವೇರಿ ನೀರಾವರಿ ನಿಗಮ, (ನಿ), ನಾಗಮಂಗಲ.
ದೂರವಾಣಿ ಸಂಖ್ಯೆ: 08234-200058
ಫ್ಯಾಕ್ಸ್ ಸಂಖ್ಯೆ: 08234-286019
ಇ-ಮೇಲ್: eeno7nag@gmail.com
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ:02/2025-26 ದಿನಾಂಕ:16.08.2025
(ಇ-ಪ್ರೊಕ್ಯೂರ್‌ಮೆಂಟ್ QCBS ನ ಮುಖಾಂತರ ದ್ವಿಲಕೋಟೆ ಪದ್ಧತಿಯಲ್ಲಿ)
(ಕನ್ಸಲ್ಟೆನ್ಸಿ ಸರ್ವಿಸ್ ಅನ್ನು ಒದಗಿಸುವ ಕಾಮಗಾರಿ)
ರೀ ಮಾಡಲಿಂಗ್ ಕಾಮಗಾರಿಯ ಗುಣಮಟ್ಟವನ್ನು ಕಾಪಾಡಲು Third party inspection ಅವಶ್ಯಕವಿರುವುದರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿಯಾಗಿರುವ ತನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ QCBS ಅಲ್ಪಾವಧಿ ಟೆಂಡರ್‌ನ್ನು (ಇ-ಪ್ರೊಕ್ಯೂಮೆಂಟ್ ಮೂಲಕ ಮಾತ್ರ) ಆಹ್ವಾನಿಸಲಾಗಿದೆ. ಟೆಂಡರ್‌ನ್ನು ಹಾಗೂ ಇ.ಎಂ.ಡಿ ಠೇವಣಿಯನ್ನು ಆನ್‌ಲೈನ್ ಮೂಲಕ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸುವ ದಿನಾಂಕ:19.08.2025 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:28.08.2025 ರ ಸಂಜೆ 16.00 ಘಂಟೆಯವರೆಗೆ, ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.08.2025 ರ ಬೆಳಿಗ್ಗೆ 11.00 ಘಂಟೆಗಳು, ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.09.2025 ರ ಬೆಳಿಗ್ಗೆ 11.00 ಘಂಟೆಗೆ ಟೆಂಡರ್ ಆಹ್ವಾನಿಸಿರುವ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.41.33 ಲಕ್ಷಗಳು ಕಾಮಗಾರಿಯ ಇ.ಎಂ.ಡಿ ಮೊತ್ತ ರೂ. 82700.00 ಗಳಾಗಿದ್ದು, ಸದರಿ ಕಾಮಗಾರಿಯ ವಿವರ, ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ, ಟೆಂಡರ್ ಫಾರಂ ಬೆಲೆ ಹಾಗೂ ಕಾಲಮಿತಿ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.
ಸಹಿ/-ಕಾರ್ಯಪಾಲಕ ಇಂಜಿನಿಯರ್,
ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ, ನಾಗಮಂಗಲ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/375/2025-26

ಪುರಸಭಾ ಕಾರ್ಯಾಲಯ, ದೇವನಹಳ್ಳಿ
ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂರವಾಣಿ : 080-27682221, Email : itstaff_ulb_devanahalli@yahoo.co.in
ನಂ.ದೇಪು/ಆ.ಶಾ/ದ.ಆ/ಸಿಆರ್/05/2025-26 ದಿನಾಂಕ: 18.08.2025
ದರಪಟ್ಟಿ ಆಹ್ವಾನ ಪ್ರಕಟಣೆ
ದೇವನಹಳ್ಳಿ ಪುರಸಭೆಯ 2024-25ನೇ ಸಾಲಿನ 15ನೇ ಹಣಕಾಸು ಅನುದಾನದ ಯೋಜನೆಯಲ್ಲಿ ದೇವನಹಳ್ಳಿ ಪುರಸಭೆ ವ್ಯಾಪ್ತಿಯ ಮುಖ್ಯ ರಸ್ತೆಗಳ ಕಸ ತೆರವುಗೊಳಿಸಲು ಒಂದು ಸಂಖ್ಯೆಯ ಸ್ವೀಪಿಂಗ್ ಮೆಷಿನ್ ಖರೀದಿಸಲಾಗುತ್ತಿದ್ದು, ಸದರಿ ಸ್ವೀಪಿಂಗ್ ಮೆಷಿನ್‌ನ ಡೇಟಾ ದರ ನಿಗಧಿಪಡಿಸಲು ದರಪಟ್ಟಿ ಆಹ್ವಾನಿಸಲಾಗುತ್ತಿದೆ. ದರಪಟ್ಟಿಗಳನ್ನು ಪುರಸಭೆಗೆ ಸಲ್ಲಿಸಲು ಕೊನೆಯ ದಿನಾಂಕ:30.08.2025 ಹೆಚ್ಚಿನ ವಿವರಗಳಿಗಾಗಿ ಕಛೇರಿಯ www.devanahallitown.mrc.gov.in ಅಥವಾ ದೇವನಹಳ್ಳಿ ಪುರಸಭಾ ಆರೋಗ್ಯ ಶಾಖೆಯನ್ನು ಸಂಪರ್ಕಿಸುವುದು.
ಸಹಿ/- ಅಧ್ಯಕ್ಷರು ಪುರಸಭೆ, ದೇವನಹಳ್ಳಿ
ಸಹಿ/- ಮುಖ್ಯಾಧಿಕಾರಿ ಪುರಸಭೆ, ದೇವನಹಳ್ಳಿ
ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/2284/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, 5ನೇ ಮಹಡಿ, ನಂ.5, 1ನೇ ಹಂತ, 1ನೇ ಘಟ್ಟ,
ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು - 560029
ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ: KWB/TEC/CE(B)/HYR/NGR OHT/774/2025-26 Dated: 19.08.2025
ಕಾಮಗಾರಿಯ ಹೆಸರು: ನಗರೋತ್ಥಾನ [ಮುನಿಸಿಪಾಲಿಟಿ]-4ರಡಿಯಲ್ಲಿ ಹಿರಿಯೂರು ನಗರದ ವಾರ್ಡ್ ಸಂಖ್ಯೆ-28ರಲ್ಲಿ 5.00 ಎಲ್‌ಎಲ್ ಆರ್‌ಸಿಸಿ ಓಹೆಚ್‌ಟಿ ನಿರ್ಮಾಣ ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು ಹಾಗೂ ಉದ್ದೇಶಿತ ಹೊಸ ಓಹೆಚ್‌ಟಿಗೆ ಪ್ರಸ್ತುತವಿರುವ ಡಿಐ ಮಾರ್ಗದಿಂದ 200 ಮಿಮೀ ವ್ಯಾಸದ ಡಿಐ-ಕೆ7 ರೈಸಿಂಗ್ ಮೈನ್ ಒದಗಿಸುವುದು, ಅಳವಡಿಸುವುದು, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸುವುದು.
ಇಂಡೆಂಟ್ ಸಂಖ್ಯೆ: KUWSDB/2025-26/WS/Work_Indent360/Call-2
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.inನಲ್ಲಿ ಸಂಪರ್ಕಿಸಬಹುದು.
ಸಹಿ/- ಮುಖ್ಯ ಅಭಿಯಂತರರು (ಬೆಂ), ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ಡಿಐಪಿಆರ್/ಸಿಪಿ/2383/ಸಿಸಿಎಲ್/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/ಟೆ.ಪ್ರ/ತಾಸ-1/2025-26/833 ದಿನಾಂಕ: 19.08.2025
ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) (KW-4) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
1) ಕಾಮಗಾರಿಗಳ ವಿವರ.:1. ಸಮಾಜ ಕಲ್ಯಾಣ ಇಲಾಖೆಯ ಸುರಪುರ ನಗರದ ಸರ್ಕಾರಿ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ ಹೆಚ್ಚುವರಿ ಕೋಣೆ ಮತ್ತು ಶೌಚಾಲಯ ನಿರ್ಮಾಣ. (RDPR/2025-26/BD/WORK_INDENT 16454/CALL-2) 2) ಅರಕೇರಾ ಜೆ ಗ್ರಾಮದಿಂದ ವಜ್ಜಲ ಮುಖ್ಯ ರಸ್ತೆವರೆಗೆ ರಸ್ತೆ ನಿರ್ಮಾಣ.(RDPR/2025-26/RD/WORK_INDENT 15088)(KW-4) 2) ಲೆಕ್ಕ ಶೀರ್ಷಿಕೆ: 2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ 3) ಟೆಂಡರಿಗಿಟ್ಟ ಅಂದಾಜು ಮೊತ್ತ:ಕನಿಷ್ಠ . 162.00 ಮತ್ತು ಗರಿಷ್ಠ ರೂ . 224.47 ಲಕ್ಷ 4) ಗುತ್ತಿಗೆದಾರರ ದರ್ಜೆ: 3ನೇ ಹಾಗೂ 2ನೇ ಮೇಲ್ಪಟ್ಟು ದರ್ಜೆ ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:21.08.2025 ರಿಂದ 28.08.2025 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 28.08.2025 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ತಾಂತ್ರೀಕ: 30.08.2025 ಬೆಳ್ಳಿಗೆ 11:00 ನಂತರ 9) ಟೆಂಡರ ತೆರೆಯುವ ದಿನಾಂಕ ಆರ್ಥಿಕ:06.09.2025 ಬೆಳ್ಳಿಗೆ 11:00 ನಂತರ 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 11) ಅಂತರಜಾಲ ತಾಣದ ವಿಳಾಸ: https://kppp.karnataka.gov.in
ಸೂಚನೆ :- ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).
ವಾ.ಸಾ.ಸಂ.ಇ/ಯಾದಗಿರಿ/208/ಕೆ.ಎಸ್.ಎಂ.ಸಿ.ಎ/2025-26
ಸಹಿ/-ಕಾರ್ಯಪಾಲಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದಲ್ಲಿ ಹೇಗೆ ಮತಗಳ್ಳತನವಾಗಿದೆ ಎಂಬುದನ್ನು ರಾಹುಲ್ ಗಾಂಧಿ ಅವರು ಸವಿಸ್ತಾರವಾಗಿ ಸಾಕ್ಷಿಗಳ ಸಮೇತ ಬಹಿರಂಗಪಡಿಸಿದ್ದಾರೆ. ಬಿಜೆಪಿಯು ಕೆಲವು ಕಡೆ ಹೇಗೆ ಮತಗಳ್ಳತನ ನಡೆಸಿದೆ, ಇದಕ್ಕೆ ಚುನಾವಣಾ ಆಯೋಗ ಯಾವ ರೀತಿ ಕುಮಕ್ಕು ನೀಡಿದೆ ಎಂಬುದನ್ನು ದೇಶದ ಜನತೆ ಮುಂದಿಟ್ಟಿದ್ದಾರೆ. ಇದರ ಬಗ್ಗೆ ಸದನವು ಖಂಡನಾ ನಿರ್ಣಯ ಮಂಡಿಸಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಡಬೇಕು.

-ಬಿ.ಕೆ.ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

ಕೆಇಆರ್‌ಸಿ ಆದೇಶವಿಲ್ಲದಿದ್ದರೂ ವಿದ್ಯುತ್ ಸಂಪರ್ಕ ಕೊಡುತ್ತಿಲ್ಲ. ಅಕ್ರಮ-ಸಕ್ರಮ ನಿಯಮಕ್ಕೆ ಸಂಬಂಧಿಸಿದ ಸುಪ್ರೀಂಕೋರ್ಟ್ ಮಧ್ಯಂತರ ಆದೇಶದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಬಹುದು ಎಂದು ಹೇಳಿದೆ. ಶೇ.15 ರಷ್ಟು ವಿನಾಯಿತಿ ಕೊಟ್ಟರೆ ಉಪಯೋಗವಿಲ್ಲ. ಕೊಡುವುದಾದರೆ ಕೆಲವರಿಗೆ ಮಾತ್ರ ಏಕೆ ಕೊಡಬೇಕು. ಎಲ್ಲರಿಗೂ ವಿನಾಯಿತಿ ಕೊಡಿ. ದಂಡವಿಲ್ಲದೆ ವಿನಾಯಿತಿ ನೀಡಿ. 1 ಲಕ್ಷ ರು. ಕೋಟಿ ಸಂಗ್ರಹಿಸುವ ಉದ್ದೇಶವಿದೆ.

-ಅಶ್ವತ್ಥನಾರಾಯಣ, ಶಾಸಕ



ವಿಧಾನ ಮಂಡಲ ಮಧ್ಯದೊಳಗೆ

ಸಮಾಚಾರ ಸಣ್ಣದಲ್ಲ

ಕಲಬುರಗಿಯಲ್ಲಿ ಪಿಎಂ ಮಿತ್ರ ಪಾರ್ಕ್

ವಿಧಾನಪರಿಷತ್: ಕಲಬುರಗಿಯಲ್ಲಿ ದೇಶಕ್ಕೆ ಮಾದರಿಯಾದ ಪಿಎಂ ಮಿತ್ರ ಪಾರ್ಕ್ ನಿರ್ಮಾಣವಾಗಲಿದ್ದು, ಒಂದು ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿವೆ

ಎಂದು ಜವಳಿ ಸಚಿವ ಶಿವಾನಂದ ಪಾಟೀಲ್ ಹೇಳಿದರು. ಸದಸ್ಯ ಜಗದೇವ್ ಗುತ್ತೇದಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕಲಬುರಗಿಯಲ್ಲಿ ಪಿಎಂ ಮಿತ್ರ ಪಾರ್ಕ್ ನಿರ್ಮಾಣಕ್ಕೆ ಒಟ್ಟು 3 ಸಾವಿರ ಎಕರೆ ಜಮೀನನ್ನು ಭೂಸ್ವಾಧೀನ ಮಾಡಲಾಗಿದೆ. ಇದರಲ್ಲಿ ಈ ಯೋಜನೆಗೆ ಒಂದು ಸಾವಿರ ಎಕರೆ ಜಮೀನು ಮಾತ್ರ ಬಳಕೆ ಮಾಡಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು. ದೇಶಕ್ಕೆ ಒಟ್ಟು 7 ಪಿಎಂ ಮಿತ್ರ ಪಾರ್ಕ್ ಮಂಜೂರಾಗಿದ್ದವು. ಅದರಲ್ಲಿ ಕರ್ನಾಟಕವೂ ಒಂದಾಗಿದೆ. ಕಲಬುರಗಿಯಲ್ಲಿ ಇದು ಮಂಜೂರಾಗಿ ರುವುದರಿಂದ ಈ ಭಾಗದಲ್ಲಿ ಹೆಚ್ಚಿನ ಉದ್ಯೋಗಗಳು ಲಭ್ಯವಾಗುತ್ತವೆ. ಇದು ನಮ ಸುದೈವವೂ ಹೌದು ಎಂದು ಪ್ರಶಂಸಿಸಿದರು. ಪಿಎಂ ಮಿತ್ರ ಪಾರ್ಕ್ ಅನು ಷ್ಠಾನವಾಗಬೇಕಾದರೆ 7 ರಿಂದ 10 ವರ್ಷ ಸಮಯಾ ವಕಾಶ ಬೇಕಾಗುತ್ತದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ 390 ಕೋಟಿ ರೂ. ಅನುದಾನವನ್ನು ಮೀಸಲಿಟ್ಟಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೂಡ ಇದಕ್ಕೆ ಅನುದಾನ ನೀಡಿದರೆ ಆದಷ್ಟು ಶೀಘ್ರ ಕಾರ್ಯಾರಂಭವಾಗಲಿದೆ ಎಂದರು.

ಅಕ್ರಮ ಮರಳುಗಾರಿಕೆ ತಡೆಗಟ್ಟಲು ಕಠಿಣ ಕ್ರಮ

ವಿಧಾನಪರಿಷತ್: ರಾಜ್ಯಾದ್ಯಂತ ಅಕ್ರಮ ಮರಳುಗಾರಿಕೆ ತಡೆಗಟ್ಟಲು ಜಿಪಿಎಸ್ ಅಳವಡಿಕೆ ಹಾಗೂ ಸ್ಕ್ವಾಡ್ ತಂಡವನ್ನು ಬಿಗಿಗೊಳಿಸಲಾಗುವುದು ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ವಿಧಾನಪರಿಷತ್‌ನಲ್ಲಿ ತಿಳಿಸಿದರು.

ಸದಸ್ಯೆ ಹೇಮಾಲತ ನಾಯಕ್ ಅವರು ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಪ್ರಶ್ನೆ ಕೇಳಿದ್ದರು. ಸಚಿವರ ಪರವಾಗಿ ಉತ್ತರಿಸಿದ ಚಲುವ ರಾಯಸ್ವಾಮಿಯವರು, ಅಕ್ರಮ ಮರಳುಗಾರಿಕೆ ತಡೆಗಟ್ಟುವುದು ಸರಕಾರದ ಪ್ರಥಮ ಆದ್ಯತೆಯಾಗಿದೆ. ಎಲ್ಲೆಲ್ಲಿ ಮರಳುಗಾರಿಕೆ ನಡೆಯುತ್ತದೆಯೋ ಅಂತಹ ಕಡೆ ಜಿಪಿಎಸ್ ಅಳವಡಿಕೆ ಮತ್ತು ಈಗಿರುವ ಸ್ಕ್ವಾಡ್ ತಂಡವನ್ನು ಮತ್ತಷ್ಟು ಬಲಪಡಿಸಲಾಗುವುದು. ಕಟ್ಟುನಿಟ್ಟಿನ ಕ್ರಮದ ನಡುವೆಯೂ ಕೆಲವು ಕಡೆ ಇಂತಹ ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತವೆ. ಅಕ್ರಮ ಮರಳುಗಾರಿಕೆ ನಡೆಸುವವರ ಮೇಲೆ ದಿಢೀರ್ ದಾಳಿ ನಡೆಸಿದ ವೇಳೆ ಲಾರಿ, ಟ್ರ್ಯಾಕ್ಟರ್, ಎತ್ತಿನಗಾಡಿ ಮತ್ತಿತರ ವಾಹನಗಳನ್ನು ಬಿಟ್ಟು ಓಡಿಹೋಗುತ್ತಾರೆ. ಆದರೂ ಸಂಬಂಧಪಟ್ಟವರ ಮೇಲೆ ದೂರು ದಾಖಲಿಸಿ ಕಾನೂನು ಪ್ರಕಾರವೇ ಕ್ರಮ ಜರುಗಿಸುತ್ತೇವೆ. ಅಕ್ರಮ ಮರಳುಗಾರಿಕೆ ತಡೆಗಟ್ಟಲು ಜಿಲ್ಲಾಧಿಕಾರಿಗಳು, ತಹಸೀಲ್ದಾರ್ ಸೇರಿದಂತೆ ಮತ್ತಿತರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ರಾಜ್ಯ ಸರಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗದಂತೆ ಬಿಗಿಯಾದ ಕಾನೂನು ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಚಲುವರಾಯಸ್ವಾಮಿ ಆಶ್ವಾಸನೆ ನೀಡಿದರು.

ಅಂಬಿಗರ ಚೌಡಯ್ಯ ಪ್ರತಿಮೆಗೆ ಕ್ರಮ

ವಿಧಾನಪರಿಷತ್: ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆ ಬೆಳಗಾವಿಯ ಸುವರ್ಣಸೌಧದಲ್ಲಿ ಮಾಡುವ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಬಳಿಕ

ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು. ಬೆಂಗಳೂರಿನಲ್ಲಿ ಸರಕಾರದಿಂದ ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆಯನ್ನು ಚಾಲುಕ್ಯ ವೃತ್ತದರಲ್ಲಿರುವ ಜಗಜ್ಯೋತಿ ಬಸವೇಶ್ವರರ ಪ್ರತಿಮೆಯ ಪಕ್ಕದಲ್ಲಿರುವ ಜವಾಹರಲಾಲ್ ನೆಹರೂ ಪ್ಲಾನಿಟೋರಿಯಂಗೆ ಹೊಂದಿಕೊಂಡಿರುವ ಜಾಗದಲ್ಲಿ ಸ್ಥಾಪಿಸುವ ಕುರಿತು ಶಾಸಕ ತಿಪ್ಪಣ್ಣಪ್ಪ ಕಮಕನೂರು ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, ಸುಪ್ರೀಕೋರ್ಟ್ ತೀರ್ಪಿನ ಅನ್ವಯ ಸರಕಾರದ, ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ/ಶರಣರ, ಜನ ನಾಯಕರ ಸೇರಿದಂತೆ ಇತರೆ ಯಾವುದೇ ಗಣ್ಯ ವ್ಯಕ್ತಿಗಳ ಪ್ರತಿಮೆ ಸ್ಥಾಪನೆಗೆ ಅವಕಾಶವಿಲ್ಲ. ಅಂಬಿಗರ ಚೌಡಯ್ಯ ಪ್ರತಿಮೆ ವಿಧಾನಸೌಧದ ಬಳಿ ಮಾಡಲು ಸಾಧ್ಯವಿಲ್ಲ. ಪ್ಲಾನಿಟೋರಿಯಂ ಪಕ್ಕವೂ ಪ್ರತಿಮೆ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಈ ಸಂಬಂಧ ಉಪಮುಖ್ಯಮಂತ್ರಿ ಅವರಿಗೂ ಕೇಳಿದ್ದೇನೆ. ಬೆಂಗಳೂರಿನಲ್ಲಿ ಜಾಗ ಸಿಗುತ್ತಿಲ್ಲ. ಹೀಗಾಗಿ ಚೌಡಯ್ಯ ಅವರ ಹುಟ್ಟೂರಿನಲ್ಲಿ ದೊಡ್ಡ ಪ್ರತಿಮೆ ಮಾಡಲು ಸಿದ್ಧರಿದ್ದೇವೆ. ಅಥವಾ ಬೆಳಗಾವಿಯ ಸುವರ್ಣಸೌಧದಲ್ಲಿ ಮಾಡುವ ಸಂಬಂಧ ಮುಖ್ಯಮಂತ್ರಿಯವರೊಂದಿಗೆ ಚರ್ಚೆ ಬಳಿಕ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ವಿಶ್ವವಾಣಿ ಕ್ಲಬ್ ಹೌಸ್
20.08.2025
ಬುಧವಾರದ ಅತಿಥಿ

ಡಾ ಅಮಿತ್
ವಿಷಯ
ಹಾಡಿನ ಪುಸ್ತಕದ ಹಾಡುಗಳು
vishwavani.news

ರಿಯಲ್ ಎಸ್ಟೇಟ್ ಲಾಬಿಗೆ ಮಣಿದು ಬಫರ್ ಝೋನ್ ಬದಲಾವಣೆ : ಶಾಸಕ ಸುರೇಶ್ ಕುಮಾರ್

ವಿರೋಧದ ನಡುವೆ ಕೆರೆ ಸಂರಕ್ಷಣಾ ತಿದ್ದುಪಡಿಗೆ ಅನುಮೋದನೆ

ವಿಧಾನಸಭೆ: ಕೆರೆಗಳಿಗೆ ಇರುವ ಬಫರ್‌ಝೋನ್ ಅನ್ನು ಕೆರೆಗಳ ವಿಸ್ತೀರ್ಣಕ್ಕೆ ಆಧರಿಸಿದ ಬದಲಾಯಿಸಬೇಕು ಎನ್ನುವ ತಿದ್ದುಪಡಿಗೆ ಬಿಜೆಪಿ ಶಾಸಕರು ವಿರೋಧಿಸಿ ಸಭಾತ್ಯಾಗ ಮಾಡಿದರು. ಸಭಾತ್ಯಾಗದ ಹೊರತಾಗಿಯೂ ರಾಜ್ಯ ಸರಕಾರ 2025ನೇ ಸಾಲಿನ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕವನ್ನು ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು.

ವಿಧಾನಸಭೆ ಕಲಾಪದಲ್ಲಿ ಸಣ್ಣ ನೀರಾವರಿ ಸಚಿವರಾದ ಎನ್.ಎಸ್.ಬೋಸರಾಜು ಅವರು ಈ ವಿಧೇಯಕವನ್ನು ಮಂಡಿಸಿದರು. ಬಿಜೆಪಿ ಶಾಸಕ ಸುರೇಶ್ ಕುಮಾರ್ ಮಾತನಾಡಿ, ಈ ವಿಧೇಯಕವನ್ನು ಕರಾವಳಿ ಭಾಗದಲ್ಲಿ ತರಲು ಅಭ್ಯಂತರವಿಲ್ಲ. ಆದರೆ ಬೆಂಗಳೂರಿನಲ್ಲಿಯೂ ಇದನ್ನು ಜಾರಿಗೊಳಿಸದರೆ ರಿಯಲ್ ಎಸ್ಟೇಟ್‌ನವರು ಕೆರೆಗಳನ್ನು ನುಂಗಿ ಹಾಕುತ್ತಾರೆ ಎಂದು ಆಕ್ಷೇಪವ್ಯಕ್ತಪಡಿಸಿದರು.

ಈ ತಿದ್ದುಪಡಿ ಬೆಂಗಳೂರಿಗೆ ಮಾರಕವಾಗಿದೆ. ಆದ್ದರಿಂದ ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಸದನ ಸಮಿತಿ ರಚನೆ ಮಾಡಿ ಬಳಿಕ ತೀರ್ಮಾನಿಸಬೇಕು ಎಂದು ಆಗ್ರಹಿಸಿದರು. ಆದರೆ ಇದಕ್ಕೆ ಸರಕಾರ ಒಪ್ಪಲಿಲ್ಲ. ಆದ್ದರಿಂದ ಪ್ರತಿಪಕ್ಷಗಳ ಸಭಾತ್ಯಾಗದ ನಡುವೆ ಈ ವಿಧೇಯಕಕ್ಕೆ ಮಂಗಳವಾರ ಅನುಮೋದನೆ ನೀಡಲಾಯಿತು.

ಬಿಜೆಪಿ ಶಾಸಕರ ಆರೋಪಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿ, ಕೆರೆಗಳ ಬಫರ್ ಜೋನ್ ವಿಚಾರವಾಗಿ ತಿದ್ದುಪಡಿ ತನ್ನಿ ಎಂದು ಯಾವುದೇ ಬಿಲ್ಡರ್‌ಗಳು ಬಂದು ಸರಕಾರದ ಬಳಿ ಮನವಿ ಮಾಡಿಲ್ಲ. ಈ ಹಿಂದೆ ಕಂಠೀರವ ಸ್ಟೇಡಿಯಂ, ಕೆಂಪೇಗೌಡ ಬಸ್ ನಿಲ್ದಾಣವನ್ನು ಕೆರೆಗಳ ಮೇಲೆ ನಿರ್ಮಾಣ ಮಾಡಲಾಯಿತು. ಅದು ಆಗಿನ ಕಾಲ ಈಗ ಯಾವುದೇ ಕಾರಣಕ್ಕೆ ಕೆರೆಗಳನ್ನು ಒತ್ತುವರಿ ಮಾಡುವುದಿಲ್ಲ. ನಾವು ಕೆರೆಗಳ ಸಂರಕ್ಷಣೆ ಮಾಡಬೇಕು

ಎಂದು ಈ ತಿದ್ದುಪಡಿಗೆ ಮುಂದಾಗಿದ್ದೇವೆ ಎಂದರು.

ನಮಗೆ ಎನ್‌ಜಿಟಿಯ ತೀರ್ಪುಗಳ ಬಗ್ಗೆಯೂ ಅರಿವಿದೆ. ನಾವು ಸುಪ್ರೀಂ ಕೋರ್ಟಿನ ತೀರ್ಪುಗಳ ವಿರುದ್ಧ ಹೋಗುತ್ತಿಲ್ಲ. ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ಕೆರೆ ವಿಸ್ತೀರ್ಣ 10 ಎಕರೆಗಿಂತ ಹೆಚ್ಚಿದ್ದರೆ 30 ಮೀ. 10 ಎಕರೆಗಿಂತ ಕಡಿಮೆಯಿದ್ದರೆ 9 ಮೀ. ಬಫರ್ ಜೋನ್ ಎಂದು ಕಾನೂನು ಮಾಡಿಕೊಂಡಿದ್ದಾರೆ.

ಅದೇ ರೀತಿ ಅಸ್ಸಾಂನಲ್ಲಿ 15 ಮೀ., ಮಧ್ಯಪ್ರದೇಶದಲ್ಲಿ 30 ಮೀ., ಇದೆ,ಛತ್ತೀಸ್‌ಗಡದಲ್ಲಿ 100 ಮೀ, ಬಿಹಾರದಲ್ಲಿ 100 ಹಾಗೂ 200 ಮೀ., ಇದ್ದರೆ ತಮಿಳುನಾಡಿನಲ್ಲಿ ಕೇವಲ 3 ಮೀ. ಅಂದರೆ 10 ಅಡಿ ಬರ್ಫ ಜೋನ್ ಬಿಡಬೇಕು ಎಂದು ಕಾನೂನು ಮಾಡಿಕೊಂಡಿವೆ ಎಂದು ವಿವರಿಸಿದರು.

ಸಿಆರ್‌ಜೆಡ್‌ನಿಂದಲೂ ಕರಾವಳಿಯಲ್ಲಿ ತೊಂದರೆ ನಾವೆಲ್ಲರೂ ಕಳಕಳಿಯಿಂದ ಕೆಲಸ ಮಾಡುತ್ತಿದ್ದೇವೆ. ಕರಾವಳಿಯ ಜನರ ಬಗ್ಗೆ ನಮಗೆ ಕಾಳಜಿಯಿದೆ ಏಕೆಂದರೆ ಕೆರೆ ಬಫರ್ ವಲಯದ ಕಾರಣಕ್ಕೆ ಅವರ ಬದುಕಿಗೆ ಕಷ್ಟವಾಗುತ್ತದೆ, ಮನೆಗಳನ್ನು ಕಟ್ಟಿಕೊಳ್ಳಲು ಆಗುವುದೇ ಇಲ್ಲ. ಕೇರಳ, ಗೋವಾದವರು ಎನ್‌ಜಿಟಿ, ಕೇಂದ್ರ ಸರಕಾರ ಹೀಗೆ ಎಲ್ಲರಿಂದಲೂ ಅನುಮತಿ ಪಡೆದಿದ್ದಾರೆ. ಆದರೆ ನಾವು ಒದ್ದಾಡುತ್ತಿದ್ದೇವೆ. ಸಿಆರ್‌ಜೆಡ್ ನಿಂದಲೂ ಕರಾವಳಿಯವರು ತೊಂದರೆಗೆ ಒಳಗಾಗುತ್ತಿದ್ದಾರೆ. ಇದನ್ನು ಮೀರಿ ಕೆಲಸ ಮಾಡುವುದು ಹೇಗೆ ಎನ್ನುವುದರ ಬಗ್ಗೆ ನಾನು ಆಲೋಚಿಸಿದ್ದೇನೆ.

ಮೊದಲು ಇದರ ಬಗ್ಗೆ ಪ್ರಾಥಮಿಕ ಸಭೆ ನಡೆಸಿದ ಮೇಲೆ ಮಂಗಳೂರಿಗೆ ತೆರಳಿ ಉಡುಪಿ ಸೇರಿದಂತೆ ಕರಾವಳಿ ಭಾಗದ ಎಲ್ಲರನ್ನು ಕರೆಸಿ ಚರ್ಚೆ ನಡೆಸೋಣ. ಏಕೆಂದರೆ ಈ ಭಾಗದಲ್ಲಿ ಉದ್ಯೋಗ ಸೃಷ್ಟಿಯಾಗಬೇಕು. ಜನರು ಮುಂಬೈ, ಗೋವಾಗಳಿಗೆ ತೆರಳುವುದು ತಪ್ಪಬೇಕು ಎಂದು ಹೇಳಿದರು.

ಬೆಂಗಳೂರಿನ ರಾಜಕಾಲುವೆಗಳ ಬಫರ್ ಜೋನ್‌ಗಳಲ್ಲಿ ಕಟ್ಟಡ ಹಾಗೂ ಇತರೆ ನಿರ್ಮಾಣ ಕೆಲಸಗಳು ಆಗುತ್ತವೆ ಎನ್ನುವ ಮುನ್ನೆಚ್ಚರಿಕೆ ವಹಿಸಿಕೊಂಡು ಸುಮಾರು 300 ಕಿಮೀ ಉದ್ದಕ್ಕೆ ರಾಜಕಾಲುವೆ ಪಕ್ಕದಲ್ಲಿ ರಸ್ತೆ ನಿರ್ಮಾಣಕ್ಕೆ ಮುಂದಡಿಯಿಟ್ಟಿದ್ದೇವೆ. ಒಂದೊಂದು ಬದಿಯಲ್ಲೂ 50 ಮೀ. ನಂತೆ ಎರಡು ಬದಿ ಕಡ್ಡಾಯವಾಗಿ ರಸ್ತೆ ನಿರ್ಮಾಣ ಮಾಡಲೇಬೇಕು ಎಂದು ಹೊರಟಿದ್ದೇವೆ. ಇದಕ್ಕಾಗಿ 3 ಸಾವಿರ ಕೋಟಿ ಮೊತ್ತದ ಯೋಜನೆ ರೂಪಿಸಿದ್ದೇವೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಮನಮೋಹನ್ ಸಿಂಗ್ ವಿವಿ ನಾಮಕರಣಕ್ಕೆ ವಿಧಾನಸಭೆ ಒಪ್ಪಿಗೆ

ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ' ಎಂದು ಮರು ನಾಮಕರಣ ಮಾಡುವ ಸಂಬಂಧ ಕಾನೂನು ತಿದ್ದುಪಡಿ ಪ್ರಸ್ತಾಪಕ್ಕೆ ವಿಧಾನಸಭೆ ಮಂಗಳವಾರ ಒಪ್ಪಿಗೆ ನೀಡಿತು. ಈ ಸಂಬಂಧ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಂಡಿಸಿದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ -2025ಕ್ಕೆ ಸದನ ಸರ್ವಾನುಮತದ ಅನುಮೋದನೆ ನೀಡಿತು.

ವಿಧೇಯಕದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಬೆಂಗಳೂರು ವಿಶ್ವವಿದ್ಯಾಲಯವನ್ನು

ವಿಭಜಿಸಿ ರಚಿಸಲಾದ ನಗರ ವಿಶ್ವವಿದ್ಯಾಲಯಕ್ಕೆ ಡಾ. ಮನಮೋಹನ್ ಸಿಂಗ್ ಹೆಸರು ನಾಮಕರಣ ಮಾಡುವುದು ಹಳೇ ಪಾತ್ರೆಗೆ ಕಲಾಯಿ ಹಾಕಿದಂತೆ. ಅದರ ಬದಲು ಡಾ. ಮನಮೋಹನ್ ಸಿಂಗ್ ಅವರ ಹೆಸರಿನಲ್ಲಿ ಹೊಸ ವಿಶ್ವವಿದ್ಯಾಲಯ ಮಾಡಬಹುದಿತ್ತು ಎಂದು ಸಲಹೆ ಮಾಡಿದರು. ಬಿಜೆಪಿಯ ಸುರೇಶ್ ಗೌಡ, ತುಮಕೂರು ವಿಶ್ವವಿದ್ಯಾಲಯಕ್ಕೆ ತ್ರಿವಿಧ ದಾಸೋಹಿ ಡಾ. ಶಿವಕುಮಾರ ಸ್ವಾಮೀಜಿ ವಿಶ್ವವಿದ್ಯಾಲಯ ಎಂದು ಮರು ನಾಮಕರಣ ಮಾಡಬೇಕು ಎಂದು ಸಲಹೆ ಮಾಡಿದರು.

ಅಂತರ್ಜಲ ನಿಯಂತ್ರಣ ತಿದ್ದುಪಡಿ ವಿಧೇಯಕಕ್ಕೆ ಒಪ್ಪಿಗೆ

ಖಾಸಗಿ ಟ್ಯಾಂಕರ್‌ಗಳು ಸೇರಿ ಎಲ್ಲ ದೊಡ್ಡ ಪ್ರಮಾಣದ ನೀರು ಸರಬರಾಜುದಾರರು ಅಂತರ್ಜಲ ಹೊರತೆಗೆಯಲು ಸಂಬಂಧಪಟ್ಟ ಪ್ರಾಧಿಕಾರದಿಂದ ನಿರಪೇಕ್ಷಣಾ ಪತ್ರ ಪಡೆಯುವುದನ್ನು ಕಡ್ಡಾಯ ಮಾಡುವುದು ಸೇರಿದಂತೆ ಅಂತರ್ಜಲ ಬಳಕೆ ನಿಯಂತ್ರಿಸುವ ಉದ್ದೇಶದ ಕಾನೂನು ತಿದ್ದುಪಡಿ ವಿಧೇಯಕಕ್ಕೆ ವಿಧಾನಸಭೆ ಮಂಗಳವಾರ ಸರ್ವಾನುಮತದ ಅನುಮೋದನೆ ನೀಡಿತು.

ಕೇಂದ್ರ ಅಂತರ್ಜಲ ಪ್ರಾಧಿಕಾರ ಹೊರಡಿಸಿರುವ ಮಾರ್ಗಸೂಚಿ ಆಧರಿಸಿ 'ಕರ್ನಾಟಕ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆಯ ನಿಯಂತ್ರಣ ತಿದ್ದುಪಡಿ ವಿಧೇಯಕ -2025' ದ ಕುರಿತು ಸಣ್ಣ ನೀರಾವರಿ ಸಚಿವ ಎನ್. ಎಸ್.ಬೋಸರಾಜು ಅವರು ಸದನಕ್ಕೆ ವಿವರಣೆ ನೀಡಿದರು. ಅಂತರ್ಜಲ ಬಳಕೆ ನಿಯಂತ್ರಿಸಲು ಅನುಮತಿ ಮತ್ತು ನಿರಪೇಕ್ಷಣಾ ಪತ್ರ ಕಡ್ಡಾಯ ಮಾಡಲಾಗಿದೆ. ಷರತ್ತು ಉಲ್ಲಂಘನೆಗೆ ಹಾಲಿ ಇದ್ದ ದಂಡದ ಪ್ರಮಾಣವನ್ನು ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಆದರೆ ಗ್ರಾಮೀಣ ಮತ್ತು ನಗರ ಪ್ರದೇಶ ಎರಡರಲ್ಲೂ ಕುಡಿಯುವ ನೀರು ಮತ್ತು ಗೃಹ ಬಳಕೆ, ಗ್ರಾಮೀಣ ನೀರು ಸರಬರಾಜು ಸ್ಕಿಮ್‌ಗಳು, ಕೃಷಿ ಚಟುವಟಿಕೆಗಳು, ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಲ್ಲಿ 5 ಸಾವಿರ ಲೀಟರ್‌ವರೆಗೆ ಕುಡಿಯುವ ನೀರು ಮತ್ತು ಗೃಹ ಬಳಕೆಗೆ ವಿನಾಯಿತಿ ನೀಡಲಾಗಿದೆ ಎಂದರು.

ಪರಿಷತ್‌ನಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಸ್ಪಷ್ಟನೆ

ಬಾಗಲಕೋಟೆ ತೋಟಗಾರಿಕಾ ವಿವಿ ಮುಚ್ಚಲ್ಲ, ವಿಲೀನ ಮಾಡುವುದಿಲ್ಲ

ವಿಧಾನಪರಿಷತ್: ಬಾಗಲಕೋಟೆಯಲ್ಲಿರುವ ಕೃಷಿ ತೋಟಗಾರಿಕಾ ವಿವಿ ಮುಚ್ಚುವಾದಾಗಲೀ ಇಲ್ಲವೇ ಬೇರೆ ವಿವಿಗೆ ವಿಲೀನ ಮಾಡುವ ಪ್ರಶ್ನೆ ಸರಕಾರದ ಮುಂದಿಲ್ಲ ಎಂದು ಸಚಿವ ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ಸದಸ್ಯ ಹನುಮಂತ ನಿರಾಣಿಯವರು ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಈ ಕುರಿತು ಪ್ರಶ್ನೆ ಮಾಡಿದರು. ಸಚಿವರ ಪರವಾಗಿ ಉತ್ತರಿಸಿದ ಸಚಿವ ಚಲುವರಾಯಸ್ವಾಮಿ, ತೋಟಗಾರಿಕೆ ವಿವಿ ಮುಚ್ಚುತ್ತೇವೆ ಎಂದು ಹೇಳುತ್ತಿರುವುದು ಸರಿಯಲ್ಲ. ಸರಕಾರದ ಮುಂದೆ ಪ್ರಸ್ತಾವನೆ ಇಲ್ಲ. ವದಂತಿ ಸುದ್ದಿಗಳನ್ನು ನಂಬಬಾರದು. ವಿವಿಯನ್ನು ಬೇರೆ ವಿವಿಗೆ ವಿಲೀನ ಮಾಡುವ ಪ್ರಸ್ತಾವನೆಯು ಸರಕಾರದ ಮುಂದಿಲ್ಲ. ಸಚಿವನಾಗಿ ನಾನು ಈ ಸದನಕ್ಕೆ ಸ್ಪಷ್ಟಪಡಿಸುತ್ತಿದ್ದೇನೆ. ಗಾಳಿ ಸುದ್ದಿಗಳಿಗೆ ಜನಪ್ರತಿನಿಧಿಗಳು ಇಲ್ಲವೇ ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು. ಈ ವಿವಿಯನ್ನು ವಿಲೀನ ಮಾಡುವುದರ ಕುರಿತು ರಾಜ್ಯಸರಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ವಿಜಯ ಭಾಸ್ಕರ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಸರಕಾರಕ್ಕೆ ಈವರೆಗೂ ಅಂತಿಮ ವರದಿ ಅವರು ಸಲ್ಲಿಸಿಲ್ಲ. ಮಾಧ್ಯಮಗಳಲ್ಲಿ ಬರುವ ಸುದ್ದಿಗೆ ನಾವು ಉತ್ತರ ಕೊಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನ ಸದಸ್ಯರಾದ ಹನುಮಂತ ನಿರಾಣಿ ಮತ್ತು ಪಿ.ಎಚ್.ಪೂಜಾರ್ ಮಾತನಾಡಿ, ಬಾಗಲಕೋಟೆ ವಿವಿಯನ್ನು ಬೇರೊಂದು ವಿವಿಗೆ ವಿಲೀನ ಮಾಡಬಾರದು. ರಾಜ್ಯದ ಸುಮಾರು 24 ಕಾಲೇಜುಗಳ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾರೆ. ಇದನ್ನು ವಿಲೀನ ಮಾಡುತ್ತಿರುವುದಕ್ಕೆ ಅಲ್ಲಿನ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ಗಮನ ಸೆಳೆದರು.

ಈ ಅಧಿವೇಶನ ಮುಗಿಯುವದರೊಳಗೆ ವರದಿ ಸರಕಾರಕ್ಕೆ ವರದಿ ನೀಡಬಹುದು. ನಂತರ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಸರಕಾರ ನಿರ್ಧರಿಸುತ್ತದೆ. ಆದರೆ ಒಂದಂತೂ ಸತ್ಯ. ಯಾವುದೇ ಬದಲಾವಣೆ ಮಾಡುವ ಪ್ರಶ್ನೆ ಇಲ್ಲ. ವರದಿ ಬಂದ ನಂತರ ಇದರ ಸಾಧಕ-ಬಾಧಕಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲಾಗುವುದು. ಅಗತ್ಯಬಿದ್ದರೆ ಸಂಬಂಧಪಟ್ಟ ಜನಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಲಾಗುವುದು.

-ಚಲುವರಾಯಸ್ವಾಮಿ, ಸಚಿವ

ಎಂಎಲ್‌ಸಿ ಎನ್.ರವಿಕುಮಾರ್ ಪ್ರಶ್ನೆಗೆ ಸಚಿವ ಶಿವಾನಂದ ಪಾಟೀಲ್ ಸ್ಪಷ್ಟನೆ

ಎಂಟು ಸಕ್ಕರೆ ಕಾರ್ಖಾನೆಗಳು ಭೋಗ್ಯಕ್ಕೆ

ವಿಧಾನಪರಿಷತ್: ರಾಜ್ಯದ 8 ಸಕ್ಕರೆ ಕಾರ್ಖಾನೆಗಳನ್ನು 30 ವರ್ಷಗಳ ಅವಧಿಗೆ ನಿಯಮಬದ್ಧವಾಗಿಯೇ ಭೋಗ್ಯ (ಲೀಸ್)ಕ್ಕೆ ನೀಡಲಾಗಿದೆ ಎಂದು ಸಕ್ಕರೆ ಸಚಿವ



ಶಿವಾನಂದ ಪಾಟೀಲ್ ಸ್ಪಷ್ಟಪಡಿಸಿದರು.

ಸದಸ್ಯ ಎನ್.ರವಿಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 8 ಸಕ್ಕರೆ ಕಾರ್ಖಾನೆಗಳನ್ನು 371 ಕೋಟಿ ರೂ. ಲೀಸ್‌ಗೆ 30 ವರ್ಷದ ಅವಧಿಗೆ ನೀಡಲಾಗಿದೆ. ಅವಧಿ ಮುಗಿದ ನಂತರ ಕಾರ್ಖಾನೆಗಳನ್ನು ಸರಕಾರಕ್ಕೆ ಹಸ್ತಾಂತರ ಮಾಡಲಿದ್ದಾರೆ. ಹಿಂದಿನ ಸರಕಾರವು ಈ ಕಾರ್ಖಾನೆಗಳನ್ನು 40 ವರ್ಷ ಲೀಸ್ ಹಾಗೂ 330 ಕೋಟಿ ರು. ಗೆ ನೀಡಲಾಗಿತ್ತು. ನಮ್ಮ ಸರಕಾರ ಬಂದ ನಂತರ ಕೆಲವು ನಿಯಮಗಳನ್ನು ತಿದ್ದುಪಡಿ ಮಾಡಿ ನಿಯಮಬದ್ಧವಾಗಿಯೇ ನೀಡಿದ್ದೇವೆ ಎಂದು ಸಮರ್ಥನೆ ಮಾಡಿಕೊಂಡರು.

ಸಕ್ಕರೆ ಕಾರ್ಖಾನೆಗಳನ್ನು ಟೆಂಡರ್ ಮೂಲಕ ಲೀಸ್‌ಗೆ ನೀಡಲಾಗುತ್ತದೆ. ಯಾರು ಹೆಚ್ಚು ಬಿಡ್ ಮಾಡುತ್ತಾರೋ ಅವರಿಗೆ ಲೀಸ್ ಸಿಗುತ್ತದೆ. ಬಹುತೇಕ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿದ್ದರೆ ಖಾಸಗಿ ಸಕ್ಕರೆ ಕಾರ್ಖಾನೆಗಳು ಲಾಭದ ಹಳಿಯಲ್ಲಿವೆ. ಹಿಂದಿನ ಸರಕಾರ ಮಾಡಿದ್ದ ತಪ್ಪನ್ನು ನಾವು ಸರಿಪಡಿಸಿದ್ದೇವೆ. 330 ಕೋಟಿ ರು. ಗೆ ಲೀಸ್ ಗೂ 40 ವರ್ಷದ ಅವಧಿಗೆ ಕೊಟ್ಟಿದ್ದರು. ನಾವು ಇದನ್ನು ಮರು ಟೆಂಡರ್ ಕರೆದು 371 ಕೋಟಿ ರು. ಹಾಗೂ 40 ವರ್ಷದಿಂದ 30 ವರ್ಷಕ್ಕೆ ಇಳಿಕೆ ಮಾಡಿದ್ದೇವೆ. ಎಲ್ಲಿಯೂ ಕಾನೂನು ಉಲ್ಲಂಘನೆ ಮಾಡುವುದಿಲ್ಲ. ಸಕ್ಕರೆ ಕಾರ್ಖಾನೆಗಳು ಸಿಬ್ಬಂದಿ ವೇತನ, ವಿದ್ಯುತ್ ಬಾಕಿ, ಬಾಕಿ ವೇತನ ನೀಡಬೇಕು. ಈಗ ಕಾಲಕಾಲಕ್ಕೆ ಎಲ್ಲವೂ ಸರಿದಾರಿಗೆ ಬಂದಿವೆ. ಮಾಜಿ ಸಚಿವ ಮುರುಗೇಶ್ ನಿರಾಣಿ, ಕಾರ್ಖಾನೆಯು ನಷ್ಟದಲ್ಲಿತ್ತು. ಆಗ ನಿಮ್ಮ ಸರಕಾರವೇ ಅಧಿಕಾರದಲ್ಲಿತ್ತು. ಸರಕಾರದಿಂದ ಸಾಲ ಪಡೆದವರು ತೀರಿಸುವ ಜವಾಬ್ದಾರಿ ಅವರೇ ಹೊರಬೇಕೆಂದು ಪರೋಕ್ಷವಾಗಿ ಸರಕಾರಕ್ಕೆ ತಿರುಗೇಟು ಕೊಟ್ಟರು.

ಮೈಷುಗರ್ಸ್ ದುರ್ಬಳಕೆಯ ತನಿಖೆ: ಶಿವಾನಂದ ಪಾಟೀಲ

ಮೈಷುಗರ್ಸ್ ನ ಅಭಿವೃದ್ಧಿಗೆ ಬಿಡುಗಡೆಯಾಗಿದ್ದ 100 ಕೋಟಿ ಗೂ ಅಧಿಕ ಹಣ ದುರ್ಬಳಕೆಯಾಗಿರುವುದನ್ನು ತನಿಖೆ ಮಾಡಿಸಲಾಗುವುದು ಎಂದು ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಪರಿಷತ್‌ನಲ್ಲಿ ಮಧು ಜಿ.ಮಾದೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ನಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ಮೈಷುಗರ್ ನ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಪ್ರತಿಶತ 3.5ರಷ್ಟಿದ್ದ ಸಕ್ಕರೆ ಇಳುವರಿ ಪ್ರಮಾಣ ಈಗ ಪ್ರತಿಶತ ಶೇ.8ರಷ್ಟಿದೆ. ಸಹ ವಿದ್ಯುತ್ ಘಟಕವನ್ನೂ ಸಹ ನಮ್ಮ ಸರಕಾರ ಬಂದ ನಂತ ಆರಮಭಿಸಲಾಗಿದೆ. ಇದರಲ್ಲಿ 12.21ಲಕ್ಷಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದ್ದು, 7.28ಲಕ್ಷ ಯೂನಿಟ್‌ಗಳನ್ನು ಕಾರ್ಖಾನೆಗೆ ಬಳಕೆ ಮಾಡಲಾಗಿದೆ. 4.93 ಲಕ್ಷ ಯೂನಿಟ್‌ಗಳನ್ನು ಚೆಸ್ಕಾಂಗೆ ಪೂರೈಕೆ ಮಾಡಲಾಗಿದೆ. ಪ್ರತಿ ಯೂನಿಟ್‌ಗೆ 5.91 ರು.ಗಳನಂತೆ 29.14 ಲಕ್ಷ ಆದಾಯ ಬಂದಿದೆ. ಉತ್ಪಾದಿಸಿದ ಎಲ್ಲ ವಿದ್ಯುತ್ ಚೆಸ್ಕಾಂಗೆ ಪೂರೈಕೆ ಮಾಡಿದರೆ 9.48 ಕೋಟಿ ರು. ಆದಾಯ ಬರಲಿದೆ ಎಂದರು. ಬೆಂಗಳೂರಿನಲ್ಲಿರುವ ಮೈಷುಗರ್ ಕಂಪನಿಯ ಆಡಳಿತ ಕಚೇರಿಯ ಆಸ್ತಿ ತೆರಿಗೆ 6.50 ಕೋಟಿ ರು. ಗಳಷ್ಟಿದ್ದು, ಏಕತೀರುವಳಿ ಅಡಿಯಲ್ಲಿ 2.04 ಕೋಟಿ ರು. ಪಾವತಿಸಿ 4.50 ಕೋಟಿ ರು. ಗಳನ್ನುಕಂಪನಿಗೆ ಉಳಿತಾಯ ಮಾಡಲಾಗಿದೆ. ಮೈಷುಗರ್ ಕಂಪನಿ ಒಡೆತನದಲ್ಲಿ 235.10 ಎಕರೆ ಇದ್ದು, ಎಷ್ಟು ಒತ್ತುವರಿಯಾಗಿದೆ ಎಂಬ ಬಗ್ಗೆ ಸರ್ವೆ ಮಾಡಿಸಿ ಒತ್ತುವರಿ ತೆರವುಗೊಳಿಸಲಾಗುವುದು ಎಂದರು.

ವಿಧಾನಸಭೆಯಲ್ಲಿ ತಿದ್ದುಪಡಿ ವಿಧೇಯಕಕ್ಕೆ ಅನುಮೋದನೆ

ಇಷ್ಟು ದಿನವಿದ್ದ 10 ವರ್ಷದ ಬದಲಿಗೆ 20 ವರ್ಷಕ್ಕೆ ತಿದ್ದುಪಡಿ

ಮುಂದಿನ 20 ವರ್ಷಕ್ಕೆ ಎಸ್ಮಾ ಜಾರಿಗೆ ತಿದ್ದುಪಡಿ

ವಿಧಾನಸಭೆ: ಪದೆಪದೇ ಮುಷ್ಕರದ ಬೆದರಿಕೆ ಒಡ್ಡುವ ಸಾರಿಗೆ ನೌಕರರಿಗೆ 'ಬ್ರಹಾಸ್ತ್ರ' ಎನಿಸಿರುವ ಎಸ್ಮಾ ಕಾಯಿದೆಯನ್ನು 20 ವರ್ಷದ ಅವಧಿಗೆ ವಿಸ್ತರಣೆ ಮಾಡಲು ಅನುಮೋದನೆ ದೊರೆಕಿದೆ.

ವಿಧಾನಸಭೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ತಿದ್ದುಪಡಿ ವಿಧೇಯಕ 2025ಅನ್ನು ಪರ್ಯಾಲೋಚನೆಗೆ ಮಂಡಿಸಿದರು. ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಕಾಯಿದೆ ಹೊಸ ತಿದ್ದುಪಡಿಯನ್ನು ಸೇರ್ಪಡೆ ಮಾಡುವ ಮೂಲಕ ಎಸ್ಮಾ ವಿಸ್ತರಿಸಲಾಗುತ್ತಿದೆ ಎಂದು ತಿಳಿಸಿದರು.

ಕೆಎಸ್ಆರ್‌ಟಿಸಿ, ಬಿಎಂಟಿಸಿ, ವಾಯವ್ಯ ಕರ್ನಾಟಕ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ನೌಕರರು ಮುಷ್ಕರ ಮಾಡುವಂತಿಲ್ಲ ಎಂಬುದನ್ನು 2015ರಲ್ಲಿ ಎಸ್ಮಾ ಹೇರುವ ಮೂಲಕ ನಿರ್ಬಂಧಿಸಲಾಗಿತ್ತು. ಆಗಲೂ ರಾಮಲಿಂಗಾರೆಡ್ಡಿ ಅವರೇ ಸಾರಿಗೆ ಸಚಿವರಾಗಿದ್ದರು. ಆಗ ಹತ್ತು ವರ್ಷಗಳ ಅವಧಿಗೆ ಹೇರಲಾಗಿದ್ದ ಎಸ್ಮಾ ನಿಯಮಗಳನ್ನು 2021ರಲ್ಲಿ ಬಸವರಾಜ ಬೊಮ್ಮಾಯಿ ಸರಕಾರ ಬಳಸಿತ್ತು. ಇದನ್ನು ಹೊರತುಪಡಿಸಿದರೆ ಎಸ್ಮಾ ಬಳಕೆಯಾಗಿರಲಿಲ್ಲ. 2025ರ ಮೇ ತಿಂಗಳಲ್ಲಿ ಎಸ್ಮಾ ಅವಧಿ ಮುಗಿದಿತ್ತು. ಆದ್ದರಿಂದ ಇದನ್ನು ಮುಂದಿನ 20 ವರ್ಷಗಳಿಗೆ ವಿಸ್ತರಿಸಲಾಗುತ್ತಿದೆ ಎಂದು ಅತ್ಯಾವಶ್ಯಕ ಕಾಯ್ದೆ ತಿದ್ದುಪಡಿಗೆ ಸಚಿವ ರಾಮಲಿಂಗಾರೆಡ್ಡಿ ಕೋರಿದರು.

ಈ ವೇಳೆ ಬಿಜೆಪಿ ಶಾಸಕ ಸುರೇಶ್ ಕುಮಾರ್ ಮಾತನಾಡಿ, ಎಸ್ಮಾ ಜಾರಿ ಮಾಡಿ ಸಾರಿಗೆ ಸಂಸ್ಥೆಗಳ ನೌಕರರನ್ನು ಮುಷ್ಕರ ಮಾಡದಂತೆ ಹತ್ತಿಕ್ಕುವುದು ಒಂದು ಕಡೆಯಾದರೆ, ನೌಕರರು ಹಾಗೂ ಅಧಿಕಾರಿಗಳಿಗೆ ತಮ್ಮ ದೂರುಗಳನ್ನು ಹೇಳಿಕೊಳ್ಳಲು ಒಂದು ವೇದಿಕೆ ಕಲ್ಪಿಸಿ ಎಂದು ಹೇಳಿದರು.

ಚುನಾವಣೆ ನಡೆಸುವ ಅಗತ್ಯವಿದೆ: ರಾಮಲಿಂಗಾರೆಡ್ಡಿ ಮಾತನಾಡಿ, ಮುಖ್ಯಮಂತ್ರಿಗಳ ಜತೆ ನಾಲ್ಕು ಬಾರಿ ಸಾರಿಗೆ ನಿಗಮಗಳ ವಿವಿಧ ಸಂಘಟನೆಗಳು ಚರ್ಚೆ ನಡೆಸಿವೆ. 1996 ರಿಂದಲೂ ನಿಗಮಗಳ ಸಂಘಟನೆಗಳಿಗೆ ಚುನಾವಣೆ ನಡೆದಿಲ್ಲ, ಒಟ್ಟು 13 ಸಂಘಟನೆಗಳಿವೆ. ಚುನಾವಣೆ ನಡೆಸುವ ಅಗತ್ಯ ಇದೆ ಎಂದು ಹೇಳಿದರು. ನಂತರ ಸದನ ಯಾವುದೇ ಚರ್ಚೆಯಿಲ್ಲದೇ ವಿಧೇಯಕವನ್ನು ಅಂಗೀಕರಿಸಿತು.

ಗಿಗ್ ಕಾರ್ಮಿಕರ ವಿಧೇಯಕಕ್ಕೆ ಒಪ್ಪಿಗೆ

ವೇದಿಕೆ ಆಧರಿತ ಗಿಗ್ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಸಾಮಾಜಿಕ ಭದ್ರತೆ, ವೃತ್ತಿಜನ್ಯ ಆರೋಗ್ಯ ಮತ್ತು ಸುರಕ್ಷತೆಗೆ ಒತ್ತು ನೀಡುವ 2025ನೇ ಸಾಲಿನ ಕರ್ನಾಟಕ ವೇದಿಕೆ ಆಧರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ವಿಧೇಯಕಕ್ಕೆ ವಿಧಾನಸಭೆಯಲ್ಲಿ ಅನುಮೋದನೆ ನೀಡಲಾಯಿತು. ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ವಿಧೇಯಕವನ್ನು ಮಂಡಿಸಿ, ಡಿಜಿಟಲ್ ವೇದಿಕೆಯಲ್ಲಿ ಕೆಲಸ ಮಾಡುವವರು ಗಿಗ್ ಕಾರ್ಮಿಕರಾಗಿರುತ್ತಾರೆ. ಆಹಾರ ಧಾನ್ಯಗಳು, ಇ ಮಾರ್ಕೆಟ್, ವೃತ್ತಿಪರ, ಸಾರಿಗೆ, ಆರೋಗ್ಯ ಸೇವೆಗಳನ್ನು ಕೂಡ ಒಳಗೊಳ್ಳುತ್ತದೆ ಎಂದರು. ಈ ಹೊಸ ಪರಿಕಲ್ಪನೆ ದೇಶದಲ್ಲಿ ಬಂದಿದೆ. ವಿದೇಶಗಳಲ್ಲೂ ಕೂಡ ಇಂತಹ ಕಾಯಿದೆ ಇದೆ. ವರ್ಷದಿಂದ ವರ್ಷಕ್ಕೆ ಇ ಕಾಮರ್ಸ್ ಬೆಳೆಯುತ್ತಿದೆ. ನೀತಿ ಆಯೋಗದ ಪ್ರಕಾರ, 23.5 ಮಿಲಿಯನ್ ಕಾರ್ಮಿಕರು ಇದರ ವ್ಯಾಪ್ತಿಗೆ ಒಳಪಡಲಿದ್ದಾರೆ. ರಾಜ್ಯದಲ್ಲಿ ನಾಲ್ಕು ಲಕ್ಷ ಡಿಜಿಟಲ್ ವೇದಿಕೆ ಕಾರ್ಮಿಕರಿದ್ದಾರೆ. ಇದರಲ್ಲಿ ದ್ವಿಚಕ್ರ ವಾಹನ, ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಉಳ್ಳವರಿದ್ದಾರೆ. ಕಾರ್ಬನ್ ಮೊನಾಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್‌ನಿಂದ ತೊಂದರೆಗೊಳಗಾಗುತ್ತಾರೆ ಎಂಬ ವರದಿಯೊಂದು ಇದೆ. ಒಂದು ದಿನಕ್ಕೆ ಆಟೋ ಚಾಲಕರು, ಗಿಗ್ ಕಾರ್ಮಿಕರು 10 ಸಿಗರೇಟ್ ಸೇದಿದಂತಾಗುತ್ತದೆ. ರಾಜ್ಯ ಸರಕಾರ ಎರಡು ಲಕ್ಷ ರು.ವರೆಗೂ ಆರೋಗ್ಯ ವಿಮೆ ಒದಗಿಸಿದೆ. 10,560

ಕಾರ್ಮಿಕರು ನೋಂದಾಯಿಸಿಕೊಂಡಿದ್ದಾರೆ ಎಂದು ಹೇಳಿದರು. ಗಿಗ್ ಕಾರ್ಮಿಕರು ಮಂಡಳಿಯಲ್ಲಿ ನೋಂದಾಯಿಸಲು ಅವಕಾಶ ಕಲ್ಪಿಸುವುದು ಸಂಗ್ರಹಕಾರರು ಅಥವಾ ವೇದಿಕೆ ನೋಂದಣಿ ಮಾಡಿಸಲು ಉಪಬಂಧಿಸಲಾಗುವುದು. ವೇದಿಕೆ ಆಧರಿತ ಗಿಗ್ ಕಾರ್ಮಿಕರಿಗೆ ಆದಾಯ ಭದ್ರತೆ ಮತ್ತು ಸೂಕ್ತ ಕೆಲಸದ ಪರಿಸ್ಥಿತಿಗಳನ್ನು ಉಪಬಂಧಿಸಲಾಗುತ್ತದೆ ಎಂದರು. ಆಡಳಿತ ಹಾಗೂ ಪ್ರತಿಪಕ್ಷದ ಹಲವು ಸದಸ್ಯರು ಸಲಹೆ, ಸೂಚನೆ ನೀಡಿದ ನಂತರ ಸಚಿವರು ಸ್ಪಷ್ಟೀಕರಣ ನೀಡಿ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕೆಂದು ಕೋರಿದರು. ನಂತರ ಸ್ಪೀಕರ್ ಯು.ಟಿ.ಖಾದರ್ ಮತಕ್ಕೆ ಹಾಕಿದಾಗ ಸರ್ವಾನುಮತದ ಮೂಲಕ ವಿಧೇಯಕಕ್ಕೆ ಅನುಮೋದನೆ ದೊರೆಯಿತು.

ರಹೀಂಗೆ ಧೈರ್ಯ ತುಂಬಿದ ಅಶೋಕ್

ಸಾಮಾನ್ಯವಾಗಿ ಅಧಿವೇಶನದಲ್ಲಿ ಆಡಳಿತ ಪಕ್ಷದ ಶಾಸಕ, ಸಚಿವರ ಕಾಲೆಳೆಯುವ ಪ್ರತಿಪಕ್ಷದವರು, ಮಂಗಳವಾರ ಸಚಿವರ ಬೆಂಬಲಕ್ಕೆ ನಿಂತು,

ಧೈರ್ಯ ತುಂಬಿದ ಅಪರೂಪದ ಘಟನೆ ನಡೆಯಿತು. ಹೌದು, ವಿಧೇಯಕವನ್ನು ಸ್ಪಷ್ಟವಾಗಿ ವಿವರಿಸಲು ಸಾಧ್ಯವಾಗದೆ ಸದನದಲ್ಲಿ ತಡವರಿಸಿದ ಸಚಿವ ರಹೀಂ ಖಾನ್ ಬೆಂಬಲಕ್ಕೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಬಂದು ಧೈರ್ಯ ತುಂಬಿದ ಪ್ರಸಂಗ ನಡೆಯಿತು. 2025 ನೇ ಸಾಲಿನ ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ವಿಧೇಯಕಯನ್ನು ರಹೀಂ ಖಾನ್ ವಿಧಾನಸಭೆಯಲ್ಲಿ ಮಂಡನೆ ಮಾಡಿದರು. ಬಳಿಕ ವಿಧೇಯಕದ ಬಗ್ಗೆ ವಿವರಣೆ ನೀಡಲು ತಡವರಿಸಿಕೊಂಡು ಹಿಂದೇಟು ಹಾಕಿದ ರು. ಸ್ಪಷ್ಟವಾಗಿ ಕನ್ನಡದಲ್ಲಿ ವಿಧೇಯಕವನ್ನು ವಿವರಿ ಸಲು ಅವರಿಂದ ಸಾಧ್ಯವಾಗಿರಲಿಲ್ಲ. ಇದೇ ಸಂದರ್ಭದಲ್ಲಿ ವಿಧೇಯಕದ ಬಗ್ಗೆ ವಿವರಣೆ ನೀಡುವಂತೆ ರಹೀಂ ಖಾನ್‌ಗೆ ಬಿಜೆಪಿ ಸದಸ್ಯರು ಆಗ್ರಹಿಸಿದರು. ಆದರೆ ಈಗಾಗಲೇ ವಿವರಣೆ ನೀಡಿದ್ದೇನಲ್ಲಾ, ಮತ್ತೆ ವಿವರಣೆ ನೀಡಬೇಕಾ ಎಂದು ರಹೀಂ ಖಾನ್ ಹಿಂದೇಟು ಹಾಕಿದರು.

ಈ ಸಂದರ್ಭದಲ್ಲಿ ರಹೀಂ ಖಾನ್‌ಗೆ ಧೈರ್ಯ ತುಂಬಿದ ಅಶೋಕ್, ಸದನದಲ್ಲಿ ಮಾತಾಡುವಂತೆ ಧೈರ್ಯ ತುಂಬಿದರು. ಹಿಂದೆ ಮುನಿರತ್ನ ಸಚಿವರಾಗಿದ್ದಾಗ ನಾನು ಹೇಳುತ್ತಿದೆ. ಅವನು ನಾನು ಬಿಲ್ ಮಂಡನೇ ಮಾಡಲ್ಲ ನೀವೇ ಮಾಡಿ ಅಂದಿದ್ದ. ಅದಕ್ಕೆ ನಾನು ತಪ್ಪು ಆದರೂ ನೀನೇ ಬಿಲ್ ಮಂಡಿಸು ಎಂದಿದ್ದೆ. ಯಾಕೆಂದರೆ ಕಲಿಯಬೇಕೆಂದು ಹೇಳಿದ್ದೆ ಎಂದು ನೆನಪಿಸಿಕೊಂಡರು. ರಹೀಂ ಖಾನ್ ಕೂಡ ಕಲಿತುಕೊಳ್ಳಬೇಕು. ಇಲ್ಲಿ ಯಾರು ತಪ್ಪು ಮಾಡದೇ ಇರೋರು ಇಲ್ಲ. ಎಲ್ಲರೂ ಒಂದಲ್ಲ ಒಂದು ತಪ್ಪು ಗಳನ್ನು ಮಾಡಿದವರೇ ಎಂದರು.

ಮುನಿರತ್ನ ಹೆಸರು ಮರೆತ ಡಿಕೆ!

ಸದಾ ಹಾವು-ಮುಂಗುಸಿಗಳಂತಿರುವ ಡಿ.ಕೆ.ಶಿವಕುಮಾರ್ ಹಾಗೂ ಮುನಿರತ್ನ ಒಬ್ಬರನ್ನೊಬ್ಬರು ಕಾಲೆಳೆದುಕೊಂಡ ಘಟನೆ ಮಂಗಳವಾರ ನಡೆಯಿತು. ಗ್ರೇಟರ್ ಬೆಂಗಳೂರು ತಿದ್ದು

ಪಡಿ ಕಾಯಿದೆ ಮಂಡನೆಯ ಸಂದರ್ಭದಲ್ಲಿ ನಡೆದ ಚರ್ಚೆ ಯ ವೇಳೆ ಡಿಕೆಶಿ ಹಾಗೂ ಮುನಿರತ್ನ ಪರಸ್ಪರ ಕಾಲೆಳೆದರು. ಡಿ.ಕೆ. ಶಿವಕುಮಾರ್ ಮಾತನಾಡುತ್ತಿರುವ ವೇಳೆ ಮಧ್ಯಪ್ರವೇಶಿಸಲು ಮುನಿರತ್ನ ಮುಂದದರು. ಈ ವೇಳೆ ಡಿಕೆ 'ಏ ಮಿಸ್ಟರ್, ಏನ್ ಅವ್ರ ಹೆಸರು' ಎಂದು ಹೇಳಿ ಬಳಿಕ ಓ, ಮುನಿರತ್ನ ಎಂದು ಕೆಣಕಿದರು. ಇದಕ್ಕೆ ಪ್ರತಿಯಾಗಿ, ನನ್ನ ಹೆಸರು ಮರೆತು ಬಿಟ್ರಾ ಅಂತ ಮುನಿರತ್ನ ಕೇಳಿದರು. ಅದಕ್ಕೆ ಎಲ್ಲೆಲ್ಲೋ ಓಡಾಡ್ತಿದೀಯಲ್ಲಪ್ಪ ನೀನು, ಏನೇನೋ ತನಿಖೆ ಮಾಡ್ತಿದೀಯಲ್ಲ, ನಿನ್ನ ಹೆಸ್ರು ಮರೆತುಬಿಡ್ತೀವಿ ಎಂದು ಡಿಕೆಶಿ ಟಾಂಗ್ ನೀಡಿದರು. ಅದಕ್ಕೆ ಮುನಿರತ್ನ ಅವರು, ನೀವು ನನ್ನ ಹೆಸರು ಮರೆತಿದ್ದಕ್ಕೆ ಧನ್ಯವಾದ ಎಂದು ಟಾಂಗ್ ನೀಡಿದರು. ಇದಕ್ಕೆ ನಿನ್ನ ತನಿಖೆ ನಾವೂ ಮಾಡಬೇಕಲ್ಲ, ಅದು ಬಾಕಿಯಿದೆ ಎಂದು ಮುನಿರತ್ನಗೆ ಡಿಕೆಶಿ ಟಾಂಗ್ ನೀಡಿದರು. ಇದಕ್ಕೆ, ನಿಮ್ಮ ಇನ್ವೆಸ್ಟಿಗೇಷನ್, ನನ್ನ ಇನ್ವೆಸ್ಟಿಗೇಷನ್ ಎರಡೂ ಸಿಬಿಐಗೆ ಕೊಟ್ಟು ಬಿಡಿ ಎಂದು ಮುನಿರತ್ನ ತಿರುಗೇಟು ನೀಡಿದರು.

ವಿಶ್ವವಾಣಿ

ಸಂಪಾದಕೀಯ

ಕನ್ನಡದ ಹೆಮ್ಮೆ ಎಸ್.ಎಲ್ ಭೈರಪ್ಪ

ಡಾ. ಎಸ್.ಎಲ್ ಭೈರಪ್ಪ ಅವರು ನಿಸ್ಸಂಶಯವಾಗಿ ಕನ್ನಡದ ಹೆಮ್ಮೆ. ಭಾರತದಲ್ಲಿ ಅತೀ ಹೆಚ್ಚು ಮಾರಾಟವಾಗುವ ಕಾದಂಬರಿಗಳ ಕರ್ತೃ ಯಾರು ಅಂತ ಕೇಳಿದರೆ ಖಂಡಿತವಾಗಿಯೂ ಅದು ಕನ್ನಡಿಗರಾದ ಭೈರಪ್ಪ. ಕನ್ನಡದ ಯಾವ ಕಾದಂಬರಿಕಾರರ ಕೃತಿಗಳು ಅತಿ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿವೆ ಅಂತ ಯಾರಾದರೂ ಕೇಳಿದರೆ ಅದಕ್ಕೂ ಉತ್ತರ ಭೈರಪ್ಪನವರೇ. ಬರವಣಿಗೆಯಿಂದ ಬಂದ ಹಣವನ್ನೆಲ್ಲಾ ಬಡ, ಅನಾಥ ಮಕ್ಕಳ ಶಿಕ್ಷಣಕ್ಕಾಗಿ ವಿನಿಯೋಗ ಮಾಡುತ್ತಿರುವವರು ಯಾರು ಎಂದು ಕೇಳಿದರೆ ಅಂಥ ಅಪರೂಪದ ಲೇಖಕರಾಗಿಯೂ ಭೈರಪ್ಪ ಕಾಣಿಸಿಕೊಳ್ಳುತ್ತಾರೆ. ಹೀಗೆ ಬರಹ ಮತ್ತು ಬದುಕು ಎರಡರಲ್ಲೂ ದೊಡ್ಡವರಾಗಿರುವ ಭೈರಪ್ಪನವರು ತಮ್ಮ ಒಂಬತ್ತು ದಶಕದ ಜೀವನದಲ್ಲಿ ಅಕ್ಷರ ಕಾಯಕ, ಕನ್ನಡದ ಕೀರ್ತಿಧ್ವಜವನ್ನು ಎತ್ತಿ ಹಿಡಿದವರು. ಕಾದಂಬರಿಕಾರ, ಲೇಖಕ, ಚಿಂತಕ, ಸರಸ್ವತಿ ಸಮ್ಮಾನ್ ಪುರಸ್ಕೃತ ಭೈರಪ್ಪನವರು ಇಂದು 95ನೇ ಜನ್ಮದಿನಕ್ಕೆ ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ಅವರ ಮಹತ್ವವನ್ನು ಮತ್ತೆ ಮೆಲುಕುಹಾಕಬೇಕಿದೆ. ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಬರುವ ಕಷ್ಟಗಳನ್ನು ಅನುಭವಗಳನ್ನಾಗಿ ಪರಿವರ್ತಿಸಿಕೊಂಡು ಹೇಗೆ ಸಮಾಜಕ್ಕೆ ಮಾದರಿ ವ್ಯಕ್ತಿಯಾಗಿ ರೂಪುಗೊಳ್ಳಬಹುದು ಎಂಬುದಕ್ಕೆ ಭೈರಪ್ಪನವರು ನಿದರ್ಶನ. ಅವರಿಗೆ ಪದ್ಮಶ್ರೀ, ಪದ್ಮಭೂಷಣ, ಸರಸ್ವತಿ ಸಮ್ಮಾನ್ ಮೊದಲಾದ ಪುರಸ್ಕಾರಗಳು ಸಂದಿವೆ. ಜ್ಞಾನಪೀಠ ಅವರಿಗೆ ದೊರೆಯಲಿ ಎಂದು ಹಂಬಲಿಸುವ ಅಭಿಮಾನಿಗಳು ಸಾಕಷ್ಟು ಇದ್ದಾರಾದರೂ, ಬರದೇ ಹೋದರೆ ಅದು ಜ್ಞಾನಪೀಠಕ್ಕೇ ಕೊರತೆಯೇ ಹೊರತು ಭೈರಪ್ಪನವರಿಗಲ್ಲ. ತಮ್ಮ ತೊಂಬತ್ತನೇ ವಯಸ್ಸಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ತಮ್ಮ ಊರಿನ ಕೆರೆಯನ್ನು ತುಂಬಿಸುವ ಯೋಜನೆಗೆ ಅನುದಾನ ನೀಡಿ ಎಂದು ಒತ್ತಡ ಹಾಕಿ ಕೆಲಸ ಮಾಡಿಸಿಕೊಂಡ ಬರಹಗಾರ ಇನ್ನೊಬ್ಬ ಸಿಗಲಿಕ್ಕಿಲ್ಲ. ಪುಸ್ತಕಗಳಿಂದ ತಮಗೆ ಬಂದ ಹಣವನ್ನೆಲ್ಲ ಟ್ರಸ್ಟ್ ಮಾಡಿ ಬಡ ಪ್ರತಿಭಾವಂತ ಮಕ್ಕಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುವ ಲೇಖಕರೂ ಎಷ್ಟು ಮಂದಿ ಇದ್ದಾರು? ಇಂಥ ಕನ್ನಡಿಗರ ಕಣ್ಮಣಿ ಭೈರಪ್ಪನವರು ನೂರಾರು ವರ್ಷ ಕಾಲ ನಮ್ಮ ನಡುವೆ ಓಡಾಡಿಕೊಂಡು ನಮ್ಮಲ್ಲಿ ಸ್ಫೂರ್ತಿ ತುಂಬುತ್ತಿರಲಿ.

ಸೊಂಪಾದಕೀಯ

ಗುಂಡಿ ಅಗೆತ

ನಮ್ಮ ಸಮಾಜದಲ್ಲಿ ಜಾತಿ ಅನ್ನೋದು ಕೆಲವು ಜನರಿಗೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಆದರೆ, ಪ್ರಾಣ ಬಿಟ್ಟೇವು, ಜಾತಿ ಬಿಡೆವು ಅನ್ನೋ ಕೆಲವರು, ಸಾವಿನ ವಿಷಯದಲ್ಲೂ ಸಣ್ಣತನ ತೋರಿರುವ ಇತ್ತೀಚಿನ ಎರಡು ಉದಾ ಹರಣೆಗಳನ್ನು ನೋಡಿದಾಗ ಮತ್ತೆ ಮತ್ತೆ ಜಾತಿ ಭೂತ, ಮೂಢನಂಬಿಕೆಗಳ ಭೂತ ನೆನಪಾಗೋದು ಸಹಜ. ಊರೊಂದರಲ್ಲಿ ಹೆಂಗಸೊಬ್ಬರು ಸತ್ತಾಗ, ಆಕೆಯ ಹೆಣ್ಣುಮಕ್ಕಳು ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆ ಅನ್ನೋ ಕಾರಣಕ್ಕೆ ಸಂಬಂಧಿಕರು ಯಾರೂ ತಿರುಗಿ ನೋಡಲಿಲ್ಲವಂತೆ. ಕೊನೆಗೆ, ಗ್ರಾಮ ಸ್ಥರೇ ಮುಂದೆ ನಿಂತು ಅಂತಿಮ ಕಾರ್ಯ ಮಾಡಿದ್ದಾರೆ. ಹಾಗಾಗಿ ನಿಜವಾದ ಸಂಬಂಧಿಕರು ಯಾರು ಅನ್ನೋ ಪ್ರಶ್ನೆ ಇಂಥ ಸಂದರ್ಭದಲ್ಲಿ ಸಹಜ. ಅದಕ್ಕೆ ಉತ್ತರವೂ ಸುಲಭ. ಇನ್ನೊಂದು ಅಮಾನವೀಯ ಘಟನೆಯಲ್ಲಿ ಜನ ತಮ್ಮ ಮೂಢನಂಬಿಕೆಗಳನ್ನು ಯಾವ ಲೆವೆಲ್ಲಿಗೆ ಬೇಕಾದ್ರೂ ತಗೊಂಡ್ ಹೋಗ್ತಾರೆ ಅನ್ನೋದು ಪ್ರೂವ್ ಆಗಿದೆ. ತೊನ್ನು ಸಮಸ್ಯೆ ಇದ್ದ ಹೆಂಗಸೊಬ್ಬರು ಸತ್ತು, ಅವರನ್ನು ಊರಲ್ಲಿ ಹೂಳಲಾಗಿತ್ತು. ಆದರೆ ಆ ಊರಿನ ಸುತ್ತಮುತ್ತ ಮಳೆ ಬಂದರೂ, ಆ ಊರಲ್ಲಿ ಮಾತ್ರ ಮಳೆ ಬಾರದೇ ಇದ್ದಾಗ, ಸೋ ಕಾಲ್ಡ್ ನಾಗರೀಕ ಸಮಾಜದ ಜನ, ತೊನ್ನು ಬಂದವರನ್ನು ಸುಟ್ಟು ಹಾಕಬೇಕು, ಅವರನ್ನು ಹೂತಿದ್ದಕ್ಕೇ ಊರಿಗೆ ಬರ ಬಂದಿದೆ ಎಂದು ಹೇಳಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದ್ದಾರೆ. ಇಂಥ ಮೂಢನಂಬಿಕೆಗಳನ್ನು ನೋಡಿಯೇ ದೊಡ್ಡವರು ಹುಟ್ಟು ಗುಣ ಸುಟ್ಟರೂ ಹೋಗಲ್ಲ ಅತ ಹೇಳಿದ್ದರೋ ಏನೋ. ಆದರೆ ಈ ಕೇಸಿನಲ್ಲಿ ಹುಟ್ಟುವ ಮಗುವಿನ ಕಾಲ್ಗುಣ ನೋಡುವವರು ಒಂದು ಕಡೆಯಾದರೆ ಸತ್ತವರ ಕಾಲ್ಗುಣವನ್ನೂ ಬಿಡದವರು ಇನ್ನೊಂದು ಕಡೆ. ಒಟ್ಟಿನಲ್ಲಿ, ಇವರ ಹುಟ್ಟುಗುಣ, ಸತ್ತರೂ ಹೋಗಲ್ಲ, ಹೂತಿದ್ದ ಹೆಣವನ್ನು ಹೊರತೆಗೆದು ಸುಟ್ಟರೂ ಹೋಗಲ್ಲ ಅಂತ ಜನ ಮಾತಾಡಿಕೊಳ್ಳುವ ಹಾಗಾಗಿರೋದಂತೂ ನಿಜ. ಈ ಮೂಲಕ ಮೂಢನಂಬಿಕೆಯ ಜನ, ಗಾದೆ ಮಾತನ್ನು ಅಕ್ಷರಶಃ ನಿಜ ಮಾಡಿದ್ದಾರೆ. ಬದುಕಿರುವವರನ್ನು ಬದುಕೋಕೆ ಬಿಡದ ಈ ಮೂಢನಂಬಿಕೆಗಳ ಸರದಾರರು, ಈಗ ಸತ್ತು ಹೆಣವಾದವರನ್ನೂ ಹೆಣಗಾಡಿಸುತ್ತಿರೋದು ಮಾತ್ರ ಸತ್ಯ.

ಸಂಪಾದಕರ ಸದ್ಯಶೋಧನೆ

ವಿಮಾನಗಳು ಡಿಕ್ಕಿಯಾಗದಿರಲು ಕಾರಣ?

ಆಕಾಶದಲ್ಲಿ ನೂರಾರು ವಿಮಾನಗಳು ಹಾರುತ್ತಿದ್ದರೂ ಅವು ಪರಸ್ಪರ ಡಿಕ್ಕಿ ಹೊಡೆದುಕೊಳ್ಳುವುದಿಲ್ಲ ಹೇಗೆ ? ಕೆಲವು ವಿಮಾನ ನಿಲ್ದಾಣಗಳ ಮೇಲೆ ಏಕಕಾಲಕ್ಕೆ ಹತ್ತಾರು ವಿಮಾನಗಳು ಲ್ಯಾಂಡ್ ಆಗಲು ಮತ್ತು ಅಷ್ಟೇ ಸಂಖ್ಯೆಯ ವಿಮಾನಗಳು ಟೇಕಾಫ್ ಆಗಲು ಸಿದ್ಧವಾಗಿರುತ್ತವೆ. ಆದರೆ ಅವ್ಯಾವವೂ ಅಪಘಾತಕ್ಕೊಳಗಾಗುವುದಿಲ್ಲ, ಹೇಗೆ? ದುಬೈ, ಜರ್ಮನಿ, ನ್ಯೂಯಾರ್ಕ್, ಲಂಡನ್ ಮುಂತಾದ ನಿಲ್ದಾಣಗಳ ಮೇಲಿನ ವಿಮಾನ ಮಾರ್ಗಗಳಲ್ಲಿ ಮೂವತ್ತು-ನಲವತ್ತು ವಿಮಾನಗಳು ನಿರಾತಂಕವಾಗಿ ಹಾರುತ್ತವೆ, ಹೇಗೆ? ಇದಕ್ಕೆ ಕಾರಣ ವಿಮಾನಗಳು ಪರಸ್ಪರ ಡಿಕ್ಕಿಯಾಗದಂತೆ ತಡೆಗಟ್ಟಲು ಏರ್ ಟ್ರಾಫಿಕ್ ಕಂಟ್ರೋಲ್ (ATC) ಮತ್ತು ಆಧುನಿಕ ತಂತ್ರಜ್ಞಾನದ ಸಂಯೋಜಿತ ವ್ಯವಸ್ಥೆಯನ್ನು ಬಳಸುವುದು. ಏರ್ ಟ್ರಾಫಿಕ್ ಕಂಟ್ರೋಲ್ (ATC) ವಿಮಾನಗಳ ಚಲನೆಯನ್ನು ಸಂನಿಯಂತ್ರಿಸುತ್ತದೆ. ವಿಮಾನ ನಿಲ್ದಾಣಗಳ ಸುತ್ತಲಿನ ವಾಯುಪ್ರದೇಶವನ್ನು ವಿಭಾಗಗಳಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದು ವಿಭಾಗವನ್ನು ನಿಗದಿತ ಕಂಟ್ರೋಲರ್‌ಗಳು ಮೇಲ್ವಿಚಾರಣೆ ಮಾಡುತ್ತಾರೆ. ಪ್ರತಿ ವಿಮಾನಕ್ಕೂ ವಾಯುಪಥ (airways) ಮತ್ತು ಎತ್ತರದ ಮಟ್ಟಗಳನ್ನು (flight levels) ನಿಯೋಜಿಸಲಾಗುತ್ತದೆ, ಇದರಿಂದ ಅವು ಒಂದಕ್ಕೊಂದು ಸಮೀಪಕ್ಕೆ ಬರದಂತೆ ತಡೆಯಲಾಗುತ್ತದೆ. ರಾಡಾರ್ ಮತ್ತು ಜಿಪಿಎಸ್ ವ್ಯವಸ್ಥೆಯ ಮೂಲಕ ವಿಮಾನಗಳ ಸ್ಥಾನ, ವೇಗ ಮತ್ತು ದಿಕ್ಕನ್ನು ನಿರಂತರವಾಗಿ ಗಮನಿಸಲಾಗುತ್ತದೆ. ಆಧುನಿಕ ವಿಮಾನಗಳು ಜಿಪಿಎಸ್ ಆಧಾರಿತ ನ್ಯಾವಿಗೇಷನ್‌ನ್ನು ಬಳಸುತ್ತವೆ, ಇದು ಅವುಗಳ ಸ್ಥಾನವನ್ನು ನಿಖರವಾಗಿ ತಿಳಿಸುತ್ತದೆ. ವಿಮಾನಗಳಲ್ಲಿ TCAS (Traffic Collision Avoidance System)ಎಂಬ ಸಂಘರ್ಷ ತಡೆಗಟ್ಟುವ ವ್ಯವಸ್ಥೆ ಇದೆ. ಇದು ಸಮೀಪದ ವಿಮಾನಗಳನ್ನು ಗುರುತಿಸಿ, ಡಿಕ್ಕಿಯಾಗುವ ಸಂಭವ ಇದ್ದರೆ ಪೈಲಟ್‌ಗೆ ಎಚ್ಚರಿಕೆ ನೀಡುತ್ತದೆ ಮತ್ತು ತಪ್ಪಿಸಿಕೊಳ್ಳಲು ಸೂಚನೆಗಳನ್ನು ನೀಡುತ್ತದೆ (ಉದಾಹರಣೆಗೆ, ಏರಿಕೆ ಅಥವಾ ಇಳಿಕೆ). ವಿಮಾನಗಳಿಗೆ ವಿಭಿನ್ನ ಎತ್ತರದ ಮಟ್ಟಗಳನ್ನು (flight levels) ನಿಗದಿಪಡಿಸಲಾಗುತ್ತದೆ. ಉದಾಹರಣೆಗೆ, ಪೂರ್ವದಿಕ್ಕಿನಲ್ಲಿ ಹಾರುವ ವಿಮಾನಗಳಿಗೆ ಹೆಚ್ಚಿನ ಎತ್ತರ (FL350, FL370) ಮತ್ತು ಪಶ್ಚಿಮದಿಕ್ಕಿನಲ್ಲಿ ಹಾರುವ ವಿಮಾನಗಳಿಗೆ ಸರಿಯಾದ ಎತ್ತರ (FL360, FL380) ನೀಡಲಾಗುತ್ತದೆ. ಇದರಿಂದ ಎದುರಿನ ವಿಮಾನಗಳು ವಿಭಿನ್ನ ಎತ್ತರದಲ್ಲಿ ಹಾರುತ್ತವೆ. ವಿಮಾನಗಳು ನಿಗದಿತ ವಾಯುಪಥಗಳಲ್ಲಿ (air corridors) ಹಾರುತ್ತವೆ, ಇವು ರಸ್ತೆಗಳಂತೆ ಆಕಾಶದಲ್ಲಿ ವಿನ್ಯಾಸಗೊಳಿಸಲ್ಪಟ್ಟಿವೆ. ಈ ವಾಯುಪಥಗಳು ವಿಮಾನಗಳನ್ನು ಒಂದಕ್ಕೊಂದು ದೂರವಿಡುತ್ತವೆ. ಪೈಲಟ್‌ಗಳು ಎಟಿಸಿ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಒಂದು ವಿಮಾನ ತನ್ನ ವಾಯುಪಥ ಅಥವಾ ಎತ್ತರದಿಂದ ತಪ್ಪಿದರೆ, ಎಟಿಸಿ ತಕ್ಷಣ ಎಚ್ಚರಿಕೆ ನೀಡಿ ಸರಿಪಡಿಸುತ್ತದೆ. ಎಡಿಎಸ್-ಬಿ (Automatic Dependent Surveillance - Broadcast) ತಂತ್ರಜ್ಞಾನವು ವಿಮಾನಗಳು ತಮ್ಮ ಸ್ಥಾನ, ಎತ್ತರ ಮತ್ತು ವೇಗವನ್ನು ಇತರ ವಿಮಾನಗಳಿಗೆ ಮತ್ತು ಎಟಿಸಿಗೆ ಸ್ವಯಂಚಾಲಿತವಾಗಿ ಕಳುಹಿಸುತ್ತದೆ. ಇದರಿಂದ ಸಂಘರ್ಷದ ಸಾಧ್ಯತೆ ಇನ್ನಷ್ಟು ಕಡಿಮೆಯಾಗುತ್ತದೆ. ಈ ಎಲ್ಲ ವ್ಯವಸ್ಥೆಗಳು ಒಟ್ಟಾಗಿ ಕಾರ್ಯನಿರ್ವಹಿಸುವುದರಿಂದ, ಸಾವಿರಾರು ವಿಮಾನಗಳು ಆಕಾಶದಲ್ಲಿ ಒಂದೇ ಸಮಯದಲ್ಲಿ ಹಾರಾಡಿದರೂ ಡಿಕ್ಕಿಯಾಗುವುದಿಲ್ಲ, ಆದರೂ, ಅತ್ಯಂತ ವಿರಳ ಸಂದರ್ಭಗಳಲ್ಲಿ ತಾಂತ್ರಿಕ ದೋಷ ಅಥವಾ ಮಾನವ ತಪ್ಪಿನಿಂದ ಸಂಘರ್ಷ ಸಂಭವಿಸಬಹುದು, ಆದರೆ ಇಂಥ ಘಟನೆಗಳು ಅತ್ಯಂತ ಕಡಿಮೆ. ಆಧುನಿಕ ವಿಮಾನಗಳ ಕಾಕ್‌ಪಿಟ್‌ನಲ್ಲಿ EGPWS (Enhanced Ground Proximity Warning System) ಮತ್ತು TCAS ಒಟ್ಟಿಗೆ ಕೆಲಸ ಮಾಡಿ, ಯಾವುದೇ ಅಪಾಯಕಾರಿ ಸಂದರ್ಭವನ್ನು ತಡೆಗಟ್ಟುತ್ತವೆ. ವಿಮಾನಯಾನ ವ್ಯವಸ್ಥೆಯಲ್ಲಿ ಬಹು-ಹಂತದ ರಕ್ಷಣೆ ಇದೆ. ಒಂದು ವ್ಯವಸ್ಥೆ ವಿಫಲವಾದರೂ, ಇತರ ವ್ಯವಸ್ಥೆಗಳು (ATC, TCAS, ಪೈಲಟ್‌ನ ಸಾಮರ್ಥ್ಯ) ಸುರಕ್ಷತೆಯನ್ನು ಖಾತರಿಪಡಿಸುತ್ತವೆ. ಒಂದು ದಿನದಲ್ಲಿ, ವಿಶ್ವದಾದ್ಯಂತ ಸುಮಾರು ಒಂದು ಲಕ್ಷ ವಿಮಾನಗಳು ಹಾರುತ್ತವೆ. ಉದಾಹರಣೆಗೆ, ಯುರೋಪ್‌ನಂಥ ದಟ್ಟವಾದ ವಾಯುಗಾಮಿ ಪ್ರದೇಶದಲ್ಲಿ ಯುರೋ ಕಂಟ್ರೋಲ್ ಸಂಸ್ಥೆಯು ಸುಮಾರು ಮೂವತ್ತು ಸಾವಿರ ವಿಮಾನಗಳನ್ನು ಒಂದೇ ದಿನದಲ್ಲಿ ನಿರ್ವಹಿಸುತ್ತದೆ. ಇವೆಲ್ಲವೂ ಸಂಕೀರ್ಣ ವಾಯುಗಾಮಿ ನಿಯಂತ್ರಣ ವ್ಯವಸ್ಥೆಯಿಂದ ಸಾಧ್ಯವಾಗಿದೆ.

ರಾಮನು ಕಾಡಿಗೆ ಹೋದ ಮೇಲೆ ದಶರಥನೇಕೆ ಸತ್ತ?

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಮಧ್ಯರಾತ್ರಿ ಮೂರ್ಛಿತನಾಗಿದ್ದ ದಶರಥ ಎದ್ದು ಕುಳಿತ. ಎಲ್ಲಿ... ನನ್ನ ರಾಮನೆಲ್ಲಿ, ಈಗಲೇ ಅವನನ್ನು ಕರೆತನ್ನಿ ಎಂದು ಏರುಧ್ವನಿಯಲ್ಲಿ ಕೂಗಿದ. ದಶರಥನ ಧ್ವನಿಯನ್ನು ಕೇಳಿ, ನಿದ್ರೆ ಬಾರದೆ ಹೊರಳುತ್ತಿದ್ದ ಕೌಸಲ್ಯೆ ತಕ್ಷಣ ಎದ್ದು ಕುಳಿತಳು.

ಎಲ್ಲಿ ಸ್ವಾಮಿ ರಾಮ?... ಅವನಾಗಲೇ ಸೀತೆಯೊಡನೆ ಲಕ್ಷ್ಮಣ ಸಮೇತನಾಗಿ ಕಾಡಿಗೆ ಹೊರಟಾಯಿತಲ್ಲ! ಅವನು ಪಿತೃವಾಕ್ಯ ಪರಿಪಾಲಕನಲ್ಲವೆ! ಅವನು ಎಂದಾದರೂ ನಿಮ್ಮ ಮಾತನ್ನು ಮೀರಿದ್ದುಂಟೆ? ಅವರೆಲ್ಲರೂ ನಾರು ಮಡಿಯನ್ನುಟ್ಟು, ಕೇವಲ ಆಯುಧಧಾರಿಗಳಾಗಿ ಕಾಡಿಗೆ ಹೋಗಿ ಆಯಿತಲ್ಲ ಮಹಾಪ್ರಭು.. ಎಂದು ಕೌಸಲ್ಯೆ ರೋಧಿಸಲಾರಂಭಿಸಿದಳು. ನೀವು ಕೊಟ್ಟ ವರಗಳಲ್ಲಿ ಒಂದು ವರವು ಪೂರ್ಣವಾಯಿತು. ಇನ್ನೊಂದು ಉಳಿದಿದೆ. ಭರತನನ್ನು ಕರೆಯಿಸಿ. ಅವನಿಗೆ ಪಟ್ಟಾಭಿಷೇಕವನ್ನು ಮಾಡಿ. ಆಗ ನಿಮಗೆ ಸಂಪೂರ್ಣ ತೃಪ್ತಿ ದೊರೆಯುತ್ತದೆ... ನಾನೂ ಸಹ ನನ್ನ ಮಗನನ್ನು ಹಿಂಬಾಲಿಸಿ ಕಾಡಿಗೆ ಹೊರಟು ಹೋಗುತ್ತೇನೆ.. ಎಂದು ರೋಷದಿಂದ ನುಡಿದಳು ಕೌಸಲ್ಯೆ.

ಚುಚ್ಚಿ ಮಾತನಾಡಬೇಡ ಕೌಸಲ್ಯೆ!.... ಉರಿಯುತ್ತಿರುವ ನನ್ನ ಹೃದಯ ಅಗ್ನಿಕುಂಡಕ್ಕೆ ತುಪ್ಪವನ್ನು ಸುರಿಯಬೇಡ. ನಾನು ತಪ್ಪು ಮಾಡಿದೆ. ಅಯ್ಯೋ! ನಾನು ತಪ್ಪು ಮಾಡಿದೆ. ಸಿಂಹಾಸನವನ್ನು ಏರಬೇಕಾದ ನನ್ನ ಮಗ ಕಾಡಿನಲ್ಲಿ ಅಲೆಯುವಂತಾಯಿತೆ? ಅಯ್ಯೋ! ನನ್ನ ರಾಮ ಹೊರಟುಹೋದನೆ? ನನ್ನ ಮುದ್ದಿನ ಕಂದ ನನ್ನನ್ನು ಬಿಟ್ಟು ಹೋದನೆ?! ರಘುವಂಶಕುಲತಿಲಕ ರಾಜ್ಯವನ್ನು ಬಿಟ್ಟು ಹೋದನೆ? ಅಯ್ಯೋ! ನನ್ನ ಪಿತೃಗಳಿಗೆ ನಾನೇನೆಂದು ಉತ್ತರವನ್ನು ಕೊಡಲಿ? ಅಯ್ಯೋ! ನನಗೆ ಧಿಕ್ಕಾರವಿರಲಿ. ರಾಮ!... ಇದೋ ನಾನೂ ಬಂದೆ. ನಿನ್ನ ಜೊತೆಯಲ್ಲಿ ನಾನೂ ಕಾಡಿಗೆ ಬಂದೆ ಎನ್ನುತ್ತಾ ಹಾಸಿಗೆಯಿಂದ ಮೇಲಕ್ಕೆದ್ದ ದಶರಥ. ಸಾವಿರ ಸಿಡಿಲುಗಳು ಒಮ್ಮೆಲೆ ಸಿಡಿದಂತೆ ಆಯಿತು. ತಕ್ಷಣವೇ ತನ್ನ ಹೃದಯವನ್ನು ಹಿಡಿದುಕೊಂಡು ರಾಮಾ.... ಎಂದು ಕಿರುಚುತ್ತಾ ದಶರಥನು ಹಾಸಿಗೆಯ ಮೇಲೆ ಕುಸಿದು ಬಿದ್ದ.

ಅಯ್ಯೋ... ಸ್ವಾಮಿ! ಏನಾಯಿತು ನಿಮಗೆ ಎಂದು ಕೌಸಲ್ಯೆಯು ದಶರಥನ ಬಳಿ ಬರುವಷ್ಟರಲ್ಲಿ, ದಶರಥನ ಜೀವವು ದೇಹವನ್ನು ಬಿಟ್ಟು ಹೊರಟು ಹೋಗಿತ್ತು.

ಇದು ಜಗತ್ತಿನ ಸಾಹಿತ್ಯದಲ್ಲಿ ಭಗ್ನಹೃದಯ ಲಕ್ಷಣಾವಳಿಯ (ಬ್ರೋಕನ್ ಹಾರ್ಟ್ ಸಿಂಡ್ರೋಮ್/ ತಕೋತ್ಸುಬೋ ಲಕ್ಷಣಾವಳಿ) ಮೊತ್ತಮೊದಲ ಉದಾಹರಣೆಯಾಗಿದೆ. ಹೆಣ್ಣು ಕ್ರೌಂಚಪಕ್ಷಿ: ತಮಸಾ ನದಿಯ ತೀರದ ಬೆಳಗಿನ ಜಾವ. ವಾಲ್ಮೀಕಿ ಮಹರ್ಷಿಗಳು ತಮ್ಮ ಶಿಷ್ಯರೊಡಗೂಡಿ ಪ್ರಾತರ್ವಿಧಿಗಳಿಗೆ ಹೊರಟಿದ್ದರು. ಆಗ ಬೇಡನೊಬ್ಬನು ಮೈಥುನದಲ್ಲಿ ನಿರತವಾಗಿದ್ದ ಕ್ರೌಂಚ ಮಿಥುನಗಳಲ್ಲಿ ಗಂಡು ಪಕ್ಷಿಗೆ ಬಾಣವನ್ನು ಬಿಟ್ಟ. ಬಾಣ ತಾಗಿದ ಗಂಡು ಪಕ್ಷಿಯು ಸತ್ತು ಮರದಿಂದ ಕೆಳಗೆ ಬಿತ್ತು. ಕೂಡಲೇ ಹೆಣ್ಣು ಪಕ್ಷಿಯು ಗಂಡುಪಕ್ಷಿಯ ಒಡಲ ಮೇಲೆ ಬಿದ್ದು ವಿಲವಿಲ ವಿಲಪಿಸಿ ಸತ್ತಿತು! ಆಗ ವಾಲ್ಮೀಕಿ ಮಹರ್ಷಿಗಳು, ತಮ್ಮ ಮನಸ್ಸಿನಲ್ಲಿ ಮೂಡಿದ ಕರುಣೆ, ಕೋಪ ಮತ್ತು ವಿಷಾಧಗಳ ಫಲವಾಗಿ

ಮಾನಿಷಾಧ ಪ್ರತಿಷ್ಠಾಮ್ ತ್ವಮಗಮಃ ಶಾಶ್ವತೀಃ ಸಮಾಃ।
ಯತ್ ಕ್ರೌಂಚಮಿಥುನಾದೇಕಂ ಅವಧೀಃ ಕಾಮಮೋಹಿತಃ॥

ಅಕಾರಣವಾಗಿ ಹಕ್ಕಿಯನ್ನು ಕೊಂದ ಹೇ ಅನ್ಯಾಯಿ
ನಿನ್ನ ಪಾಪದ ಫಲವಾಗಿ ನೀ ಕೂಡಲೇ ಸಾಯಿ

ಎಂದು ಶಾಪವನ್ನು ನೀಡಿದರು. ಶೋಕ ರೂಪದ ಶ್ಲೋಕವು ರಾಮಾಯಣದ ಜನನಕ್ಕೆ ಕಾರಣವಾಯಿತು. ವಾಲ್ಮೀಕಿ ಮಹರ್ಷಿ ತಮ್ಮ ಮುಂದೆ ಎರಡು ಸಾವನ್ನು ಕಂಡರು. ಮೊದಲನೆಯ ಸಾವು ಗಂಡು ಹಕ್ಕಿಯದು. ಬೇಡ ಬಿಟ್ಟ ಬಾಣದಿಂದ ಸತ್ತಿತು. ಎರಡನೆಯ ಸಾವು ಹೆಣ್ಣು ಹಕ್ಕಿಯದು. ಹೆಣ್ಣು ಹಕ್ಕಿಗೇನೂ ಬಾಣ ತಾಗಿರಲಿಲ್ಲ, ಆದರೆ ಅದು ತನ್ನ ಸಂಗಾತಿಯು ಚಡಪಡಿಸಿ ಒದ್ದಾಡಿ ಸತ್ತದ್ದನ್ನು ತನ್ನ ಕಣ್ಣಾರೆ ನೋಡಿತು. ಸಂಗಾತಿಯ ಅಗಲಿಕೆಯ ತೀವ್ರ ಶೋಕದಿಂದ ತಕ್ಷಣವೇ ಅದರ ಹೃದಯವು ನಿಂತಿತು. ಜೀವವನ್ನು ಬಿಟ್ಟಿತು.

ಅಪ್ಪನ ಅಂತ್ಯೇಷ್ಠಿ: ಕೇರಳದಲ್ಲಿ ನಡೆದ ಘಟನೆಯಿದು. 31 ವರ್ಷದ ಮಗಳು. ಅಪ್ಪನ ಶವಸಂಸ್ಕಾರವು ನಡೆಯುತ್ತಿತ್ತು. ತಕ್ಷಣವೇ ತಲೆತಿರುಗಿ ಬಿದ್ದಳು. ಆಸ್ಪತ್ರೆಗೆ ಸಾಗಿಸಿದರು. ಹೃದಯ ಮಿಡಿತವು ನಾಗಾಲೋಟದಲ್ಲಿ ಓಡುತ್ತಿತ್ತು. ಎಕೋ ಪರೀಕ್ಷೆಯಲ್ಲಿ ಆಕೆಯ ಎಡ ಹೃತ್ಕುಕ್ಷಿಯು ಬಲೂನಿನಂತೆ ಊದಿಕೊಂಡಿತ್ತು. ಆಕೆ ಮರಣಿಸಿದಳು. ತಂದೆಯ ಸಾವಿನ ಶೋಕವನ್ನು ತಡೆದುಕೊಳ್ಳಲಾಗದ ಆಘಾತವೇ ಆಕೆಯ ಸಾವಿಗೆ ಕಾರಣವೆಂದರು. ಇದೊಂದು ತಕೋತ್ಸುಬೋ ಲಕ್ಷಣಾವಳಿಗೆ ಉದಾಹರಣೆಯಾಗಿತ್ತು. (ಬಣವಾಲಿಕರ್ ಬಿ. ಜರ್ನಲ್ ಆಫ್ ಎಲೆಕ್ಟ್ರೋಕಾರ್ಡಿಯಾಲಜಿ. ತಕೋತ್ಸುಬೋ ಸಿಂಡ್ರೋಮ್ ಪ್ರೆಸೆಂಟಿಂಗ್ ಆಸ್ ಸಿಂಕ್ಪ್ ಇನ್ ಎ ಪೇಷಂಟ್ ವಿತ್ ಎ ಪರಮನೆಂಟ್ ಪೇಸ್ ಮೇಕರ್. ಶ್ರೀ ಚಿತ್ರಾ ತಿರುನಾಳ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಅಂಡ್ ಟೆಕ್ನಾಲಜಿ, ಕೇರಳ)

ಸೋದರನ ಅಗಲಿಕೆ: ಚೆನ್ನೈಯಲ್ಲಿ ನಡೆದ ಘಟನೆ. 69 ವರ್ಷದ ಮಹಿಳೆಯೊಬ್ಬಳ ಸೋದರನು ಕೆಲವು ದಿನಗಳ ಹಿಂದೆ ಮರಣಿಸಿದ್ದ. ಆಕೆ ಎದೆಯ ನೋವೆಂದು ಆಸ್ಪತ್ರೆಗೆ ಬಂದಳು. ಇಸಿಜಿ ಮಾಡಿದರು. ಹೃದಯಾಘಾತದ ಲಕ್ಷಣಗಳು ಕಂಡು ಬಂದವು. ರಕ್ತದಲ್ಲಿ ಟ್ರೋಪೋನಿನ್ ಪ್ರಮಾಣ ಮಧ್ಯಮ ಮಟ್ಟದಲ್ಲಿ ಹೆಚ್ಚಿತ್ತು. ಕರೋನರಿ ಆಂಜಿಯೋಗ್ರಾಮ್ ಮಾಡಿದರು. ಅವು ಆರೋಗ್ಯವಾಗಿದ್ದವು. ಆದರೆ ಎಡ ಹೃತ್ಕುಕ್ಷಿಯು ಬಲೂನಿನಂತೆ ಉಬ್ಬಿತ್ತು. ಇದು ಸ್ಟ್ರೆಸ್ ಕಾರ್ಡಿಯೋಮಯೋಪಥಿ ಅಥವ ತಕೋತ್ಸುಬೋ ಲಕ್ಷಣಾವಳಿಯ ಫಲ ಎಂದರು. ಆಕೆಗೆ ಅಗತ್ಯ ಚಿಕಿತ್ಸೆಯನ್ನು ನೀಡಿದರು. ಒಂದು ವಾರದ ನಂತರ ಆಕೆಯು ಮನೆಗೆ ಮರಳಿದರು. ಕಾವೇರಿಯನ್ ಸೈಂಟಿಫಿಕ್ ಜರ್ನಲ್. ಕಾವೇರಿ ಹಾಸ್ಪಿಟಲ್. ಕೇಸ್ ರಿಪೋರ್ಟ್: ತಕೋತ್ಸುಬೋ ಕಾರ್ಡಿಯೋಮಯೋಪಥಿ, ಎ ಕೇಸ್ ರಿಪೋರ್ಟ್ (2024-25) ಸೋದರನ ಅಗಲಿಕೆಯು ತೀವ್ರತೆಯು ಹೃದಯದ ಮೇಲೆ ದುಷ್ಪರಿಣಾಮವನ್ನು ಬೀರಿತ್ತು.

ವೆಲ್ಲೂರಿನ ಅಧ್ಯಯನ: ಕ್ರಿಶ್ಚಿಯನ್ ಮೆಡಿಕಲ್ ಕಾಲೇಜ್, ವೆಲ್ಲೂರಿನಲ್ಲಿ 2013-2023ರವರೆಗೆ ಅಧ್ಯಯನವನ್ನು ಮಾಡಿ ಹಲವು ತಕೋತ್ಸುಬೋ ಪ್ರಕರಣಗಳನ್ನು ಅಧ್ಯಯನ ಮಾಡಿರುವರು. ಸಕಾಲದಲ್ಲಿ ಬಂದ ಪ್ರಕರಣಗಳಿಗೆ ಸೂಕ್ತ ಚಿಕಿತ್ಸೆಯನ್ನು ನೀಡಿ, ಅವರಲ್ಲಿ ಹಲವರು ಮರಳಿ ಮನೆಗೆ ಹೋಗುವಂತಾದದ್ದು ಆ ಆಸ್ಪತ್ರೆಯ ಹೆಗ್ಗಳಿಕೆಯಾಗಿದೆ.

ಆಯುರ್ವೇದ: ಭಗ್ನ ಹೃದಯ ಲಕ್ಷಣಾವಳಿ ಭಾರತೀಯರಿಗೆ ಹೊಸದಲ್ಲ. ನಮ್ಮ ಸುಶ್ರುತ ಹಾಗೂ ಚರಕ ಮಹರ್ಷಿಗಳು ಈ ಬಗ್ಗೆ ತಮ್ಮ ಸಂಹಿತೆಗಳಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಅದರ ಬಗ್ಗೆ ಒಂದು ಪಕ್ಷಿನೋಟವನ್ನು ಹರಿಸೋಣ.

ಚರಕ ಸಂಹಿತ, ಸೂತ್ರಸ್ಥಾನ (30.26):
ಶೋಕೋತಿ ಯೋಗಾತ್ ಪ್ರಾಣಾನ್ ಹೃದಯ ಮೂಲಾನ್ ಹಂತಿ।

ಅತಿಯಾದ ದುಃಖವು, ಹೃದಯದಲ್ಲಿ ಬೇರುಬಿಟ್ಟಿರುವ ಪ್ರಾಣಕ್ಕೆ ಹಾನಿಯನ್ನುಂಟು ಮಾಡುತ್ತದೆ

ನಮಗೆ ಪ್ರೀತಿಪಾತ್ರರಾದವರು ಮರಣಿಸಿದಾಗ ಅಥವ ಅತ್ಯಂತ ದಾರುಣವಾದ ಸುದ್ದಿಯನ್ನು ಕೇಳಿದಾಗ, ಅದನ್ನು ಅವರ ಹೃದಯವು ತಡೆದುಕೊಳ್ಳಲಾಗದೆ, ಸ್ತಂಭಿತವಾಗಿ ಜೀವವನ್ನು ಬಿಡುತ್ತದೆ.

ಚರಕ ಸಂಹಿತ, ಚಿಕಿತ್ಸಾಸ್ಥಾನ (3.4.31):

ಹೃದಯಂ ಮನಸಃ ಸ್ಥಾನಂ। ತತ್ರ ಶೋಕೋ ಭಯಶ್ಚ ದೈನ್ಯಮ್ ಇತ್ಯೇತತ್ ಸರ್ವಮ್ ಹೃದಯಂ ಉಪತಪ್ಯತೆ।

ಹೃದಯವು ಮನಸ್ಸಿನ ಆವಾಸಸ್ಥಾನ. ಶೋಕ, ಭಯ ಮತ್ತು ದೈನ್ಯತೆ ಇವು ಹೃದಯವನ್ನು ಬೆಂಕಿಯಂತೆ ಸುಡುತ್ತವೆ

ಈ ವರ್ಣನೆಯು ಒತ್ತಡ ಹೃದಯಸ್ನಾಯುಬೇನೆಯ (ಸ್ಟ್ರೆಸ್ ಕಾರ್ಡಿಯೋಮಯೋಪಥಿ) ಲಕ್ಷಣಗಳನ್ನು ಹೋಲುತ್ತವೆ. ತೀವ್ರಸ್ವರೂಪದ ಶೋಕ, ಭಯ ಹಾಗೂ ದೀನಾವಸ್ಥೆಯು ಮನುಷ್ಯನನ್ನು ಜರ್ಝರಿತನನ್ನಾಗಿ ಮಾಡಿ, ನಾನು ಇನ್ನು ಏಕೆ ತಾನೆ ಬದುಕಿರಬೇಕು ಎನ್ನುವ ಭಾವವು ಮೂಡಿ, ತಕ್ಷಣವೇ ಅದರ ತೀವ್ರ ಪ್ರಭಾವವು ಹೃದಯದ ಮೇಲೆ ಬೀರಿ ಅದರ ರಚನೆ ಮತ್ತು ಕಾರ್ಯವನ್ನು ನಾಶಪಡಿಸುತ್ತವೆ.

ಸುಶ್ರುತ ಸಂಹಿತೆ, ಸೂತ್ರಸ್ಥಾನ (15.41)
ಶೋಕಭಯಕ್ರೋಧೈಃ ಪ್ರಹೃಷ್ಯೈರಥವಾ ತತ್ರ ಹೃದಯಂ ದ್ರವತಿ।

ಶೋಕ, ಭಯ, ಕ್ರೋಧಗಳ ಕಾರಣ ಅಥವ ಇದ್ದಕ್ಕಿದ್ದ ಹಾಗೆ ಸಂಭ್ರಮಿಸುವುದು, ಹೃದಯವನ್ನು ಕರಗಿಸುತ್ತದೆ

ಅತ್ಯಂತ ತೀವ್ರಸ್ವರೂಪದ ಭಾವಗಳು ಹೃದಯವನ್ನು ಕರಗಿಸುತ್ತವೆ ಎಂದರೆ, ಹೃದಯವನ್ನು ಕ್ರಿಯಾವಿಹೀನವಾಗಿಸುತ್ತವೆ. ಈ ವರ್ಣನೆಯು ತಕೋತ್ಸುಬೋ ಹೃದಯಸ್ನಾಯುಬೇನೆ (ತಕೋತ್ಸುಬೋ ಸಿಂಡ್ರೋಮ್, ಟಿಟಿಎಸ್) ಯನ್ನು ಹೋಲುತ್ತದೆ.

ಸುಶ್ರುತ ಸಂಹಿತೆ, ಉತ್ತರ ತಂತ್ರ (54.6)
ಶೋಕಾರ್ತಾನಾಂ ಪ್ರಾಣಾಃ ಶೀಘ್ರಂ ಹೃದಯಾತ್ ಪ್ರಚ್ಯವಂತೆ।

ತೀವ್ರ ಸ್ವರೂಪದ ಶೋಕಕ್ಕೆ ಗುರಿಯಾದ ಹೃದಯದಿಂದ ಪ್ರಾಣವು ಶೀಘ್ರವಾಗಿ ಹೊರಟುಹೋಗುತ್ತದೆ

ಇದಕ್ಕೆ ಉದಾಹರಣೆಯಾಗಿ ದಶರಥನ ಮರಣವನ್ನು ನೆನಪಿಸಿಕೊಳ್ಳಬಹುದು. ಹಾಗೆಯೇ ಹೆಣ್ಣು ಕ್ರೌಂಚ ಪಕ್ಷಿಯ ಸಾವಿಗೆ ಇದೇ ಶೋಕವೇ ಕಾರಣವಾಯಿತು.

ಸಾರಾಂಶ: ಚರಕ ಸುಶ್ರುತರ ಮೇಲಿನ ವಿವರಣೆಯನ್ನು ಓದಿದ ನಂತರ, ಅವರ ಆಶಯವನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.

1. ತೀವ್ರ ಶೋಕ ಅಥವ ಭಯದಿಂದ ಹೃದಯವು ತನ್ನ ಕೆಲಸವನ್ನು ಹಠಾತ್ತನೆ ಸ್ಥಗಿತಗೊಳಿಸುತ್ತದೆ.
2. ಹೃದಯ ಮತ್ತು ಮನಸ್ಸುಗಳಿಗೆ ನಿಕಟ ಸಂಬಂಧವಿದೆ. ಜೀವವನ್ನು ಹಿಡಿದಿಡುವ ಜೈವಿಕ ಶಕ್ತಿಗಳು (ಲೈಫ್ ಫೋರ್ಸಸ್) ಹೃದಯದಲ್ಲಿವೆ.
3. ಅನಿಯಂತ್ರಿತ ದುಃಖವು ಸಾವಿಗೆ ನೇರವಾಗಿ ಕಾರಣವಾಗುತ್ತದೆ.
4. ಕೆಲವು ಸಲ ಹಠಾತ್ ಸಾವನ್ನು ಅಲ್ಲದಿದ್ದರೂ, ಹೃದಯಕ್ಕೆ ತೀವ್ರ ಸ್ವರೂಪದ ಹಾನಿಯನ್ನುಂಟು ಮಾದಿ, ಕೆಲವು ದಿನಗಳಲ್ಲಿ ಕೊಲ್ಲುತ್ತದೆ.

ತಕೋತ್ಸುಬೋ ಹೃದಯಸ್ನಾಯು ಬೇನೆ: ಇಂತಹ ನಮೂನೆಯ ಮೊದಲ ಹೃದಯ ಬೇನೆಯನ್ನು, ಜಪಾನಿನ ವೈದ್ಯರಾದ ಹಿಕಾರೋ ಸಾಟೋ ಮತ್ತು ಸಂಗಡಿಗರು 1990 ಗಮನಿಸಿದರು. ತಕೋತ್ಸುಬೊ ಎನ್ನುವುದು ಜಪಾನೀ ಶಬ್ದ. ಅಷ್ಟಪಾದಿಗಳನ್ನು (ಅಕ್ಟೋಪಸ್) ಹಿಡಿಯಲು ಬಳಸುವ ಮಡಕೆ/ಪಾತ್ರೆ. ಈ ಮಡಕೆಯ ತಳ ಅಗಲವಾಗಿರುತ್ತದೆ. ಬಾಯಿ ಚಿಕ್ಕದಾಗಿರುತ್ತದೆ. ಅಷ್ಟಪಾದಿಯನ್ನು ಹಿಡಿದು ಈ ಮಡಕೆಯ ಒಳಗೆ ಹಾಕಿದರೆ, ಅದು ಸಣ್ಣ ಬಾಯಿಯಿಂದ ಸುಲಭವಾಗಿ ತಪ್ಪಿಸಿಕೊಂಡು ಬರಲಾರದು. ಭಗ್ನಹೃದಯ ಲಕ್ಷಣಾವಳಿಗೆ ತುತ್ತಾದವರ ಹೃದಯದ ಪ್ರತಿಧ್ವನಿ ಚಿತ್ರವನ್ನು ತೆಗೆದರೆ, ಎಡ ಹೃತ್ಕುಕ್ಷಿಯು ಬಲೂನಿನ ಹಾಗೆ ಉಬ್ಬಿಕೊಂಡು ತಕೋತ್ಸುಬೋ ಪಾತ್ರೆಯನ್ನು ಹೋಲುತ್ತದೆ. ಹಾಗಾಗಿ ಭಗ್ನಹೃದಯ ಲಕ್ಷಣಾವಳಿಯನ್ನು ವೈದ್ಯಕೀಯ ಪರಿಭಾಷೆಯಲ್ಲಿ ತಕೋತ್ಸುಬೊ ಸಿಂಡ್ರೋಮ್ ಎಂದು ಕರೆಯುತ್ತಾರೆ. ಸಹಜವಾಗಿರುವ ಎಡ ಹೃತ್ಕುಕ್ಷಿಯು ಅತೀವ ಶೋಕ, ಭಯ, ಆನಂದವನ್ನು ಭರಿಸಿಕೊಳ್ಳಲಾಗದೆ, ಹೃದಯ ಭಿತ್ತಿಯು ಅತ್ಯಂತ ದುರ್ಬಲವಾಗಿ ಬಲೂನಿನಂತೆ ಊದಿಕೊಳ್ಳುತ್ತದೆ. ಅತೀವ ಶೋಕ, ಭಯ, ಆನಂದದ ಕಾರಣ ಹಠಾತ್ತನೆ ಸಾಯಬಹುದು. ದಶರಥನಂತೆ ಹಾಗೂ ಹೆಣ್ಣು ಕ್ರೌಂಚಪಕ್ಷಿಯಂತೆ. ತಕ್ಷಣ ಸಾವು ಬರದಿದ್ದರೆ, ದುರ್ಬಲಗೊಂಡ ಹೃದಯವು ಕೆಲವು ದಿನಗಳಲ್ಲಿ ಸಾವಿಗೆ ಕಾರಣವಾಗುತ್ತದೆ.

ದೈನಂದಿನ ವೈದ್ಯಕೀಯ ವೃತ್ತಿಯಲ್ಲಿ ಕಾಣಸಿಗುವ ಭಗ್ನ ಹೃದಯಿಗಳಲ್ಲಿ 90%ರಷ್ಟು ಮಹಿಳೆಯರೇ ಆಗಿರುತ್ತಾರೆ. ಅವರಿಗೆ ರಜೋನಿವೃತ್ತಿಯಾಗಿರುತ್ತದೆ. ಅಂದರೆ ಅವರು ಸಾಮಾನ್ಯವಾಗಿ 50-75 ವರ್ಷಗಳ ನಡುವಿನ ವಯಸ್ಸಿನವರಾಗಿರುತ್ತಾರೆ. ಅತೀವ ಶೋಕ, ಭಯ, ಸಂತೋಷಕ್ಕೆ ತುತ್ತಾದಾಗ, ಅವರಿಗೆ ಹೃದಯಾಘಾತದ ಎಲ್ಲ ಲಕ್ಷಣಗಳನ್ನು ತೋರಬಹುದು. ಅಂತಹವರನ್ನು ಆಸ್ಪತ್ರೆಗೆ ತಂದು ಕರೋನರಿ ಆಂಜಿಯೋಗ್ರಾಮ್ ಪರೀಕ್ಷೆಯನ್ನು ಮಾಡಿದರೆ, ಅದರಲ್ಲಿ ಯಾವುದೇ ಹೆಪ್ಪಳಿಕೆಯಾಗಲಿ ಅಥವ ರಕ್ತಗರಣೆಯಾಗಲಿ ಇರುವುದಿಲ್ಲ. ಇಂತಹವರಲ್ಲಿ ಸುಮಾರು 4%-5% ಜನರು ಕ್ರಮೇಣ ಮೃತ್ಯುವಶರಾಗಬಹುದು. ಅಕಸ್ಮಾತ್ ಬದುಕಿದರೆ, ಅವರಲ್ಲಿ 5%-10% ಜನರಿಗೆ ಮತ್ತೆ ಹೃದಯಾಘಾತದ ಹುಸಿ ಲಕ್ಷಣಗಳು ಕಂಡುಬಂದು ಸಾವು ಎರಗಬಹುದು.

ಅತೀವ ಸ್ವರೂಪದ ಶೋಕವು ಸಂಗಾತಿ ಅಥವ ಹತ್ತಿರದ ಬಂಧು ಸತ್ತಾಗ ಆಗುವುದು ಸಹಜ. ದೊಡ್ಡ ಪ್ರಮಾಣದ ಆರ್ಥಿಕ ನಷ್ಟವಾದಾಗ (ವ್ಯಾಪಾರದಲ್ಲಿ ಹಠಾತ್ ನಷ್ಟವಾದಾಗ) ಹಠಾತ್ತನೇ ಮೂಡುವ ಭಯವು ಹೃದಯದ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ. ಹಾವು ಕಚ್ಚಿದಾಗ ಸಾಯುವೆನೆಂಬ ವಿಪರೀತ ಭಯವೇ (ಅದು ವಿಷರಹಿತ ಹಾವೇ ಆಗಿರಲಿ), ಅವನನ್ನು ಕೊಲ್ಲಬಹುದು. ಭೂಕಂಪನಗಳಾದಾಗ, ಅಗ್ನಿ ಅವಘಡಗಳಾದಾಗ, ಪ್ರವಾಹಗಳಾದಾಗಲೂ ಕೆಲವರಿಗೆ ಆದ ನಷ್ಟವನ್ನು ಭರಿಸಲಾಗದ ಶೋಕವಾಗಿ ಮರಣಿಸಬಹುದು. ಕುಟುಂಬ ಕಲಹಗಳು, ಯಾದವೀ ಕಲಹಗಳು ಹಿರಿಯರ ಮನಸ್ಸಿಗೆ ತೀವ್ರಸ್ವರೂಪದ ಆಘಾತವನ್ನು ಉಂಟು ಮಾಡಿ ಅವರ ಸಾವಿಗೆ ಕಾರಣವಾಗಬಹುದು. ಇದನ್ನೇ ನಮ್ಮ ಸಾಹಿತಿಗಳು ಎದೆ ಒಡೆದು ಸಾಯುವುದು ಎಂದು ವರ್ಣಿಸಿರಬೇಕು.

ಹಠಾತ್ತನೇ ಸಾವು ಹೇಗೆ ಸಂಭವಿಸುತ್ತದೆ? ಹೃದಯದ ಮಕುಟಧಮನಿಗಳು ಆರೋಗ್ಯವಾಗಿಯೇ ಇರುತ್ತವೆ. ಆದರೂ ಕ್ಷಣಗಳಲ್ಲಿ ಸಾವು ಹೇಗೆ ಸಂಭವಿಸುತ್ತದೆ? ಇದಕ್ಕೆ ವಿಜ್ಞಾನಿಗಳು ಕೆಲವು ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಕೆಟಕೋಲಮಿನ್ ಉಲ್ಬಣ ಸಿದ್ಧಾಂತ (ಕೆಟಕೋಲಮಿನ್ ಸರ್ಜ್ ಹೈಪಾಥೆಸಿಸ್) ಲೋಮನಾಳಗಳ ಕಾರ್ಯವೈಫಲ್ಯ (ಮೈಕ್ರೊವ್ಯಾಸ್ಕುಲಾರ್ ಡಿಸ್ಫಂಕ್ಷನ್) ಹೃದಯ ಸ್ನಾಯುವಿನ ಸ್ತಂಭನ (ಮಯೋಕಾರ್ಡಿಯಲ್ ಸ್ಟನ್ನಿಂಗ್) ಈಸ್ಟ್ರೋಜನ್ ಹಾರ್ಮೋನಿನ ಕೊರತೆ ಹಠಾತ್ ಸಾವಿಗೆ ಕಾರಣವಾಗುತ್ತದೆ ಎನ್ನುವ ವಾದವನ್ನು ಮಂಡಿಸಿರುವುದುಂಟು. ಈ ಬಗ್ಗೆ ಇನ್ನೂ ಅಧ್ಯಯನಗಳು ನಡೆಯಬೇಕಿದೆ. ಭಾವನೆಗಳನ್ನು ಹಠಾತ್ ಉಲ್ಬಣಿಸುವ ಘಟನೆಗಳಾಗಿ ಹಠಾತ್ ಸಾವು ಸಂಭವಿಸದೆ, ತೀವ್ರ ಸ್ವರೂಪದ ಹೃದಯ ನೋವು, ಉಸಿರಾಡಲು ಕಷ್ಟ, ತಲೆಸುತ್ತು ಇತ್ಯಾದಿಗಳು ಕಂಡು ಬಂದರೆ, ಅವರನ್ನು ತಕ್ಷಣ ಆಸ್ಪತ್ರೆಗೆ ಸೇರಿಸಬೇಕು. ಅವರಿಗೆ ಅಗತ್ಯ ಪರೀಕ್ಷೆಗಳನ್ನು ಮಾಡುವರು. ನಂತರ ಉತ್ತಮ ನೋವು ನಿವಾರಕ ಇಂಜಕ್ಷನ್ ನೀಡಿ, ಆಕ್ಸಿಜನ್ ಕೊಟ್ಟು ಹೃದಯಸ್ನಾಯುಗಳನ್ನು ಬಲಪಡಿಸುವ ಔಷಧಗಳನ್ನು ನೀಡುವರು. ಆಸ್ಪತ್ರೆಯಲ್ಲಿ 4-8 ವಾರಗಳಿದ್ದು, ಸ್ವಲ್ಪ ಚೇತರಿಸಿಕೊಂಡು ಮನೆಗೆ ಬರಬಹುದು.

ಬಿಕ್ಕಟ್ಟುಗಳ ನಿರ್ವಹಣೆಯೇ ಸದ್ಯದ ಸವಾಲು

ಸುಂಕ ಸಮರ

ಶಿವಪ್ರಸಾದ್ ಎ.
vveditoped@gmail.com

ಇತ್ತೀಚೆಗೆ, ಭಾರತದ ಆರ್ಥಿಕತೆಯ ಕುರಿತಾದ ಚರ್ಚೆಯು - ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರಾಷ್ಟ್ರದ ಮೇಲೆ ದಂಡನಾತ್ಮಕ ಸುಂಕಗಳನ್ನು ವಿಧಿಸುತ್ತಿರುವ ನಿರ್ಧಾರದಿಂದ ಉಂಟಾಗುವ ಸವಾಲುಗಳ ಮೇಲೆ ಕೇಂದ್ರೀಕೃತವಾಗಿದೆ. ಭಾರತದ ಆರ್ಥಿಕತೆಗೆ - ಈ ಸುಂಕಗಳಿಂದ ಉಂಟಾಗುವ ಹೊಡೆತಗಳಿಂದ ಅಪಾಯವಿದೆಯಾದ್ದರೂ, ನಮ್ಮ ರಾಷ್ಟ್ರದ ಬಡವರಿಗೆ ನೆರವು ನೀಡುವಂಥ ದೇಶೀಯ ಅಗತ್ಯಗಳನ್ನು ಪೂರೈಸುವತ್ತ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಲು ರಾಜಕಾರಣಿಗಳಿಗೆ ಪ್ರೇರಣೆ ನೀಡಬಹುದು. ಭಾರತದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್, ಅಮೆರಿಕದ ಸುಂಕಗಳಿಂದಾಗಿ ಏರ್ಪಡುವ ಪ್ರತಿಕೂಲ ಪರಿಣಾಮಗಳು ವಾಸ್ತವವಾಗಿ ಕೇವಲ ಒಂದು ಅಥವಾ ಎರಡು ತ್ರೈಮಾಸಿಕಗಳವರೆಗೆ ಮಾತ್ರ ಇರುತ್ತವೆ ಎಂದು ಹೇಳಿದ್ದಾರೆ. ಇದು ರಫ್ತು ವಲಯದ ಮೇಲೆ ಪರಿಣಾಮ ಬೀರುತ್ತದೆ, ಆದರೆ ಭಾರತದ ಒಟ್ಟು ದೇಶೀಯ ಉತ್ಪನ್ನದ ಬೆಳವಣಿಗೆಯ ಮೇಲೆ ಹೆಚ್ಚಿನ ಪ್ರಭಾವ ಆಗಲಾರದು - 2030ರ ವೇಳೆಗೆ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ. ನಾಗೇಶ್ವರನ್ ಅವರ ಅಭಿಪ್ರಾಯದಲ್ಲಿ, ರಾಷ್ಟ್ರೀಯ ಆರ್ಥಿಕತೆಯ ಮುಂದಿರುವ ಹೆಚ್ಚು ಭೀಕರ ಬಿಕ್ಕಟ್ಟುಗಳು ಬೇರೆಡೆಯೇ ಗಮನಾರ್ಹವಾಗಿವೆ.

ಮುಖ್ಯ ಆರ್ಥಿಕ ಸಲಹೆಗಾರರ ಕಳವಳಗಳು ತಪ್ಪಾಗಿಲ್ಲ, ಆರ್ಥಿಕತೆಯಲ್ಲಿ ಮಂದಗತಿಯ ಲಕ್ಷಣಗಳು ಈಗಾಗಲೇ ಕಂಡುಬರುತ್ತಿವೆ. ವಾಸ್ತವವಾಗಿ, ಭಾರತದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ 6.5% ದರದಲ್ಲಿ ಬೆಳೆಯುವ ನಿರೀಕ್ಷೆಯಿದೆ, ಇದು 2023-24ರಲ್ಲಿ ಸಾಧಿಸಿದ 8.2% ಬೆಳವಣಿಗೆಗೆ ಹೋಲಿಸಿದರೆ ತೀವ್ರ ಕುಸಿತವಾಗಿದೆ. ಬಡತನ, ನಿರುದ್ಯೋಗ, ಆರ್ಥಿಕ ಅಸಮಾನತೆ ಮತ್ತು ಸಾಲಗಳ ಬೆಳವಣಿಗೆಯಲ್ಲಿನ ಕುಸಿತವು ಕಳವಳಕಾರಿ ಕ್ಷೇತ್ರಗಳಾಗಿವೆ. ಖಾಸಗಿ ಮತ್ತು ಸಾರ್ವಜನಿಕ ಸಾಲದ ಹೊರೆಗಳು ಹೆಚ್ಚುತ್ತಿವೆ. ದೇಶದ ಜಿಡಿಪಿಗೆ ಗಮನಾರ್ಹ ಕೊಡುಗೆ ನೀಡುವ ಗ್ರಾಹಕ ಖರ್ಚುವೆಚ್ಚಗಳು ನಿಧಾನ ಗತಿಯಲ್ಲಿ ಸಾಗಿದೆ. ವೈಯಕ್ತಿಕ ಗೃಹ ಉಳಿತಾಯಗಳಲ್ಲಿನ ಇಳಿಕೆಯ ಹಾದಿ ಅಡೆತಡೆಯಿಲ್ಲದೆ ಮುಂದುವರೆದಿದೆ. ಇದಲ್ಲದೆ, ಕೃತಕ ಬುದ್ಧಿಮತ್ತೆಯ ಉಪಯೋಗ ವ್ಯಾಪಕವಾಗಿ ಏರಿದೆ, ಆರ್ಥಿಕ ಬೇಡಿಕೆ ಕಡಿಮೆಯಾಗುತ್ತಿರುವುದು ಮತ್ತು ಕೈಗಾರಿಕೆಗೆ ಅಗತ್ಯವಿರುವ ಖನಿಜಗಳ ಕೊರತೆಯು ಒಂದು ಅಭಿಪ್ರಾಯದ ಪ್ರಕಾರ, ಉದ್ಯೋಗ ಸೃಷ್ಟಿ, ಉತ್ಪಾದನೆ ಮತ್ತು ಇತರ ಅಂಶಗಳ ಮೇಲೆ ಹೊರೆಯಾಗುತ್ತಿದೆ.

ದೇಶೀಯ ಆರ್ಥಿಕತೆಗೆ ಇಂಬುಗೊಡಲು ಸರ್ಕಾರದ ತುರ್ತು ಹಸ್ತಕ್ಷೇಪದ ಅಗತ್ಯವಿದೆ ಎಂಬುದು ನಿರ್ವಿವಾದ. ಸಮಸ್ಯೆಗಳ ಅರಿವು ಸರ್ಕಾರಕ್ಕಿದೆ ಮತ್ತು ಅನುಗುಣವಾದ ನೀತಿ ಮಧ್ಯಸ್ಥಿಕೆಗಳನ್ನು ವಿನ್ಯಾಸಗೊಳಿಸಲು ಪ್ರಯತ್ನಿಸುತ್ತಿದೆ ಎಂದು ನಾಗೇಶ್ವರನ್ ಹೇಳಿದ್ದಾರೆ. ವೈಯಕ್ತಿಕ ಮೂಲಭೂತ ಆದಾಯವನ್ನು ಆರ್ಥಿಕ ಸಹಾಯವಾಗಿ ನೀಡುವ ಪರಿಕಲ್ಪನೆಯು ಎಲ್ಲರಿಗೂ ತಿಳಿದಿದೆ. ಆದರೆ ಎಲ್ಲರನ್ನೂ ಒಳಗೊಳ್ಳುವಂತೆ ಅದನ್ನು ಮಾಡುವುದು ಮತ್ತು ಹಣಕಾಸಿನ ಸುಸ್ಥಿರ ಮೂಲಗಳನ್ನು ಕಂಡುಹಿಡಿಯುವುದು ಕಷ್ಟಕರವಾದ ಕೆಲಸ. ಐಷಾರಾಮಿ ವಸ್ತುಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆಯನ್ನು ಈಗಷ್ಟೇ ಹೆಚ್ಚಿಸಲಾಗಿದೆ. ಗಮನಿಸಬೇಕಾದ ವಿಷಯವೆಂದರೆ, ಭಾರತವು ಈಗಾಗಲೇ ನೇರ ನಗದು ವರ್ಗಾವಣೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸರ್ಕಾರಿ ಕಲ್ಯಾಣ ಯೋಜನೆಗಳ ದೀರ್ಘ ಪಟ್ಟಿಯನ್ನು ಹೊಂದಿದೆ, ಆದರೂ ಅವೆಲ್ಲವೂ ಪೂರ್ವನಿರ್ಧರಿತ ಉದ್ದೇಶಕ್ಕಾಗಿ ಸೀಮಿತವಾಗಿವೆ.

ನೇರ ನಗದು ವರ್ಗಾವಣೆಯನ್ನು ಸ್ವೀಕರಿಸುವವರ ಬ್ಯಾಂಕ್ ಖಾತೆಗಳನ್ನು ತೆರೆಯುವ ಗುರಿ ಹಾಗೂ ಹಣ ವಿತರಣೆಯ ಮೂಲಸೌಕರ್ಯಗಳ ಒದಗಿಸುವಿಕೆಯ ಕಾರ್ಯಗಳು ಜಾರಿಯಲ್ಲಿವೆ. ಅಂಥ ಕಾರ್ಯವಿಧಾನದ ಮೂಲಕ ವ್ಯರ್ಥ ಸೋರಿಕೆಗಳು ಮತ್ತು ಅಸಮರ್ಥತೆಯನ್ನು ಕಡಿಮೆ ಮಾಡುವ ಎಲ್ಲ ಪ್ರಯತ್ನಗಳೂ ಜಾರಿಯಲ್ಲಿವೆ. ಆದ್ದರಿಂದ, ಹಣಕಾಸು ಮತ್ತು ಪರಿಷ್ಕೃತ ಗುರಿ ಗುಂಪಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಈ ಕಲ್ಯಾಣ ಯೋಜನೆಗಳನ್ನು ಬಲಪಡಿಸುವ ತುರ್ತು ಅಗತ್ಯವಿದೆ. ಉದಾಹರಣೆಗೆ, ಆದಾಯ ವಿತರಣೆಯ ಕೆಳಭಾಗದ ಅಂಚಿನಲ್ಲಿರುವ 20% ಜನರಿಗೆ ಆದ್ಯತೆ ನೀಡಬಹುದು. ಈ ಉದಾತ್ತ ಉದ್ದೇಶವನ್ನು ಸಾಧಿಸುವಲ್ಲಿ ಸಂಘರ್ಷದ ರಾಜಕೀಯ ಆದ್ಯತೆಗಳು ಅಡ್ಡಿಯಾಗಬಾರದು. ಎಂಎನ್‌ಆರ್‌ಜಿಎ ಕುರಿತು ಕೇಂದ್ರ ಮತ್ತು ಬಂಗಾಳ ಸರ್ಕಾರದ ನಡುವಿನ ಭಿನ್ನಾಭಿಪ್ರಾಯಗಳು ಇದಕ್ಕೆ ಒಂದು ಉದಾಹರಣೆ. ಆಡಳಿತ, ಕಲ್ಯಾಣ ಮತ್ತು ರಾಷ್ಟ್ರೀಯ ಆರ್ಥಿಕತೆಯು ಮಾನವತಾವಾದದ ತತ್ವಗಳ ಆಧಾರದ ಮೇಲೆ ಅವಲಂಬಿತವಾಗಿವೆ. ಆರ್ಥಿಕ ಬೆಳವಣಿಗೆಯ ಅನ್ವೇಷಣೆಯಲ್ಲಿ ಈ ಉದ್ದೇಶವನ್ನು ಕೈಬಿಡಬಾರದು.

ಭಾರತವು ತೀವ್ರ ಮತ್ತು ಹದಗೆಡುತ್ತಿರುವ ಆರ್ಥಿಕ ಅಸಮಾನತೆಯನ್ನು ಎದುರಿಸುತ್ತಿದೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ. ಒಮ್ಮೊಮ್ಮೆ, ಸರ್ಕಾರವು ಈ ವಿಷಯವನ್ನು ಸುಲಭವಾಗಿ ತಳ್ಳಿಹಾಕುತ್ತದೆ ಆದರೆ ಸ್ವತಂತ್ರ ಆರ್ಥಿಕ ಸಂಶೋಧನೆಗಳು ಪದೇ ಪದೇ ಇದರೆಡೆಗೆ ಗಮನಸೆಳೆದಿವೆ. ಉದಾಹರಣೆಗೆ, ಕಳೆದ ವರ್ಷ ಡಿಸೆಂಬರ್‌ನಲ್ಲಿ ಥಾಮಸ್ ಪಿಕೆಟ್ಟಿ ಸೇರಿದಂತೆ ಪ್ರಮುಖ ಅರ್ಥಶಾಸ್ತ್ರಜ್ಞರು ಬರೆದ ಒಂದು ಪ್ರಬಂಧ - ಆಕ್ಸ್‌ಫಾಮ್ ಈ ಹಿಂದೆ ಮಾಡಿದ ಸಂಶೋಧನೆಯನ್ನು ಪುಷ್ಟೀಕರಿಸುತ್ತದೆ. 2022-23ರಲ್ಲಿ, ಭಾರತದ ಜನಸಂಖ್ಯೆಯ ಅತ್ಯಂತ ಶ್ರೀಮಂತ 1% ಜನರು ರಾಷ್ಟ್ರೀಯ ಆದಾಯದ 22.6% ಅನ್ನು ನಿಯಂತ್ರಿಸಿದರು ಮತ್ತು ದೇಶದ ಒಟ್ಟು ಸಂಪತ್ತಿನ 40.1% ಅನ್ನು ಹೊಂದಿದ್ದರು, ಆದರೆ ತೀರ ಕೆಳಗಿನ 50% ಜನಸಂಖ್ಯೆಯು ರಾಷ್ಟ್ರೀಯ ಆದಾಯದ 15% ಅನ್ನು ಮಾತ್ರ ಪಡೆದು ದೇಶದ ಸಂಪತ್ತಿನ 6.4% ಅನ್ನು ಮಾತ್ರ ಹೊಂದಿತ್ತು ಎಂದು ಸ್ಪಷ್ಟವಾಗಿದೆ. ಅಂಥ ಬಲವಾದ ಅಂಕಿ ಅಂಶಗಳ ಪುರಾವೆಗಳ ಹಿನ್ನೆಲೆಯಲ್ಲಿ, ಭಾರತವು ಸಮಾನತೆಯೆಡೆಗೆ ಸಾಗುತ್ತಿದೆ ಎಂಬ ಸರ್ಕಾರದ ಹೇಳಿಕೆಯು ವಿರುದ್ಧ ದಿಕ್ಕಿಗೆ ಹೋಗುತ್ತದೆ.

ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಇನ್ನೂ ಕೊನೆಯ ಮೂರನೇ ಸ್ಥಾನಗಳಲ್ಲೇ ಉಳಿದಿದೆ. ಇದರ ಮೌಲ್ಯ 0.685, ಇದು ಬಾಂಗ್ಲಾದೇಶದ ಸೂಚ್ಯಂಕಕ್ಕೆ ಸಮವಾಗಿದೆ ಮತ್ತು ಇತರ ನೆರೆಯ ರಾಷ್ಟ್ರಗಳಾದ ಲಂಕಾ ಮತ್ತು ಭೂತಾನ್‌ಗಿಂತ ಕಡಿಮೆ ಮಟ್ಟದಲ್ಲಿದೆ. ಹೆಚ್ಚುತ್ತಿರುವ ಅಸಮಾನತೆಯು ಪ್ರಗತಿಗೆ ಮತ್ತೊಂದು ಅಡಚಣೆಯಾಗಿ ಪರಿಣಮಿಸಿದೆ. ಆದಾಯ ಮತ್ತು ಲಿಂಗ ಅಸಮಾನತೆಯು ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕದ ಶ್ರೇಯಾಂಕವನ್ನು 30.7%ರಷ್ಟು ಕಡಿಮೆ ಮಾಡಿದೆಯೆಂದು ಈ ವರದಿ ತೋರಿಸುತ್ತದೆ. ನಿಜವಾದ ಅರ್ಥದಲ್ಲಿ, ಈ ಬೃಹತ್ ನಷ್ಟದಿಂದ ಭಾರತವನ್ನು ಪ್ರಗತಿಯ ಕಡೆಗೆ ಕೊಂಡೊಯ್ಯುವ ಸರ್ಕಾರದ ಲಕ್ಷ್ಯವು ಹಳಿತಪ್ಪಬಹುದು. ಸಮಾನ ಸಮಾಜಕ್ಕಾಗಿ ಶ್ರಮಿಸುವ ಕ್ರಮಗಳು, ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದಲ್ಲದೆ, ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣದಲ್ಲಿ ಮತ್ತಷ್ಟು ಸುಧಾರಣೆಗಳೊಂದಿಗೆ ಅವರು ಕಾರ್ಯಪಡೆಯಲ್ಲಿ ಉಳಿಯುವುದನ್ನು ಖಚಿತಪಡಿಸಿಕೊಳ್ಳುವ ಲಿಂಗ- ಒಳಗೊಂಡ ನೀತಿಗಳಿಂದ ಪೂರಕವಾಗಿವೆ.

ಭಾರತ ಇತ್ತೀಚೆಗೆ ಅಮೆರಿಕ, ಚೀನಾ ಮತ್ತು ಜರ್ಮನಿಯ ನಂತರ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗುವ ಮೂಲಕ ಒಂದು ಹೊಸ ಮೈಲಿಗಲ್ಲನ್ನು ಆಚರಿಸಿತು. ಇದು ಸಾಧಾರಣ ಸಾಧನೆಯಲ್ಲ, ಆದರೂ ಜೀವನ ಗುಣಮಟ್ಟ ಮತ್ತು ವೈಯಕ್ತಿಕ ಯೋಗಕ್ಷೇಮದ ವಿಷಯದಲ್ಲಿ ಇತರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಂತೆಯೇ ಮುನ್ನಡೆಯಲು ಭಾರತವು ಮೈಲಿಗಳ ದಾರಿಯನ್ನು ಇನ್ನೂ ಕ್ರಮಿಸಬೇಕಾಗಿದೆ. ಭಾರತವು ಯಶಸ್ವಿಯಾಗಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಮತ್ತು ಆಡಳಿತ ಪಕ್ಷದ ರಾಜಕೀಯ ಪ್ರಭಾವ ಪ್ರಬಲವಾಗಿದೆ. ಜಗತ್ತನ್ನಾಳುವ ಬಲಿಷ್ಠರ ಅಂತಾರಾಷ್ಟ್ರೀಯ ವಲಯದಲ್ಲಿ ನರೇಂದ್ರ ಮೋದಿಯವರಿಗೆ ವಿಶೇಷ ಗೌರವವಿದೆ. ನೆಹರೂ-ಗಾಂಧಿ ಯುಗದ ಉದಾರವಾದಿ ಕ್ರಮವನ್ನು ಬದಲಿಸಿ, ಹಿಂದುತ್ವವನ್ನು ಆಧರಿಸಿದ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಬಲಪಡಿಸುವ ಅವರ ವಿಶಿಷ್ಟ ಕಾರ್ಯಸೂಚಿಯು ನಮ್ಮ ರಾಷ್ಟ್ರದಲ್ಲಿ ಬಲಗೊಳ್ಳುತ್ತಿದೆ. ಹೀಗಿದ್ದರೂ, ಜಾಗತಿಕ ಬದಲಾವಣೆಯ ಗಾಳಿ ಬೀಸುತ್ತಿದೆಯಾದ್ದರಿಂದ ಭಾರತವು ಆರ್ಥಿಕ ಮತ್ತು ರಾಜತಾಂತ್ರಿಕ ಸವಾಲುಗಳನ್ನೊಳಗೊಂಡಂತೆ ಹೊಸ ಉದಯೋನ್ಮುಖ ಸವಾಲುಗಳನ್ನು ಮರು ವಿಮರ್ಶಿಸಬೇಕು.

ಅಂತಾರಾಷ್ಟ್ರೀಯ ವ್ಯಾಪಾರದ ಮಾದರಿಯು ಮುಂದಿನ ದಿನಗಳಲ್ಲಿ ಗುರುತಿಸಲಾಗದಷ್ಟು ಬದಲಾಗುವ ಸಾಧ್ಯತೆಯಿದೆ. ಆ ಪ್ರಕ್ರಿಯೆಯಲ್ಲಿ, ಭಾರತವು ಹೊಸ ಮತ್ತು ಇಲ್ಲಿಯ ತನಕ ಪರಿಚಿತರಲ್ಲದ ವ್ಯಾಪಾರ ಪಾಲುದಾರರನ್ನು ಹುಡುಕಿಕೊಳ್ಳಬೇಕಾಗುತ್ತದೆ. ಅನಂತರದ ಉದಾರವಾದಿ ಜಗತ್ತು ಮಿಲಿಟರಿ ಶಕ್ತಿ ಮತ್ತು ಕಾರ್ಯತಂತ್ರದ ಮೈತ್ರಿಗಳ ಹೊಸ ಕೇಂದ್ರಗಳನ್ನು ಸಹ ರಚಿಸುತ್ತದೆ. ಭಾರತ ಇದಕ್ಕೆಲ್ಲ ಹೊಂದಿಕೊಳ್ಳುತ್ತದೆಯೇ? ಹೆಚ್ಚು ವಿಶ್ವಾಸಾರ್ಹವಲ್ಲದ ಅಮೆರಿಕದ ರೆಕ್ಕೆಗಳ ಅಡಿಯಲ್ಲಿ ಉಳಿಯುವುದು ಯೋಗ್ಯವೇ?

ಆಪರೇಷನ್ ಸಿಂಧೂರ್ ನಂತರ, ಭಾರತವು ಸ್ನೇಹಿತರು ಮತ್ತು ಶತ್ರುಗಳ ಹೊಸ ಪ್ರಪಂಚದ ವ್ಯತ್ಯಾಸವನ್ನು ನೋಡಿದೆ. ಅತಿ ವೇಗದ ತಾಂತ್ರಿಕ ಬದಲಾವಣೆಯ ಜಗತ್ತಿಗೆ, ನಾವು ಎಷ್ಟು ಚೆನ್ನಾಗಿ ಹೊಂದಿಕೊಳ್ಳುತ್ತೇವೆ? ಅಂತಿಮವಾಗಿ, ಸುಸ್ಥಿರ ಅಭಿವೃದ್ಧಿ ಮತ್ತು ಹವಾಮಾನ ಬದಲಾವಣೆಯ ಪ್ರಶ್ನೆಗೆ, ಹೆಚ್ಚುತ್ತಿರುವ ಅಪಾಯಗಳನ್ನು ನಾವು ಹೇಗೆ ನಿರ್ವಹಿಸುತ್ತೇವೆ ಮತ್ತು ಹೇಗೆ ವಿಪತ್ತುಗಳು ಸಂಭವಿಸುವುದನ್ನು ತಡೆಯುತ್ತೇವೆ ಎಂಬುದಕ್ಕೆ ಸರಿಯಾದ ಉತ್ತರ ಕೊಟ್ಟಾಗಲಷ್ಟೇ ನಮ್ಮ ದೇಶ ಸರಿಯಾದ ದಾರಿಯಲ್ಲಿ ನಡೆಯುತ್ತದೆಯೇ ಎಂದು ನಿರ್ಧಾರವಾಗುತ್ತದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತಮಿಳುನಾಡು ರಾಜಕೀಯ ಚದುರಂಗದಲ್ಲೂ ಮೇಲುಗೈ

ತಮಿಳುನಾಡು-ಚದುರಂಗದ ಬೀಡು ಲೇಖನ ಚೆನ್ನಾಗಿದೆ. ಚದುರಂಗವನ್ನು ಆಟವೆಂದು ಪರಿಗಣಿಸಿದಾಗ ತಮಿಳುನಾಡು ಎಲ್ಲಾ ರಾಜ್ಯಗಳಿಗಿಂತ ಮುಂದಿದೆ ಎಂಬುದರಲ್ಲಿ ಎರಡು ಮಾತಿಲ್ಲ, ಆಟಗಾರರಿಗೆ ಎಲ್ಲಾ ರೀತಿಯ ಪ್ರೋತ್ಸಾಹ ಕೊಡುತ್ತಿರುವ ಅಲ್ಲಿನ ಸರಕಾರದ ಕಾರ್ಯ ಶ್ಲಾಘನೀಯ. ಅದೇ ರೀತಿ ರಾಜಕೀಯ ಚದುರಂಗದಾಟದಲ್ಲೂ ತಮಿಳುನಾಡು ಎಲ್ಲಾ ರಾಜ್ಯಕ್ಕಿಂತ ಮುಂದಿದೆ ಅಲ್ಲವೇ? ಅದರಲ್ಲೂ ನಮ್ಮ ರಾಜ್ಯದ ವಿರುದ್ಧ ಮೇಕೆದಾಟು ಯೋಜನೆಯಾಗಲಿ, ಕಾವೇರಿ ನದಿ ನೀರಿನ ಬಗ್ಗೆ ಆಗಲಿ, ಇನ್ನಿತರೇ ವಿಷಯಗಳಲ್ಲೂ ಅವರು ಚೆಕ್ ಮೇಟ್ ಮಾಡಿ ಆಟ ತಮ್ಮ ಪರವಾಗುವಂತೆ ಮಾಡುವುದರಲ್ಲಿ ನಿಸ್ಸೀಮರು. ಅಲ್ಲಾದರೂ ನಾವು ಚದುರಂಗದಾಟ ಚೆನ್ನಾಗಿ ಕಲಿತು ಆಡಬೇಕಿದೆ. ನಮ್ಮ ರಾಜ್ಯದ ರಾಜಕೀಯ ನಾಯಕರು ಆ ಚದುರಂಗದ ಆಟವನ್ನು ಚೆನ್ನಾಗಿ ಕಲಿತು ತಮಿಳುನಾಡಿಗೆ ಚೆಕ್‌ಮೇಟ್ ಮಾಡಿ ಆಟ ಗೆಲ್ಲಲಿ ಎಂದು ಹಾರೈಸುತ್ತೇನೆ.

ಮುಕುಂದ, ದಾವಣಗೆರೆ

ಸತ್ಯಮಂಥನ ನಡೆಯಲಿ

ಅಖಂಡ ವೀರಶೈವ (ಲಿಂಗಾಯತ) ಧರ್ಮ ಕುರಿತು ಅಷ್ಟಿಷ್ಟು ತಿಳಿದುಕೊಂಡಿರುವ, ಓದಿಕೊಂಡಿರುವ ನಾನು, ರವಿ ಹಂಜ್ ಅವರ ಬಸವಮಂಟಪ ಬರಹಗಳನ್ನು ಆದ್ಯಂತ ಓದಿದ್ದೇನೆ. ಅಭಿಪ್ರಾಯಗಳನ್ನು ಸಾಧಾರವಾಗಿ ಮಂಡಿಸುತ್ತಿರುವ ಅವರು ಬಹು ನಿಷ್ಠುರವಾಗಿ ಬರೆಯುತ್ತಿದ್ದಾರೆ. ಆಗಸ್ಟ್ 18-19ರ ಅವರ ಬರಹಗಳಂತೂ ನಿಷ್ಠುರತೆಯ ಪರಾಕಾಷ್ಠೆ ತಲುಪಿವೆ. ಇಷ್ಟಿದ್ದೂ, ಎಲ್ಲರೂ ಪ್ರತಿಕ್ರಿಯೆ ನೀಡಬೇಕಾದುದು ಕರ್ತವ್ಯ. ಆದರೆ ಅವರ ಲೇಖನ ಸರಣಿ ಕುರಿತು ಸತ್ಯನಿಷ್ಠ ಹಾಗೂ ಆರೋಗ್ಯಪೂರ್ಣ ಚರ್ಚೆ-ಸಂವಾದ ನಡೆಯುತ್ತಿಲ್ಲ ಏಕೆ? ಬರಹಗಾರರು, ಚಿಂತಕರು, ಸಂಸ್ಥೆಗಳ ಪದಾಧಿಕಾರಿಗಳು, ಮಠಾಧೀಶರು ಇವರ್‍ಯಾರಲ್ಲೂ ಸೂಕ್ತ ಚರ್ಚೆ-ಸಂವಾದ ನಡೆಸುವ ಜ್ಞಾನಾಧಾರಗಳೇ ಇಲ್ಲವೇ? ಅಥವಾ ಬಸವಮಂಟಪದ ಬಗ್ಗೆ ಉಪೇಕ್ಷೆಯೇ? ಅಥವಾ ಮೌನವು ಸಮ್ಮತಿ ಲಕ್ಷಣವೇ ಉಲ್ಲೇಖಿಗೊಂಡವರೆಲ್ಲ ಅಲ್ಲೊಂದು-ಇಲ್ಲೊಂದು, ವೇದಿಕೆಗಳಲ್ಲಿ ಒಂದೆರಡು, ಬಹುತೇಕ ಆಧಾರರಹಿತ ಟೀಕೆ-ಟಿಪ್ಪಣಿಗಳನ್ನು ಮಾಡಿದ್ದು ಸಾಕೇ? ಸತ್ಯ ಏನೆಂದು ಅರಿಯಲು ಸಂಬಂಧಿತ ಧರ್ಮೀಯರಿಗೆ ಮಾತ್ರವಲ್ಲ, ಸಕಲರಿಗೂ ಕುತೂಹಲ ಇರುತ್ತದೆ. ಸತ್ಯವನ್ನು ತಿಳಿಯುವ ಹಕ್ಕು ಕೂಡ ಎಲ್ಲರಿಗೂ ಇದೆ. ಆದ್ದರಿಂದ ನಾನು 'ಬಸವ ಮಂಟಪ' ಲೇಖನಸರಣಿ ಕುರಿತು ಅರ್ಥಪೂರ್ಣ ಚರ್ಚೆ-ಸಂವಾದ ನಿರೀಕ್ಷಿಸುತ್ತೇನೆ.

- ಎಚ್. ಆನಂದರಾಮ ಶಾಸ್ತ್ರಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಮಹಾನಂದ ಪಾಟೀಲ,** (ಇಮೇಲ್ ಮೂಲಕ)
ಭಟ್ರೇ, ಒಳ್ಳೆಯವರಿಗೆ ಇದು ಕಾಲವಲ್ಲ ಎಂಬ ಮಾತು ನಿಜವಾಗುತ್ತಿದೆಯಾ?
- **ಒಳ್ಳೆಯವರು ಯಾರು ಎಂಬುದನ್ನು ಮೊದಲು ಹೇಳಿದರೆ ಒಳ್ಳೆಯದಿತ್ತು!**

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ಕನ್ನಡ ಸಿನಿಮಾದಲ್ಲಿ ಹಾಡಿನ ದೃಶ್ಯಗಳಲ್ಲಿ ದ್ರಾಕ್ಷಿಯನ್ನು ಹೊಕ್ಕಳ ಮೇಲೆ ಸುರಿಯುತ್ತಿದ್ರಲ್ಲ, ಏಕೆ?
- **ಎಲ್ಲೋ ಸುರಿಯುವ ಬದಲು ಟೊಮೆಟೋ ಹಣ್ಣನ್ನು ಹೊಕ್ಕಳ ಮೇಲೆ ಸುರಿಯಬಹುದಿತ್ತು ಅಲ್ವ?!**

- **ವೇಣುಗೋಪಾಲ ಕಂಚಿತೋಟ, (ಇಮೇಲ್ ಮೂಲಕ)**
ಭಟ್ರೇ, ಮನುಷ್ಯ ಮತ್ತೊಬ್ಬನಿಗೆ 'ಏ ಮಂಗ' ಎಂದು ಬೈಯುವಂತೆ, ಮಂಗಗಳು ಇನ್ನೊಂದು ಮಂಗಕ್ಕೆ 'ಏ ಮನುಷ್ಯ' ಅಂತ ಬೈಯುತ್ತವಾ?
- **ಅದರ ಬದಲು ಹೆಸರು ತಗೊಂಡೇ ಬೈತಾವೆ!**

- **ಮಂಜುನಾಥ ಹತ್ತರವಾಟ, ಕೊಳವಿ**
ಭಟ್ರೇ, ಕೆಲವರು ಸಣ್ಣ ಕೆಲಸಕ್ಕೂ ಹಣ ಕೇಳ್ತಾರಲ್ಲಾ?
- **ಸುಮ್ಮನೆ ಹೇಳಿದಂತೆ ಮಾಡಲು ಅವರೇನು ವಿಧಾನ ಸೌಧ ಲಿಫ್ಟ್ ಆಪರೇಟರ್ ಅಂತ ಭಾವಿಸಿದ್ದೀಯಾ?!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ನೀರಿನಲ್ಲಿ ಮುಳುಗುವುದಕ್ಕೂ, ನೆನಪಿನಲ್ಲಿ ಮುಳುಗುವುದಕ್ಕೂ ಏನು ವ್ಯತ್ಯಾಸ?
- **ಮೊದಲನೆಯದರಲ್ಲಿ ಚಳಿಯಾಗುತ್ತದೆ, ಎರಡನೆಯದರಲ್ಲಿ ಬಿಸಿಯಾಗುತ್ತದೆ!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಸಿಗಂದೂರು ಸೇತುವೆ ಉದ್ಘಾಟನೆಯನ್ನು ಒಂದು ವಾರ ಮುಂದೂಡಬಹುದಿತ್ತು ಅಂತ ಸಚಿವರೊಬ್ಬರು ಹೇಳಿದ್ದಾರಲ್ಲ?
- **ಆರ್‌ಸಿಬಿ ವಿಜಯೋತ್ಸವವನ್ನೂ ಒಂದು ವಾರ ಮುಂದೂಡಬಹುದಿತ್ತು ಅಲ್ವಾ?!**

- **ಪೂರ್ಣಯ್ಯ, (ಇಮೇಲ್ ಮೂಲಕ)**
ಭಟ್ರೇ, ಯಾವ ಪುಣ್ಯಕ್ಷೇತ್ರದ ಮೇಲೆ ಸಿನಿಮಾ ಮಾಡಿದರೆ ಓಡುತ್ತದೆ?
- **'ಧರ್ಮಸ್ಥಳ ಮಹಾತ್ಮೆ' ಅಂತ ಹೆಸರಿಟ್ಟು ಒಂದು ಸಿನಿಮಾ ಮಾಡಿ ನೋಡಿ!**

- **ರಾಜು, ಕೆಂಭಾವಿ**
ಭಟ್ರೇ, ಬಿ.ಸರೋಜಾದೇವಿಯವರು ಡಿಕೆಶಿಗೆ ಸಿನಿಮಾದಲ್ಲಿ ನಟಿಸಿ ಅಂತ ಹೇಳಿದ್ರಂತೆ?
- **ಪ್ರೇಕ್ಷಕರ ಭಾವನೆಗಳಿಗೆ ಗೌರವ ಕೊಡಬೇಕೆಂದು ಡಿಕೆಶಿ ಆ ಆಹ್ವಾನವನ್ನು ಒಪ್ಪಿಕೊಳ್ಳಲಿಲ್ಲವಂತೆ!**

ಬುರುಡೆ ಬಿಟ್ಟವರ ನಂಬಿ ಭಕ್ತರ ನಂಬಿಕೆ ಮೇಲೆ ಸವಾರಿ

ಲೋಕಮತ
ಎಚ್. ಆರ್. ಶ್ರೀಪಾದ ಭಾಗಿ
vveditoped@gmail.com
kaayarga@gmail.com

ಧರ್ಮಸ್ಥಳ, ಇದು ಕೇವಲ ಒಂದು ಊರಿನ ಹೆಸರಲ್ಲ. ಕೋಟ್ಯಂತರ ಭಕ್ತರ ಪಾಲಿಗಿದು ದೇವರ ನಾಡು, ನಂಬಿಕೆಯ ಬೀಡು. ಒಂದು ಕಾಲದಲ್ಲಿ ಇದೊಂದು ಸಣ್ಣ ಹಳ್ಳಿಯಾಗಿತ್ತು ಅಷ್ಟೇ. ಆದರಿಂದು ಪ್ರತಿನಿತ್ಯ ಲಕ್ಷಾಂತರ ಭಕ್ತರು ಭೇಟಿ ನೀಡುವ ಶ್ರೀ ಮಂಜುನಾಥೇಶ್ವರನ ಪವಿತ್ರ ಸನ್ನಿಧಾನ. ಚಿಕ್ಕ ಹಳ್ಳಿಯೊಂದನ್ನು ಅಭಿವೃದ್ಧಿ ಪಡಿಸಿ, ವಿಶ್ವಮಾನ್ಯವಾಗಿಸಿರುವ ಪರಿ ನಿಜಕ್ಕೂ ಸವಾಲಿನ ಕೆಲಸವಾಗಿತ್ತು. ಆದರೆ ದೈವ ಶಕ್ತಿ ಮತ್ತು ಸಂಕಲ್ಪ ಈ ಗ್ರಾಮವನ್ನು ಶ್ರೀ ಮಂಜುನಾಥನ ಸನ್ನಿಧಿಯಾಗಿ ಅಭಿವೃದ್ಧಿಪಡಿಸಿ ಭಕ್ತಿ ಕೇಂದ್ರವಾಗಿ ಬೆಳೆಯುವಂತೆ ಮಾಡಿತು. ಸುಮಾರು 8 ದಶಕಗಳ ಹಿಂದೆ ಜೈನ ದಂಪತಿಗಳಾದ ಬಿರ್ಮಣ್ಣ ಪೆರ್ಗಡೆ ಮತ್ತು ಅಮ್ಮು ಬಳ್ಳಾಳ್ತಿಯವರ ಭಕ್ತಿ ,ಮತ್ತು ನಿಷ್ಕಲ್ಮಶ ಪ್ರಯತ್ನದಿಂದ ಕರ್ನಾಟಕದ ಪುಟ್ಟ ಊರೊಂದು ಬೆಳೆಯುತ್ತಾ, ಧರ್ಮರಕ್ಷಣೆ ಮತ್ತು ಧರ್ಮಪ್ರಸಾರದ ಕೇಂದ್ರವಾಗಿ, ಭಕ್ತರ ಆರಾಧ್ಯ ದೇವರ ನೆಲೆಯಾಗಿ ಜಗದಗಲ ನೆನೆಯುವಂತಹ ಪುಣ್ಯಕ್ಷೇತ್ರವಾಗಿ ಬೆಳೆದು ನಿಂತಿದೆ. ಇಂದು ಪ್ರತಿದಿನ ಕೋಟ್ಯಂತರ ಭಕ್ತರು ಧರ್ಮಸ್ಥಳಕ್ಕೆ ಭೇಟಿನೀಡಿ ತಮ್ಮ ಆರಾಧ್ಯ ದೈವ ಶ್ರೀ ಮಂಜುನಾಥನ ದರ್ಶನ ಮಾಡಿ ಕೃತಾರ್ಥರಾಗುತ್ತಿದ್ದಾರೆ. ಇಲ್ಲಿ ಪ್ರತಿದಿನ ಕೋಟ್ಯಂತರ ರೂಪಾಯಿಗಳು ಸಂಗ್ರಹವಾಗುತ್ತದೆ. ಭಕ್ತರಿಗೂ ಸೂಕ್ತವಾದ ವಸತಿ ಮತ್ತು ಉಚಿತ ಭೋಜನ ದೊರೆಯುತ್ತಿದೆ. ಇಲ್ಲಿಗೆ ಆಗಮಿಸುವ ಯಾರೊಬ್ಬರೂ ಕೂಡಾ ದೇವರ ದರ್ಶನ ಅಥವಾ ಭೋಜನದಿಂದ ವಂಚಿತರಾಗುವ ಪ್ರಶ್ನೆಯೇ ಇಲ್ಲ.

ಇಂತಹ ಪುಣ್ಯಕ್ಷೇತ್ರದ ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಅನೂಚಾನವಾಗಿ ಬಂದ ಶ್ರೀ ವೀರೇಂದ್ರ ಹೆಗ್ಗಡೆಯವರ ಪೂರ್ವಜರು ಮತ್ತು ಪ್ರಸ್ತುತ ಅವರ ಕುಟುಂಬದವರ ಶ್ರದ್ಧಾ-ಭಕ್ತಿಪೂರ್ವಕ, ಸಮರ್ಪಣೆಯ ಮನಸ್ಸಿದೆ, ಪ್ರಯತ್ನವಿದೆ. ಕೆಲವು ಜನರ ಕಣ್ಣಿಗೆ ಕಾಣುವುದು ಇಲ್ಲಿಗೆ ಬರುವ ಭಕ್ತರ ಸಂಖ್ಯೆ ಮತ್ತು ದೇವಸ್ಥಾನಕ್ಕಿರುವ ಆದಾಯ. ಇನ್ನು ಕೆಲವರ ಕಣ್ಣಿಗೆ ರಾಚುವುದು ಈ ಪುಟ್ಟ ಊರು ಹಿಂದೂ ಧರ್ಮದ ಉತ್ಥಾನಕ್ಕೆ ಕಾರಣವಾಗುತ್ತಿರುವ ರೀತಿಯ ಬಗ್ಗೆ. ಇವರಲ್ಲಿ ಒಂದು ವರ್ಗದ ಗುರಿ, ದೇವಸ್ಥಾನದ ಆಡಳಿತವನ್ನು ಹೆಗ್ಗಡೆಯವರ ಕುಟುಂಬದಿಂದ ಹೇಗೆ ಕಿತ್ತುಕೊಳ್ಳುವುದು ಎಂಬುದಾದಾದರೆ, ಮತ್ತೊಂದು ವರ್ಗದ ಗುರಿ, ಯಾವುದಾದರೂ ಮಾರ್ಗದಿಂದ ಈ ಧರ್ಮಕ್ಷೇತ್ರದ ಬಗ್ಗೆ ಹಿಂದೂಗಳಿಗೆ ದ್ವೇಷ-ತಿರಸ್ಕಾರ ಭಾವನೆಗಳು ಮೂಡುವಂತೆ ಮಾಡಿ ಹಿಂದೂ ಧರ್ಮಕ್ಕೆ ಪೆಟ್ಟುಕೊಡುವುದಾಗಿದೆ. ಇಂತಹ ದುಷ್ಕೃತ್ಯಗಳಿಗೆ ಹಿಂದೂಯೇತರರು ಸತತವಾಗಿ ಮಸಲತ್ತು ನಡೆಸುತ್ತಿದ್ದಾರೆ, ಹಿಂದೂ ಹೆಸರನ್ನಿಟ್ಟುಕೊಂಡಿರುವ ಕೆಲವು ಧರ್ಮದ್ವೇಷಿಗಳು ತಮ್ಮ ಮೈ-ಕೈ-ಬಾಯಿ ಜೋಡಿಸುತ್ತಿದ್ದಾರೆ. ಇವರಾರಿಗೂ ದೇವರ ಬಗ್ಗೆ ಅಥವಾ ಧರ್ಮದ ಬಗ್ಗೆ ಕಿಂಚಿತ್ತೂ ನಂಬಿಕೆ ಅಥವಾ ಗೌರವವಿಲ್ಲ. ಕಳೆದ ಕೆಲವು ವರ್ಷಗಳಿಂದ ಧರ್ಮಸ್ಥಳದಂತೆ ಭಾರತದ ಇನ್ನೂ ಕೆಲವು ಶ್ರದ್ಧಾಕೇಂದ್ರಗಳ ಬಗ್ಗೆ ಅಪಪ್ರಚಾರ ಮಾಡಿ, ಜನರ ನಂಬಿಕೆ ಮತ್ತು ಭಾವನೆಗಳಿಗೆ ಪೆಟ್ಟು ಕೊಡುವ ಕೆಲಸ ನಿರಂತರವಾಗಿ ನಡೆಯುತ್ತಿದೆ.

ಈಗ ಕೆಲವು ತಿಂಗಳಿನಿಂದ ಧರ್ಮಸ್ಥಳದ ಹೆಸರಿಗೆ ಮಸಿಬಳಿಯುವ ಕೆಲಸವನ್ನು ಕೆಲವು ರಾಷ್ಟ್ರದ್ರೋಹಿಗಳು ಮತ್ತು ಧರ್ಮದ್ರೋಹಿಗಳು ಮತ್ತೆ ಪ್ರಾರಂಭಿಸಿದ್ದಾರೆ. ಇದರ ಅಂಗವಾಗಿ ಕೆಲವು ದುಷ್ಟಶಕ್ತಿಗಳು ಅನಾಮಿಕರಿಂದ ಆರ್ಥಿಕ ನೆರವನ್ನು ಪಡೆದು, ಅನಾಮಿಕನೊಬ್ಬನನ್ನು ಸೃಷ್ಟಿಸಿ, ನಿಜವಾಗಲೂ ನಡೆದಿರುವ ಸೌಜನ್ಯ ಎಂಬ ಮುಗ್ಧ ಹುಡುಗಿಯ ಹತ್ಯೆಯ ಕಾರಣವನ್ನಿಟ್ಟುಕೊಂಡು ಹೆಗ್ಗಡೆಯವರ ಕುಟುಂಬವನ್ನು ಬಲಹೀನಗೊಳಿಸಲು ಮತ್ತು ಧರ್ಮಸ್ಥಳವನ್ನು ಫಲಹೀನಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಮನಸ್ಸಿಗೆ ತೋಚಿದಂತೆ ಬೊಗಳೆ ಬಿಡುತ್ತಾ, ತಮ್ಮಂತೆಯೇ ಕಾಸಿಗೆ ಕೈಚಾಚಿ ಇಂತಹ ಹೇಯ ಕೃತ್ಯಕ್ಕೂ ಸೈ ಎನ್ನುವಂತಹ ಪುಂಡರ ಪಡೆಯನ್ನು ಕಟ್ಟಿಕೊಂಡು ದೇಶದ ನೆಮ್ಮದಿಯನ್ನು ಹಾಳು ಮಾಡಲು ಪ್ರಯತ್ನಿಸುತ್ತಿದ್ದಾರೆ.

ಯಾರೋ ಒಬ್ಬ ಅಮಾಯಕನ ಮಾತನ್ನು ಕೇಳಿ ವಿಶೇಷ ತನಿಖಾ ದಳವನ್ನು ರಚಿಸಿದ ರಾಜ್ಯ ಸರಕಾರ, ಅನಾಮಿಕನ ಮತ್ತು ಸಾಮಾಜಿಕ ಜಾಲತಾಣದ ನಾಯಕಮಣಿಗಳ ಪೂರ್ವಾಪರ ತಿಳಿಯುವ ಪ್ರಯತ್ನವನ್ನಾಗಲೀ ಮಾಡದೇ, ಧರ್ಮಸ್ಥಳದ

ಸುತ್ತಮುತ್ತಲಿನ ಗುಡ್ಡಗಳನ್ನು ಅಗೆಯುವ ತನಿಖಾ ತಂಡದ ಕಾರ್ಯಕ್ಕೆ ಹಸಿರು ನಿಶಾನೆ ತೋರಿಸಿತು. ಹದಿನೈದು ದಿನಕ್ಕೆ ಮೇಲ್ಪಟ್ಟು ಅನಾಮಿಕ ತೋರಿಸಿದ ಜಾಗಗಳಲ್ಲಿ ಗುಂಡಿಯ ನಂತರ ಗುಂಡಿಗಳನ್ನು ತೋಡಿ ಮಣ್ಣು ಮೇಲೆ ಬಂತೇ ವಿನಾ ಹೆಣಗಳಾಗಲೀ ಅಸ್ಥಿಪಂಜರಗಳಾಗಲೀ ದೊರೆಯಲಿಲ್ಲ. ಎರಡು ಗುಂಡಿಗಳಲ್ಲಿ ಸಿಕ್ಕ ಅಸ್ಥಿಪಂಜರಗಳಲ್ಲಿ ಒಂದು ಇತ್ತೀಚಿನದ್ದಾಗಿದ್ದು, ಇನ್ನೊಂದು ತೀರಾ ಹಳೆಯದ್ದು ಎನ್ನಲಾಗಿದೆ. ಅನಾಮಧೇಯನ ಮಾತು, ಸಾಮಾಜಿಕ ಜಾಲತಾಣಗಳ ನಾಮ್‌ಕೇವಾಸ್ತೆ ಪೋಕರಿಗಳ ಮಾತು ಕೇಳಿದ ಸರಕಾರಕ್ಕೂ ಈಗ ಸತ್ಯ ಸಂಗತಿ ಮನದಟ್ಟಾಗಿದೆ. ವಿಶೇಷ ತನಿಖಾ ತಂಡ ಸದ್ಯಕ್ಕೆ ಬುರುಡೆ ಶೋಧ ಬಿಟ್ಟು ಬುರುಡೆಧಾರಿಯ ವಿಚಾರಣೆ ಆರಂಭಿಸಿದೆ. ಈಗಾಗಲೇ ಸಿಕ್ಕಿರುವ ಅವಶೇಷಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದೆ.

ಇಲ್ಲಿ ಹಲವು ಪ್ರಶ್ನೆಗಳು ಕಾಡುತ್ತವೆ. ಒಬ್ಬ ಅನಾಮಧೇಯ ವ್ಯಕ್ತಿಯ ಮಾತನ್ನು ಕೇಳಿ ತನಿಖೆಯನ್ನು ಪ್ರಾರಂಭಿಸಿ, ಧರ್ಮಸ್ಥಳದ ನದಿ ತೀರ, ಕಾಡು-ಗುಡ್ಡಗಳಿಂದ ಹಿಡಿದು ಬಾಹುಬಲಿ ಬೆಟ್ಟದ ತನಕವೂ ಅಗೆಯಲು ಹೊರಟ ಸರಕಾರ, ಅದಕ್ಕೂ ಮುನ್ನ ಅನಾಮಧೇಯ ವ್ಯಕ್ತಿಯ ಪೂರ್ವಾಪರಗಳನ್ನೇಕೆ ಕೂಲಂಕಷವಾಗಿ ವಿಚಾರಿಸುವ ಪ್ರಯತ್ನವನ್ನು ಮಾಡಲಿಲ್ಲ. ಆ ವ್ಯಕ್ತಿ ಎಲ್ಲಿ ಯಾರೊಂದಿಗೆ ವಾಸಿಸುತ್ತಿದ್ದಾನೆ, ಪ್ರತಿ ದಿನ ತನಿಖಾ ತಂಡವನ್ನು ಬಿಟ್ಟು ಎಲ್ಲಿಗೆ ಹೋಗುತ್ತಾನೆ ? ಯಾರನ್ನು ಭೇಟಿ ಮಾಡುತ್ತಾನೆ? ಯಾರಿಂದ ಮಾರ್ಗದರ್ಶನವನ್ನು ಪಡೆಯುತ್ತಿದ್ದಾನೆ ಎಂಬಿತ್ಯಾದಿ ಮಾಹಿತಿಯನ್ನು ಏಕೆ ಕಲೆ ಹಾಕಲಿಲ್ಲ ?

ಅವನು ಪ್ರತಿದಿನವೂ ಹೊಸ ಜಾಗಗಳ ಬಗ್ಗೆ ಹೇಳುತ್ತಿದ್ದು, ತಾನು ಹೂತಿದ್ದೇನೆಂದು ಹೇಳುತ್ತಿದ್ದ ಶವಗಳ ಸಂಖ್ಯೆಯನ್ನೂ ಏರಿಸುತ್ತಿದ್ದ. ಆ ವ್ಯಕ್ತಿ ಒಬ್ಬನೇ ಶವಗಳನ್ನು ಹೊತ್ತು ತಂದು ಯಾವ್ಯಾವುದೋ ಜಾಗಳಲ್ಲಿ ಬೇರಾರ ಗಮನಕ್ಕೂ ಬರದಂತೆ ಹತ್ತಾರು ಅಡಿಗಳಷ್ಟು ಆಳ-ಅಗಲದ ಗುಂಡಿಗಳನ್ನು ತೋಡಿ ಅವುಗಳನ್ನು ಅಲ್ಲಿ ಹೂತು ಹಾಕಿದ್ದಾನೆಂದರೆ, ಅದನ್ನು ಎಷ್ಟರ ಮಟ್ಟಿಗೆ ನಂಬಬಹುದು? ಧರ್ಮಸ್ಥಳವು ಪ್ರತಿದಿನ ಸಾವಿರಾರು ಮಂದಿ ಭಕ್ತಾದಿಗಳು ಮತ್ತು ಅನೇಕ ದಿಕ್ಕುದೆಸೆಯಿಲ್ಲದವರೂ ಕೂಡ ಬಂದುಹೋಗುವ ಪುಣ್ಯಕ್ಷೇತ್ರ. ಇಲ್ಲಿಗೆ ಬಂದವರಲ್ಲಿ, ಎಷ್ಟೋ ಮಂದಿ ಅನಾಥರು, ವೃದ್ಧರು ಇರುವುದು ಸಾಮಾನ್ಯ. ಇವರಲ್ಲಿ ಕೆಲವರಾದರೂ ಅಸುನೀಗುವುದರಲ್ಲಿ ಆಶ್ಚರ್ಯವಿಲ್ಲ. ಇವರ ಪೂರ್ವಾಪರ ಗೊತ್ತಿಲ್ಲದಿರುವಾಗ, ಇವರ ಸಂಬಂಧಿಗಳ ಬಗ್ಗೆ ಮಾಹಿತಿಯಿಲ್ಲದಿರುವಾಗ, ಇವರನ್ನು ಧರ್ಮಸ್ಥಳದ ಸುತ್ತಮುತ್ತಲ ಜಾಗದಲ್ಲಿ ಹೂಳುವುದು ಅನಿವಾರ್ಯವಲ್ಲವೇ? ಇದು ಸಾಮಾನ್ಯ ವ್ಯಕ್ತಿಗೂ ಅರ್ಥವಾಗುವ ವಿಷಯ. ಆದರೆ ನಮ್ಮನ್ನಾಳುವ ದೊರೆಗಳಿಗೆ ಈ ಸಾಮಾನ್ಯ ಸಂಗತಿಯೂ ಅರ್ಥವಾಗಿಲ್ಲವೇಕೆ?

ತನಿಖೆಯ ಹೆಸರಿನಲ್ಲಿ ಇಲ್ಲಿಯವರೆಗೆ ಖರ್ಚು ಮಾಡಿರುವ ತೆರಿಗೆದಾರರ ಲಕ್ಷಾಂತರ ರೂಪಾಯಿ ಹಣವನ್ನು ಯಾರಿಂದ ವಸೂಲು ಮಾಡುತ್ತಾರೆ. ಸಾಮಾಜಿಕ ಜಾಲತಾಣಗಳಲ್ಲಿ

ಧರ್ಮಸ್ಥಳದ ವಿರುದ್ಧ ಬಡಬಡಾಯಿಸಿದ ಡೋಂಗಿ ಸಾಮಾಜಿಕ ಕಾರ್ಯಕರ್ತರ ಸುಳ್ಳು ಅಪಾದನೆಗಳಿಂದ ಕ್ಷೇತ್ರಕ್ಕೆ ಮತ್ತು ಧರ್ಮಾಧಿಕಾರಿಗಳಿಗೆ ಆಗಿರುವ ಅಪಚಾರ ನಿವಾರಣೆ ಹೇಗೆ ? ಇದೀಗ ಕೆಲವರು ಧರ್ಮಸ್ಥಳದ ಮೇಲಿನ ತಮ್ಮ ಭಕ್ತಿ ಮತ್ತು ನಂಬಿಕೆಯನ್ನು ಪುನರುಚ್ಚರಿಸಲು ಪ್ರಾರಂಭಿಸಿದ್ದಾರೆ. ಕೆಲವರಂತೂ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆವಿಧಿಸುವುದಾಗಿಯೂ ಹೇಳಿದ್ದಾರೆ. 'ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ' ಎಂಬ ಮಾತಿದೆ. ಅಂತೆಯೇ 'ಪಾಪಿಯ ಹೆಂಡತಿಯು ಎಂದಿದ್ದರೂ ಮುಂದೆ' ಎಂಬ ಮಾತೂ ಇದೆ. ವಿಶೇಷ ತನಿಖಾ ತಂಡದ ಅಂತಿಮ ವರದಿ ಸಲ್ಲಿಸಿದ ಬಳಿಕವಾದರೂ ದೇಗುಲನಾಡಿನ ಪಾವಿತ್ರ್ಯ ಮತ್ತು ಹೆಗ್ಗಡೆಯವರ ಕುಟುಂಬದ ಗೌರವಕ್ಕೆ ಬಂದಿದ್ದ ಚ್ಯುತಿ ದೂರವಾಗುವ ನಿರೀಕ್ಷೆ ಮೂಡಿದೆ. ಆದರೆ ಇದರೊಂದಿಗೆ ಈ ಕುಟಿಲ ಕಾರಸ್ಥಾನವನ್ನು ರಚಿಸಿ ಆಟವಾಡಿದ ದುಷ್ಕರ್ಮಿಗಳಿಗೆ ಶಿಕ್ಷೆಯಾಗಬೇಕಾಗಿದೆ. ಇದೂ ಆಗಿಯೇ ಆಗುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ಅಂತಿಮವಾಗಿ ಸತ್ಯವೇ ಗೆಲ್ಲಬೇಕು. ಇದು ಜನರ ಸಂಕಲ್ಪ ಮಾತ್ರವಲ್ಲ ದೈವ ಸಂಕಲ್ಪವೂ ಹೌದು.

ಲೇಖಕರು,
The Institute of Cost Accountants of India- Bengaluru Chapter
ಮಾಜಿ ಅಧ್ಯಕ್ಷರು

ಕಳಪೆ ಪಿಎಚ್.ಡಿ. ಪ್ರಬಂಧ: ಭಾರತ, ಚೀನಾ ಒಂದೇ ತಕ್ಕಡಿಯಲ್ಲಿ

ಡಾ.ಡಿ.ಸಿ ನಂಜುಂಡ

ಇತ್ತೀಚಿನ ವರ್ಷಗಳಲ್ಲಿ ಭಾರತವು ಚೀನಾದ ನಂತರ ವಿಶ್ವದ ಅತೀ ಹೆಚ್ಚು ಡಾಕ್ಟರೇಟ್ ಪದವೀಧರರನ್ನು ಉತ್ಪಾದಿಸುವ ದೇಶಗಳಲ್ಲಿ ಒಂದಾಗಿದೆ. ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿರುವುದು ಹೆಮ್ಮೆಪಡುವ ಸಂಗತಿಯೆನಿಸಬಹುದು. ಆದರೆ ಇದರ ಅಡಿಯಲ್ಲಿ ಗಂಭೀರ ಚಿಂತೆ ಅಡಗಿದೆ. ಅದೇನೆಂದರೆ ಗುಣಮಟ್ಟದ ಕೊರತೆ ಮತ್ತು ಕಳಪೆ/ನಕಲಿ ಪಿಎಚ್.ಡಿ. ಪ್ರಬಂಧಗಳ ವೃದ್ಧಿ. ಇದು ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ನೈತಿಕತೆ, ವಿಶ್ವಾಸಾರ್ಹತೆ ಮತ್ತು ಶ್ರೇಷ್ಠತೆಯನ್ನು ತೀವ್ರವಾಗಿ ಹಾನಿಗೊಳಿಸುತ್ತಿದೆ. ಪ್ರತಿವರ್ಷ ಯುಜಿಸಿ ಮತ್ತು ಎಐಎಸ್‌ಇ ವರದಿಗಳ ಪ್ರಕಾರ, ಭಾರತದಲ್ಲಿ 35,000-45000ಕ್ಕೂ ಹೆಚ್ಚು ಪಿಎಚ್.ಡಿ. ಪದವೀಧರರು ಹೊರಬರುತ್ತಿದ್ದಾರೆ. ಚೀನಾ ವಾರ್ಷಿಕವಾಗಿ 65,000ದಿಂದ 70,000 ಪಿಎಚ್.ಡಿ.ಗಳನ್ನು ಉತ್ಪಾದಿಸುತ್ತಿದ್ದು, ಅಗ್ರಸ್ಥಾನದಲ್ಲಿದೆ. ಆದರೆ ಈ ಅಂಕಿ-ಅಂಶಗಳ ಹಿಂದೆ ನಿಂತಿರುವ ವಾಸ್ತವ ಚಿಂತಾಜನಕವಾಗಿದೆ. ಸಂಶೋಧನೆಯ ಗುಣಮಟ್ಟ ನಿರಂತರ ಕುಸಿಯುತ್ತಿದೆ. ಯುಜಿಸಿ 2018-2022ರಲ್ಲಿ ತನ್ನ ಅನುಮೋದಿತ ಜರ್ನಲ್ ಪಟ್ಟಿಯಿಂದ ಸುಮಾರು 4,305 ನಕಲಿ ಅಥವಾ ತಳಮಟ್ಟದ ಜರ್ನಲ್‌ಗಳನ್ನು ಕೈಬಿಟ್ಟಿತ್ತು. ಇದಕ್ಕೆ ಪ್ರಮುಖ ಕಾರಣವೆಂದರೆ, ಸಾವಿರಾರು ಪಿಎಚ್.ಡಿ. ವಿದ್ಯಾರ್ಥಿಗಳು ತಮ್ಮ ಪ್ರಬಂಧಕ್ಕಾಗಿ ಅಗತ್ಯವಿರುವ ಪ್ರಕಟಣೆಗಳನ್ನು ಈ ನಂಬಿಕೆಗೆ ಪಾತ್ರವಲ್ಲದ ನಕಲಿ ಜರ್ನಲ್‌ಗಳಲ್ಲಿ ಪ್ರಕಟಿಸುತ್ತಿದ್ದರು. ತಾಂತ್ರಿಕವಾಗಿ ನಿಯಮ ಪಾಲಿಸಿದಂತೆ ತೋರಿದರೂ, ಸಂಶೋಧನೆಯ ನೈತಿಕತೆ ಮತ್ತು ತಾತ್ವಿಕ ಗುಣಮಟ್ಟ ಕುಗ್ಗುತ್ತಿತ್ತು. ಕೆಲವು ಜಾಗತಿಕ ಸಂಸ್ಥೆಗಳ ವರದಿಗಳ ಪ್ರಕಾರ ಕಳಪೆ ಮತ್ತು ನಕಲಿ ಪಿಎಚ್.ಡಿ. ವಿಚಾರದಲ್ಲಿ ನಂಬರ್ ಒಂದರಲ್ಲಿ ಚೀನಾ, ಅದರ ಹಿಂದೆಯೇ ಭಾರತ!

ಯುಜಿಸಿ ನಿಯಮಗಳ ಪ್ರಕಾರ, ವಿಜ್ಞಾನ ಕ್ಷೇತ್ರದಲ್ಲಿ ಒಬ್ಬ ಮಾರ್ಗದರ್ಶಕನಿಗೆ ಗರಿಷ್ಠ 8 ಮತ್ತು ಮಾನವಿಕ ವಿಷಯಗಳಲ್ಲಿ 5 ವಿದ್ಯಾರ್ಥಿಗಳವರೆಗೆ ಮಾರ್ಗದರ್ಶನ ನೀಡಲು ಅವಕಾಶವಿದೆ. ಆದರೆ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಒಬ್ಬ ಮಾರ್ಗದರ್ಶಕ 1520 ವಿದ್ಯಾರ್ಥಿಗಳನ್ನು ನೋಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಮಾರ್ಗದರ್ಶನದ ಗುಣಮಟ್ಟ ಕುಸಿಯುತ್ತಿದ್ದು, ಪ್ರಬಂಧವು ಕೇವಲ ಮೇಲ್ಮಟ್ಟದ ಪರಿಶೀಲನೆಯಾಗಿಯೇ ಉಳಿಯುತ್ತಿದೆ. 2024ರವರೆಗೂ ಶೋಧಗಂಗಾದಲ್ಲಿ 4.5 ಲಕ್ಷಕ್ಕೂ ಹೆಚ್ಚು ಪ್ರಬಂಧಗಳು ಅಪ್‌ಲೋಡ್ ಆಗಿವೆ. ಆದರೆ ಕಳೆದೆರಡು ವರ್ಷಗಳಲ್ಲಿ ನಡೆಸಿದ ಅಧ್ಯಯನದ ಪ್ರಕಾರ, ರಾಜ್ಯ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಮಾದರಿ ಪ್ರಬಂಧಗಳಲ್ಲಿ 35%ಕ್ಕೂ ಹೆಚ್ಚು ನಾವೀನ್ಯತೆ ಕೊರತೆ, ಉಲ್ಲೇಖದ ದೋಷಗಳು ಹಾಗೂ ಕಾರ್ಯವಿಧಾನದಲ್ಲಿ ಗಂಭೀರ ದೋಷಗಳು ಕಂಡುಬಂದಿವೆ.

ಆ ವರದಿಯ ಪ್ರಕಾರ, ಭಾರತದ ಪಿಎಚ್.ಡಿ. ಪದವೀಧರರಲ್ಲಿ ಕೇವಲ 40% ಜನರು ಮಾತ್ರ ಉದ್ಯೋಗಯೋಗ್ಯರಾಗಿದ್ದಾರೆ. ಅನೇಕರು ಉದ್ಯೋಗವಿಲ್ಲದೆ ಉಳಿಯುತ್ತಿದ್ದು, ಕೆಲವರು ತಮ್ಮ ಕ್ಷೇತ್ರಕ್ಕೆ ಸಂಬಂಧಿಸದ ಕೆಲಸಗಳಲ್ಲಿ ತೊಡಗುತ್ತಿದ್ದಾರೆ. ಇದರ ಹಿಂದೆ ಗುಣಮಟ್ಟದ ಕೊರತೆ, ಜ್ಞಾನಾತ್ಮಕ ಕೌಶಲಗಳ ಅಭಾವ ಹಾಗೂ ತಂತ್ರಜ್ಞಾನ ಜ್ಞಾನದಲ್ಲಿನ ಹೀನತೆ ಪ್ರಮುಖ ಕಾರಣಗಳಾಗಿವೆ. ಈ ಬಿಕ್ಕಟ್ಟಿನ ಕೇಂದ್ರದಲ್ಲಿದೆ ಗುಣಮಟ್ಟವಿಲ್ಲದ ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಅನುಮತಿಸದ ಸಂಶೋಧನಾ ಕೇಂದ್ರಗಳ ವೃದ್ಧಿ. ಮೂಲಸೌಕರ್ಯಗಳ ಕೊರತೆ, ಅರ್ಹ ಅಧ್ಯಾಪಕರ ಅಭಾವ ಮತ್ತು ನೈತಿಕ ಮಾರ್ಗದರ್ಶನವಿಲ್ಲದೆ ಈ ಸಂಸ್ಥೆಗಳು ಪಿಎಚ್.ಡಿ. ಪದವಿಗಳನ್ನು ವ್ಯಾಪಾರದಂತೆ ವಿತರಿಸುತ್ತಿವೆ. ಜೊತೆಗೆ ನಗರಗಳಲ್ಲಿ ಹಣಕ್ಕಾಗಿ 'ಘೋಸ್ಟ್ ರೈಟಿಂಗ್' ಸೇವೆಗಳು ಬಹಿರಂಗವಾಗಿ ಕಾರ್ಯನಿರ್ವಹಿಸುತ್ತಿದ್ದು, ಹಣಕ್ಕಾಗಿ ಪ್ರಬಂಧ ಬರೆದು ಕೊಡುತ್ತಿವೆ. ಅನೇಕ ವಿದ್ಯಾರ್ಥಿಗಳು ಕೇವಲ ಪದವಿ ಪಡೆಯಲು ಪಿಎಚ್.ಡಿ. ಪ್ರವೇಶಿಸುತ್ತಾರೆ ಎನ್ನುವ ವರದಿಗಳಿವೆ

ಸ್ಪಷ್ಟಮಾರ್ಗಸೂಚಿಗಳಿದ್ದರೂ, ಅನೇಕ ಪ್ರಬಂಧಗಳಲ್ಲಿ ಮರುಬಳಕೆ ಮಾಡಿದ ವಿಷಯ, ಹಿಂದಿನ ಸಂಶೋಧನೆಯ ನಕಲು ಇನ್ನೊಂದು ದೊಡ್ಡ ಸವಾಲಾಗಿದೆ. ಮಾರ್ಗದರ್ಶಕರ ನಿರ್ಲಕ್ಷ್ಯ ಮತ್ತು ವಿದ್ಯಾರ್ಥಿಗಳ ನೈತಿಕ ಬದ್ಧತೆಯ ಕೊರತೆ ಇದನ್ನು ಮತ್ತಷ್ಟು ತೀವ್ರಗೊಳಿಸಿದೆ. ಇದಕ್ಕೆ ಪ್ರಮುಖ ಕಾರಣಗಳಲ್ಲಿ ಶೈಕ್ಷಣಿಕ ಸಾಧನೆ ಸೂಚ್ಯಂಕ ನೀತಿಯೂ ಆಗಿದೆ. ಇದು ಅಧ್ಯಾಪಕರಿಗೆ 'ಎಂತಾದರೂ ಪ್ರಕಟಣೆ' ತರಬೇಕೆಂಬ ಒತ್ತಡವನ್ನು ತಂದಿತು. ಇದರಿಂದ ಅನೇಕರು 'ಪ್ರೆಡೇಟರಿ ಜರ್ನಲ್‌ಗಳಲ್ಲಿ' ಲೇಖನಗಳನ್ನು ಪ್ರಕಟಿಸಲು ಮುಂದಾಗಿದರು. ಖಾಸಗಿ ವಿಶ್ವವಿದ್ಯಾಲಯಗಳ ನಿಯಂತ್ರಣವಿಲ್ಲದ ವ್ಯಾಪ್ತಿ ಮತ್ತೊಂದು ಸಮಸ್ಯೆ. ಇವು ಪಿಎಚ್.ಡಿ. ಕಾರ್ಯಕ್ರಮಗಳನ್ನು ಆದಾಯದ ಮೂಲವಾಗಿ ನೋಡುತ್ತವೆ, ಜ್ಞಾನ ವೃದ್ಧಿಗೆ ಅವಕಾಶವಾಗಿ ಅಲ್ಲ. ಕಡಿಮೆ ಅನುದಾನ, ಜಾಗತಿಕ ಶೈಕ್ಷಣಿಕ ಅಭ್ಯಾಸಗಳ ಅರಿವಿನ ಕೊರತೆ, ಸಂಶೋಧಕರಿಗೆ ನೈಜ ನವೀನ ಸಂಶೋಧನೆ ನಡೆಸಲು ತೊಂದರೆಯಾಗುತ್ತಿದೆ.

ಈ ಸಮಸ್ಯೆ ಭಾರತಕ್ಕೆ ಮಾತ್ರ ಸೀಮಿತವಲ್ಲ, ಚೀನಾದಲ್ಲಿಯೂ ಇದೇ ಸ್ಥಿತಿ ಇದೆ. ಅಲ್ಲಿ ಸಹ ನಕಲಿ ಪ್ರಬಂಧಗಳು, ಘೋಸ್ಟ್ ರೈಟಿಂಗ್ ಮತ್ತು ಮೇಲ್ಮಟ್ಟದ ಸಂಶೋಧನೆಗಳ ಹೆಚ್ಚಳ ಕಂಡುಬರುತ್ತಿದೆ. ಭಾರತದಲ್ಲಿ ಅನೇಕ ಪಿಎಚ್.ಡಿ. ಪ್ರಬಂಧಗಳ ಗುಣಮಟ್ಟ ಕುಸಿಯಲು ಆಂತರಿಕ ಗುಣಮಟ್ಟ ಘಟಕಗಳು ಸಲ್ಲಿಕೆಯಾಗುವ ಪ್ರಬಂಧಗಳನ್ನು ಸಮರ್ಪಕವಾಗಿ ಪರಿಶೀಲಿಸಲು ವಿಫಲವಾಗುವುದು, ಡೇಟಾ ಅಪ್ರಾಮಾಣಿಕತೆ, ಸಂಶೋಧನಾ ನೈತಿಕತೆಗಳನ್ನು ನಿರ್ಲಕ್ಷಿಸುವುದು, ವಿಶೇಷವಾಗಿ ಬಾಹ್ಯ ಪರೀಕ್ಷಕರು ಸೂಕ್ತ ಮೌಲ್ಯಮಾಪನವಿಲ್ಲದೆ ಪ್ರಬಂಧಗಳನ್ನು ಅಂಗೀಕರಿಸುವುದು ಮತ್ತು ಯುಜಿಸಿ ಸುಧಾರಣೆಗಳು ಸಮನಾಗಿ ಜಾರಿಯಾಗದಿರುವುದು ಮುಖ್ಯ ಕಾರಣಗಳಾಗಿವೆ.

ಪಿಎಚ್.ಡಿ. ಶಿಕ್ಷಣದಲ್ಲಿ ಅಕಾಡೆಮಿಕ್ ಮತ್ತು ಉದ್ಯಮದ ನಡುವಿನ ಈ ಅಂತರದ ಜೊತೆಗೆ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಸಮಸ್ಯೆಯೂ ಗಂಭೀರವಾಗಿದೆ. ಜಾಗತಿಕ ಮಟ್ಟದಲ್ಲಿ ಹಲವು ವರದಿಗಳು ಪಿಎಚ್.ಡಿ. ವಿದ್ಯಾರ್ಥಿಗಳಲ್ಲಿ ತೀವ್ರ, ಒತ್ತಡ, ಆತಂಕ, ನಿರಾಶೆ ಹೆಚ್ಚುತ್ತಿರುವುದನ್ನು ತೋರಿಸಿವೆ. ಭಾರತದಲ್ಲಿಯೂ ಪ್ರಕಟಿಸಿ ಅಥವಾ ನಾಶ ಎಂಬ ಅಕಾಡೆಮಿಕ್ ಒತ್ತಡದಿಂದ ವಿದ್ಯಾರ್ಥಿಗಳು ನಿರಂತರ ಮಾನಸಿಕ ಸಂಕಷ್ಟ ಅನುಭವಿಸುತ್ತಿದ್ದಾರೆ. ಮಾರ್ಗದರ್ಶಕರ ಬೆಂಬಲದ ಕೊರತೆ, ಅತಿಯಾದ ಪ್ರಕಟಣೆ ಒತ್ತಡ ಮತ್ತು ಭವಿಷ್ಯದ ಉದ್ಯೋಗದ ಅನಿಶ್ಚಿತತೆ ಇವರ ಮಾನಸಿಕ ಆರೋಗ್ಯವನ್ನು ಮತ್ತಷ್ಟು ಹದಗೆಡಿಸುತ್ತವೆ. ಈ ಎಲ್ಲಾ ಸಮಸ್ಯೆಗಳ ಹಿನ್ನೆಲೆ ಭಾರತ ಜಾಗತಿಕ ಶೈಕ್ಷಣಿಕ ಸ್ಪರ್ಧೆಯಲ್ಲಿ ಹಿನ್ನಡೆಯಾಗುತ್ತಿದೆ. ಅಂತಾರಾಷ್ಟ್ರೀಯ ಶ್ರೇಯಾಂಕಗಳಲ್ಲಿ ಭಾರತೀಯ ವಿಶ್ವವಿದ್ಯಾಲಯಗಳು ತಳಮಟ್ಟದಲ್ಲೇ ಉಳಿಯುತ್ತಿವೆ. ಇದರಿಂದಲೇ ಸ್ಪಷ್ಟವಾಗುತ್ತದೆ ಪಿಎಚ್.ಡಿ.ಗಳ ಸಂಖ್ಯೆಯು ಹೆಚ್ಚಿದರೂ, ಗುಣಮಟ್ಟವಿಲ್ಲದೆ ಜಾಗತಿಕ ಮಾನ್ಯತೆ ಪಡೆಯಲು ಸಾಧ್ಯವಿಲ್ಲ.

ಭವಿಷ್ಯದಲ್ಲಿ ಈ ಬಿಕ್ಕಟ್ಟನ್ನು ತಡೆಗಟ್ಟಲು ಭಾರತ ಹೊಸ ದಿಕ್ಕಿನಲ್ಲಿ ಹೆಜ್ಜೆಯಿಡಬೇಕಾಗಿದೆ. ಮುಂದಿನ ಪೀಳಿಗೆಯ ಪಿಎಚ್.ಡಿ. ತರಬೇತಿಯಲ್ಲಿ ಕೃತಕ ಬುದ್ಧಿಮತ್ತೆ, ಬಿಗ್ ಡೇಟಾ, ಡಿಜಿಟಲ್ ಹ್ಯುಮಾನಿಟೀಸ್ ಮುಂತಾದ ಹೊಸ ತಂತ್ರಜ್ಞಾನಾಧಾರಿತ ಕ್ಷೇತ್ರಗಳನ್ನು ಒಳಗೊಳ್ಳುವುದು ಅಗತ್ಯ. ಸಂಶೋಧನೆಯ ವಿಶ್ವಾಸಾರ್ಹತೆ ಮತ್ತು ನೈತಿಕತೆ ಹೆಚ್ಚಿಸಲು ಮುಕ್ತ ವಿಜ್ಞಾನ ಮತ್ತು ದತ್ತಾಂಶ ಪಾರದರ್ಶಕತೆ ಮಾದರಿಗಳನ್ನು ಅಳವಡಿಸಬೇಕು, ಜೊತೆಗೆ ಒಂದು ವಿಭಾಗಕ್ಕೆ ಸೀಮಿತವಾದ ಸಂಶೋಧನೆ ಬದಲು ಅಂತರಶಿಸ್ತೀಯ ಸಂಶೋಧನೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ಸಮಾಜದ ನೈಜ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಈ ಬದಲಾವಣೆಗಳು ಭಾರತದಲ್ಲಿ ಪಿಎಚ್.ಡಿ. ಪದವಿಯನ್ನು ಕೇವಲ ಪ್ರಮಾಣದ ಸೂಚಕವಾಗಿರದೆ, ಜಾಗತಿಕ ಗುಣಮಟ್ಟದ ಮಾನದಂಡಗಳನ್ನು ತಲುಪುವ ಶಕ್ತಿ ಕೇಂದ್ರವನ್ನಾಗಿ ರೂಪಿಸಬಹುದು.

ಇಂದು ಅಗತ್ಯವಿರುವುದು ಸಂಖ್ಯೆಗಿಂತ ಗುಣಮಟ್ಟಕ್ಕೆ ಒತ್ತು ನೀಡುವುದು. ಪಿಎಚ್.ಡಿ. ಶಿಕ್ಷಣದ ಮೂಲ ವಿನ್ಯಾಸವನ್ನು ಪುನರ್‌ರಚಿಸಿ, ನೈತಿಕತೆ, ತರ್ಕ, ಸಂಶೋಧನಾ ವಿಧಾನಗಳು ಮತ್ತು ಜ್ಞಾನಾತ್ಮಕ ಕೌಶಲ್ಯಗಳಲ್ಲಿ ಗಂಭೀರ ತರಬೇತಿ ನೀಡಬೇಕು. ಪಿಎಚ್.ಡಿ. ಕಾರ್ಯಕ್ರಮ ನೀಡುವ ಸಂಸ್ಥೆಗಳಿಗೆ ಕಠಿಣ ಮಾನದಂಡ ಇರಬೇಕು. ಮಾರ್ಗದರ್ಶಕರ ಕಾರ್ಯಕ್ಷಮತೆಯನ್ನೂ ಸ್ಪಷ್ಟವಾಗಿ ಮೌಲ್ಯಮಾಪನ ಮಾಡಬೇಕು. ಉತ್ತಮ ಫೆಲೋಶಿಪ್‌ಗಳು, ಸಮರ್ಪಕ ಅನುದಾನಗಳು ಮತ್ತು ಸಂಶೋಧನಾ ವಿನಿಮಯ ಅವಕಾಶಗಳು ಸಂಶೋಧಕರನ್ನು ನೈಜ ಜಾಗತಿಕ ಸಮಸ್ಯೆಗಳ ಪರಿಹಾರ ದಾರಿಯತ್ತ ಕರೆದೊಯ್ಯುತ್ತವೆ. ಭಾರತೀಯ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ನಡುವೆ ಸಹಕಾರದ ಸೇತುವೆಗಳನ್ನು ನಿರ್ಮಿಸುವುದು ಅಗತ್ಯ. ಪಿಎಚ್.ಡಿ. ಪದವಿಗಳ ಪ್ರಮಾಣ ಹೆಚ್ಚುತ್ತಿರುವುದು ಪ್ರಗತಿಯ ಸೂಚಿಯಂತೆ ಕಾಣಿಸಿದರೂ, ಸಂಶೋಧನೆಯ ನೈತಿಕತೆ, ಗುಣಮಟ್ಟದ ಮಾರ್ಗದರ್ಶನ, ಮತ್ತು ಪ್ರಾಮಾಣಿಕ ಪ್ರಕಟಣೆಗಳ ಕೊರತೆ ದೇಶದ ಶಿಕ್ಷಣದ ವಿಶ್ವಾಸಾರ್ಹತೆಗೆ ಗಂಭೀರ ಹಾನಿ ಮಾಡುತ್ತಿದೆ. ಶೈಕ್ಷಣಿಕ ನೀತಿನಿರ್ಧಾರಕರು, ಸಂಶೋಧನಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಈ ವಿಷಯವನ್ನು ತಕ್ಷಣ ಪರಿಗಣಿಸಿ, ದೇಶದ ಸಂಶೋಧನಾ ಮೂಲಾಧಾರವನ್ನು ಬಲಿಷ್ಠಗೊಳಿಸಲು ಸಮನ್ವಿತ ಕ್ರಮ ಕೈಗೊಳ್ಳಬೇಕಾಗಿದೆ.

ಸಹಪ್ರಾಧ್ಯಾಪಕರು, ಮೈಸೂರು ವಿ.ವಿ

ಪ್ರಥಮ ಪ್ರಜೆ ಕಲಿಸಿದ ದೇಶಭಕ್ತಿಯ ಪಾಠ

ಸಕಾಲಿಕ
ಸುರೇಂದ್ರ ಪೈ
vveditoped@gmail.com

ಈ ಬಾರಿಯ 79ನೇ ಸ್ವಾತಂತ್ರ್ಯ ದಿನಾಚರಣೆಯ ದಿನ ನಮ್ಮ ದೇಶದ ಪ್ರಥಮ ಪ್ರಜೆಯಾಗಿರುವ ರಾಷ್ಟ್ರಪತಿ ದ್ರೌಪದಿ ಮುರ್ಮುರವರು ದೇಶದ ಜನತೆಗೆ ದೇಶದ ಭಕ್ತಿಯ ಕುರಿತಾದ ಒಂದು ಸುಂದರ ಪಾಠವನ್ನು ಕಲಿಸಿಬಿಟ್ಟರು. ಪಾಠ ಕಲಿಸಲು ಅವರೇನು ಮೇಷ್ಟ್ರ ತರಹ ಕೈಯಲ್ಲಿ ಪುಸ್ತಕ ಹಾಗೂ ಕೋಲನ್ನು ಹಿಡಿದುಕೊಳ್ಳಲಿಲ್ಲ, ಮೈಕ್‌ನ ಮುಂದೆ ನಿಂತು ಗಂಟೆಗಟ್ಟಲೆ ಮಾತನಾಡುತ್ತಾ ನೀತಿ ಬೋಧನೆ ಮಾಡಲಿಲ್ಲ, ತಾನು ದೇಶಭಕ್ತಿಯ ಪಾಠ ಮಾಡುತ್ತೇನೆ ಎಂದು ಎಲ್ಲರಿಗೂ ಹೇಳಿ, ಜನರನ್ನು ಒಂದೆಡೆ ಸೇರಿಸಲಿಲ್ಲ. ಬದಲಾಗಿ ತಮ್ಮ ಮಾದರಿ ಪ್ರೇರಣಾದಾಯಕ ನಡೆಯಿಂದ ಒಂದ ರಕ್ಷರವೂ ಮಾತನಾಡದೇ ಪಾಠ ಕಲಿಸಿಬಿಟ್ಟರು. ನಾವೆಲ್ಲಾ ಅದನ್ನು ನೋಡುತ್ತಲೇ ಪಾಠ ಕಲಿತುಬಿಟ್ಟೆವು.

ಅಂದು ಅಗಸ್ಟ್ 15ರ ಮುಂಜಾನೆಯಿಂದಲೇ ರಾಜ್ಯದ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಸುರಿಯುತ್ತಿತ್ತು. ಶಾಲಾ-ಕಾಲೇಜು ಸೇರಿದಂತೆ ಎಲ್ಲೆಡೆ ಮುನ್ನಾ ದಿನವೇ ಸ್ವಾತಂತ್ರ್ಯ ದಿನಾಚರಣೆಯ ತಯಾರಿಯನ್ನು ನಡೆಸಲಾಗಿತ್ತು. ಧ್ವಜಸ್ತಂಭ ಹಾಗೂ ಶಾಲಾವರಣವು ರಂಗೋಲಿ, ತಿಳಿರು ತೋರಣ, ಬಣ್ಣ ಬಣ್ಣದ ಬಂಟಿಂಗ್‌ಗಳಿಂದ ಅಲಂಕೃತವಾಗಿತ್ತು. ಆಮಂತ್ರಣ ಪತ್ರಿಕೆಯಲ್ಲಿ ಬೆಳಿಗ್ಗೆ 7 ಗಂಟೆಗೆ ಸರಿಯಾಗಿ ಧ್ವಜಾರೋಹಣ ಎಂದು ಮುದ್ರಿಸಲಾಗಿತ್ತು, ಅತಿಥಿಗಳಿಗೆ ಆಹ್ವಾನ ಹೋಗಿತ್ತು. ಶಾಲಾ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಸಜ್ಜಾಗಿದ್ದರು. ಎಲ್ಲರಲ್ಲೂ ಸಂಭ್ರಮ ಮನೆ ಮಾಡಿತ್ತು. ಆದರೆ ಶುಕ್ರವಾರ (ಸ್ವಾತಂತ್ರ ದಿನಾಚರಣೆಯ ದಿನ) ಬೆಳಗಿನ ಜಾವದಿಂದಲೇ ಸುರಿಯುತ್ತಿದ್ದ ಮಳೆಯು ನಮ್ಮೆಲ್ಲರ ದೇಶಭಕ್ತಿಯನ್ನು ಪರೀಕ್ಷೆ ಮಾಡಿಯೇ ಬಿಟ್ಟಿತು.

ಅಯ್ಯೋ, ಇಷ್ಟು ಜೋರಾಗಿ ಮಳೆ ಬರುತ್ತಿದೆಯಲ್ಲಾ, ಈಗ ಹೇಗೆ ಕಾರ್ಯಕ್ರಮ ಮಾಡುವುದು? ಎಂಬ ಯೋಚನೆ ಎಲ್ಲರಲ್ಲೂ ಮನೆಮಾಡಿತ್ತು. ಕೆಲವರು ನಿಗದಿತ ಸಮಯಕ್ಕೆ ಸರಿಯಾಗಿ ಛತ್ರಿ ಹಿಡಿದುಕೊಂಡು ಕೇವಲ ಧ್ವಜಾರೋಹಣ ಮಾಡಿ ರಾಷ್ಟ್ರಗೀತೆ ಹಾಡಿ ಶುಭಕೋರುವ ಮೂಲಕ ಕಾರ್ಯಕ್ರಮ ಮುಗಿಸಿಬಿಟ್ಟರು. ಇನ್ನು ಕೆಲವು ಕಡೆ ಮಳೆ ನಿಲ್ಲಬಹುದು ಕಾಯೋಣ ಎಂಬ ತೀರ್ಮಾನಕ್ಕೆ ಬಂದರು. ಅತ್ತ ಹಲವೆಡೆ ಮಳೆಯಲ್ಲೇ ಧ್ವಜಾರೋಹಣ ಮಾಡಲು ಮುಂದಾದರೂ ಮಕ್ಕಳು ಮಳೆಯಲ್ಲಿ ನೆನೆದರೆ 'ನಾಳೆ ಪಾಲಕರು ತಮ್ಮ ಮಕ್ಕಳಿಗೆ ಜ್ವರ, ನೆಗಡಿ ಬಂತು, ಮಳೆ ಬಂದು ರಾಡಿಯಾದ ನೆಲದಲ್ಲೇ ಕುಳ್ಳಿರಿಸಿದ್ದರಿಂದ ಮಕ್ಕಳ ಬಟ್ಟೆ ಕೊಳೆ ಆಯ್ತು' ಎಂದೆಲ್ಲಾ ಹೇಳುತ್ತಾರೆ ಎಂಬ ಭಯ ಒಂದು ಕಡೆ ಕಾಡುತ್ತಿತ್ತು. ಇತ್ತ ಅತಿಥಿಗಳು ಸಹ ಛತ್ರಿಯ ಸಹಾಯವಿಲ್ಲದೆ ವೇದಿಕೆ ಹತ್ತಲು ಸಿದ್ಧರಿರಲಿಲ್ಲ. ಕಾರ್ಯಕ್ರಮಕ್ಕೆ ಬಂದ ಪಾಲಕರು ಪ್ಲಾಸ್ಟಿಕ್ ಕುರ್ಚಿಯ ಮೇಲೆ ಬಿದ್ದ ಮಳೆನೀರನ್ನು ಹಾಗೇ ಸುಮ್ಮನೆ ಕೈಯಿಂದ ಒರೆಸಿ ಕುರ್ಚಿ ಮೇಲೆ ಕುಳಿತುಕೊಳ್ಳಲು ಒಲ್ಲೆ ಎಂದು ಮೂಗು ಮುರಿಯುತ್ತಾ ಆಯಾಗಳ ಬಳಿಯಿಂದ ಬಟ್ಟೆ ತರಿಸಿ ಒರೆಸಿಕೊಂಡು ಕುಳಿತುಕೊಂಡರು, ಅವೆಲ್ಲದರ ಮಧ್ಯೆ ಧ್ವಜಾರೋಹಣ ಮಾಡಿ ಮುಗಿಸಿದರೂ ಸಹ ಅಲ್ಲಿ ದೇಶ ಭಕ್ತಿಗಿಂತ ಎಲ್ಲರ ಗಮನ ಒದ್ದೆಯಾದ ಬಟ್ಟೆ, ತಲೆ ಒರೆಸಿಕೊಳ್ಳುವಿಕೆ, ಛತ್ರಿಯ ಹುಡುಕಾಟ ಹಾಗೂ ಮಳೆಯ ಮೇಲೆಯೇ ಹೆಚ್ಚಾಗಿ ಕೇಂದ್ರೀಕೃತವಾಗಿದ್ದು ಕಂಡುಬಂತು.

ಅಬ್ಬಾ, ಕೊನೆಗೂ ಈ ಪಾಪಿ ಮಳೆಯು ನಮ್ಮ ಸ್ವಾತಂತ್ರ್ಯ ದಿನಾಚರಣೆಯನ್ನು ಹಾಳು ಮಾಡಿಬಿಟ್ಟಿತ್ತಲ್ಲಾ ಎಂದು ಮಳೆರಾಯನಿಗೆ ಒಂದಿಷ್ಟು ಹಿಡಿಶಾಪ ಹಾಕುತ್ತಾ ಮನೆಗೆ ಹೊರಟೆವು. ಮನೆಗೆ ಬಂದು ಒದ್ದೆಯಾದ ತಲೆಯನ್ನು ಒರೆಸಿಕೊಂಡು, ಬಿಸಿನೀರಿನ ಸ್ನಾನ ಮಾಡಿ ದೆಹಲಿಯ ಧ್ವಜಾರೋಹಣ ನೋಡೋಣ ಎಂದು ಟಿ.ವಿ ಮುಂದೆ ಕುಳಿತಾಗ ಭಾರತದ ಪ್ರಥಮ ಪ್ರಜೆಯು ದೊಪ್ಪ ಎಂದು ಸುರಿವ ಮಳೆಯಲ್ಲಿ ಛತ್ರಿಯ ಸಹಾಯವಿಲ್ಲದೇ, ಒಂದಿಷ್ಟು ಅಸಹನೆ, ಅಳುಕು ಇಲ್ಲದೇ ನಿಗದಿತ ಸಮಯಕ್ಕೆ ಸರಿಯಾಗಿ, ಪೂರ್ವನಿಗದಿತ ಕಾರ್ಯಕ್ರಮದ ವೇಳಾಪಟ್ಟಿಗೆ ಅನುಸಾರವಾಗಿ ದೆಹಲಿಯ ಇಂಡಿಯಾ ಗೇಟ್ ವೃತ್ತದಲ್ಲಿರುವ 'ರಾಷ್ಟ್ರೀಯ ಯುದ್ಧ ಸ್ಮಾರಕ'ಕ್ಕೆ (ರಾಷ್ಟ್ರೀಯ ಸಮರ ಸ್ಮಾರಕ) ತೆರಳಿ ಸ್ವತಂತ್ರ ಭಾರತದ ಸಶಸ್ತ್ರ ಸಂಘರ್ಷಗಳಲ್ಲಿ ಅತ್ಯುನ್ನತ ತ್ಯಾಗ ಮಾಡಿದವರ ತ್ಯಾಗ ಬಲಿದಾನವನ್ನು ನೆನೆಯುತ್ತಾ ವೀರ ಯೋಧರಿಗೆ ಗೌರವ ಸಲ್ಲಿಸಿದರು. ಭಾರತದ ಪ್ರಥಮ ಪ್ರಜೆಯ ಈ ಮಾದರಿ ನಡೆ 140 ಕೋಟಿ ಜನರಿಗೆ ದೇಶಭಕ್ತಿಯ ಕುರಿತಾದ ಬಹುದೊಡ್ಡ ಪಾಠವನ್ನೇ ಕಲಿಸಿಬಿಟ್ಟಿತು.

ಆ ದೃಶ್ಯವನ್ನು ನೋಡಿದ ಪ್ರತಿಯೊಬ್ಬರಿಗೂ ಮುಂಜಾನೆ ತಾವು ವರ್ತಿಸಿದ ರೀತಿ, ನಡೆದ ಎಲ್ಲಾ ಘಟನೆಗಳು ಒಂದೊಂದಾಗಿ ಹಾಗೇ ಕಣ್ಣ ಮುಂದೆ ಹಾದುಹೋದವು. ಮನದಲ್ಲೇ ಛೇ, ನಾವು ತಪ್ಪು ಮಾಡಿಬಿಟ್ಟೆವು ಎಂಬ ಪಾಪಪ್ರಜ್ಞೆ ಕಾಡಲು ಶುರುವಾಯಿತು. ಒಂದಕ್ಷರವೂ ಮಾತನಾಡದೇ ದೇಶದ ಪ್ರತಿಯೊಬ್ಬ ನಾಗರಿಕರಿಗೂ ದೇಶದ ಮೊದಲ ಪ್ರಜೆ ಕೇವಲ ತನ್ನ ನಡೆಯ ಮೂಲಕ ಕಲಿಸಿದ ಪಾಠ ಮುಂದಿನ ಹಲವು ಪೀಳಿಗೆಯವರಿಗೂ ಮಾದರಿಯಾಗಿ ಉಳಿದುಬಿಟ್ಟಿತು.

ಅದೆಷ್ಟೋ ಜನರಿಗೆ ರಾಷ್ಟ್ರಪತಿ ಎಂದರೆ ಅದೊಂದು ಕೇವಲ ನಾಮಕಾವಸ್ಥೆ ಹುದ್ದೆ, ಆಡಳಿತ ಪಕ್ಷದವರು ಕಳುಹಿಸಿದ ಕಾಗದ ಪತ್ರಕ್ಕೆ ಸಹಿ ಹಾಕಿ ಕೊಡುವುದೇ ಅವರ ಕೆಲಸ. ಅದನ್ನು ಬಿಟ್ಟರೆ ವಿದೇಶ ಸುತ್ತುವುದು, ಕಲಾಪದ ಮೊದಲ ದಿನ ಜಂಟಿ ಅಧಿವೇಶನ ಕುರಿತು ಆಡಳಿತ ಪಕ್ಷದವರು ಬರೆದುಕೊಟ್ಟ ಭಾಷಣ ಮಾಡುವುದು, ಪ್ರಶಸ್ತಿ ವಿತರಿಸುವುದು ಅಷ್ಟೇ ಅವರ ಕೆಲಸ ಎಂಬ ತಾತ್ಸಾರ ಭಾವನೆಯಿದೆ. ಆದರೆ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ತಮ್ಮ ಶ್ರೇಷ್ಠ ವ್ಯಕ್ತಿತ್ವದ ಮೂಲಕ ರಾಷ್ಟ್ರಪತಿ ಸ್ಥಾನಕ್ಕೂ, ರಾಷ್ಟ್ರಪತಿ ಭವನದ ಮೇಲೆ ಜನರು ಹೊಂದಿದ್ದ ಇಂತಹ ಕಲ್ಪಿತ ಭಾವನೆಯನ್ನು ತೊಡೆದು ಹಾಕಿ ಜನಮನ್ನಣೆಯನ್ನು ಪಡೆದಿದ್ದರು. ಇದೀಗ ದ್ರೌಪದಿ ಮುರ್ಮು ನಿಜವಾದ ದೇಶಭಕ್ತಿಗೆ ಯಾವ ಮಳೆ, ಗಾಳಿಯೂ ಯಾವ ಅಡ್ಡಿಪಡಿಸಲು ಸಾಧ್ಯವಿಲ್ಲ ಎಂದು ತೋರಿಸಿಕೊಟ್ಟರು. ಬಹುಶಃ ಇಂತಹ ಒಂದು ಸನ್ನಿವೇಶವನ್ನು ನಾವ್ಯಾರು ಊಹಿಸಿರಲಿಲ್ಲ.

ನಮಗೆಲ್ಲಾ ಜೀವನದಲ್ಲಿ ಒಬ್ಬ ಆದರ್ಶ ವ್ಯಕ್ತಿಗಳು ಇದ್ದೇ ಇರುತ್ತಾರೆ. ಅವರು ರಾಜಕೀಯ ನಾಯಕರಾಗಿಬಹುದು, ಸಿನಿಮಾ ತಾರೆಯರಾಗಿರಬಹುದು, ಯಶಸ್ವಿ ಉದ್ಯಮಿಯಾಗಿರಬಹುದು, ಕ್ರೀಡಾಪಟುವಾಗಿರಬಹುದು, ಉನ್ನತ ಅಧಿಕಾರ-ಸ್ಥಾನಮಾನ ಹೊಂದಿರುವ ಸಮಾಜದ ಪ್ರತಿಷ್ಠಿತ ವ್ಯಕ್ತಿ ಹೀಗೆ ಒಬ್ಬರಲ್ಲ ಒಬ್ಬರು ಇದ್ದೇ ಇರುತ್ತಾರೆ. ಹಾಗಾಗಿ ಅವರೆಲ್ಲರಿಗೂ ಗುರುತರವಾದ ಬಹುದೊಡ್ಡ ಹೊಣೆಗಾರಿಕೆ ಇದೆ, ಏಕೆಂದರೆ ಅವರ ನಡೆ ನುಡಿಗಳನ್ನು ಅವರ ಅನುಯಾಯಿಗಳು, ಅಭಿಮಾನಿಗಳು ಚಾಚು ತಪ್ಪದೇ ಪಾಲಿಸುವ ಕಾರಣ ಮನಸೋ ಇಚ್ಛೆ ವರ್ತಿಸುವಂತಿಲ್ಲ. ಹೇಗೆ ತಂದೆ-ತಾಯಿ ಹೇಳಿಕೊಟ್ಟ ಪಾಠಕ್ಕಿಂತ, ತರಗತಿಯಲ್ಲಿ ಹೇಳಿಕೊಟ್ಟ ಪಾಠವೇ ಸರಿ ಎಂದು ಮನೆಯಲ್ಲಿ ಮಕ್ಕಳು ವಾದಿಸುತ್ತಾರೋ, ನಾವು ಹಾಗೇ ನಮ್ಮ ನೆಚ್ಚಿನ ನಾಯಕರ ಜೀವನ, ಅವರ ನಡೆ-ನುಡಿಯನ್ನು ತಪ್ಪದೇ ಅನುಕರಿಸುತ್ತೇವೆ. ಹಾಗಾಗಿ ಇಂತಹ ಆದರ್ಶ ವ್ಯಕ್ತಿಗಳು ತಮ್ಮ ಜೀವನವನ್ನು ಮತ್ತೊಬ್ಬರ ಮಾದರಿ ಬದುಕಿಗೆ ಸ್ಫೂರ್ತಿ ಆಗುವ ರೀತಿಯಲ್ಲಿ ಬದುಕಿದಾಗ ಮಾತ್ರ ಅದಕ್ಕೊಂದು ಅರ್ಥ.

ಪ್ರತಿ ನಿತ್ಯವೂ ದೇಶಕ್ಕಾಗಿ ನಾವು ಪ್ರಾಣ ಬೇಕಾದರೂ ಕೊಡುತ್ತೇವೆ. ನಾವು ದೇಶಕ್ಕಾಗಿ ಯಾವ ತ್ಯಾಗ ಬೇಕಾದರೂ ಮಾಡಬಲ್ಲೆ ಎಂದೆಲ್ಲಾ ಸುಲಭವಾಗಿ ಹೇಳುತ್ತಾ ತಿರುಗುತ್ತೇವೆ. ಆದರೆ ಮೊನ್ನೆಯ ಮಳೆಯು ನಮ್ಮ ದೇಶಭಕ್ತಿಯನ್ನು ಪರೀಕ್ಷಿಸಲು ಸಜ್ಜಾಗಿ ಬಂದಾಗ ನಾವು ದೇಶಭಕ್ತಿ ಮರೆಯುವಲ್ಲಿ ಸೋತು ಬಿಟ್ಟೆವಾ ಎಂದೆನಿಸಿತು. ನಮ್ಮ ದೇಶಭಕ್ತಿಯು ಮಳೆಯ ಮುಂದೆ ಟುಸ್ ಪಟಾಕಿಯಾಗಿ ಬಿಟ್ಟಿತ್ತಲ್ಲಾ ಎಂದು ಕಾಡಿತು.

ದೇಶಸೇವೆಯೇ ಈಶ ಸೇವೆ ಎಂಬ ಮಾತೊಂದಿದೆ. ಹಾಗೆಂದು ದೇಶಕ್ಕಾಗಿ ಗಡಿಯಲ್ಲಿ ನಿಂತು ಯುದ್ಧ ಮಾಡಿದರೆ ಮಾತ್ರ ನಾವು ದೇಶ ಸೇವೆ ಮಾಡಿದಂತಲ್ಲ. ಬದಲಾಗಿ ದೇಶಭಕ್ತಿಯನ್ನು ಮೆರೆಯಲು ಮೊನ್ನೆ ಸಿಕ್ಕ ಅವಕಾಶವು ಒಂದಾಗಿತ್ತು.

ನಮ್ಮ ನಮ್ಮ ಹಕ್ಕುಗಳಿಗಾಗಿ ಹೇಗೆ ಹೋರಾಟ ಮಾಡುತ್ತೇವೋ, ಅಂತೆಯೇ ನಮ್ಮ ಸಾಂವಿಧಾನಿಕ ಕರ್ತವ್ಯಗಳನ್ನು ನಿಭಾಯಿಸುವುದೂ ಸಹ ದೇಶ ಸೇವೆಯೇ ಆಗಿದೆ. ದೇಶದ ಪ್ರಥಮ ಪ್ರಜೆಯ ತಮಗೆ ಸಿಕ್ಕ ಅಭೂತಪೂರ್ವ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು ದೇಶದ ಪ್ರಜೆಗಳಿಗೆ ಚೆಂದದ ಮಾದರಿ ಪಾಠವನ್ನು ಕಲಿಸಿದ ರೀತಿ ನಮಗೆಲ್ಲಾ ಸ್ಫೂರ್ತಿಯಾಗಬೇಕು.

ದೇಶದ ಪ್ರಥಮ ಪ್ರಜೆಯಾಗಿ ತಮಗಿದ್ದ ವಿಶೇಷ ಸೌಲಭ್ಯಗಳನ್ನು ಧಿಕ್ಕರಿಸಿ ಸಾಮಾನ್ಯ ನಾಗರಿಕರಂತೆ ದೇಶಭಕ್ತಿಯನ್ನು ಪ್ರಕಟಪಡಿಸಿದ್ದು ನಮಗೆಲ್ಲಾ ಆದರ್ಶಪ್ರಾಯವಾಗಬೇಕಿದೆ. ಬಹುಶಃ ಅಂದು ಅವರು ಕೊಡೆ ಬಳಸಿಯೋ, ರೈನ್‌ಕೋಟ್ ಧರಿಸಿಯೋ ಬಂದು ಗೌರವ ನಮನ ಸಲ್ಲಿಸಿದ್ದರೆ ಇಂತಹ ಒಂದು ಮಾದರಿ ದೇಶಭಕ್ತಿಯ ಪಾಠ ಕಲಿಯಲು ನಮಗೆಂದಿಗೂ ಸಾಧ್ಯವಾಗುತ್ತಿರಲಿಲ್ಲ.

ದೇಶ ನಮಗೆಲ್ಲಾ ಗೌರವವನ್ನು, ಗುರುತನ್ನು ನೀಡಿದೆ. ಆದರೆ ನಾವು ದೇಶಕ್ಕಾಗಿ ಏನು ನೀಡಿದ್ದೇವೆ ಎಂಬುದನ್ನು ಒಮ್ಮೆ ಪ್ರಶ್ನಿಸಿಕೊಳ್ಳಬೇಕಿದೆ. ದಿನ ಬೆಳಗಾದರೆ ಜಾತಿ, ಮತ, ಪಂಥ, ಧರ್ಮ, ಅಧಿಕಾರಕ್ಕಾಗಿ ಕಿತ್ತಾಡುವ ನಾವು ಇನ್ನಾದರೂ ಸಾಮರಸ್ಯದಿಂದ ನಾವೆಲ್ಲಾ ಭಾರತೀಯರು ಎಂಬ ಮನೋಭಾವದಿಂದ ಒಗ್ಗಟ್ಟಿನಿಂದ ಬದುಕಿ ವಿಶ್ವಕ್ಕೇ ಮಾದರಿಯಾಗಬೇಕಿದೆ. ಸ್ವಾತಂತ್ರ್ಯ ಸುಮ್ಮನೆ ಸಿಕ್ಕಿಲ್ಲ, ಅದರ ಹಿಂದೆ ಅನೇಕ ನಿಸ್ವಾರ್ಥ ಜನರ ತ್ಯಾಗ, ಬಲಿದಾನ ಕತೆಯಿದೆ, ಹೋರಾಟವಿದೆ, ಹಾಗಾಗಿ ಗಾಳಿ, ಮಳೆ, ಚಳಿ, ಬಿಸಿಲು ಯಾವುದು ಸಹ ನಮ್ಮ ದೇಶಭಕ್ತಿಯನ್ನು ಅಲುಗಾಡಿಸದಿರಲಿ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:10, Issue: 218

ಸಮಾಚಾರ ಸಣ್ಣದಲ್ಲ

ಪ.ಬಂ. ಕಾರ್ಮಿಕರು ಮರಳಿದರೆ 5000 ರು.

ಕೋಲ್ಕತ್ತ: ಪಶ್ಚಿಮ ಬಂಗಾಳದಿಂದ ವಲಸೆ ಹೋದ ಕಾರ್ಮಿಕರನ್ನು ವಾಪಸ್ ಕರೆತರಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 'ಶ್ರಮಶ್ರೀ' ಯೋಜನೆ ಘೋಷಿಸಿದ್ದಾರೆ. ರಾಜ್ಯದಿಂದ ಬೇರೆ ರಾಜ್ಯಗಳಿಗೆ ಕೆಲಸ ಅರಸಿ ವಲಸೆ ಹೋಗಿರುವ ಕಾರ್ಮಿಕರು ರಾಜ್ಯಕ್ಕೆ ವಾಪಸಾದರೆ ಅವರಿಗೆ ಮಾಸಿಕ 5 ಸಾವಿರ ರು.ಗಳ ಆರ್ಥಿಕ ನೆರವು ನೀಡಲಾಗುವುದು ಎಂದು ಸಚಿವ ಸಂಪುಟ ಸಭೆಯ ನಂತರ ಪ್ರಕಟಿಸಿದ್ದಾರೆ. ವಲಸೆ ಕಾರ್ಮಿಕರು ರಾಜ್ಯಕ್ಕೆ ಮರಳಿದರೆ 'ಖಾದ್ಯ ಸತಿ' ಮತ್ತು 'ಸ್ವಸ್ಥ ಸತಿ'ಯಂತಹ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನವನ್ನೂ ಪಡೆಯುವರು. ಜತೆಗೆ 'ಶ್ರಮಶ್ರೀ' ಯೋಜನೆಯಡಿ 12 ತಿಂಗಳು ಕಾಲ ಮಾಸಿಕ 5,000 ರು. ಭತ್ಯೆ ಪಡೆಯಲಿದ್ದಾರೆ. ರಾಜ್ಯಕ್ಕೆ ಮರಳುವ ಕಾರ್ಮಿಕರಿಗೆ ಉತ್ತಮ ಕೌಶಲವಿದ್ದರೆ ಉದ್ಯೋಗ ಒದಗಿಸುತ್ತೇವೆ. ಕೌಶಲ ರಹಿತರಾಗಿದ್ದರೆ ಅಗತ್ಯ ತರಬೇತಿ ನೀಡಿ 'ಉದ್ಯೋಗ ಕಾರ್ಡ್' ವಿತರಿಸುತ್ತೇವೆ ಎಂದು ವಿವರಿಸಿದ್ದಾರೆ.

ರಿಷಿಗೆ ಕೊಲೆ ಬೆದರಿಕೆ: 14 ವಾರ ಜೈಲುಶಿಕ್ಷೆ

ಲಂಡನ್: ಬ್ರಿಟಿಷ್ ಪ್ರಧಾನಿಯಾಗಿದ್ದ ರಿಷಿ ಸುನಕ್ ಅವರಿಗೆ 2024ರ ಜೂನ್‌ನಲ್ಲಿ ಜನಾಂಗೀಯ ನಿಂದನೆ ಮಾಡಿ, ಕೊಲೆ ಬೆದರಿಕೆ ಇಮೇಲ್ ಕಳುಹಿಸಿದ್ದ ವಾಯುವ್ಯ ಇಂಗ್ಲೆಂಡ್‌ನ ಮರ್ಸಿಸೈಡ್‌ನ 21 ವರ್ಷದ ಯುವಕ ಲಿಯಾಮ್ ಶಾ ಎಂಬಾತನಿಗೆ ಬ್ರಿಟನ್‌ನ ನ್ಯಾಯಾಲಯವೊಂದು 14 ವಾರಗಳ ಜೈಲು ಶಿಕ್ಷೆ ವಿಧಿಸಿದೆ. 2 ವರ್ಷ ಜಾಲತಾಣ ಬಳಕೆ ನಿರ್ಬಂಧ ವಿಧಿಸಲಾಗಿದೆ. ಯುವಕ ತಪ್ಪು ಒಪ್ಪಿಕೊಂಡಿದ್ದಾನೆ.

ಕೇರಳದಲ್ಲಿ ಭಾರೀ ಮಳೆ

ತಿರುವನಂತಪುರಂ: ಕೇರಳದಲ್ಲಿಯೂ ಹಲವೆಡೆ ಭಾರೀ ಮಳೆಯಾಗುತ್ತಿದ್ದು, ನದಿಗಳೆಲ್ಲಾ ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಪತ್ತನಂತಿಟ್ಟ, ಪಾಲಕ್ಕಾಡು ಜಿಲ್ಲೆಗಳಲ್ಲಿನ ಇಡುಕ್ಕಿ, ತ್ರಿಶೂರು, ವಯನಾಡು ಅಣೆಕಟ್ಟೆಗಳೆಲ್ಲಾ ಭರ್ತಿಯಾಗಿವೆ. ವಯನಾಡು, ಕಣ್ಣೂರ್, ಕಾಸರಗೋಡು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್, 6 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ.

ಚೀನಾ ಸಚಿವ ವಾಂಗ್ ನಾಳೆ ಪಾಕಿಸ್ತಾನಕ್ಕೆ!

ದೆಹಲಿ: ಭಾರತ ಪ್ರವಾಸದಲ್ಲಿರುವ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ದ್ವಿಪಕ್ಷೀಯ ಸಭೆ ಫಲಪ್ರದವಾಗಿದೆ ಎಂದು ಹೇಳಲಾಗಿದೆ. ಭಾರತದಲ್ಲಿನ 2 ದಿನಗಳ ಪ್ರವಾಸದ ಬಳಿಕ ಸಚಿವ ವಾಂಗ್ ಅವರು ಅಜಿತ್ ದೋವಲ್, ಜೈಶಂಕರ್ ಮತ್ತು ಪ್ರಧಾನಿ ನರೇಂದ್ರ ಮೋದಿ ಜತೆಗಿನ ಉನ್ನತ ಮಟ್ಟದ ಸಭೆ ಬೆನ್ನಲ್ಲೇ ಗುರುವಾರ ಪಾಕಿಸ್ತಾನಕ್ಕೆ ತೆರಳುತ್ತಿದ್ದಾರೆ. ಪಾಕ್ ಉಪ ಪ್ರಧಾನಿಯೂ ಆಗಿರುವ ವಿದೇಶಾಂಗ ಸಚಿವ ಇಶಾಕ್ ದರ್ ಅವರ ಆಹ್ವಾನದ ಮೇರೆಗೆ 6ನೇ ಪಾಕಿಸ್ತಾನ-ಚೀನಾ ವಿದೇಶಾಂಗ ಸಚಿವರ ಕಾರ್ಯತಂತ್ರ ಸಭೆಯಲ್ಲಿ ಪಾಲ್ಗೊಳ್ಳಲು ವಾಂಗ್ ಗುರುವಾರ ಇಸ್ಲಾಮಾಬಾದ್ ಗೆ ಭೇಟಿ ನೀಡಲಿದ್ದಾರೆ ಎಂದು ಇಸ್ಲಾಮಾಬಾದ್‌ನಿಂದ ಅಧಿಕೃತ ಹೇಳಿಕೆ ಬಿಡುಗಡೆಯಾಗಿದೆ.

ವಿದ್ಯುತ್ ಸ್ಪರ್ಶಕ್ಕೆ 3 ಬಲಿ

ಹೈದರಾಬಾದ್: ತೆಲಂಗಾಣದ ರಾಜಧಾನಿ ನಗರ ಹೈದರಾಬಾದ್‌ನಲ್ಲಿ ಗಣೇಶ ಮೂರ್ತಿಗಳನ್ನು ಸಾಗಿಸುತ್ತಿದ್ದಾಗ ವಿದ್ಯುತ್ ತಂತಿ ಸ್ಪರ್ಶವಾಗಿದ್ದರಿಂದ ಪ್ರತ್ಯೇಕ ಘಟನೆಗಳಲ್ಲಿ ಮೂವರು ಸಾವನ್ನಪ್ಪಿದ್ದಾರೆ. ಎರಡು ದಿನಗಳಲ್ಲಿ(ಮಂಗಳವಾರ ಮತ್ತು ಭಾನುವಾರ) ಈ ಅವಘಡಗಳು ಸಂಭವಿಸಿವೆ. ಗಣೇಶ ವಿಗ್ರಹ ಮೆರವಣಿಗೆ ಸಮಯದ ಸುರಕ್ಷತಾ ಕ್ರಮಗಳ ಬಗ್ಗೆ ಜನರು ಕಳವಳ ವ್ಯಕ್ತಪಡಿಸಿದ್ದಾರೆ. ಬಂಡ್ಲಗುಡದಲ್ಲಿ ಜನರ ದೊಡ್ಡ ಗುಂಪು ಮಂಗಳವಾರ ನಸುಕಿನ 1ರ ವೇಳೆ ಗಣೇಶ ಮೂರ್ತಿ ಸಾಗಿಸುವಾಗ ವಾಹನಕ್ಕೆ ಹೈಟೆನ್ಷನ್ ವಿದ್ಯುತ್ ತಂತಿ ಸ್ಪರ್ಶಿಸಿದ್ದರಿಂದ ಇಬ್ಬರು ದುರ್ಮರಣಕ್ಕೀಡಾಗಿ, ಒಬ್ಬರು ತೀವ್ರವಾಗಿ ಗಾಯಗೊಂಡರು. ಎತ್ತರವಾಗಿದ್ದ ಗಣೇಶ ವಿಗ್ರಹಕ್ಕೆ ದಾರಿ ಮಾಡಿಕೊಡಲು ವಿದ್ಯುತ್ ತಂತಿಯನ್ನು ಬಿದಿರು ಕೋಲಿನಿಂದ ಮೇಲೆತ್ತಲು ಯತ್ನಿಸಿದಾಗ ವಿದ್ಯುತ್ ಸ್ಪರ್ಶವಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಬಂಡ್ಲಗುಡ ಪೊಲೀಸ್ ಠಾಣೆ ಅಧಿಕಾರಿ ತಿಳಿಸಿದ್ದಾರೆ. ಅಂಬರಪೇಟೆಯಲ್ಲಿ ಭಾನುವಾರ ಗಣೇಶ ಮೂರ್ತಿ ಸಾಗಣೆ ವೇಳೆ ಒಬ್ಬರು ವಿದ್ಯುತ್ ಸ್ಪರ್ಶಕ್ಕೆ ಸಿಲುಕಿ ಸಾವನ್ನಪ್ಪಿದ್ದಾರೆ. ಮೃತನನ್ನು ಅಂಬರಪೇಟೆಯ ಯುವಕ ರಾಮ್ ಚರಣ್ ಗುರುತಿಸಲಾಗಿದೆ. ಇದಕ್ಕೂ ಮುನ್ನ ಭಾನುವಾರ ತಡರಾತ್ರಿ ಶ್ರೀಕೃಷ್ಣ ಜನ್ಮಾಷ್ಟಮಿ ರಥ ಎಳೆಯುತ್ತಿದ್ದಾಗಲೂ ಕಳಸ ವಿದ್ಯುತ್ ತಂತಿಗೆ ತಗುಲಿ ಐವರು ಬಲಿಯಾಗಿ, ನಾಲ್ವರು ಗಾಯಗೊಂಡಿದ್ದಾರೆ.

{ ತೇಜಸ್ವಿ ಯಾದವ್ } ಆರ್‌ಜೆಡಿ ನಾಯಕ

ಹಳೆಯ-ಹಳಸಿದ ಎನ್‌ಡಿಎ ಸರಕಾರ ಕಿತ್ತೊಗೆದು, ಮುಂದಿನ ಚುನಾವಣೆಯಲ್ಲಿ ರಾಹುಲ್ ಗಾಂಧಿಯನ್ನು ಪ್ರಧಾನಿ ಮಾಡಲು ಯುವಜನತೆ ಸಂಕಲ್ಪ ಮಾಡಿದೆ. ಬಿಹಾರದಲ್ಲೂ ನಿತೀಶ್ ಕುಮಾರ್‌ರನ್ನು ಕೆಳಕ್ಕಿಳಿಸಿ ಹೊಸ ಸರಕಾರ ತರಲು ರಾಜ್ಯದ ಜನತೆ ಉತ್ಸುಕರಾಗಿದ್ದಾರೆ. ಬಿಹಾರ ಮತದಾರರ ಮತ ಹಕ್ಕು ಕಸಿಯಲು ಆಡಳಿತ ಪಕ್ಷದ ಪಿತೂರಿಯೇ 'ಎಸ್‌ಐಆರ್'.

ಸಭೆಯ ದಿನ, ಸ್ಥಳ ಇನ್ನಷ್ಟೇ ಅಂತಿಮಗೊಳ್ಳಬೇಕಿದೆ | ಯುದ್ಧ ನಿಲುಗಡೆ ನಿರೀಕ್ಷೆ ಹೆಚ್ಚಳ

ಶಾಂತಿ ಮಾತುಕತೆಗೆ ಪುಟಿನ್, ಝೆಲೆನ್‌ಸ್ಕಿ ಸಮ್ಮತಿ: ಟ್ರಂಪ್

ವಾಷಿಂಗ್ಟನ್: ದೀರ್ಘಾವಧಿ ಶಾಂತಿ ಒಪ್ಪಂದ ಕುರಿತು ತ್ರಿಪಕ್ಷೀಯ ಸಭೆಯಲ್ಲಿ ಮಾತುಕತೆ ನಡೆಸುವುದಕ್ಕೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಒಪ್ಪಿಕೊಂಡಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದ್ದಾರೆ. ಆದರೆ ಸ್ಥಳ ಮತ್ತು ದಿನಾಂಕ ಹಾಗೂ ಸಮಯ ಇನ್ನೂ ನಿಗದಿಯಾಗಿಲ್ಲ.

ರಷ್ಯಾ-ಉಕ್ರೇನ್ ಶಾಂತಿ ಒಪ್ಪಂದ ಬಗ್ಗೆ ಎಲ್ಲರೂ ಬಹಳ ಕಾತುರಾಗಿದ್ದಾರೆ. ಪುಟಿನ್ ಕೂಡ ಝೆಲೆನ್‌ಸ್ಕಿ ಭೇಟಿಗೆ ಒಪ್ಪಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ. ಈ ಹೇಳಿಕೆ, 4 ವರ್ಷಗಳಷ್ಟು ಸುದೀರ್ಘ ಕಾಲದ ರಷ್ಯಾ-ಉಕ್ರೇನ್ ಯುದ್ಧಕ್ಕೆ ಪೂರ್ಣವಿರಾಮ ಸಿಗುವ ನಿರೀಕ್ಷೆಗಳನ್ನು ಮೂಡಿಸಿದೆ.

ಸೋಮವಾರ ಮಧ್ಯಾಹ್ನ(ಅಮೆರಿಕ ಸಮಯ) ವಾಷಿಂಗ್ಟನ್ ಡಿಸಿಯಲ್ಲಿರುವ ಶ್ವೇತಭವನದಲ್ಲಿ ನಡೆದ ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಮತ್ತು ಡೊನಾಲ್ಡ್ ಟ್ರಂಪ್ ನಡುವಿನ ಮಹತ್ವದ ಈ ಸಭೆಗೆ ಯೂರೋಪ್ ದೇಶಗಳ ನಾಯಕರು, ಯೂರೋಪ್ ಒಕ್ಕೂಟದ ಅಧ್ಯಕ್ಷೆ ಕೂಡಾ ಆಗಮಿಸಿದ್ದರು.

ರಷ್ಯಾ-ಉಕ್ರೇನ್ ಯುದ್ಧ ನಿಲುಗಡೆಗೆ ಪುಟಿನ್ ವಿಧಿಸಿರುವ ಕೆಲವು ಷರತ್ತುಗಳ ಬಗ್ಗೆ ಝೆಲೆನ್‌ಸ್ಕಿ ಅವರಿಗೆ ಟ್ರಂಪ್ ಮನವರಿಕೆ ಮಾಡಿಕೊಟ್ಟರು.

ಝೆಲೆನ್‌ಸ್ಕಿ ಜತೆಗಿನ ಸಭೆ ಬಳಿಕ ಸುದ್ದಿಸಂಸ್ಥೆಗಳ ಜತೆ ಮಾತನಾಡಿದ ಟ್ರಂಪ್, ರಷ್ಯಾ-ಉಕ್ರೇನ್ ದೇಶಗಳ ನಾಯಕರಿಬ್ಬರೂ ಯುದ್ಧವನ್ನು ಕೊನೆಗೊಳಿಸಲು ಬಯಸುತ್ತಾರೆ ಎಂಬುದು ನನ್ನ ಬಲವಾದ ನಂಬಿಕೆ. ಏಕೆಂದರೆ ಇಬ್ಬರೂ ನಾಯಕರು ಒಂದೆಡೆ ಕುಳಿತು ನೇರವಾಗಿ ಶಾಂತಿ ಮಾತುಕತೆ ನಡೆಸಲು ಒಪ್ಪಿಕೊಂಡಿದ್ದಾರೆ. ಈ ಸಭೆಯ ಬಳಿಕ ಇಬ್ಬರೂ ನಾಯಕರೊಂದಿಗೆ ನಾನೇ ಸಭೆ ನಡೆಸುವೆ. ಈಗಿನದ್ದು ಝೆಲೆನ್‌ಸ್ಕಿ ಅವರೊಂದಿಗಿನ ಕೊನೆ ಸಭೆಯೇನೂ ಅಲ್ಲ ಎಂದರು. ಎಲ್ಲವೂ ನಾನು ಅಂದುಕೊಂಡಂತೆಯೇ ಸರಿಯಾದ ಮಾರ್ಗದಲ್ಲಿ ನಡೆದರೆ ತ್ರಿಪಕ್ಷೀಯ ಮಾತುಕತೆ ಸಹ ಸದ್ಯದಲ್ಲೇ ನಡೆಯಲಿದೆ ಎಂದೂ ಹೇಳಿದರು.

ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರುಬಿಯೊ, ಯೂರೋಪ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವೊನ್ ಡೇರ್ ಲೆಯೆನ್, 'ನ್ಯಾಟೊ' ಒಕ್ಕೂಟದ ಮುಖ್ಯಸ್ಥ ಮಾರ್ಕ್ ರುಟ್ಟೆ, ಬ್ರಿಟನ್ ಪ್ರಧಾನಿ ಕೇರ್ ಸ್ಟಾರ್ಮರ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರಾನ್, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಮತ್ತಿತರರು ಉಪಸ್ಥಿತರಿದ್ದರು.

ಸಭೆಗೆ ಮುಜುಗರ ತಂದ ಟ್ರಂಪ್ ನಡೆ!: ಯೂರೋಪ್ ಒಕ್ಕೂಟ ಮತ್ತು ಯೂರೋಪ್ ದೇಶಗಳ ನಾಯಕರು ಉಪಸ್ಥಿತರಿದ್ದ ಸಭೆಯಲ್ಲಿ ಚರ್ಚೆ ನಡೆದಿರುವ ಮಧ್ಯೆಯೇ ಡೊನಾಲ್ಡ್ ಟ್ರಂಪ್ ಅವರು ರಷ್ಯಾ ಅಧ್ಯಕ್ಷ ಪುಟಿನ್ ಅವರಿಗೆ ದೂರವಾಣಿ ಕರೆ ಮಾಡಿ ಕೆಲವು ನಿಮಿಷ ಮಾತನಾಡಿ ಸಭೆಯಲ್ಲಿನ ಚರ್ಚೆ ಬಗ್ಗೆ ವಿವರ ನೀಡಿದರು. ಇದರಿಂದ ಸಭೆಯಲ್ಲಿ ಉಪಸ್ಥಿತರಿದ್ದ ವಿವಿಧ ದೇಶಗಳ ನಾಯಕರಿಗೆ ಮುಜುಗರ ಉಂಟಾಯಿತು ಎಂದು ವರದಿಯಾಗಿದೆ.

ರಷ್ಯಾ ಷರತ್ತು: ತ್ರಿಪಕ್ಷೀಯ ಮಾತುಕತೆಗೂ ಮುನ್ನ ರಷ್ಯಾಕ್ಕೆ ಭದ್ರತೆ ಮತ್ತು ಉಕ್ರೇನ್ ಭಾಗದಲ್ಲಿರುವ ರಷ್ಯನ್ ಭಾಷಿಗರ ಸುರಕ್ಷತೆ ಬಗ್ಗೆ ಖಾತರಿ ಸಿಗಬೇಕಿದೆ. ಆ ಬಳಿಕ ಶಾಂತಿ ಒಪ್ಪಂದದ ಮಾತುಕತೆಯಲ್ಲಿ ಭಾಗಿಯಾಗುವುದಾಗಿ ರಷ್ಯಾ ಷರತ್ತು ವಿಧಿಸಿದೆ ಎಂದು ಮಾಸ್ಕೊ ಮೂಲಗಳಿಂದ ಕೇಳಿಬಂದಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್-ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ನಡುವಿನ ಶ್ವೇತಭವನ ಸಭೆಯಲ್ಲಿ ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರುಬಿಯೊ, ಯೂರೋಪ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವೊನ್ ಡೇರ್ ಲೆಯೆನ್, 'ನ್ಯಾಟೊ' ಒಕ್ಕೂಟದ ಮುಖ್ಯಸ್ಥ ಮಾರ್ಕ್ ರುಟ್ಟೆ, ಬ್ರಿಟನ್ ಪ್ರಧಾನಿ ಕೇರ್ ಸ್ಟಾರ್ಮರ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರಾನ್, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಮತ್ತಿತರರಿದ್ದರು.

ಪುಟಿನ್ ಜತೆ ಯಾವುದೇ ಸಭೆಗೂ ಸಿದ್ಧ: ಝೆಲೆನ್‌ಸ್ಕಿ

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ, ಅಮೆರಿಕದಲ್ಲಿರುವಂತಹ ವಾಯು ರಕ್ಷಣಾ ವ್ಯವಸ್ಥೆ ಬೇರಾವ ದೇಶದಲ್ಲೂ ಇಲ್ಲ. ರಷ್ಯಾ-ಉಕ್ರೇನ್ ಯುದ್ಧ ಬೇಗ ಕೊನೆಗೊಳಿಸಲು ಟ್ರಂಪ್ ಶ್ರಮಿಸುತ್ತಿದ್ದಾರೆ. ಆ.15ರಂದು ಟ್ರಂಪ್-ಪುಟಿನ್ ಅಲಾಸ್ಕಾದಲ್ಲಿ ದ್ವಿಪಕ್ಷೀಯ ಸಭೆ ನಡೆಸಿದ್ದು, ಯಾವುದೇ ಒಪ್ಪಂದವಾಗಿಲ್ಲ. ಯುದ್ಧ ನಿಲುಗಡೆಯಾಗುವುದು ಬಹಳ ಮುಖ್ಯ. ಅದು ಕೈಗೂಡಲಿದೆ ಎಂಬ ವಿಶ್ವಾಸವಿದೆ ಎಂದಿದ್ದಾರೆ. ಪುಟಿನ್ ಜತೆ ಯಾವುದೇ ರೀತಿಯ ಸಭೆಗಾದರೂ ಸಿದ್ಧನಿದ್ದೇನೆ. ಮೊದಲ ಸಭೆ ಹೇಗೆ ನಡೆಯುತ್ತದೆ ಎಂಬುದನ್ನು ಆಧರಿಸಿ ಮುಂದಿನ ತ್ರಿಪಕ್ಷೀಯ ಸಭೆಯಲ್ಲಿ ಭಾಗವಹಿಸುವೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಯಾವುದೇ ಷರತ್ತುಗಳಿಲ್ಲದೆ ನಾವಿಬ್ಬರೂ ಭೇಟಿಯಾಗಬೇಕು. ಯುದ್ಧ ಕೊನೆಗೊಳಿಸಲು ಈ ಮಾರ್ಗದಲ್ಲಿ ಮತ್ತಷ್ಟು ಪ್ರಗತಿ ಕಾಣುವ ಬಗೆಗೂ ಆಲೋಚಿಸಬೇಕು ಎಂಬುದು ನನ್ನ ವಾದ ಎಂದರು.

6 ಯುದ್ಧ ನಿಲ್ಲಿಸಿದೆ-ಟ್ರಂಪ್: ಕಳೆದ ಆರು ತಿಂಗಳಲ್ಲಿ ನಾನು ಒಟ್ಟು 6 ಯುದ್ಧಗಳನ್ನು ನಿಲ್ಲಿಸಿದ್ದೇನೆ ಎಂದು ಹೇಳಿದ ಡೊನಾಲ್ಡ್ ಟ್ರಂಪ್, ಆದರೆ, ಈ ರಷ್ಯಾ-ಉಕ್ರೇನ್ ನಡುವೆ 4 ವರ್ಷಗಳಿಂದ ನಡೆದಿರುವ ಯುದ್ಧವನ್ನು ನಿಲ್ಲಿಸುವುದು ಸ್ವಲ್ಪ ಕಷ್ಟಕರವಾದ ಕೆಲಸ ಎಂದು ನಾನು ಬಲ್ಲೆ. ಈ ಯುದ್ಧಕ್ಕೆ ಜೋ ಬೈಡನ್ ಕಾರಣ. ಆದರೆ ಈ ಯುದ್ಧವೂ ಖಂಡಿತಾ ಸದ್ಯದಲ್ಲೇ ನಿಲುಗಡೆಯಾಗಲಿದೆ ಎಂದು ನಾನು ನಂಬಿದ್ದೇನೆ. ಯುದ್ಧ ಕೊನೆಗೊಳಿಸಲು ರಷ್ಯಾ ಮತ್ತು ಉಕ್ರೇನ್ ಒಟ್ಟಾಗಿ ಕೆಲಸ ಮಾಡುತ್ತವೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಆಂಧ್ರ ಕೃಷಿಕ ಕುಟುಂಬದಲ್ಲಿ ಜನಿಸಿದ ನ್ಯಾ. ಸುದರ್ಶನ್ ರೆಡ್ಡಿ

ಉಪ ರಾಷ್ಟ್ರಪತಿ ಹುದ್ದೆಗೆ 'ಇಂಡಿ' ಒಕ್ಕೂಟ ಅಭ್ಯರ್ಥಿ ಎನ್‌ಡಿಎ ಅಭ್ಯರ್ಥಿ ಪಿ.ರಾಧಾಕೃಷ್ಣನ್‌ಗೆ ಎದುರಾಳಿ

ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ

- **1985:** ಅವಿಭಜಿತ ಆಂಧ್ರಪ್ರದೇಶದಲ್ಲಿ ವಕೀಲ ವೃತ್ತಿ ಆರಂಭ
- **1995 ಮೇ 2:** ಆಂಧ್ರಪ್ರದೇಶ ಹೈಕೋರ್ಟ್ ಖಾಯಂ ನ್ಯಾಯಾಧೀಶರಾಗಿ ನೇಮಕ
- **2005 ಡಿ.5:** ಗುವಾಹಟಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ವರ್ಗಾವಣೆ
- **2007 ಜ.12:** ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ಬಡ್ತಿ
- **2011 ಜು.8:** ಸುಪ್ರೀ ಕೋರ್ಟ್ ಸೇವೆಯಿಂದ ನಿವೃತ್ತಿ
- ನಿವೃತ್ತಿ ಬಳಿಕ 2013ರಲ್ಲಿ ಗೋವಾದ ಮೊದಲ ಲೋಕಾಯುಕ್ತರಾಗಿ ನೇಮಕ
- ಕೆಲ ತಿಂಗಳ ಬಳಿಕ ವೈಯಕ್ತಿಕ ಕಾರಣ ನೀಡಿ ಲೋಕಾಯುಕ್ತ ಹುದ್ದೆಗೆ ರಾಜೀನಾಮೆ
- **2025 ಆ.19:** ಉಪ ರಾಷ್ಟ್ರಪತಿ ಹುದ್ದೆಗೆ 'ಇಂಡಿ' ಒಕ್ಕೂಟ ಅಭ್ಯರ್ಥಿಯಾಗಿ ಘೋಷಣೆ

ದೆಹಲಿ: ಉಪ ರಾಷ್ಟ್ರಪತಿ ಹುದ್ದೆಗೆ ಸೆ.9ರಂದು ಚುನಾವಣೆ ನಡೆಯಲಿದ್ದು, ಪ್ರತಿಪಕ್ಷಗಳ ಒಕ್ಕೂಟವಾದ 'ಇಂಡಿಯ' ಬಣದ ಅಭ್ಯರ್ಥಿಯಾಗಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ್ ರೆಡ್ಡಿ ಅವರನ್ನು ಮಂಗಳವಾರ ಘೋಷಿಸಲಾಗಿದೆ.

ಆಂಧ್ರಪ್ರದೇಶ ಮೂಲದ ನ್ಯಾ.ಬಿ.ಸುದರ್ಶನ್ ರೆಡ್ಡಿ 1946ರ ಜು.8ರಂದು ರಂಗಾರೆಡ್ಡಿ ಜಿಲ್ಲೆ ಇಬ್ರಾಹಿಂಪಟ್ಟಣಂ ತಾಲೂಕಿನ ಅಕುಲಾ ಮೈಲಾರಂ ಗ್ರಾಮದಲ್ಲಿ ರೈತ ಕುಟುಂಬದಲ್ಲಿ ಜನಿಸಿದರು. ಹೈದರಾಬಾದ್‌ನಲ್ಲಿ ಒಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಬಿಎ ಮತ್ತು ಎಲ್‌ಎಲ್‌ಬಿ ಪದವಿ ಗಳಿಸಿದರು. ಬಳಿಕ 1971ರ ಡಿ.27ರಂದು ಆಂಧ್ರಪ್ರದೇಶದ ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿಸಿಕೊಂಡು ವಕೀಲ ವೃತ್ತಿ ಆರಂಭಿಸಿದರು. ಅವಿಭಜಿತ ಆಂಧ್ರಪ್ರದೇಶ ಹೈಕೋರ್ಟ್‌ನಲ್ಲಿ 1988ರಿಂದ 1990ರವರೆಗೂ ವಕೀಲ ವೃತ್ತಿ ನಡೆಸಿದ್ದಾರೆ. ರಿಟ್ ಮತ್ತು ಸಿವಿಲ್ ವಿಷಯಗಳಲ್ಲಿ ಪ್ರಾಕ್ಟೀಸ್ ಮಾಡಿದ್ದಾರೆ. ನಂತರ 1988 ಮತ್ತು 1990ರ ನಡುವೆ ಕೇಂದ್ರ ಸರಕಾರದ ವಕೀಲರಾಗಿ ಮತ್ತು ಕೇಂದ್ರ ಸರಕಾರದ ಹೆಚ್ಚುವರಿ ಸ್ಥಾಯಿ ಕೌನ್ಸಿಲ್ ಆಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ ಉಸ್ಮಾನಿಯಾ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರ ಮತ್ತು ಸ್ಥಾಯಿ ಕೌನ್ಸಿಲ್ ಆಗಿಯೂ ಕೆಲಸ ಮಾಡಿದ್ದಾರೆ.

ಅದಷ್ಟೇ ಅಲ್ಲದೇ, ಜಾತಿ ಜನಗಣತಿ ನಂತರ ತೆಲಂಗಾಣ ಸರಕಾರ ಸ್ಥಾಪಿಸಿದ ಸ್ವತಂತ್ರ ತಜ್ಞರ ಕಾರ್ಯಪಡೆ(ಐಇಡಬ್ಲ್ಯುಜಿ)ಗೆ ಅಧ್ಯಕ್ಷರಾಗಿ ನೇಮಕವಾಗಿದ್ದರು. ಕಾಂಗ್ರೆಸ್ ಸರಕಾರದ ಸಾಮಾಜಿಕ-ಆರ್ಥಿಕ, ಶಿಕ್ಷಣ, ಉದ್ಯೋಗ, ರಾಜಕೀಯ ಮತ್ತು ಜಾತಿ (ಎಸ್‌ಇಇಇಪಿಸಿ) ಸಮೀಕ್ಷೆ ವಿಧಾನ ವೈಜ್ಞಾನಿಕ, ಅಧಿಕೃತ ಮತ್ತು ವಿಶ್ವಾಸಾರ್ಹ ಎಂದು ಸಮಿತಿಯಿಂದ ಅನುಮೋದನೆ ಮುದ್ರೆ ಒತ್ತಿದರು. ಜತೆಗೆ ಸರಕಾರಕ್ಕೆ ಸಮಿತಿಯ ಪರವಾಗಿ 300 ಪುಟಗಳ ವರದಿ ಸಲ್ಲಿಕೆಯಾಗಲು ಕಾರಣರಾದರು.



ಮಹತ್ವದ ತೀರ್ಪು-ಆದೇಶ

ನ್ಯಾಯಮೂರ್ತಿಯಾಗಿ ಸುದರ್ಶನ ರೆಡ್ಡಿ ಅವರು, ಹಲವಾರು ಪ್ರಮುಖ ತೀರ್ಪುಗಳನ್ನು ನೀಡಿದ್ದಾರೆ. ವಿಶೇಷವಾಗಿ ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳು ಮತ್ತು ಸಂವಿಧಾನಿಕ ವಿಷಯಗಳಿಗೆ ಸಂಬಂಧಿಸಿ ಮಹತ್ವದ ಆದೇಶಗಳನ್ನು ಹೊರಡಿಸಿದ್ದಾರೆ. ಆಳವಾದ ಕಾನೂನು ಜ್ಞಾನ ಮತ್ತು ಸುದೀರ್ಘ ನ್ಯಾಯಾಂಗದ ಸೇವೆಯಿಂದ ಗುರುತಿಸಿಕೊಂಡಿದ್ದಾರೆ.

ಭಾರತದ ಭವಿಷ್ಯದ ಗಗನಯಾನಕ್ಕೆ 50 ಗಗನಯಾತ್ರಿಗಳ ತಂಡ ಅಗತ್ಯ

ಶುಭಾಂಶು ಶುಕ್ಲಾ ಜತೆಗಿನ ಸಂವಾದ ವೇಳೆ ಪ್ರಧಾನಿ ಮೋದಿ ಅಭಿಮತ

18 ದಿನದ ಐಎಸ್‌ಎಸ್ ವಾಸ ಭವಿಷ್ಯದ ಯೋಜನೆಗೆ ಪ್ರಯೋಜನಕಾರಿ

ದೆಹಲಿ: ಭಾರತ ಭವಿಷ್ಯದಲ್ಲಿ ಕೈಗೊಳ್ಳಲಿರುವ ಬಾಹ್ಯಾಕಾಶ ಯಾನ, ಸಂಶೋಧನಾ ಕಾರ್ಯಗಳಿಗಾಗಿ ಕನಿಷ್ಠ 40-50 ಜನರ ದೊಡ್ಡ ಗಗನಯಾತ್ರಿಗಳ ತಂಡದ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರ ಪ್ರವೇಶಿಸಿದ ದೇಶದ ಪ್ರಥಮ ಗಗನಯಾನಿ, ಆಕ್ಸಿಯೋಂ-4 ಮಿಷನ್ ಗ್ರೂಪ್ ಕ್ಯಾಪ್ಟನ್, ಭಾರತೀಯ ವಾಯುಪಡೆಯ ಶುಭಾಂಶು ಶುಕ್ಲಾ ಜತೆಗಿನ ಸಂವಾದ ವೇಳೆ ಪ್ರಧಾನಿ ಮೋದಿ ಈ ಮಾತು ಹೇಳಿದರು.

ಪ್ರಧಾನಿ ಜತೆಗಿನ ಸಂವಾದದಲ್ಲಿ ಶುಭಾಂಶು ಶುಕ್ಲಾ ಅವರು ಬಾಹ್ಯಾಕಾಶ ಯಾನ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 18 ದಿನಗಳ ವಾಸ, ಐಎಸ್‌ಎಸ್‌ನಲ್ಲಿ ಕೈಗೊಂಡ ಮಹತ್ವದ 7 ಪ್ರಯೋಗಗಳು, ಶೂನ್ಯ ಗುರುತ್ವಾಕರ್ಷಕ ಸ್ಥಿತಿಗೆ ಹೊಂದಿಕೊಳ್ಳುವ ಕಷ್ಟ, ಬಳಿಕ ಭೂಮಿಗೆ ಮರಳಿದಾಗ ಮತ್ತೆ ಗುರುತ್ವಾಕರ್ಷಣೆ ಸ್ಥಿತಿಗೆ ದೇಹವನ್ನು ಮರು ಹೊಂದಾಣಿಕೆ ಮಾಡಿಸುವ ಸಂಕಷ್ಟದ ಬಗ್ಗೆ ಅನುಭವಗಳನ್ನು ಹಂಚಿಕೊಂಡರು. ಪ್ರಧಾನಿ ಮೋದಿ-ಶುಭಾಂಶು ಶುಕ್ಲಾ ಸಂವಾದದ ವೀಡಿಯೊವನ್ನು ಮಂಗಳವಾರ ಹಂಚಿಕೊಳ್ಳಲಾಗಿದೆ.

ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಏನು ಮಾಡುತ್ತಿದೆ ಎಂಬ ಬಗ್ಗೆ ಎಲ್ಲರಿಗೂ ತಿಳಿದಿತ್ತು. ನಾನು ಎಲ್ಲೇ ಹೋದರೂ, ಯಾರನ್ನೇ ಭೇಟಿಯಾದರೂ ನನ್ನ ಭೇಟಿಯಾಗಲು ಉತ್ಸುಕರಾಗಿದ್ದರು. ಭಾರತದ ಗಗನಯಾನ ಯೋಜನೆ ಬಗ್ಗೆ ವಿಶ್ವಾದ್ಯಂತದ ವಿಜ್ಞಾನಿಗಳು ಹೆಚ್ಚಿನ ಆಸಕ್ತಿ ತೋರಿದ್ದು, ಅದರ ಭಾಗವಾಗಲು ಉತ್ಸುಕರಾಗಿದ್ದಾರೆ. 'ನಿಮ್ಮ ಮಿಷನ್ ಯಾವಾಗ?' ಎಂದು ನನ್ನನ್ನು ಕೇಳುತ್ತಿದ್ದರೆಂದು ಶುಕ್ಲಾ ಪ್ರಧಾನಿಗೆ ವಿವರಿಸಿದರು.

ಚಂದ್ರಯಾನ-2ರ ವೈಫಲ್ಯದ ಹೊರತಾಗಿಯೂ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಸರಕಾರ ಪ್ರದರ್ಶಿಸುತ್ತಿರುವ ಬದ್ಧತೆಯನ್ನು ಶುಕ್ಲಾ ಶ್ಲಾಘಿಸಿದರು. ಭಾರತಕ್ಕೆ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಜಾಗತಿಕ ನಾಯಕನಾಗುವ ಸಾಮರ್ಥ್ಯವಿದೆ ಎಂದ ಶುಕ್ಲಾ, ನಾನೀಗ ಕೈಗೊಂಡ ಆಕ್ಸಿಯೊಂ-4 ಮಿಷನ್ ಯಶಸ್ವಿಯಾಗಿದೆ, ಭೂಮಿಗೆ ಸುರಕ್ಷಿತವಾಗಿ ಮರಳಿದ್ದೇವೆ. ಅಷ್ಟಕ್ಕೇ ಈ ಮಿಷನ್ ಅಂತ್ಯವಲ್ಲ, ಇದು ಭಾರತದ ಭವಿಷ್ಯದ ಗಗನಯಾನದ ಆರಂಭ ಎಂದರು.

ಭವಿಷ್ಯದ ಯೋಜನೆಗಳು

ಭಾರತ 2027ರಲ್ಲಿ ಮಾನವ ಸಹಿತ ಮೊದಲ ಗಗನಯಾನವನ್ನು ಕೈಗೊಳ್ಳಲು ಸಿದ್ಧವಾಗುತ್ತಿದೆ. ಅಲ್ಲದೇ, 2035ರ ವೇಳೆಗೆ 'ಭಾರತದ್ದೇ ಬಾಹ್ಯಾಕಾಶ ನಿಲ್ದಾಣ' ನಿರ್ಮಿಸಲು ಯೋಜಿಸಿದೆ. 2040ರ ವೇಳೆಗೆ ಚಂದ್ರನ ಮೇಲೆ ಭಾರತದ ಗಗನಯಾತ್ರಿಯನ್ನು ಇಳಿಸುವ ಯೋಜನೆಯನ್ನೂ ಹೊಂದಿದೆ.



ನಿಮ್ಮ ಅನುಭವ ಪ್ರಯೋಜನಕಾರಿ

ಮಿ.ಶುಭಾಂಶು, ನಿಮ್ಮ ಐಎಸ್‌ಎಸ್ ಮಿಷನ್ ಭಾರತದ ಭವಿಷ್ಯದ ಗಗನಯಾನಕ್ಕೆ ಮೊದಲ ಹೆಜ್ಜೆ ಎಂದು ಹೇಳಿದ್ದೆ' ಎಂದು ನೆನಪಿಸಿದ ಪ್ರಧಾನಿ ಮೋದಿ, 'ದೇಶಕ್ಕೆ ಬೇಕಾದ ಗಗನಯಾತ್ರಿಗಳ ತಂಡವನ್ನು ಸಿದ್ಧಪಡಿಸುವ ಕಾರ್ಯದಲ್ಲಿ ಮತ್ತು ಭಾರತದ ಬಾಹ್ಯಾಕಾಶ ಮಹತ್ವಾಕಾಂಕ್ಷೆ ಯೋಜನೆಗಳಿಗೆ ನಿಮ್ಮ ಗಗನಯಾನ ಮತ್ತು ಐಎಸ್‌ಎಸ್‌ನಲ್ಲಿನ 18 ದಿನಗಳ ಅನುಭವ ಸಹಾಯಕವಾಗಲಿದೆ' ಎಂದರು.

ಪ್ರಧಾನಿ-ಶುಭಾಂಶು ಪ್ರಶ್ನೋತ್ತರ-ಚರ್ಚೆ

ಪ್ರಧಾನಿ ಮೋದಿ: ಬಾಹ್ಯಾಕಾಶಯಾನ ಮತ್ತು ಐಎಸ್‌ಎಸ್‌ನಲ್ಲಿ 18 ದಿನಗಳಷ್ಟು ದೀರ್ಘ ವಾಸದ ನಂತರ ನಿಮ್ಮಲ್ಲಿ ಏನೆಲ್ಲಾ ಬದಲಾವಣೆ ಆಗಿದ್ದವು?

ಶುಭಾಂಶು ಶುಕ್ಲಾ: ನಮ್ಮ ಗಗನನೌಕೆ ಬಾಹ್ಯಾಕಾಶ ತಲುಪಿದ ನಂತರ ಸೀಟ್ ಬೆಲ್ಟ್ ಕಳಚಿ ಕ್ಯಾಪ್ಸೂಲ್ ಒಳಗೆ ತೇಲುತ್ತಾ ಚಲಿಸುವುದು ನಡೆಯಿತು. ಆಗ ಹೃದಯ ಬಡಿತ ನಿಧಾನವಾಗಿತ್ತು. ಗುರುತ್ವ ರಹಿತ ಪರಿಸ್ಥಿತಿಗೆ ಹೊಂದಿಕೊಳ್ಳಲು ದೇಹಕ್ಕೆ 3-4 ದಿನಗಳು ಬೇಕಾದವು. ಆದರೆ ಭೂಮಿಗೆ ಮರಳಿದ ನಂತರ ಇಲ್ಲಿನ ಹವಾಗುಣ, ಗುರುತ್ವಾಕರ್ಷಣೆಗೆ ದೇಹವನ್ನು ಮರುಹೊಂದಾಣಿಕೆ ಮಾಡಿಸಲು ಬಹಳ ಸಮಯ ತೆಗೆದುಕೊಂಡಿತು. ನಾನು ಆರೋಗ್ಯವಾಗಿದ್ದರೂ, ದೃಢಕಾಯನಾಗಿದ್ದರೂ ನನಗೆ ಸ್ವಂತ ಕಾಲಮೇಲೆ ನಡೆಯಲಾಗುತ್ತಿರಲಿಲ್ಲ. ನಡೆಯಲು ಬೇರೊಬ್ಬರ ಸಹಾಯ ತೆಗೆದುಕೊಳ್ಳಬೇಕಾಯಿತು.

ಪ್ರಧಾನಿ ಮೋದಿ: ಹೆಸರುಕಾಳು ಮತ್ತು ಮೆಂತ್ಯ ಮೊಳಕೆಯೊಡೆಸಿದ ಪ್ರಯೋಗ ಹೇಗನಿಸಿತು?

ಶುಭಾಂಶು ಶುಕ್ಲಾ: ಬಾಹ್ಯಾಕಾಶ ನಿಲ್ದಾಣದಲ್ಲಿ ಹೆಸರುಕಾಳು ಮತ್ತು ಮೆಂತ್ಯ ಕೇವಲ 8 ದಿನದಲ್ಲಿ ಮೊಳಕೆಯೊಡೆದವು. ಕಡಿಮೆ ನೀರಿನಿಂದಲೇ ಬೆಳೆದವು. ಐಎಸ್‌ಎಸ್‌ನಲ್ಲಿ ಆಹಾರದ್ದೇ ದೊಡ್ಡ ಸಮಸ್ಯೆ-ಸವಾಲು. ಸ್ಥಳಾವಕಾಶ ಕಡಿಮೆ ಇರುವುದರಿಂದ ಹೆಚ್ಚು ಸಿದ್ಧ ಆಹಾರ ಕೊಂಡೊಯ್ಯಲಾಗದು.

ಸರ್ವಾನುಮತದಿಂದ ಸಿಪಿಆರ್ ಚುನಾಯಿಸಿ

ದೆಹಲಿಯಲ್ಲಿ ಮಂಗಳವಾರ ಎನ್‌ಡಿಎ ಸಂಸದರ ಸಭೆಯಲ್ಲಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಪ್ರಧಾನಿ ಮೋದಿ ಸನ್ಮಾನಿಸಿದರು. ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ಜೆ.ಪಿ.ನಡ್ಡಾ ಮತ್ತಿತರರಿದ್ದರು.

ದೆಹಲಿ: ಉಪ ರಾಷ್ಟ್ರಪತಿ ಹುದ್ದೆಗೆ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ಸರ್ವಸಮ್ಮತ ಅಭ್ಯರ್ಥಿಯಾದ ಸಿ.ಪಿ. ರಾಧಾಕೃಷ್ಣನ್ ಅವರ ಆಯ್ಕೆ ಸರ್ವಾನುಮತದಿಂದ ಆಗಬೇಕಿದೆ. ಈ ಸಂಬಂಧ ಪ್ರತಿಪಕ್ಷಗಳು, ಆಡಳಿತಾರೂಢ ಪಕ್ಷಗಳ ಎಲ್ಲಾ ಸಂಸದರಿಗೂ ಮನವಿ ಮಾಡುವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

- ಎನ್‌ಡಿಎ-ಪ್ರತಿಪಕ್ಷಗಳ ಸಂಸದರಿಗೆ ಪ್ರಧಾನಿ ಮೋದಿ ಮನವಿ
- ಎನ್‌ಡಿಎ ಸಭೆಯಲ್ಲಿ ರಾಧಾಕೃಷ್ಣನ್ ಅವರಿಗೆ ಮೋದಿ ಸನ್ಮಾನ

ದೆಹಲಿಯಲ್ಲಿ ಎನ್‌ಡಿಎ ಸಂಸದರ ಸಭೆಯಲ್ಲಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಸನ್ಮಾನಿಸಿ ಮಾತನಾಡಿದ ಪ್ರಧಾನಿ ಮೋದಿ, ಸಿಪಿಆರ್ ಅವರ ಬದುಕು, ಆಡಳಿತದ ಅನುಭವ, ಸಾರ್ವಜನಿಕ ಸೇವೆ ಮೊದಲಾದ ಅಂಶಗಳನ್ನು ನೆನಪಿಸಿಕೊಂಡು ಶ್ಲಾಘಿಸಿದರು. ಸಭೆಯಲ್ಲಿ ಮೊದಲಿಗೆ ತಮಿಳು ನಾಡಿನ ಅನುಭವಿ ಬಿಜೆಪಿ ನಾಯಕರಾದ ಮಹಾರಾಷ್ಟ್ರ ರಾಜ್ಯಪಾಲ ರಾಧಾಕೃಷ್ಣನ್‌ರನ್ನು ಎನ್‌ಡಿಎ ಸಂಸದರಿಗೆ ಪ್ರಧಾನಿ ಪರಿಚಯಿಸಿದರು ಎಂದು ಸಚಿವ ಕಿರಣ್ ರಿಜಿಜು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಇಂದು ನಾಮಪತ್ರ: ಸೆ.9ರಂದು ನಡೆಯಲಿರುವ ಉಪ ರಾಷ್ಟ್ರಪತಿ ಚುನಾವಣೆಗೆ ರಾಧಾಕೃಷ್ಣನ್ ಅವರು ಬುಧವಾರ ನಾಮಪತ್ರ ಸಲ್ಲಿಸುವ ಸಾಧ್ಯತೆಯಿದೆ.

ಮಹಾರಾಷ್ಟ್ರ ವರುಣ ಆರ್ಭಟಕ್ಕೆ 7 ಸಾವು

ಮುಂಬೈ: ವರುಣಾರ್ಭಟಕ್ಕೆ ಮಹಾರಾಷ್ಟ್ರ ಅಕ್ಷರಶಃ ತತ್ತರಿಸಿದೆ. ಇದರ ಮಧ್ಯೆಯೇ ಪ್ರಾಕೃತಿಕ ವಿಪತ್ತು ನಿರ್ವಹಣಾ ಇಲಾಖೆ ಅಧಿಕಾರಿಗಳ ಜತೆಗೂಡಿ ರಾಜ್ಯದ ಪ್ರವಾಹ ಪರಿಸ್ಥಿತಿ ಅವಲೋಕಿಸಿದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಮುಂಬೈ, ಥಾಣೆ, ರಾಯಗಢ, ರತ್ನಗಿರಿ ಮತ್ತು ಸಿಂಧುದುರ್ಗ ಜಿಲ್ಲೆಗಳಿಗೆ ಮುಂದಿನ 48 ಗಂಟೆಗಳು ನಿರ್ಣಾಯಕ ಎಂದು ಮಂಗಳವಾರ ಹೇಳಿದ್ದಾರೆ.

ಇದು ಮಹಾರಾಷ್ಟ್ರದ ಜನರನ್ನು ಚಿಂತೆಗೀಡು ಮಾಡಿದೆ. ಕಳೆದೆರಡು ದಿನಗಳಿಂದ ಮರಾಠ ನಾಡಿನ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುತ್ತಿದ್ದು, ಮಳೆ ಸಂಬಂಧಿತ ಅವಘಡಗಳಲ್ಲಿ ವಿವಿಧೆಡೆ 7 ಜನರು ಸಾವನ್ನಪ್ಪಿದ್ದಾರೆ. ನಾಂದೇಡ್‌ನಲ್ಲಿ ಐವರು ಕಣ್ಮರೆಯಾಗಿದ್ದು, ಶೋಧ ಮುಂದುವರಿದಿದೆ. ನೂರಾರು ಮಂದಿ ಮನೆ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಮಂಗಳವಾರವೂ ಮುಂಬೈ ನಗರದಲ್ಲಿ ಧಾರಾಕಾರ ಮಳೆಯಾಗಿದ್ದು, ಜನಜೀವನ ಪೂರ್ಣ ಅಸ್ತವ್ಯಸ್ತವಾಗಿದೆ.

ರೈಲು ಹಳಿಗಳು ಮಳೆ ನೀರಿನಲ್ಲಿದ್ದ ಮುಳುಗಿದ್ದರಿಂದ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ಮತ್ತು ಕುರ್ಲಾ ನಿಲ್ದಾಣಗಳ ನಡುವಿನ ಹಾರ್ಬರ್ ಮಾರ್ಗದಲ್ಲಿ ಕೆಲ ರೈಲುಗಳ ಸಂಚಾರ ಸ್ಥಗಿತಗೊಳಿಸಲಾಗಿದೆ. ಕುರ್ಲಾದಲ್ಲಿ ಪ್ರವಾಹದಲ್ಲಿ ಸಿಲುಕಿದ್ದ 350 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ಕಚೇರಿ ತಿಳಿಸಿದೆ. ಮುಂಬೈನ ಹಲವೆಡೆ ಸೋಮವಾರದಿಂದ ಮಂಗಳವಾರದವರೆಗೆ 24 ಗಂಟೆಗಳಲ್ಲಿ 200 ಮಿ.ಮೀಗೂ ಅಧಿಕ ಮಳೆಯಾಗಿದೆ.

ಸಮಾಚಾರ ಸಣ್ಣದಲ್ಲ

ರಾಹುಲ್ ಮತ ಯಾತ್ರೆ ಕಾರಿನಡಿ ಬಿದ್ದ ಪೊಲೀಸ್!

ನವಾಡಾ: ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಮತ್ತು ಬಿಹಾರದಲ್ಲಿನ 'ಮಹಾಘಟಬಂಧನ್' ಪಕ್ಷಗಳ ನಾಯಕರು ಸಾಗಿದ್ದ 'ಮತದಾನ ಅಧಿಕಾರ ಯಾತ್ರೆ'ಯ ವಾಹನ ಮಂಗಳವಾರ ಬಿಹಾರ ರಾಜ್ಯದ ನವಾಡಾದಲ್ಲಿ ಸಾಗಿದ್ದಾಗ ಪೊಲೀಸ್ ಅಧಿಕಾರಿಯೊಬ್ಬರಿಗೆ ಡಿಕ್ಕಿ ಹೊಡೆದಿದೆ. ಕಾರಿನ ಮುಂದಿನ ಚಕ್ರದಡಿ ಸಿಲುಕಿಕೊಂಡಿದದ ಪೊಲೀಸ್ ಅಧಿಕಾರಿಯನ್ನು ಸ್ಥಳದಲ್ಲಿದ್ದವರು ತಕ್ಷಣವೇ ಮೇಲೆತ್ತಿದ್ದಾರೆ. ಹಾಗಾಗಿ ದೊಡ್ಡ ಅನಾಹುತ ವಾಗುವುದು ಸ್ವಲ್ಪದರಲ್ಲಿ ತಪ್ಪಿದೆ. ರಾಹುಲ್ ಮೆರವಣಿಗೆಯಲ್ಲಿ ಸಾಗಿದ್ದಾಗ ಭಾರೀ ಜನಸಂದಣಿ ಇತ್ತು. ವಾಹನ ನಿಧಾನವಾಗಿಯೇ ಚಲಿಸುತ್ತಿತ್ತು. ಪೊಲೀಸ್ ಅಧಿಕಾರಿಗೆ ಸಣ್ಣದಾಗಿ ಗಾಯವಾಗಿದೆ ಅಷ್ಟೆ. ಗಂಭೀರ ಸ್ವರೂಪದಲ್ಲೇನೂ ಪೆಟ್ಟು ಬಿದ್ದಿಲ್ಲ ಎಂದು ಮಹಾಘಟಬಂಧನ್ ನಾಯಕರು ಹೇಳಿದ್ದಾರೆ.

ಸ್ವಾಧೀನ ಪತ್ರ ಇಲ್ಲದಿದ್ದರೆ ವಿದ್ಯುತ್ ಸಂಪರ್ಕ ಇಲ್ಲ

ವಿಧಾನಸಭೆ: ಕಟ್ಟಡದ ಸ್ವಾಧೀನ ಪತ್ರ ಇಲ್ಲದಿದ್ದರೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅವಕಾಶವಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟಪಡಿಸಿದರು. ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾಡಿದ ಆಕ್ಷೇಪಕ್ಕೆ ಮಧ್ಯಪ್ರವೇಶಿಸಿ ಮಾತನಾಡಿದ ಸಚಿವರು, ಸ್ವಾಧೀನಪತ್ರವಿಲ್ಲದೆ ವಿದ್ಯುತ್ ಸಂಪರ್ಕ ಕಲ್ಪಿಸಬಾರದು ಎಂದು ಸುಪ್ರೀಂಕೋರ್ಟ್ ಆದೇಶವಿದೆ. ಅಲ್ಲದೆ ಕಳೆದ ಮಾ.13 ರಂದು ಈ ಸಂಬಂಧ ಕೆಇಆರ್‌ಸಿ ಆದೇಶವಿದೆ. ಕಾಯ್ದೆಗೆ ತಿದ್ದುಪಡಿಯಾಗದ ಹೊರತು ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದಿಲ್ಲ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ವಿದ್ಯುತ್ ಸಂಪರ್ಕಕ್ಕಾಗಿ 4 ಲಕ್ಷ ಕಟ್ಟಡ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಸ್ವಾಧೀನಪತ್ರ ಹಾಗೂ ಕಟ್ಟಡ ಮುಕ್ತಾಯದ ಪ್ರಮಾಣ ಪತ್ರವಿಲ್ಲದೆ ವಿದ್ಯುತ್ ಸಂಪರ್ಕ ಕಲ್ಪಿಸಬಹುದೆಂಬ ಸುಪ್ರೀಂಕೋರ್ಟ್ ಆದೇಶವಿದ್ದರೆ ನೀಡಲಿ. ಇಂದೇ ಸರಕಾರ ಆದೇಶ ಹೊರಡಿಸಿ ಪ್ರತಿಯೊಬ್ಬರಿಗೂ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದರು. ನಾಲ್ಕು ಲಕ್ಷ ಅರ್ಜಿದಾರರಲ್ಲಿ ಸುಪ್ರೀಂಕೋರ್ಟ್ ಆದೇಶಕ್ಕೂ ಮುನ್ನ ಹಣ ಪಾವತಿಸಿದವರು ಇದ್ದಾರೆ. ಗಮನ ಸೆಳೆಯುವ ಸೂಚನೆ ವಿಚಾರದಲ್ಲಿ ಈ ಬಗ್ಗೆ ಸಮಗ್ರ ಉತ್ತರ ನೀಡುವುದಾಗಿ ಭರವಸೆ ನೀಡಿದರು.

ಬಾಲಿವುಡ್ ಹಿರಿಯ ನಟ ಪೋತ್ದಾರ್ ನಿಧನ

ಥಾಣೆ: ಬಾಲಿವುಡ್ ಹಿರಿಯ ನಟ ಅಚ್ಯುತ್ ಪೋದ್ದಾರ್ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು. ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಅವರನ್ನು

ಜ್ಯೂಪಿಟರ್ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಸೋಮವಾರ ಸಂಜೆ ಅಚ್ಯುತ್ ಪೋತ್ದಾರ್ ನಿಧನರಾದರು. ಸಿನಿಮಾ ನಟನೆಯ ಜೊತೆಗೆ ಹಿಂದಿ ಹಾಗೂ ಮರಾಠಿ ಧಾರಾವಾಹಿಗಳು ಮತ್ತು ಟಿವಿ ಕಾರ್ಯಕ್ರಮಗಳಲ್ಲಿ ಅವರ ನಟಿಸುತ್ತಿದ್ದರು. 1980ರಲ್ಲಿ ಆಕ್ರೋಶ್ ಹಿಂದಿ ಸಿನಿಮಾದ ಮೂಲಕ ಬಾಲಿವುಡ್ ಪ್ರವೇಶಿಸಿದರು. ಸಿನಿಮಾರಂಗಕ್ಕೆ ಪದಾರ್ಪಣೆ ಮಾಡಿದಾಗ ಅವರಿಗೆ 44 ವರ್ಷ ವಯಸ್ಸಾಗಿತ್ತು. ಪದವಿ ಪಡೆದಿದ್ದ ಅವರು ರೇವಾ ವಿಶ್ವವಿದ್ಯಾಲಯದಲ್ಲಿ ಕೆಲಕಾಲ ಪ್ರಾಧ್ಯಾಪಕರಾಗಿದ್ದರು. ಭಾರತೀಯ ಸೇನೆ ಹಾಗೂ ಇಂಡಿಯನ್ ಆಯಿಲ್ ಕಂಪನಿಯಲ್ಲೂ ಅವರು ಕೆಲಸ ಮಾಡಿದ್ದರು. 3 ಈಡಿಯಟ್ಸ್, ಅರ್ಧ ಸತ್ಯ, ತೇಜಾಬ್, ರಂಗೀಲಾ, ದಿಲ್ವಾಲೆ ಸೇರಿ ಮುಂತಾದ ಜನಪ್ರಿಯ ಸಿನಿಮಾಗಳಲ್ಲಿ ಅವರು ನಟಿಸಿದ್ದರು.

ಬೆಳಗಾವಿ: ವೈದ್ಯಕೀಯ ವಿದ್ಯಾರ್ಥಿನಿ ಆತ್ಮಹತ್ಯೆ

ಬೆಳಗಾವಿ: ವೈದ್ಯಕೀಯ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ನಡೆದಿದೆ. ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಪಿಜಿ ವಿದ್ಯಾರ್ಥಿನಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಡೆದಿದ್ದು, ಅತಿಯಾದ ಔಷಧ ಸೇವನೆ ಸಾವಿಗೆ ಕಾರಣ ಎಂದು ಹೇಳಲಾಗಿದೆ. ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಬಿಮ್ಸ್) ಸ್ನಾತಕೋತ್ತರ ವಿದ್ಯಾರ್ಥಿನಿ ಸೋಮವಾರ ರಾತ್ರಿ ಖಿನ್ನತೆಗೆ ತೆಗೆದುಕೊಳ್ಳುವ ಔಷಧಿಯನ್ನು ಅತಿಯಾದ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಎಪಿಎಂಸಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಮೃತಳನ್ನು ಬೆಂಗಳೂರಿನ ಮೂಲದ ಡಾ. ಪ್ರಿಯಾ ಕಾರ್ತಿಕ್ (27) ಎಂದು ಗುರುತಿಸಲಾಗಿದ್ದು, ಆಕೆ ಬೆಳಗಾವಿಯ ಬಿಮ್ಸ್‌ನಲ್ಲಿ ಮನೋವೈದ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದರು ಎನ್ನಲಾಗಿದೆ. ಬೆಳಗಾವಿಯ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

{ **ಕೋಟ ಶ್ರೀನಿವಾಸ್ ಪೂಜಾರಿ** } ಸಂಸದ

ಅನಾಮಿಕ ದೂರುದಾರನ ಮಾತುಗಳನ್ನು ನಂಬಿಕೊಂಡು ಸಿಎಂ ಸಿದ್ದರಾಮಯ್ಯನವರು ಎಸ್‌ಐಟಿ ರಚಿಸಿದ್ದಾರೆ ಎಂದೂ ವರದಿಯಾಗಿದೆ. ಇಡೀ ಸರಕಾರವೇ ಅನಾಮಿಕ ವ್ಯಕ್ತಿಗೆ ಶರಣಾದಂತೆ ಕಾಣುತ್ತಿದೆ. ಬಾಹುಬಲಿ ಬೆಟ್ಟದ ಸಮೀಪ ಸೇರಿದಂತೆ ಧರ್ಮಸ್ಥಳದಲ್ಲಿ ಎಲ್ಲೆಂದರಲ್ಲಿ ಗುಂಡಿ ತೋಡಲಾಗಿದೆ. ಭಕ್ತರಿಗೆ ಕಸಿವಿಸಿ ಉಂಟಾಗುತ್ತಿದೆ.



ಧರ್ಮಸ್ಥಳ ಪ್ರಕರಣದಲ್ಲಿ ಸಂಸದ ಸೆಂಥಿಲ್ ಕೈವಾಡ

ಕಾಂಗ್ರೆಸ್ ಸಂಸದನ ವಿರುದ್ಧ ನೇರ ಆರೋಪ ಮಾಡಿದ ಶಾಸಕ ಜನಾರ್ದನ ರೆಡ್ಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಧರ್ಮಸ್ಥಳ ದೇವಾಲಯದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರದ ಹಿಂದೆ ತಮಿಳುನಾಡು ಕಾಂಗ್ರೆಸ್ ಸಂಸದ ಸಸಿಕಾಂತ್ ಸೆಂಥಿಲ್ ಕೈವಾಡವಿದೆ ಎಂದು ಮಾಜಿ ಸಚಿವ

ಜನಾರ್ದನ ರೆಡ್ಡಿ ಬಹಿರಂಗವಾಗಿ ಆರೋಪಿಸಿದ್ದಾರೆ.

ಇಷ್ಟು ದಿನ ಧರ್ಮಸ್ಥಳ ವಿಷಯಕ್ಕೆ ಸಂಬಂಧಿಸಿದಂತೆ ಸಸಿಕಾಂತ್ ಹೆಸರು ಪರೋಕ್ಷವಾಗಿ ಕೇಳಿಬರುತ್ತಿತ್ತು. ಆದರೆ ಯಾರೊಬ್ಬರು ಬಹಿರಂಗ ಹೇಳಿಕೆ ನೀಡಿರಲಿಲ್ಲ. ಆದರೆ ಮಂಗಳವಾರ ವಿಧಾನಸೌಧದಲ್ಲಿ ಜನಾರ್ದನ ರೆಡ್ಡಿ ಸೆಂಥಿಲ್ ವಿರುದ್ಧ ನೇರವಾಗಿ ಆರೋಪಿಸಿದ್ದು, ಇಡೀ ಪ್ರಕರಣದ ಹಿಂದಿನ ಮಾಸ್ಟರ್ ಮೈಂಡ್ ಎಂದು ಆರೋಪಿಸಿದ್ದಾರೆ.

ದಕ್ಷಿಣ ಕನ್ನಡದ ಇಬ್ಬರು ವ್ಯಕ್ತಿಗಳೊಂದಿಗೆ ಸಸಿಕಾಂತ್ ಸೆಂಥಿಲ್ ಸೇರಿ ಧರ್ಮಸ್ಥಳಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಕಾರ್ಯಸೂಚಿಗಳನ್ನು ಸಿದ್ಧಪಡಿಸಿದ್ದಾರೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಗೆ ಈ ಪ್ರಕರಣದಲ್ಲಿ ಆಸಕ್ತಿ ಇರಲಿಲ್ಲವಾದರೂ, ಹೈಕಮಾಂಡ್‌ನ ಒತ್ತಡ ತಂದು ಎಸ್‌ಐಟಿ ತನಿಖೆ ಮಾಡಿಸಲಾಗಿದೆ. ಎಡಪಂಥೀಯ ನಿಲುವುಗಳನ್ನು ಹೊಂದಿರುವ ಸೆಂಥಿಲ್ ಅವರನ್ನು ತನಿಖೆಗೆ ಒಳಪಡಿಸಬೇಕು. ಈ ಪ್ರಕರಣದ ಬಗ್ಗೆ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು, ಇಲ್ಲವೇ ಸಿಬಿಐ ತನಿಖೆ ನಡೆಸುವ ಅಗತ್ಯವಿದೆ ಎಂದು ಆಗ್ರಹಿಸಿದರು.

ಇನ್ನು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಪ್ರತಿಕ್ರಿಯಿಸಿ, ಧರ್ಮಸ್ಥಳ ದೇವಸ್ಥಾನದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರದಲ್ಲಿ ಸಸಿಕಾಂತ್ ಸೆಂಥಿಲ್ ಅವರ ಕೈವಾಡವಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ, ದೇವಸ್ಥಾನದ ಘನತೆಗೆ ಧಕ್ಕೆ ತರುವಂತಹ ಕೆಲಸಗಳು ನಡೆದಿವೆ ಎಂದು ಹಲವರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಷಡ್ಯಂತ್ರದ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಎಸ್‌ಐಟಿ ಬಗ್ಗೆ ಪ್ರತಿಕ್ರಿಯೆ ಬೇಡ: ಸಿಎಂ

ಇನ್ನು ಧರ್ಮಸ್ಥಳ ಎಸ್‌ಐಟಿ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ್‍ಯಾರು ಪ್ರತಿಕ್ರಿಯೆ ನೀಡದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟ ಸಂದೇಶ

ರವಾನಿಸಿದ್ದಾರೆ. ಈಗಾಗಲೇ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಸರಕಾರ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಯಾವುದೇ ಸಚಿವರು ಅನಗತ್ಯ ಹೇಳಿಕೆ ನೀಡಬಾರದು. ತಮ್ಮ ವೈಯಕ್ತಿಕ ಅಭಿಪ್ರಾಯ ಮತ್ತು ಸಚಿವರ ಅಭಿಪ್ರಾಯದ ನಡುವೆ ವ್ಯತ್ಯಾಸವಿದೆ ಎಂಬುದನ್ನು ಗಮನದಲ್ಲಿರಿಸಿ ಕೊಳ್ಳಬೇಕು. ಸರಕಾರದ ನಿಲುವು ವಿಧಾನಸಭೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಗೃಹ ಸಚಿವ ಪರಮೇಶ್ವರ ಈ ವಿಷಯದಲ್ಲಿ ಮುಂಚೂಣಿ ವಹಿಸಿ ಉತ್ತರಿಸಬೇಕು, ಉಳಿದ ಸಚಿವರು ಹೇಳಿಕೆ ನೀಡುವುದನ್ನು ದೂರವಿರಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಯಾರಿದು ಸೆಂಥಿಲ್?

ಪ್ರಸ್ತುತ ತಮಿಳುನಾಡಿದ ತಿರುವಲ್ಲೂರು ಕ್ಷೇತ್ರದ ಕಾಂಗ್ರೆಸ್ ಸಂಸದರಾಗಿರುವ ಸಸಿಕಾಂತ್ ಸೆಂಥಿಲ್, 2009ರಿಂದ 2019ರವರೆಗೆ ರಾಜ್ಯ ಸರಕಾರದಲ್ಲಿ ಐಎಎಸ್ ಅಧಿಕಾರಿಯಾಗಿ ವಿವಿಧ ಹುದ್ದೆ ನಿಭಾಯಿಸಿದ್ದರು. ಐಎಎಸ್ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ 2020ರಲ್ಲಿ ಅವರು ಕಾಂಗ್ರೆಸ್ ಪಕ್ಷ ಸೇರಿ ಸಂಸದರಾಗಿದ್ದರು. 2019ರಲ್ಲಿ ರಾಜೀನಾಮೆ ನೀಡುವ ವೇಳೆ ಅವರು ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. 2017ರಿಂದ ಅವರು ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಯಾಗಿದ್ದರು.

ಧರ್ಮಸ್ಥಳ ಪ್ರಕರಣಕ್ಕೆ ಯಾವುದೇ ಕಳಂಕ ಬಾರದಂತೆ ಸರಕಾರ ಬದ್ಧವಾಗಿದೆ. ಗೃಹ ಸಚಿವರು ಈಗಾಗಲೇ ಉತ್ತರ ನೀಡಿದ್ದಾರೆ. ಶೀಘ್ರದಲ್ಲೇ ಸತ್ಯ ಹೊರಬರಲಿದೆ. ಇನ್ನು ಜನಾರ್ದನ ರೆಡ್ಡಿ ಅವರು ಸಂಶೋಧನೆ ಮಾಡಿರಬಹುದು. ಆದ್ದರಿಂದ ಒಬ್ಬರ ವಿರುದ್ಧ ಆರೋಪಿಸಿದ್ದಾರೆ. ಆದರೆ ಅನಾಮಿಕ ವ್ಯಕ್ತಿ ಅಗೆಸುತ್ತಿದ್ದಾನೆ ಎನ್ನುವುದರಿಂದ ಸತ್ಯ ಬದಲಾಗುವುದಿಲ್ಲ.

– **ಲಕ್ಷ್ಮೀ ಹೆಬ್ಬಾಳ್ಕರ್** ಸಚಿವೆ

ಪವನ ವಿದ್ಯುತ್ ಯೋಜನೆಯಲ್ಲಿ ಗಣನೀಯ ಹೆಚ್ಚಳ
ವಿದ್ಯುತ್ ಬಳಕೆ ಪ್ರಮಾಣ ನಿರೀಕ್ಷೆಗಿಂತ ಕಡಿಮೆ

ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ದಾಖಲೆ

ಬೆಂಗಳೂರು: ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನದ ಪಾಲು ಪ್ರಸ್ತುತ ಶೇ.75ರಿಂದ 85ಕ್ಕೆ ಏರಿಕೆಯಾಗಿದ್ದು, ಆ.18ರಂದು ನವೀಕರಿಸಬಹುದಾದ ಇಂಧನ ಮೂಲಗಳಿಂದ 143 ಮಿಲಿಯನ್ ಯುನಿಟ್ ವಿದ್ಯುತ್ ಉತ್ಪಾದನೆ ಮೂಲಕ ಹೊಸ ದಾಖಲೆ ಬರೆದಿದೆ.

ಉಷ್ಣ, ಜಲ ವಿದ್ಯುತ್‌ನಂತಹ ಸಾಂಪ್ರದಾಯಿಕ ಇಂಧನಗಳ ಅವಲಂಬನೆ ಕಡಿಮೆಯಾಗಿದ್ದು, ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಸಾಕಷ್ಟು ಹೆಚ್ಚಾಗಿದೆ. ಬೇಡಿಕೆಯ ಶೇ.75ರಿಂದ ಶೇ.85ರಷ್ಟು ವಿದ್ಯುತ್ ಈ ಮೂಲಗಳಿಂದಲೇ ಉತ್ಪಾದನೆಯಾಗುತ್ತಿದೆ. ಪವನ ವಿದ್ಯುತ್ ಉತ್ಪಾದನೆ ಗಣನೀಯವಾಗಿ ಹೆಚ್ಚಳವಾಗಿದ್ದು, ದಿನಕ್ಕೆ ಸರಾಸರಿ 54 ಮಿಲಿಯನ್ ಯುನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ರಾಜ್ಯ ಸರಕಾರವು ನವೀಕರಿಸಬಹುದಾದ ಇಂಧನ ಮೂಲಗಳಿಗೆ ಆದ್ಯತೆ ನೀಡುತ್ತಿರುವುದರಿಂದ ಈ ಬೆಳವಣಿಗೆ ಸಾಧ್ಯವಾಗಿದ್ದು, ಇತರೆ ರಾಜ್ಯಗಳೂ ಹಸಿರು ಇಂಧನ ಪರಿವರ್ತನೆಗೆ ಮುಂದಡಿ ಇಡಲು ಈ ಉಪಕ್ರಮ ಮಾದರಿಯಾಗಿದೆ. ಇದಲ್ಲದೆ, ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಕಡಿಮೆ ದರಕ್ಕೆ ದೊರೆಯುವುದರಿಂದ ಸರಕಾರದ ಮೇಲಿನ ಹೊರೆಯೂ ಕಡಿಮೆಯಾಗುವಂತಾಗಿದೆ.

ಪವನ ವಿದ್ಯುತ್ ಉತ್ಪಾದನೆಯಲ್ಲಿ ದಾಖಲೆ: ಪ್ರಸ್ತುತ ವರ್ಷ ಪವನ ವಿದ್ಯುತ್ ಉತ್ಪಾದನೆಯಲ್ಲಿ ದಾಖಲೆ ನಿರ್ಮಾಣವಾಗಿದ್ದು, ಮುಂಗಾರಿನ ಆರಂಭದ ಬಳಿಕ ಪ್ರತಿನಿತ್ಯ ಸರಾಸರಿ 50 ಮಿಲಿಯನ್ ಯುನಿಟ್ ಗಿಂತ ಹೆಚ್ಚು ವಿದ್ಯುತ್ ಈ ಮೂಲಗಳಿಂದ ಉತ್ಪಾದನೆಯಾಗಿದೆ. ಪ್ರಸ್ತುತ 65.80 ಮಿಲಿಯನ್ ಯುನಿಟ್ ಪವನ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಇದರಿಂದಾಗಿ ಜಲ ವಿದ್ಯುತ್ ಮತ್ತು ಉಷ್ಣ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆಯಾಗಿದೆ. ರಾಜ್ಯದ ಒಟ್ಟಾರೆ ವಿದ್ಯುತ್ ಉತ್ಪಾದನೆಯಲ್ಲಿ ಉಷ್ಣ ವಿದ್ಯುತ್ ಪಾಲು ಶೇ.15–ಶೇ.25 ಆಗಿದೆ.

ರಾಜ್ಯಾದ್ಯಂತ ಭಾರೀ ಮಳೆಯಾಗುತ್ತಿದ್ದು, ವಿದ್ಯುತ್ ಬಳಕೆ ಪ್ರಮಾಣವೂ ನಿರೀಕ್ಷೆಗಿಂತ ಕಡಿಮೆಯಾಗಿದೆ. ರಾಜ್ಯದಲ್ಲಿ ವಿದ್ಯುತ್‌ನ ಬಳಕೆ 179.03 ದಶಲಕ್ಷ ಯುನಿಟ್‌ಗೆ (ಮಿಲಿಯನ್ ಯುನಿಟ್) ಇಳಿಕೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ರಾಜ್ಯದ ವಿದ್ಯುತ್ ಬಳಕೆ 200.35 ಮಿಲಿಯನ್ ಯುನಿಟ್ ಇತ್ತು. ಈ ವರ್ಷ ಸರಾಸರಿ ವಿದ್ಯುತ್ ಬಳಕೆ ಪ್ರಮಾಣ ಹಿಂದಿನ ವರ್ಷಕ್ಕಿಂತ ಶೇ.15ರಿಂದ 15ರಷ್ಟು ಹೆಚ್ಚಿದ್ದರೂ ಪ್ರಸ್ತುತ 21 ದಶಲಕ್ಷ ಯುನಿಟ್‌ಗಳಷ್ಟು ಕಡಿಮೆ ವಿದ್ಯುತ್ ಬಳಕೆಯಾಗುತ್ತಿದೆ.

ರಾಜ್ಯದಲ್ಲಿ ಜನವರಿ ಅಂತ್ಯದ ವೇಳೆಗೆ ವಿದ್ಯುತ್ ಬೇಡಿಕೆ ಹೆಚ್ಚಾಗಲು ಆರಂಭವಾಯಿತು. ಬೇಸಿಗೆಯಲ್ಲಿ ದೈನಂದಿನ ಬಳಕೆ 350 ಮಿಲಿಯನ್ ಯುನಿಟ್‌ಗಳನ್ನು ಮೀರುವ ನಿರೀಕ್ಷೆಯಿತ್ತಾದರೂ ಮುಂಗಾರು ಪೂರ್ವ ಮಳೆಯಿಂದ ಬೇಡಿಕೆ 320–330 ಮಿಲಿಯನ್ ಯುನಿಟ್‌ಗಳ ವ್ಯಾಪ್ತಿಯಲ್ಲಿಯೇ ಇತ್ತು. ಮೇ 16–17ರ ಸುಮಾರಿಗೆ ಪೂರ್ವ ಮುಂಗಾರು ಮಳೆ ಮತ್ತು ನಿಗದಿಗಿಂತ ಮುನ್ನ ಮುಂಗಾರು ಪ್ರವೇಶಿಸಿದ್ದರಿಂದ ವಿದ್ಯುತ್ ಬೇಡಿಕೆ ಕಡಿಮೆಯಾಗಿ ದಿನಕ್ಕೆ 230–240 ಮಿಲಿಯನ್ ಯುನಿಟ್‌ಗಳಿಗೆ ಇಳಿಕೆಯಾಗಿ ಕನಿಷ್ಠ ಮಟ್ಟಕ್ಕೆ ಬಂದಿದೆ.



ನವೀಕರಿಸಬಹುದಾದ ಇಂಧನ ಮೂಲಗಳಿಂದ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಉತ್ಪಾದಿಸಲು ಸಾಧ್ಯವಾಗುತ್ತದೆ. ಇದರಿಂದ ಸರಕಾರದ ಮೇಲಿನ ಹೊರೆ ಕಡಿಮೆಯಾಗಲಿದೆ ಎನ್ನುವ ಕಾರಣದಿಂದ ಸರಕಾರ ಈ ಮೂಲಗಳಿಗೆ ಆದ್ಯತೆ ನೀಡುತ್ತಿದೆ. ಇದರಿಂದ ಜಲ ಮತ್ತು ಉಷ್ಣ ವಿದ್ಯುತ್ ಸ್ಥಾವರಗಳ ಮೇಲಿನ ಹೊರೆ ಕಡಿಮೆಯಾಗಿ ಬೇಸಿಗೆಯಲ್ಲಿ ಈ ಮೂಲಗಳಿಂದ ಹೆಚ್ಚು ವಿದ್ಯುತ್ ಉತ್ಪಾದಿಸಿ ಬೇಡಿಕೆಗೆ ತಕ್ಕಂತೆ ಪೂರೈಸಲು ಅನುಕೂಲವಾಗುತ್ತದೆ

– **ಕೆ.ಜೆ. ಜಾರ್ಜ್** ಇಂಧನ ಸಚಿವ

ಕರ್ನಾಟಕವು ಹಲವಾರು ಉಪಕ್ರಮಗಳ ಮೂಲಕ, ವಿಶೇಷವಾಗಿ ಸೌರ ವಿದ್ಯುತ್ ಪಾರ್ಕ್, ಪವನ ವಿದ್ಯುತ್ ಯೋಜನೆಗಳ ಮೂಲ ನವೀಕರಿಸಬಹುದಾದ ಇಂಧನ ಸಾಮರ್ಥ್ಯಗಳನ್ನು ಹೆಚ್ಚಿಸುತ್ತಿದೆ. ನವೀಕರಿಸಬಹುದಾದ ಇಂಧನಕ್ಕಾಗಿ ನಮ್ಮ ಕಾರ್ಯತಂತ್ರಗಳು ಮತ್ತು ಗುರಿ ಸಾಧಿಸಲು ಕೈಗೊಂಡ ಮಹತ್ವಾಕಾಂಕ್ಷಿ ಕ್ರಮಗಳಿಂದಾಗಿ ಇದು ಸಾಧ್ಯವಾಗಿದೆ.

– **ಗೌರವ್ ಗುಪ್ತ**
ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ

ಪರಿಷತ್‌ನಲ್ಲಿ 45 ವರ್ಷಗಳ ಕಾಲ ಸುದೀರ್ಘ ಸೇವೆ

ಮೇಲ್ಮನೆಯಲ್ಲಿ ಸಭಾಪತಿ ಹೊರಟ್ಟಿ ಗುಣಗಾನ

ವಿಧಾನ ಪರಿಷತ್: ವಿಧಾನ ಪರಿಷತ್‌ನ ಸದಸ್ಯರಾಗಿ ಸುದೀರ್ಘ 45 ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಹಾಲಿ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮೇಲ್ಮನೆಯಲ್ಲಿ ಪಕ್ಷಭೇಧ ಮರೆತು ಸದಸ್ಯರು ಹಾಡಿ ಹೊಗಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಮಂಡಿಸಿದ ಅಭಿನಂದನಾ ಪ್ರಸ್ತಾವನೆಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸದಸ್ಯರು ಹೊರಟ್ಟಿಯವರ ನಾಲ್ಕೂವರೆ ದಶಕಗಳ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಪ್ರಾರಂಭದಲ್ಲಿ ಮಾತನಾಡಿದ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ನೀವು ಮೊದಲ ಬಾರಿಗೆ ವಿಧಾನಪರಿಷತ್‌ನ ಸದಸ್ಯರಾಗಿ ಆಯ್ಕೆಯಾದ ವೇಳೆ ನಾವು ಆಗಿನ್ನೂ ರಾಜಕೀಯಕ್ಕೆ ಕಾಲಿಟ್ಟಿದ್ದೆವು, ಯುವ ಕಾಂಗ್ರೆಸ್ ಮೂಲಕ ನಾನು ರಾಜಕೀಯ ಪ್ರವೇಶ ಮಾಡಿದ್ದೆ ಎಂದು ನೆನಪಿಸಿಕೊಂಡರು. ಶಿಕ್ಷಕರ ಕ್ಷೇತ್ರದ ಮೂಲಕ ಮೇಲ್ಮನೆಗೆ ಆಯ್ಕೆಯಾಗಿ ಈಗಲೂ ಅದೇ ಕ್ಷೇತ್ರದಿಂದ ಆಯ್ಕೆಯಾಗಿರುವ ನಿಮ್ಮ ಅನುಭವ ಸಂಸದೀಯ ವ್ಯವಸ್ಥೆ ಬಗ್ಗೆ ತಿಳಿದುಕೊಂಡಿರುವ ಜ್ಞಾನ, ಸದನದಲ್ಲಿ ನಡೆದುಕೊಳ್ಳುವ ರೀತಿ ಸದಸ್ಯರಿಗೆ ತಿಳಿ ಹೇಳುವುದು ಎಲ್ಲವೂ ಮಾದರಿಯಾಗಿದೆ' ಎಂದು ಹೊಗಳಿದರು. 'ನಿಮ್ಮಂತಹ ಹಿರಿಯರ ಅನುಭವ ಈ ಸದನಕ್ಕೆ ಈಗಲೂ ಅವಶ್ಯಕತೆ ಇದೆ. ಪಕ್ಷ ಯಾವುದೇ ಇರಲಿ, ಸಿದ್ಧಾಂತ ಏನೇ ಇರಲಿ, ಒಬ್ಬ ಸುದೀರ್ಘ ಅನುಭವ ಹೊಂದಿರುವ ರಾಜಕಾರಣಿಯನ್ನು ಅಭಿನಂದಿಸುವುದು ಭಾರತ ಚರಿತ್ರೆಯಲ್ಲಿ ನಡೆದುಕೊಂಡು ಬಂದಿರುವ ಉದಾಹರಣೆಗಳಿವೆ. ಹೀಗಾಗಿ ಈ ಸದನವು ನಿಮ್ಮ ಸೇವೆಯನ್ನು ಸದಾ ನೆನಪಿಟ್ಟುಕೊಳ್ಳುತ್ತದೆ' ಎಂದರು.

ಮಂಜುನಾಥ ಭಂಡಾರಿ ಮಾತನಾಡಿ, ಓರ್ವ ಜನಪ್ರತಿನಿಧಿ ಸತತ 45 ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿರುವುದು ಸಾಮಾನ್ಯ ಮಾತಲ್ಲ, ಅದರಲ್ಲೂ ಒಂದೇ ಕ್ಷೇತ್ರದಿಂದ ಆಯ್ಕೆಯಾಗಿ ಬರುವುದು ಈಗಿನ ವ್ಯವಸ್ಥೆಯಲ್ಲಿ ಕಷ್ಟದ ಮಾತು. ಮತದಾರರು ಒಂದು ಬಾರಿ ಆಯ್ಕೆ ಮಾಡಿದರೆ ಮತ್ತೊಂದು ಬಾರಿ ಆಯ್ಕೆ ಮಾಡುವುದೇ ಕಷ್ಟ. ಅಂತಹುದರಲ್ಲಿ 45 ವರ್ಷ ಗೆದ್ದು ಬಂದಿದ್ದೀರಿ ಎಂದರೆ ಅದೊಂದು ದಾಖಲೆಯೇ ಸರಿ ಎಂದು ಹೇಳಿದರು. ಅಲ್ಲದೆ 18 ಮಂದಿ ಮುಖ್ಯಮಂತ್ರಿಗಳು, 432 ಸಚಿವರು, 5 ಸಾವಿರಕ್ಕೂ ಹೆಚ್ಚು ಶಾಸಕರ ಜೊತೆ ನಿಮಗೆ ಒಡನಾಟವಿದೆ. ನನಗೆ ತಿಳಿದಿರುವ ಪ್ರಕಾರ, ಭಾರತದ ಇತಿಹಾಸದಲ್ಲೇ ಇದು ಸುದೀರ್ಘವಾದ ದಾಖಲೆ ಎಂದು ಬಣ್ಣಿಸಿದರು.

ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ನಿಮ್ಮ ಪ್ರಾಮಾಣಿಕತೆ, ಸರಳತೆ, ಮತದಾರರು ಇಟ್ಟ ವಿಶ್ವಾಸವೇ ಈ ಸದನಕ್ಕೆ ಆಯ್ಕೆ ಮಾಡಲು ಕಾರಣ. ಯಾವುದೇ ಪಕ್ಷದಲ್ಲಿದ್ದರೂ ನೀವು ಪಕ್ಷಾತೀತವಾಗಿ ನಡೆದುಕೊಂಡಿದ್ದೀರಿ ಎಂದು ಹೇಳಿದರು. ಇದೇ ವಿಷಯದ ಮೇಲೆ ಸದಸ್ಯರಾದ ಎಚ್. ವಿಶ್ವನಾಥ್, ಐವಾನ್ ಡಿಸೋಜ ಸೇರಿದಂತೆ ಮತ್ತಿತರರು ಮಾತನಾಡಿದರು.

ಡಿಜಿಟಲೀಕರಣಗೊಳ್ಳುತ್ತಿರುವ ಕನ್ನಡ ಸಾಹಿತ್ಯ

ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಮನು ಬಳಿಗಾರ್ ಅಭಿಮತ

ನಗರದ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಅಂಕಿತ ಪುಸ್ತಕ ಪ್ರಕಾಶನ ವತಿಯಿಂದ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಡಾ ಟಿ.ಆರ್. ಅನಂತರಾಮು ಅವರ 'ನಾಡದೇವಿ ಭುವನೇಶ್ವರಿ ನಡೆದು ಬಂದ ದಾರಿ', ಶಶಿಧರ ಹಾಲಾಡಿ ಅವರ 'ನದಿ ದಾಟಿ ಬಂದವರು', ಡಾ. ಎಂ. ವಿ. ನಾಗರಾಜರಾಜ್ ಅವರ 'ಆ ರಹಸ್ಯ ಕಾಪಾಲಿಕ ಮಠ ಹಾಗೂ ತಾಂತ್ರಿಕನ ರಹಸ್ಯ ಖಜಾನೆ', ಎನ್. ಎಸ್ ಶ್ರೀಧರಮೂರ್ತಿಯವರ 'ಕ್ಯಾಲೆಂಡರ್ ಇತಿಹಾಸ–ವರ್ತಮಾನ', ಎ.ಎನ್. ಪ್ರಸನ್ನ ಅವರ 'ಅದೊಂದು ದಿನ' ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಬೆಂಗಳೂರು: ಕೃತಿಗಳನ್ನು ಬರೆಯುತ್ತಾ ಸಮಕಾಲೀನ ಲೇಖಕರ ಕೃತಿಗಳನ್ನು ಓದುತ್ತಿದ್ದೆವು ಇದರಿಂದ ಜ್ಞಾನಾರ್ಜನೆ ಜತೆಗೆ ಬರವಣಿಗೆಯೂ ಸುಧಾರಿಸುತ್ತಿತ್ತು ಎಂದು ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಮನು ಬಳಿಗಾರ್ ಹೇಳಿದರು.

ನಗರದ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಅಂಕಿತ ಪುಸ್ತಕ ಪ್ರಕಾಶನ ವತಿಯಿಂದ ಆಯೋಜಿಸಲಾದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಕನ್ನಡ ಸಾಹಿತ್ಯ ಪುಸ್ತಕ ಪ್ರಕಟಣೆಯು ಹೊಸ ತಿರುವಿನಲ್ಲಿ ನಿಂತಿದ್ದು, ಡಿಜಿಟಲೀಕರಣದತ್ತ ಹೆಜ್ಜೆ ಇರಿಸಿದೆ. ಒಂದು ಕಾಲಘಟ್ಟದಲ್ಲಿ ನಾವು ಕೃತಿಗಳನ್ನ ಬರೆಯುತ್ತಾ ಬೇರೆ ಬೇರೆ ಸಮಕಾಲೀನ ಲೇಖಕರ ಕೃತಿಗಳನ್ನ ಓದುತ್ತಿದ್ದೆವು. ಇದರಿಂದಾಗಿ ಜ್ಞಾನಾರ್ಜನೆ ಜತೆಗೆ ಬರವಣಿಗೆಯು ಕೂಡ ಸುಧಾರಿಸಿಕೊಳ್ಳುತಿತ್ತು. ಇನ್ನು ಪ್ರಸಕ್ತ ಕಾಲಘಟ್ಟ ಮುದ್ರಣ ಮಾಧ್ಯಮಕ್ಕೆ ಹೆಚ್ಚು ಒಲಿಯದೇ, ಡಿಜಿಟಲೀಕರಣದತ್ತ ಸಾಗುತ್ತಿದೆ. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರಕಾಶ್ ಮತ್ತು ಪ್ರಭಾ ಸಾಹಿತ್ಯ ವಲಯದಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಡಾ ಟಿ.ಆರ್. ಅನಂತರಾಮು ಅವರ ನಾಡದೇವಿ ಭುವನೇಶ್ವರಿ ನಡೆದು ಬಂದ ದಾರಿ, ಡಾ. ಎಂ.ವಿ. ನಾಗರಾಜರಾವ್ ಅವರ ಆ ರಹಸ್ಯ ಕಾಪಾಲಿಕ ಮಠ ಹಾಗೂ ತಾಂತ್ರಿಕನ ರಹಸ್ಯ ಖಜಾನೆ, ಎನ್. ಎಸ್ ಶ್ರೀಧರಮೂರ್ತಿಯವರ 'ಕ್ಯಾಲೆಂಡರ್ ಇತಿಹಾಸ–ವರ್ತಮಾನ, ಎ.ಎನ್. ಪ್ರಸನ್ನ ಅವರ ಅದೊಂದು ದಿನ, ಶಶಿಧರ ಹಾಲಾಡಿ ಅವರ ನದಿ ದಾಟಿ ಬಂದವರು ಕೃತಿಯನ್ನು ಬಿಡುಗಡೆ ಮಾಡಲಾಯಿತು. ಈ ವೇಳೆ ಸಾಹಿತಿ ಎನ್.ಎಸ್.ಶ್ರೀಧರಮೂರ್ತಿ, ಡಾ ಟಿ.ಆರ್. ಅನಂತರಾಮು, ಎ.ಎನ್. ಪ್ರಸನ್ನ, ಶಶಿಧರ ಹಾಲಾಡಿ, ಡಾ. ಎಂ.ವಿ. ನಾಗರಾಜರಾವ್, ಪ್ರಕಾಶ್ ಕಂಬತ್ತಳ್ಳಿ, ಇದ್ದರು.

ಸ್ವತಂತ್ರ ಪೂರ್ವ ಗ್ರಾಮೀಣ ಬದುಕಿನ ಚಿತ್ರಣ

ಲೇಖಕಿ ಭಾರತಿ ಹೆಗಡೆ ಮಾತನಾಡಿ, ಶಶಿಧರ ಹಾಲಾಡಿ ಅವರುಬರೆದಿರುವ ನದಿ ದಾಟಿ ಬಂದವರು ಕಾದಂಬರಿಯಲ್ಲಿ ಸ್ವತಂತ್ರಪೂರ್ವ ಗ್ರಾಮೀಣ ಬದುಕಿನ ಚಿತ್ರಣ ಮತ್ತು ಕೃಷಿಕರ ಕಷ್ಟಗಳನ್ನು ಮನ ಮುಟ್ಟುವಂತೆ ವಿವರಿಸಿದ್ದಾರೆ ಎಂದು ಹೇಳಿದರು.

ಸಚಿವರ ಗೈರು ಹಾಜರಿ: ಸಭಾಪತಿ ಎಚ್ಚರಿಕೆ

ವಿಧಾನಪರಿಷತ್: ಸದನದಲ್ಲಿ ಸಚಿವರು ಕಡ್ಡಾಯವಾಗಿ ಹಾಜರಿರದಿದ್ದರೆ ಸದನವನ್ನು ಅನಿವಾರ್ಯವಾಗಿ ಮುಂದೂಡಬೇಕಾಗುತ್ತದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸರಕಾರಕ್ಕೆ ಎಚ್ಚರಿಕೆ ಕೊಟ್ಟ ಪ್ರಸಂಗ ಮಂಗಳವಾರ ಜರುಗಿತು.

ಸದನದ ಕಲಾಪ ಆರಂಭವಾಗಿ ಪ್ರಶ್ನೋತ್ತರ ಅವಧಿ ನಡೆಯುತ್ತಿತ್ತು. ಆ ವೇಳೆ ಸದನದಲ್ಲಿ ಕಡ್ಡಾಯವಾಗಿ ಇರಬೇಕಾದ ಸಚಿವರ ಹೆಸರನ್ನು ಸಭಾಪತಿಯವರು ಪ್ರಕಟಿಸಿದರು. ಅದರಂತೆ ಸಚಿವರಾದ ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ಶಿವರಾಜ ತಂಗಡಗಿ, ಎಸ್.ಎಸ್. ಮಲ್ಲಿಕಾರ್ಜುನ್ ಮತ್ತಿತರರು ಸದನದಲ್ಲಿ ಹಾಜರಿರಬೇಕಿತ್ತು, ಆದರೆ ಈ ವೇಳೆ ಚಲುವರಾಯಸ್ವಾಮಿ ಮತ್ತು ಶಿವಾನಂದ ಪಾಟೀಲರು ಹಾಜರಿದ್ದರು. ಸದಸ್ಯರಾದ ಟಿ.ಎ. ಶರವಣ ಪ್ರಶ್ನೆ ಕೇಳಲು ಮುಂದಾದಾಗ, ಇಲಾಖೆಗೆ ಸಂಬಂಧಪಟ್ಟ ಸಚಿವರು ಇರಲಿಲ್ಲ. ಇದರಿಂದ ಬೇಸರಗೊಂಡ ಶರವಣ ಸೇರಿದಂತೆ ಸದಸ್ಯರು, ಸಚಿವರು ಸದನದಲ್ಲಿ ಇರದಿದ್ದರೆ ಯಾರನ್ನು ಪ್ರಶ್ನೆ ಕೇಳಬೇಕು? ನೀವು ಹೇಳಿದ ಮೇಲೂ ಇಲ್ಲ ಎಂದರೆ ಹೇಗೆ? ಎಂದು ಸದಸ್ಯರು ಪ್ರಶ್ನಿಸಿದರು. ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಭಾಪತಿಗಳು ಸೂಚನೆ ಕೊಟ್ಟ ನಂತರವೂ ಸಚಿವರು ಗೈರು ಹಾಜರಾದರೆ ಈ ಸದನಕ್ಕೆ ಗೌರವವಿಲ್ಲವೇ? ಕೆಲವು ಸಂದರ್ಭಗಳಲ್ಲಿ ನೀವು, ನಾನು ಹೇಳಬೇಕಾದ್ದನ್ನು ಹೇಳಬೇಕಾಗುತ್ತದೆ ಎಂದು ಹೇಳುತ್ತೀರಿ. ಒಂದು ಬಾರಿ ಅದನ್ನು ಸರಕಾರಕ್ಕೆ ಹೇಳಿ ಎಂದು ಆಗ್ರಹಿಸಿದರು. ಆಗ ಸಿ.ಟಿ.ರವಿ, 47 ವರ್ಷಗಳ ರಾಜಕೀಯ ಅನುಭವದಲ್ಲಿ ಯಾರಿಗೆ ಏನು ಹೇಳಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತು. ಸಮಯ ಸಂದರ್ಭ ನೋಡಿಕೊಂಡು ಹೇಳುತ್ತಾರೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಮಹಾರಾಷ್ಟ್ರದಲ್ಲಿ ಕಳೆದೆರಡು ದಿನಗಳಿಂದ ಧಾರಾಕಾರ ಮಳೆಯಾಗುತ್ತಿದ್ದು, ಮುಂಬೈ ಮಹಾನಗರ ಬಹುತೇಕ ನೀರಿನಲ್ಲಿ ಮುಳುಗಿದಂತಿದೆ. ಮುಂಬೈನ ಪ್ರಮುಖ ರಸ್ತೆಯೊಂದು ನದಿಯಂತಾಗಿದ್ದು, ನೂರಾರು ವಾಹನಗಳು ನೀರಿನಲ್ಲಿ ಮುಳುಗಿರುವ ಚಿತ್ರ.

ಉತ್ತಮ ಫೀಡರ್ ಬಸ್ ಸಂಪರ್ಕ | ಪ್ರಯಾಣಿಕರಿಗೆ ಅನುಕೂಲ

ಮೆಟ್ರೋ ಹಳದಿ ಮಾರ್ಗದ ಬಳಕೆ: ಸಂಚಾರ ದಟ್ಟಣೆ ಕುಸಿತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮೆಟ್ರೋ ಹಳದಿ ಮಾರ್ಗದ ಉದ್ಘಾಟನೆಯ ಬಳಿಕ ಹೆಚ್ಚು ಜನದಟ್ಟಣೆಯುಳ್ಳ ಪ್ರದೇಶಗಳಲ್ಲಿ ಒಂದಾದ ಹೊಸೂರು ರಸ್ತೆಯಲ್ಲಿ ದಟ್ಟಣೆಯ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಪ್ರಯಾಣಿಕರಿಗೆ ಅನುಕೂಲವಾಗಿದೆ.

ಮೆಟ್ರೋ ಮಾರ್ಗದ ಆರಂಭದ ಬಳಿಕ ಶೇ.10ರಷ್ಟು ದಟ್ಟಣೆ ಕಡಿಮೆಯಾಗಿದ್ದು, ಬೆಂಗಳೂರು ಸಂಚಾರ ಪೊಲೀಸ್‌ರ ಆಸ್ಟ್ರಾಮ್ ನಡೆಸಿದ ಅಧ್ಯಯನದಲ್ಲಿ ಇದು ತಿಳಿದು ಬಂದಿದೆ. ಹೊಸೂರು ರಸ್ತೆಯಲ್ಲಿ (ಸೆಂಟ್ರಲ್ ಸಿಲ್ಕ್‌ಬೋರ್ಡ್‌ನಿಂದ ಡೆಲ್ಟಾ ಎಲೆಕ್ಟ್ರಾನಿಕ್ ಬೊಮ್ಮಸಂದ್ರ ಮೆಟ್ರೋ ನಿಲ್ದಾಣಗಳವರೆಗೆ 11.5 ಕಿ.ಮೀ) ಸಂಚಾರ ದಟ್ಟಣೆ ಸರಾಸರಿ ಶೇ. 10ರಷ್ಟು ಕಡಿಮೆಯಾಗಿದೆ. ಸಂಜೆಯ ಪೀಕ್ ಸಮಯದಲ್ಲಿ (ಸಂಜೆ 4ರಿಂದ ರಾತ್ರಿ 9 ರವರೆಗೆ) ಶೇ. 32ರಷ್ಟು (ಆರ್‌ವಿ ರಸ್ತೆಯಿಂದ ಡೆಲ್ಟಾ ಎಲೆಕ್ಟ್ರಾನಿಕ್ ಬೊಮ್ಮಸಂದ್ರ ನಿಲ್ದಾಣಗಳವರೆಗೆ 21 ಕಿ.ಮೀ) ಇಳಿಕೆ ಕಂಡುಬಂದಿದೆ, ಏಕೆಂದರೆ ಅನೇಕ ಪ್ರಯಾಣಿಕರು ಕೆಲಸದಿಂದ ಹಿಂತಿರುಗುವಾಗ ಮೆಟ್ರೋವನ್ನು ಆರಿಸಿಕೊಂಡರು. ಆಗಸ್ಟ್ 12ರಂದು ಬೆಳಗಿನ ಸಂಚಾರ ದಟ್ಟಣೆಯಲ್ಲಿ (ಬೆಳಿಗ್ಗೆ 7–11) ಶೇ.22ರಷ್ಟು ಸಾಧಾರಣ ಕುಸಿತವಾಗಿದೆ. ಮೆಟ್ರೋ ಕಾರ್ಯಾಚರಣೆ ಪ್ರಾರಂಭವಾದ ನಂತರ ಹೊಸೂರು ರಸ್ತೆಯ ಹಳದಿ ಮಾರ್ಗದಲ್ಲಿ ಸರಾಸರಿ ಸಂಚಾರ ದಟ್ಟಣೆ ಶೇ.10ರಷ್ಟು ಕಡಿಮೆಯಾಗಿದೆ ಎಂದು ವರದಿ ತಿಳಿಸಿದೆ.

ಮೆಟ್ರೋ ಸಂಚಾರ ನಿರಂತರವಾಗಿ ಹೆಚ್ಚಾದ ನಂತರ,

ಟ್ರಾಫಿಕ್ ದಟ್ಟಣೆಯನ್ನು ಮತ್ತಷ್ಟು ಕಡಿಮೆ ಮಾಡಬಹುದು. ನಾವು ಸುಮಾರು ಶೇ. 20ರಷ್ಟು ಕಡಿತ ನಿರೀಕ್ಷಿಸಿದ್ದೆವು, ಆದರೆ ಸದ್ಯ ಶೇ 1ರಷ್ಟಿದೆ. ಉತ್ತಮ ಫೀಡರ್ ಬಸ್ ಸಂಪರ್ಕವು ಸಹಾಯ ಮಾಡುತ್ತದೆ ಎಂದು ತಜ್ಞರು ಹೇಳಿದ್ದಾರೆ.

ಹೆಚ್ಚಿನ ಪ್ರಯಾಣಿಕರು ಹೊಸ ಮಾರ್ಗಕ್ಕೆ ಹೊಂದಿಕೊಳ್ಳುವುದರಿಂದ ಮೆಟ್ರೋದ ದಟ್ಟಣೆಯ ಮೇಲೆ ಅದರ ಪರಿಣಾಮ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಹೇಳಿದ್ದು, ಪ್ರಯಾಣಿಕರು ಸಾಮಾನ್ಯವಾಗಿ ಪ್ರಯಾಣ ವಿಧಾನಗಳನ್ನು ಬದಲಾಯಿಸಲು ಕೆಲವು ವಾರಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಅಧಿಕಾರಿ ಹೇಳಿದರು. ಪ್ರಸ್ತುತ, 12 ಮೆಟ್ರೋ ಫೀಡರ್ ಬಸ್‌ಗಳು ಕಾರ್ಯನಿರ್ವಹಿಸುತ್ತಿವೆ.

ಆಧುನಿಕ ಕನ್ನಡ ಸಾಹಿತ್ಯದ ಮೇರುರತ್ನ ಎಸ್.ಎಲ್.ಭೈರಪ್ಪ ಅವರಿಗೆ ಇಂದು 95ನೇ ಹುಟ್ಟು ಹಬ್ಬದ ಸಂಭ್ರಮ. ಅವರ ಓದುಗ ಅಭಿಮಾನಿಗಳಿಗೂ ಇಂದು ಸಂಭ್ರಮದ ದಿನ. ಆಳವಾದ ಚಿಂತನೆ, ಸಂಶೋಧನೆ ಮತ್ತು ವಿನೂತನ ವಸ್ತು ವಿಷಯಗಳಿಂದ ಕೂಡಿದ ಅವರ ಸಾಹಿತ್ಯ ಕೃತಿಗಳನ್ನು ಓದಿದವರಿಗೆ ಭೈರಪ್ಪ, ಬದುಕಿನ ಹಲವು ಮಜಲುಗಳನ್ನು ತೆರೆದಿಟ್ಟ ದಾರ್ಶನಿಕನಂತೆ ಕಾಣುತ್ತಾರೆ. ಈ ಸಾಹಿತ್ಯ ರತ್ನ 100 ವಸಂತಗಳನ್ನು ದಾಟಿ ನಮ್ಮೊಂದಿಗಿರಲಿ ಎನ್ನುವುದು ಕನ್ನಡಿಗರೆಲ್ಲರ ಅಭಿಮಾನದ ನುಡಿ.



ಸಾಹಿತ್ಯದ ಮೇರುರತ್ನ 95

ಭೈರಪ್ಪ ಅವರ ಸಾಹಿತ್ಯವೂ ವ್ಯಕ್ತಿತ್ವವೂ

ಪೂರ್ತಿ ಹೆಸರು: ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ

ಹುಟ್ಟಿದ ದಿನಾಂಕ: 1931, ಆಗಸ್ಟ್-20

ಹುಟ್ಟೂರು: ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸಂತೇಶಿವರ

ತಂದೆ: ಲಿಂಗಣ್ಣಯ್ಯ

ತಾಯಿ: ಗೌರಮ್ಮ

ಅಜಕ್ಕಳ ಗಿರೀಶ್ ಭಟ್

ಆವರಣದಾಚೆ

ತನ್ನ ಜೀವನದ ಆರಂಭ ಕಾಲದಲ್ಲಿ ಒಬ್ಬ ವ್ಯಕ್ತಿ ಪಡೆದ ಅನುಭವವು ಶ್ರೀಮಂತವಾಗಿದ್ದಷ್ಟು ಆ ವ್ಯಕ್ತಿಯ ಮುಂದಿನ ಬದುಕಿನ ಬುತ್ತಿ ದೊಡ್ಡದಾಗುತ್ತದೆ. ಮನೆಕೆಲಸ, ಕೊಟ್ಟಿಗೆ ಕೆಲಸ, ಪೌರೋಹಿತ್ಯದ ಪರಿಚಾಕರಿ, ಹೋಟೆಲ್ ಕೆಲಸ, ಸಂತೆಯಲ್ಲಿ ಶರಬತ್ತು ಮಾರಾಟ, ಊದುಬತ್ತಿ ಮಾರಾಟ, ಸಿನಿಮಾ ದ್ವಾರಪಾಲನೆ, ಖಾಸಗಿ ಪಾಠ ಹೇಳುವುದು, ಕಥಾ ನಿರೂಪಣೆ, ಸಾಧುಗಳ ಜೊತೆ ಅಲೆದಾಟ, ರೈಲು ನಿಲ್ದಾಣದಲ್ಲಿ ಕೂಲಿ, ಅಡಿಗೆ ನಾಟಕ ಕಂಪನಿಯಲ್ಲಿ ಲೆಕ್ಕ ಬರೆಯುವುದು ಮೊದಲಾದ ಅನುಭವಗಳನ್ನು ತೀರ ಸಣ್ಣ ವಯಸ್ಸಿನಲ್ಲಿಯೇ ಪಡೆದ ವ್ಯಕ್ತಿಯೊಬ್ಬ ತತ್ವಶಾಸ್ತ್ರ ಪ್ರಾಧ್ಯಾಪಕನಾಗಿ ಕಾದಂಬರಿಕಾರನಾಗಿ ರೂಪುಗೊಂಡರೆ ಅಂತಹ ವ್ಯಕ್ತಿ ಸೃಷ್ಟಿಸಿದ ಸಾಹಿತ್ಯದಲ್ಲಿ ವಸ್ತುವೈವಿಧ್ಯ ಮತ್ತು ಅನುಭವ ಶ್ರೀಮಂತಿಕೆ ಇಲ್ಲದಿರಲು ಸಾಧ್ಯವಿಲ್ಲ. ಅಂತಹ ಸಾಹಿತಿಯು ಕಲಾಪ್ರಜ್ಞೆಯನ್ನು ಕೂಡ ಹೊಂದಿದ್ದಾಗ ಸಾಹಿತ್ಯ ಕೃತಿಗಳು ಉತ್ತಮ ಕಲಾಕೃತಿಗಳಾಗುತ್ತವೆ.

ಇದು ಡಾ. ಎಸ್.ಎಲ್. ಭೈರಪ್ಪನವರ ವಿಶಿಷ್ಟತೆ

ದೇಶ ಸುತ್ತು, ಕೋಶ ಓದು ಎನ್ನುವ ಮಾತನ್ನು ಭೈರಪ್ಪನವರ ಹಾಗೆ ಅಕ್ಷರಶಃ ಪಾಲಿಸಿದ ಬೇರೆ ಕಾದಂಬರಿಕಾರರು ಕನ್ನಡದಲ್ಲಷ್ಟೇ ಅಲ್ಲ ಬಹುಶಃ ಭಾರತೀಯ ಭಾಷೆಗಳಲ್ಲಿ ಇರಲಾರರು. ಭೈರಪ್ಪ ನವರು ದೇಶ ಸುತ್ತಿ ಕೋಶ ಓದಿದ್ದಷ್ಟೇ ಅಲ್ಲ; ಬರವಣಿಗೆಯನ್ನೂ ಮಾಡಿದರು. ಹೀಗೆ ಕನ್ನಡದಲ್ಲಿ ಬಹುದೊಡ್ಡ ಸಂಖ್ಯೆಯ ಓದುಗರಿಂದ ಪ್ರೀತಿ- ಅಭಿಮಾನವನ್ನು ಪಡೆದ ಭೈರಪ್ಪನವರು ಇತರ ಹಲವು ಭಾರತೀಯ ಭಾಷೆಗಳ ಓದುಗರಿಂದಲೂ ಮೆಚ್ಚುಗೆಯನ್ನು ಪಡೆದು ಪ್ರಸಿದ್ಧರಾಗಿದ್ದಾರೆ. ಕನ್ನಡದ ಕೆಲವು ಪ್ರಸಿದ್ಧ ವಿಮರ್ಶಕರ ಟೀಕೆಗಳೇನೇ ಇದ್ದರೂ ಅವರ ಕೃತಿಗಳನ್ನು ಮೆಚ್ಚಿದ ಮತ್ತು ಗಂಭೀರವಾಗಿ ವಿಶ್ಲೇಷಿಸಿದ ಮಹತ್ವದ ವಿಮರ್ಶಕರು ದೊಡ್ಡ ಸಂಖ್ಯೆಯಲ್ಲಿಯೇ ಇದ್ದಾರೆ. ಅವರ ಕೃತಿಗಳ ಬಗ್ಗೆ ಅದೆಷ್ಟೋ ಪುಸ್ತಕಗಳು ಬಂದಿವೆ. ಅಲ್ಲದೆ ಅನೇಕ ಪಿಎಚ್.ಡಿ ಮತ್ತು ಎಂ.ಫಿಲ್. ಸಂಶೋಧನಾ ಪ್ರಬಂಧಗಳು ರಚನೆಯಾಗಿವೆ. ಜನಪ್ರಿಯವಾಗಿರುವುದೇ ಭೈರಪ್ಪನವರ ಕಾದಂಬರಿಗಳ ದೌರ್ಬಲ್ಯ ಎಂಬ ಗ್ರಹಿಕೆಯನ್ನು ಕನ್ನಡದ ಕೆಲವು ಮುಂಚೂಣಿ ವಿಮರ್ಶಕರು ಪ್ರಚಾರ ಮಾಡಿದ್ದುಂಟು. ಆದರೆ ಭೈರಪ್ಪನವರ ಕಾದಂಬರಿಗಳ ವಸ್ತು ಮತ್ತು ತಂತ್ರಗಳನ್ನು ಅಧ್ಯಯನ ಮಾಡಿದರೆ ಅವರ ಕಾದಂಬರಿಗಳು ಯಾಕೆ ಜನಪ್ರಿಯವಾಗಿವೆ ಎಂಬುದು ಅರ್ಥವಾಗಬಹುದು.

ಕಾದಂಬರಿಗಳೆಂಬ ಕಲಾಕೃತಿಗಳು

ಇಡೀ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಕಾದಂಬರಿ ರಚನೆಯ ಹಿಂದಿರುವ ತತ್ವ ಮತ್ತು ತಂತ್ರಗಳ ಕುರಿತಾಗಿ ಭೈರಪ್ಪನವರಂತೆ ಗಾಢವಾಗಿ ಚಿಂತಿಸಿದ ಮತ್ತು ಬರವಣಿಗೆ ಮಾಡಿದ ಮತ್ತು ಮಾತನಾಡಿದ ಕಾದಂಬರಿಕಾರರು ಇಲ್ಲವೆನ್ನಬಹುದು. ಈ ಕುರಿತಾಗಿ ಭೈರಪ್ಪನವರು ಬರೆದಿರುವ ಹಾಗೂ ವಿವಿಧ ಸಂದರ್ಶನಗಳಲ್ಲಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ಕಾದಂಬರಿಗಳನ್ನು ಪ್ರವೇಶಿಸಲು ಇರುವ ವಿವಿಧ ದಾರಿಗಳನ್ನು ತೋರಿಸಿಕೊಡುತ್ತವೆ.

ಅನೇಕ ವಿಮರ್ಶಕರು ಭೈರಪ್ಪನವರ ಕಾದಂಬರಿಗಳಲ್ಲಿರುವ ವಸ್ತುವನ್ನು ಮಾತ್ರ ಪರಿಗಣಿಸಿ ವಿಶ್ಲೇಷಿಸುತ್ತಾರೆ. ಅಂತಹ ವಿಮರ್ಶಕರು ಭೈರಪ್ಪನವರ ಕೃತಿಗಳಲ್ಲಿ ಸಾಮಾಜಿಕ – ರಾಜಕೀಯ ನಿಲುವುಗಳನ್ನು ಹುಡುಕಲು ತೊಡಗುತ್ತಾರೆ. ತಮ್ಮ ಪೂರ್ವನಿರ್ಧರಿತ ಸಿದ್ಧಾಂತಗಳಿಗೆ ಭೈರಪ್ಪನವರ ಕಾದಂಬರಿಗಳು ಹೊಂದದಿದ್ದಾಗ ಅವರಿಗೆ ಸಮಸ್ಯೆಯಾಗುತ್ತದೆ. ಆದರೆ, ಸಾಹಿತ್ಯ ಕೃತಿಯನ್ನು ಕಲಾಕೃತಿಯಾಗಿ ಪರಿಗಣಿಸುವವರಿಗೆ ಭೈರಪ್ಪನವರ ಕಾದಂಬರಿಗಳು ದಾರ್ಶನಿಕ ಎನಿಸುತ್ತವೆ. ರಸಾನುಭವದೊಂದಿಗೆ ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞೆಯನ್ನು ವಿಸ್ತರಿಸುವ ಕೃತಿಗಳಾಗಿ ಕಾಣುತ್ತವೆ.

ಭೈರಪ್ಪನವರ ಕಾದಂಬರಿಗಳಲ್ಲಿ ವಸ್ತುವೈವಿಧ್ಯ ಇರುವಂತೆ ತಂತ್ರವೈವಿಧ್ಯವು ಇದೆ. ಅವರ ಕಾದಂಬರಿಗಳಲ್ಲಿರುವ ತಂತ್ರಗಳನ್ನು ಹಲವು ನೆಲೆಗಳಲ್ಲಿ ಗುರುತಿಸಲು ಸಾಧ್ಯ. ಘಟನೆಗಳ ಪೋಣಿಸುವಿಕೆ, ಪಾತ್ರ ಚಿತ್ರಣ ಕ್ರಮ, ಸಮಾನಾಂತರ ಕಥೆಗಳು, ಉಪಕಥೆಗಳು, ಕಥೆಯೊಳಗೆ ಕಥೆ, ಪ್ರಥಮ ಪುರುಷ, ಉತ್ತಮ ಪುರುಷ, ಪ್ರಜ್ಞಾ ಪ್ರವಾಹ ತಂತ್ರ ನಿರೂಪಣೆ, ಭಾಷೆಯ ಬಳಕೆಯ ಕ್ರಮ- ಗ್ರಾಮ್ಯ ಭಾಷೆ ಪ್ರಾದೇಶಿಕ ಭಾಷಾ ಪ್ರಭೇದಗಳು, ಉಲ್ಲೇಖಗಳ ಬಳಕೆ- ಗಾದೆ, ಮಂತ್ರಗಳು, ಪುರಾಣ, ನಂಬಿಕೆ- ಆಚರಣೆಗಳ ಉಲ್ಲೇಖಗಳು ಇತ್ಯಾದಿ.

ದಾರ್ಶನಿಕ ಅನ್ವೇಷಣೆಯುಳ್ಳ ಭೈರಪ್ಪನವರ ಕಾದಂಬರಿಗಳೆಂಬ ಕಲಾಕೃತಿಗಳನ್ನು ಕೇವಲ ಸಾಮಾಜಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಮಾತ್ರ ನೋಡಿ ವಿಶ್ಲೇಷಿಸಿದರೆ ಅಥವಾ ಕೇವಲ ಸಮಾಜ ವಿಮರ್ಶೆಯ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಂಡರೆ ಆಗ ಕೃತಿಯಿಂದ ನಮಗಾಗುವ ಲಾಭ ಕಡಿಮೆ. ಹಾಗೆ ನೋಡಿದರೆ, ಭೈರಪ್ಪನವರು ಸಮಕಾಲೀನ ಸಾಮಾಜಿಕ ಸಂಗತಿಗಳಿಗೆ ತಮ್ಮ ಕಾದಂಬರಿಗಳ ಮೂಲಕ ಸ್ಪಂದಿಸಿದ ಬಗೆಯೂ ವಿಶೇಷವಾಗಿ ಉಲ್ಲೇಖನೀಯವೇ. ಸಿದ್ದಲಿಂಗಯ್ಯನವರು 'ಇಕ್ರಲಾ ವದೀರ್ಲಾ' ಎಂದು ಬರೆಯುವುದಕ್ಕೆ ಮೊದಲೇ ಭೈರಪ್ಪನವರ 'ದಾಟು' ಕಾದಂಬರಿಯ ಮೋಹನದಾಸ 'ಮೇಲುಜಾತಿಯವರನ್ನು 'ಒದೀದೆ ಯಾರೂ ದಾರಿಗೆ ಬರುಲ್ಲ' ಎಂದು ಹೇಳಿದ್ದ ಎನ್ನುವುದನ್ನು ನಾವು ಮರೆಯಬಾರದು.

ಅಸ್ಪೃಶ್ಯತೆಯನ್ನು ಸೂಕ್ಷ್ಮವಾಗಿ ಚಿತ್ರಿಸಲು ಭೈರಪ್ಪನವರು ಬಳಸಿಕೊಂಡ ಸನ್ನಿವೇಶವಂತು ಬಹಳ ವಿಶಿಷ್ಟವಾಗಿ ಮೂಡಿಬಂದಿದೆ. ದಾಟು ಕಾದಂಬರಿಯಲ್ಲಿ ಮಗಳು ಸತ್ಯಳನ್ನು ಸರಿದಾರಿಗೆ ತರಲು ಬೆಂಗಳೂರಿಗೆ ಹೋಗುವ ವೆಂಕಟರಮಣಯ್ಯನ ಜೊತೆ ಇರುವ ಬೆಟ್ಟಯ್ಯ ಅಲ್ಲಿ ಬೇರೆ ಆಟೋರಿಕ್ಷಾದಲ್ಲಿ ಹೋಗಬೇಕಾಗುತ್ತದೆ. ಮಗಳಿಗೆ ಹೊಡೆದು ಸುಸ್ತಾಗಿ ಎಚ್ಚರತಪ್ಪಿ ಬಿದ್ದ ವೆಂಕಟರಮಣಯ್ಯ ಎಚ್ಚರಗೊಂಡಾಗ ಬೆಟ್ಟಯ್ಯ ಹೇಳುವ ಮಾತು ತುಂಬಾ ಮಾರ್ಮಿಕವಾದದ್ದು. ಸ್ವಾಮಿಯೋರೆ, ನಾನೇನು ಮುಟ್ಟಿಲ್ಲ. ಚೆನ್ನಾಗಿ ಜ್ಞಾನ ಬಂದ ಮೇಲೆ ಮಡಿ ಉಟ್ಟುಕೊಳ್ಳುವಿರಂತೆ.. ಅಸ್ಪೃಶ್ಯತೆಯನ್ನು ಬಹುಶ ಇದಕ್ಕಿಂತ ಸೂಕ್ಷ್ಮವಾಗಿ ವಿಡಂಬಿಸಲು ಸಾಧ್ಯವಿಲ್ಲ.

'ದಾಟು' ಎಂದಲ್ಲ, ಭೈರಪ್ಪನವರ ಯಾವ ಕೃತಿಯೂ ಬದುಕಿನ ಯಾವುದೋ ಒಂದು ಮುಖವನ್ನು ಮಾತ್ರ ನೋಡುವುದಿಲ್ಲ. ಅವರ ಕೃತಿಗಳು ಸಾಂಸ್ಕೃತಿಕ, ನೈತಿಕ ಮೌಲ್ಯಗಳ ವಿವೇಚನೆಯೊಂದಿಗೆ, ಬದುಕಿನ ಹಲವು ಮಗ್ಗುಲುಗಳನ್ನು ಸ್ಪರ್ಶಿಸುತ್ತವೆ. ಆದರೆ ಸಿದ್ಧಾಂತಗಳ ಪ್ರತಿಬಿಂಬವಾಗಿ ಸಾಹಿತ್ಯವನ್ನು ಸೃಷ್ಟಿಸಬೇಕೆಂಬುದನ್ನು ಅವರು ಒಪ್ಪುವುದಿಲ್ಲ. ಅವರ ಪ್ರಕಾರ, ಸಾಹಿತಿಗಳಾದವರು ಬದುಕಿನ ಸತ್ಯಗಳನ್ನೂ ಮೌಲ್ಯಗಳನ್ನೂ ಶೋಧಿಸಿ ಓದುಗರಿಗೆ ಕಾಣಿಸಿದರೆ ಅದುವೇ ಸಮಾಜಕ್ಕೆ ಸಾಹಿತಿಗಳ ಕೊಡುಗೆ. ಆದರೆ ಸತ್ಯವನ್ನು ಅಥವಾ ವಾಸ್ತವವನ್ನು ಭೈರಪ್ಪನವರು ಹಸಿಹಸಿಯಾಗಿ ವರದಿಯ ರೂಪದಲ್ಲಿ ಮಂಡಿಸುವವರಲ್ಲ.ಅದು ಕಲ್ಪನೆಯೊಂದಿಗೆ ಬೆರೆತು ಕಲಾತ್ಮಕವಾಗಿ ರಸಾನುಭವವನ್ನು ನೀಡುವಂತಾಗಬೇಕು. ಹೀಗಾಗಿಯೇ ಇತಿಹಾಸದ ಸತ್ಯವನ್ನು ಹೇಳಬೇಕೆಂಬ ಅವರ ತುಡಿತವು 'ಆವರಣ' ಕಾದಂಬರಿಯಲ್ಲಿ, ಕಥೆಯೊಳಗಿನ ಕಥೆಯ ತಂತ್ರವಾಗಿ ಬಂತು. 'ಯಾನ' ಕಾದಂಬರಿ ಅತ್ಯಂತ ಆಧುನಿಕವಾದ ತಂತ್ರಜ್ಞಾನದ ಬಗೆಗೆ ಭೈರಪ್ಪನವರಿಗಿರುವ ಆಸಕ್ತಿಯನ್ನು ನಮ್ಮ ಮುಂದೆ ತೆರೆದಿಟ್ಟರೆ, ಪರ್ವ, ಉತ್ತರಕಾಂಡದಂತಹ ಕಾದಂಬರಿಗಳು ಮಹಾಭಾರತ ರಾಮಾಯಣಗಳಂತಹ ಇತಿಹಾಸಪುರಾಣಗಳಲ್ಲಿ ಹೇಳಲಾದ ಘಟನೆಗಳು ನಿಜವಾಗಿಯೂ ನಡೆದಿದ್ದರೆ ಹೇಗಿರುತ್ತಿತ್ತು ಎಂಬ ಅವರ ಕಲ್ಪನೆಯನ್ನು ಮುಂದಿಡುತ್ತವೆ.

ವಿಶ್ವಮಾನ್ಯ ಸಾಹಿತಿ

ಕನ್ನಡದಲ್ಲಿ ನಿಸ್ಸಂಶಯವಾಗಿ ಅತಿದೊಡ್ಡ ಸಂಖ್ಯೆಯ ಓದುಗರನ್ನು ಹೊಂದಿರುವ ಭೈರಪ್ಪನವರು ವರ್ತಮಾನ ಕಾಲದಲ್ಲಿ ಅನುವಾದಗಳ ಮೂಲಕ ಹೆಚ್ಚಿನ ಎಲ್ಲಾ ಪ್ರಮುಖ ಭಾರತೀಯ ಭಾಷೆಗಳಿಗೂ ಇಂಗ್ಲಿಷಲ್ಲದೆ ಇತರ ಹಲವು ವಿದೇಶಿ ಭಾಷೆಗಳಿಗೂ ತಲುಪಿದ್ದಾರೆ ಎನ್ನುವುದು ಕನ್ನಡಿಗರಿಗೆ ಮತ್ತಷ್ಟು ಹೆಮ್ಮೆಯ ಸಂಗತಿ.

ನಿಜವಾದ ಅರ್ಥದಲ್ಲಿ ಭಾರತೀಯ ತತ್ವಜ್ಞಾನ, ಭಾರತೀಯ ಸಂಸ್ಕೃತಿ ಮತ್ತು ಭಾರತೀಯ ಕಾವ್ಯಮೀಮಾಂಸೆ ಮತ್ತು ಭಾರತೀಯ ಕಲಾಮೀಮಾಂಸೆ – ಇವುಗಳನ್ನ ಓದಿಕೊಂಡು ಇವುಗಳ ಆಳವಾದ ಅರಿವಿನೊಂದಿಗೆ, ಪ್ರಜ್ಞಾಪೂರ್ವಕವಾಗಿ ಒಂದು ಕಲಾಕೃತಿಯನ್ನು ಸೃಷ್ಟಿಸುತ್ತಿದ್ದೇನೆ ಎನ್ನುವ ಅರಿವಿನೊಂದಿಗೆ ಬರೆದಂತಹ ಭಾರತೀಯ ಕಾದಂಬರಿಕಾರರೆಂದರೆ ಅದು ಭೈರಪ್ಪನವರು. ಭೈರಪ್ಪನವರು ಕೇವಲ ಕಾದಂಬರಿಗಳ ರಚನೆಯ ಕಾರಣಕ್ಕಾಗಿ ಮಾತ್ರ ನಮಗೆ ಮುಖ್ಯ ಅನಿಸುವುದಿಲ್ಲ ಬದಲಾಗಿ ಸತ್ಯ ಮತ್ತು ಸೌಂದರ್ಯ, ಸಾಹಿತ್ಯ ಮತ್ತು ಪ್ರತೀಕ ಮುಂತಾಗಿ ಅವರು ಸಾಹಿತ್ಯ ಮತ್ತು ಕಲೆಯ ಸೃಷ್ಟಿಪ್ರಕ್ರಿಯೆ ಬಗ್ಗೆ ನಡೆಸಿದಂತಹ ಚಿಂತನೆ, ಇತಿಹಾಸ ಮತ್ತು ಸಾಮಾಜಿಕ- ರಾಜಕೀಯ ಪರಿಸ್ಥಿತಿಗಳ ಬಗೆಗೆ ಅವರ ಪ್ರತಿಕ್ರಿಯೆಗಳು ಹಾಗೂ ಅಂಕಣಬರೆಹಗಳು, ಸಂದರ್ಶನಗಳು, ಭಿತ್ತಿಯಂತಹ ಆತ್ಮಕಥನ ಇವೆಲ್ಲ ಸಾಹಿತಿಯಾಗಿ ಭೈರಪ್ಪನವರನ್ನು ಮತ್ತಷ್ಟು ಪ್ರಸ್ತುತಗೊಳಿಸುತ್ತವೆ.

ಭೈರಪ್ಪ ಅವರಿಗೆ ಸಂದ ಪ್ರಶಸ್ತಿ-ಗೌರವಗಳು

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪದ್ಮ ಭೂಷಣ್ ಪ್ರಶಸ್ತಿ (2023) ಸ್ವೀಕರಿಸುತ್ತಿರುವ ಭೈರಪ್ಪ

ಕೆ.ಕೆ. ಬಿರ್ಲಾ ಪ್ರತಿಷ್ಠಾನದ ಸರಸ್ವತಿ ಸಮ್ಮಾನ್ ಪ್ರಶಸ್ತಿ (ಮಂದ್ರ ಕಾದಂಬರಿ-2010) ಸ್ವೀಕರಿಸುತ್ತಿರುವ ಭೈರಪ್ಪ

- ಪದ್ಮ ಭೂಷಣ-2023
- ಕೇಂದ್ರ ಸರಕಾರದ ಪದ್ಮಶ್ರೀ-2016
- ಮಮೋನಿ ರೈಸೊಂ ಗೋಸ್ವಾಮಿ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ (ಅಸ್ಸಾಂ ಸಾಹಿತ್ಯ ಸಭಾ)-2016
- ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್-2015
- ಸಾಹಿತ್ಯ ಅಕಾಡೆಮಿ ಫೆಲೋಶಿಪ್-2015
- ಡಾ. ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿ-2014
- ವಾಗ್ವಿಲಾಸಿನಿ ಪುರಸ್ಕಾರ್ (ದೀನನಾಥ ಮಂಗೇಶ್ಕರ್ ಸ್ಮೃತಿ ಪ್ರತಿಷ್ಠಾನ)-2012
- ನಾಡೋಜ ಪ್ರಶಸ್ತಿ-2011
- ಸರಸ್ವತಿ ಸಮ್ಮಾನ್ ಪ್ರಶಸ್ತಿ (ಮಂದ್ರ ಕಾದಂಬರಿಗೆ)-2010
- ಎನ್.ಟಿ.ಆರ್ ರಾಷ್ಟ್ರೀಯ ಪ್ರಶಸ್ತಿ-2007
- ಗುಲಬರ್ಗಾ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್-2007
- ಪಂಪ ಪ್ರಶಸ್ತಿ-2005
- ಎಸ್.ಆರ್.ಪ್ರಶಸ್ತಿ-2002
- ಸಾಮಾನ್ಯ ಜ್ಞಾನ ಪ್ರಶಸ್ತಿ-2002
- ಗೊರೂರು ಪ್ರಶಸ್ತಿ-2000
- ಗ್ರಂಥಲೋಕ, ವರ್ಷದ ಅತ್ಯುತ್ತಮ ಸಾಹಿತ್ಯ ಕೃತಿ (ಸಾಕ್ಷಿ)-1998
- ಭಾರತೀಯ ಭಾಷಾ ಪರಿಷತ್ ಸಂವತ್ಸರ ಪುರಸ್ಕಾರ್, ಕೊಲ್ಕತ್ತಾ (ತಂತು ಕಾದಂಬರಿ): 1996 – 97
- ಮಾಸ್ತಿ ಸಾಹಿತ್ಯ ಪ್ರಶಸ್ತಿ-1996
- ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ-1985
- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ದಾಟು ಕಾದಂಬರಿಗೆ)-1975
- ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ವಂಶವೃಕ್ಷ ಕಾದಂಬರಿಗೆ)-1966
- ರಾಷ್ಟ್ರೀಯ ಪ್ರಾಧ್ಯಾಪಕ (ನ್ಯಾಷನಲ್ ಪ್ರೊಫೆಸರ್) ಗೌರವ
- ಸಾಹಿತ್ಯ ಅಕಾಡೆಮಿ ಫೆಲೋ ಗೌರವ

ಟಾಪ್ ಟೆನ್ ಕೃತಿಗಳು

ಎಸ್.ಎಲ್. ಭೈರಪ್ಪನವರ ಕೃತಿಗಳಲ್ಲಿ 'ಟಾಪ್ ಟೆನ್' ಎಂದು ನಿಖರವಾಗಿ ಪಟ್ಟಿ ಮಾಡುವುದು ಕಷ್ಟ. ಆದರೂ, ವಿಮರ್ಶಕರು ಮತ್ತು ಓದುಗರಿಂದ ಅಪಾರ ಮೆಚ್ಚುಗೆ, ಬಹುಮುದ್ರಣ ಮತ್ತು ಚರ್ಚೆಗೊಳಪಟ್ಟ ಕೆಲವು ಪ್ರಮುಖ ಕೃತಿಗಳನ್ನು ಇಲ್ಲಿ ನೀಡಲಾಗಿದೆ.

1. ಪರ್ವ

ಮಹಾಭಾರತವನ್ನು ಹೊಸ ದೃಷ್ಟಿಕೋನದಿಂದ, ವೈಚಾರಿಕ ಮತ್ತು ಮಾನಸಿಕ ವಿಶ್ಲೇಷಣೆಯೊಂದಿಗೆ ಬರೆದ ಈ ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು.



2. ಗೃಹಭಂಗ

ಗ್ರಾಮೀಣ ಬದುಕಿನ ವಾಸ್ತವತೆಯನ್ನು, ಕಡುಬಡತನ ಮತ್ತು ಕಷ್ಟಗಳ ನಡುವೆ ಒಂದು ಕುಟುಂಬದ ಹೋರಾಟವನ್ನು ನೈಜವಾಗಿ ಈ ಕೃತಿ ಚಿತ್ರಿಸುತ್ತಿದೆ.



3. ವಂಶವೃಕ್ಷ

ಮೌಲ್ಯಗಳು, ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷವನ್ನು ಸೂಕ್ಷ್ಮವಾಗಿ ವಿವರಿಸುವ ಈ ಕಾದಂಬರಿ ಚಲನಚಿತ್ರವಾಗಿಯೂ ಪ್ರಸಿದ್ಧವಾಗಿದೆ.



4. ದಾಟು

ಧರ್ಮ ಮತ್ತು ಜಾತಿಯ ಸೂಕ್ಷ್ಮಗಳನ್ನು ಆಧುನಿಕ ಸಮಾಜದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಈ ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದೆ.



5. ಸಾರ್ಥ

ಭಾರತೀಯ ತತ್ವಜ್ಞಾನದ ಆಳವನ್ನು ಅರಿಯಲು ಪ್ರೇರೇಪಿಸುವ, ಆದಿ ಶಂಕರರ ಜೀವನವನ್ನು ಐತಿಹಾಸಿಕ ಮತ್ತು ವೈಚಾರಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಕಾದಂಬರಿ.



6. ಮಂದ್ರ

ಸಂಗೀತ ಮತ್ತು ಸೃಜನಶೀಲ ಬದುಕಿನ ಜಗತ್ತನ್ನು ಆಳವಾಗಿ ಪರಿಶೀಲಿಸುವ ಈ ಕೃತಿಯು, ಕಲಾವಿದನ ಅಂತರಂಗದ ಸಂಘರ್ಷ ಮತ್ತು ಸಾಧನೆಯ ಹಾದಿಯನ್ನು ನಿರೂಪಿಸುತ್ತದೆ.



7. ಆವರಣ

ಇತಿಹಾಸವನ್ನು ಪುನರ್ ವಿಮರ್ಶಿಸುವ, ಅದರಲ್ಲೂ ಭಾರತೀಯ ಇತಿಹಾಸದ ಕೆಲವು ನಿರ್ದಿಷ್ಟ ಘಟನೆಗಳ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.



8. ತಂತು

ತತ್ವಶಾಸ್ತ್ರ ಮತ್ತು ಮನುಷ್ಯ ಸಂಬಂಧಗಳನ್ನು, ವಿಶೇಷವಾಗಿ ಗುರು-ಶಿಷ್ಯರ ಸಂಬಂಧವನ್ನು ಆಧುನಿಕ ಸಂದರ್ಭದಲ್ಲಿ ವಿಶ್ಲೇಷಿಸುವ ಚಿಂತನೆಗೆ ಒಳಪಡಿಸುತ್ತದೆ.



9. ಮತದಾನ

ರಾಜಕೀಯ ವ್ಯವಸ್ಥೆ, ಚುನಾವಣೆ ಮತ್ತು ಹಳ್ಳಿಗಳ ವಾಸ್ತವಿಕ ಚಿತ್ರಣವನ್ನು ಒದಗಿಸುವ ಈ ಕೃತಿ, ರಾಜಕಾರಣದ ಸೂಕ್ಷ್ಮತೆಗಳನ್ನು ವಿವರಿಸುತ್ತದೆ.



10. ತಬ್ಬಲಿಯು ನೀನಾದೆ ಮಗನೆ

ಮಾನವ ಸಂಬಂಧಗಳ ಸೂಕ್ಷ್ಮತೆ ಮತ್ತು ತಾಯಿ-ಮಗುವಿನ ಬಾಂಧವ್ಯವನ್ನು ಭಾವನಾತ್ಮಕವಾಗಿ ವಿವರಿಸುತ್ತದೆ.

ಈ ಕೃತಿಗಳಲ್ಲದೆ ನಾಯಿ-ನೆರಳು, ಅಂಚು, ಧರ್ಮಶ್ರೀ, ಭಿತ್ತಿ ಮುಂತಾದ ಕೃತಿಗಳು ಸಹ ಸಾಕಷ್ಟು ಜನಪ್ರಿಯವಾಗಿವೆ.

ಸಮಾಜಮುಖಿ ಬದುಕು

ಭೈರಪ್ಪನವರ ಕಾದಂಬರಿಗಳಲ್ಲಿ ಧರ್ಮಸೂಕ್ಷ್ಮಗಳ ಜಿಜ್ಞಾಸೆ ಇರುತ್ತದೆ ಅನ್ನುವುದು ಓದುಗರಿಗೆ ಗೊತ್ತಿದೆ. ಧರ್ಮ, ಅರ್ಥ, ಕಾಮ, ಮೋಕ್ಷ ಹೀಗೆ ಭಾರತೀಯ ಪುರುಷಾರ್ಥದ ಕಲ್ಪನೆಗಳನ್ನು ಅವರ ಕಾದಂಬರಿಗಳು ಒಂದಲ್ಲ ಒಂದು ರೀತಿಯಲ್ಲಿ ವಿಶ್ಲೇಷಿಸುತ್ತವೆ. ಆದರೆ, 'ಧರ್ಮ'ದ ಬದುಕನ್ನು ಬದುಕುವ ಮಟ್ಟಿಗೆ, ಭೈರಪ್ಪನವರು ಭಾರತದ ಯಾವ ಸಾಹಿತಿಯಲ್ಲೂ ಇಲ್ಲದ ಒಂದು ಗುಣವನ್ನು ಹೊಂದಿರುವುದನ್ನು ನಾವು ಕಾಣಬಹುದು. ಅವರ ಹುಟ್ಟೂರಿಗೆ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂಬ ನಿಟ್ಟಿನಲ್ಲಿ ಅವರು ಮಾಡಿದಂತಹ ಒಂದು ಪ್ರಯತ್ನ ಎಲ್ಲರಿಗೂ ಗೊತ್ತಿರುವಂತದ್ದೇ. ಆದರೆ, ಸಾಮಾಜಿಕ ಕಾರ್ಯಗಳಿಗಾಗಿ, ಕಷ್ಟದಲ್ಲಿ ಇರುವವರಿಗಾಗಿ ಜಾತಿಮತ ಭೇದ ಮಾಡದೆ, ಪ್ರಚಾರ ಬಯಸದೆ ಸಹಾಯ ಮಾಡುವ ಬಗೆಗೆ ತೀರ ಹತ್ತಿರದವರ ಬಳಿಯೂ ಹೇಳಿಕೊಳ್ಳದವರು ಅವರು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಸಂದರ್ಭದಲ್ಲಿ ಅವರಿಗೆ ಕೊಟ್ಟಂತಹ ಆ ಕಾಲದ ದೊಡ್ಡ ಮೊತ್ತವನ್ನು ಹಿಂದಕ್ಕೆ ಕೊಟ್ಟದ್ದು ಹಳೆಯ ಸುದ್ದಿ. ಹೀಗೆಯೇ ಅವರಿಗೆ ಬಂದ ಇತರ ಅನೇಕ ಪ್ರಶಸ್ತಿಗಳ ಮೊತ್ತಗಳನ್ನು, ಕಾರ್ಯಕ್ರಮಗಳ ಆಯೋಜಕರು ಕೊಡುವ ಗೌರವಧನ, ಪ್ರಯಾಣಭತ್ಯೆಗಳನ್ನು ಒಳ್ಳೆಯ ಉದ್ದೇಶಕ್ಕಾಗಿ ದಾನ ಮಾಡಿದ ಹಲವು ಉದಾಹರಣೆಗಳಿವೆ. ಕೆಲವು ಸಂದರ್ಭಗಳಿಗೆ ಈ ಲೇಖಕನೂ ಸಾಕ್ಷಿ. ವರ್ತಮಾನಕಾಲದಲ್ಲಿ ಪ್ರಯಾಣಭತ್ಯೆ, ದಿನಭತ್ಯೆ, ಗೌರವಧನ ಮುಂತಾದವುಗಳ ಕುರಿತು ಸಾಹಿತಿ-ಪ್ರಾಧ್ಯಾಪಕರಲ್ಲಿ ಇರುವ ಆಗ್ರಹವನ್ನು ನೋಡಿರುವವರಿಗೆ ಭೈರಪ್ಪನವರ ಈ ಗುಣ ಬಹಳ ವಿಶೇಷವೆನಿಸದಿರದು.

ಇತ್ತೀಚೆಗೆ ಭೈರಪ್ಪನವರು ತಮ್ಮ ಕಾದಂಬರಿಗಳ ರಾಯಧನದ ಮೂಲಕ ಬಂದ ದೊಡ್ಡ ಮೊತ್ತದ ಉಳಿತಾಯದ ಹಣದಲ್ಲಿ ಟ್ರಸ್ಟ್ ಒಂದನ್ನು ವಿಶ್ವೇಶ್ವರ ಭಟ್ ಮತ್ತು ಸಹನಾ ವಿಜಯಕುಮಾರ್ ಮುಂತಾದ ಆತ್ಮೀಯರ ಮೂಲಕ ಸ್ಥಾಪಿಸಿರುವುದು ಗಮನಾರ್ಹ. ಸಾಹಿತಿಗಳ ಹೆಸರಿನಲ್ಲಿ ಟ್ರಸ್ಟುಗಳು ಇರುವುದು ವಿಶೇಷವಲ್ಲ. ಆದರೆ ಅಂತಹ ಟ್ರಸ್ಟುಗಳು ಸಾಮಾನ್ಯವಾಗಿ ಸರಕಾರದ ಅನುದಾನ ಪಡೆದು ಪ್ರಶಸ್ತಿಯನ್ನೋ ಮತ್ತೊಂದನ್ನೋ ಕೊಡುತ್ತವೆ; ಕಾರ್ಯಕ್ರಮಗಳನ್ನು ನಡೆಸುತ್ತವೆ. ಇಂತಹ ಪರಿಪಾಠವಿರುವಾಗ ಸಾಹಿತಿಯೊಬ್ಬರು ತಮ್ಮ ಸ್ವಂತ ಹಣವನ್ನು ಟ್ರಸ್ಟಿಗಾಗಿ ನೀಡಿದ್ದಾರೆ ಎಂದರೆ ಅದು ನಂಬಲಸಾಧ್ಯವಾದ ಸತ್ಯ. ಭೈರಪ್ಪನವರ ಸಾಹಿತ್ಯ ಮತ್ತು ವ್ಯಕ್ತಿತ್ವಕ್ಕೆ ಭೈರಪ್ಪನವರೇ ಸಾಟಿ.

ಭೈರಪ್ಪನವರ ಕಾದಂಬರಿ ಆಧಾರಿತ ಚಲನಚಿತ್ರಗಳಿಗೆ ಸಂದ ಪ್ರಶಸ್ತಿಗಳು

- ಮುಂಬೈ ಅಂತಾರಾಷ್ಟ್ರೀಯ ಸಿನಿಮಾ ಉತ್ಸವ ಖಐಊಐ -ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ (ನಾಯಿ ನೆರಳು)-2007
- ಓಶಿಯಾನ್'ಸ್ ಏಷ್ಯಾ ಫಿಲಂ ಫೆಸ್ಟಿವಲ್, ಇಐಫೆಉಊಅಫೆ, ಜ್ಯೂರಿ ಪ್ರಶಸ್ತಿ – ಭಾರತೀಯ ಚಲನಚಿತ್ರ ವಿಭಾಗ (ನಾಯಿ ನೆರಳು) 2006
- ಕರಾಚಿ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ (ನಾಯಿ ನೆರಳು) 2006
- ಕೇಂದ್ರ ಸರಕಾರದ ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ, ಮತದಾನ (ಕನ್ನಡ)-2001
- ಕೇಂದ್ರ ಸರಕಾರದ ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ (ಗೋಧೂಳಿ) (ಹಿಂದಿ)-1977
- ಕೇಂದ್ರ ಸರ್ಕಾರದ ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ, ವಂಶವೃಕ್ಷ (ಕನ್ನಡ)-1972

ನಾಟಕ- ಚಲನಚಿತ್ರ-ಧಾರಾವಾಹಿ -ಅವಧಾನ -ನಾಟಕಗಳು

- ವಂಶವೃಕ್ಷ (ಹಿಂದಿ): 50+ ಪ್ರಯೋಗಗಳು
  ರಂಗರೂಪ: ಡಾ. ಪ್ರತಿಭಾ ಪ್ರಹ್ಲಾದ್
- ವಂಶವೃಕ್ಷ (ಕನ್ನಡ): 30+ ಪ್ರಯೋಗಗಳು
  ರಂಗರೂಪ: ಸಿಂದವಳ್ಳಿ ಅನಂತಮೂರ್ತಿ
- ಮಂದ್ರ: ನಿರ್ದೇಶನ: ಡಾ. ಬಿ.ವಿ. ರಾಜಾರಾಂ ಮತ್ತು ರಾಮನಾಥ್ (ಪ್ರತ್ಯೇಕವಾಗಿ) ಸಾರ್ಥ
  ನೃತ್ಯ ರೂಪಕ ನಿರ್ದೇಶನ – ತುಳಸಿ ರಾಮಚಂದ್ರ

ಚಲನಚಿತ್ರಗಳು

- ನಾಯಿ ನೆರಳು (ಕನ್ನಡ), ನಿರ್ದೇಶನ-ಗಿರೀಶ್ ಕಾಸರವಳ್ಳಿ: 2006
- ಮತದಾನ (ಕನ್ನಡ), ನಿರ್ದೇಶನ-ಟಿ.ಎನ್. ಸೀತಾರಾಮ್: 2000
- ವಂಶವೃಕ್ಷ (ತೆಲುಗು) ನಿರ್ದೇಶನ-ಬಾಪು: 1978
- ತಬ್ಬಲಿಯು ನೀನಾದೆ ಮಗನೆ (ಕನ್ನಡ/ಹಿಂದಿಯಲ್ಲಿ ಗೋಧೂಳಿ), ನಿರ್ದೇಶನ-ಗಿರೀಶ್ ಕಾರ್ನಾಡ್ ಮತ್ತು ಬಿ.ವಿ. ಕಾರಂತ್, 1975-76
- ವಂಶವೃಕ್ಷ (ಕನ್ನಡ), ನಿರ್ದೇಶನ-ಗಿರೀಶ್ ಕಾರ್ನಾಡ್ ಮತ್ತು ಬಿ.ವಿ. ಕಾರಂತ್ (1972)

ಧಾರಾವಾಹಿಗಳು

- ಗೃಹಭಂಗ (ಕನ್ನಡ), ನಿರ್ದೇಶನ-ಗಿರೀಶ್ ಕಾಸರವಳ್ಳಿ (2002)
- ದಾಟು (ಹಿಂದಿಯಲ್ಲಿ ಉಲ್ಲಂಘನ್) ನಿರ್ದೇಶನ-ಬಸು ಚಟರ್ಜಿ

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ನಾನು ಎನ್ನುವ ದಿವ್ಯ ಮಂತ್ರ

ನಾನು ಹೋದರೆ ಹೋದೇನು ಎಂದರು ದಾಸರು. ಅಂದರೆ ನಾನು ಎನ್ನುವ ಅಹಂಕಾರ ಹೋದರೆ ಸ್ವರ್ಗಕ್ಕೆ ಹೋದೇನು ಎಂದು. ಇಂದೂ ಸಹ ನಮ್ಮ ವಾಹನ ಚಾಲಕರು ದಿನನಿತ್ಯದ ವಾಹನಗಳ ದಟ್ಟಣೆಯಿಂದ ಕೂಡಿದ ರಸ್ತೆಗಳಲ್ಲಿ ನಾನು (ಮುಂದಕ್ಕೆ) ಹೋದರೆ (ಆಫೀಸಿಗೆ) ಹೋದೇನು ಎಂದೇ ಹೇಳುತ್ತಿರುತ್ತಾರೆ ಅಲ್ಲವೇ. ಹಾಗಾದರೆ ನಾನು ಎನ್ನುವುದನ್ನು ಬಿಟ್ಟು ವಾಹನ ದಟ್ಟಣೆ ಕಡಿಮೆಯಾಗಲಿ ಎಂದೋ, ಅವರು ಬೇಕಾದರೆ ಹೋಗಲಿ ನಾನು ಆಮೇಲೆ ಹೋಗುತ್ತೀನಿ ಎಂದುಕೊಂಡರೆ ಅಂಥವರು ಕಛೇರಿ ಮುಟ್ಟಿದ ಹಾಗೆಯೇ ಅಲ್ಲವೇ. ವ್ಯಾವಹಾ ರಿಕ ಬದುಕಲ್ಲಿ ನಾನು ಎನ್ನುವುದು ಮುಖ್ಯ, ಆದರೆ ಆಧ್ಯಾತ್ಮಿಕ ಬದುಕಲ್ಲಿ ನಾನು ಮುಖ್ಯ ಅಲ್ಲವೇ ಅಲ್ಲ. ಸ್ವಾಮಿ ವಿವೇಕಾನಂದರು ನಾನು ಎನ್ನುವ ಒಂದು ಚಿಕ್ಕ ಪದವನ್ನು ನಮ್ಮ ಚಿಂತನೆ ಯಿಂದ ತೆಗೆದುಹಾಕೋಣ ಎಂದಿದ್ದಾರೆ. ಹೇಗೆ ತೆಗೆದುಹಾಕುವುದು ಎಂದರೆ ವಿವೇಕದಿಂದ. ವಿವೇಕ ಎಲ್ಲಿಂದ ಬರುತ್ತದೆ ಎಂದರೆ ನಮ್ಮ ಬುದ್ಧಿ ಶಕ್ತಿಯಿಂದ ಬುದ್ಧಿಶಕ್ತಿಗೆ. ಇದು ಹೇಗೆ ತಿಳಿಯುತ್ತದೆ ಎಂದರೆ ನಮ್ಮ ಮನಸ್ಸು ಪಂಚಭೂತಗಳಿಂದ ಸದಾ ಆವೃತವಾಗಿರುವ ಈ ಮನಸ್ಸನ್ನು ಅರಿಯುವ ಪ್ರಯತ್ನ ಮಾಡುವಾಗ. ನಾನು ಇರಬೇಕು, ಆದರೆ ನಾನು ಇರಬಾರದು ಎನ್ನುವ ಭಾವ ಮೂಡುತ್ತದೆ. ಇದು ಹೇಗೆ ಎಂದರೆ ನಾನು ಎನ್ನುವ ಶರೀರ ಇರಬೇಕು, ಈ ಶರೀರದ ಮೂಲಕವೇ ಒಳಗಿರುವ ಆತ್ಮನಿಗೆ ಮುಕ್ತಿ. ಹೀಗೆ ಆತ್ಮ ಮುಕ್ತಿಗಳಿಸಿಕೊಳ್ಳಬೇಕಾದರೆ ಈ ದೇಹವೂ ಸಹಕರಿಸಬೇಕು. ಮನುಷ್ಯನ ಪ್ರತೀ ಹುಟ್ಟಿನ ಒಳಗಿರುವ ಗುಟ್ಟು ಏನೆಂದರೆ ಮತ್ತೆ ಹುಟ್ಟಿ ಬಾರದೇ ಇರುವುದು ಹೇಗೆ ಎನ್ನುವುದನ್ನು ಕಲಿಯುವುದಕ್ಕಾಗಿಯೇ ಮನುಷ್ಯ ಪದೇ ಪದೇ ಹುಟ್ಟುತ್ತಾನೆ ಎನ್ನುವುದು. ಯಾವಾಗ ಈ ಗುಟ್ಟು ತಿಳಿಯುವುದೋ ಆಗ ಮತ್ತೆ ಹುಟ್ಟುವ ಪ್ರಮೇಯವೇ ಬರುವುದಿಲ್ಲ.

ಈ ಗುಟ್ಟನ್ನು ಅರಿಯಲು ನಾಲ್ಕು ವಿಧಾನಗಳಿವೆ. ನಮ್ಮ ಬದುಕಿನಲ್ಲಿ ನಮ್ಮನ್ನು ಆವರಿಸಿರುವುದು ಜ್ಞಾನ, ಅಜ್ಞಾನ, ವಿದ್ಯೆ, ಅವಿದ್ಯೆ ಇವುಗಳು. ಅಜ್ಞಾನವನ್ನು ದಾಟಿ ಜ್ಞಾನದೆಡೆಗೆ ಸಾಗಿದಾಗ, ಅವಿದ್ಯೆಯಿಂದ ವಿದ್ಯೆಯೆಡೆಗೆ ಸಾಗಿದಾಗ ನಮಗೆ ನಮ್ಮ ಈ ಶರೀರ ಶಾಶ್ವತವಲ್ಲ ಒಳಗಿರುವ ಆತ್ಮ ಶಾಶ್ವತ ಎನ್ನುವುದು ಅರಿವಾಗುತ್ತದೆ. ಈ ಅರಿವು ನಮಗೆ ದೊರೆಯುವುದು ಸಮರ್ಥ ಗುರುವಿ ನಿಂದ. ಹಾಗಾದರೆ ಈ ಜ್ಞಾನ ಅಜ್ಞಾನ, ವಿದ್ಯೆ ಅವಿದ್ಯೆಗಳಿಂದ ಮುಖ್ತನಾಗಿ ಜಾಗೃತವಾಗಿರು ವವನು ಯಾರು ಎಂದರೆ ವಿವೇಕಿ. ವಿವೇಕಿ ಎಂದರೆ ಯಾರು ಎಂದರೆ ನಾವು ವಿವೇಕವನ್ನು ಗಳಿಸುವ ಹಾದಿಯಲ್ಲಿ ಕ್ರಮಿಸುತ್ತಿರುವಾಗ ಸತ್ಯ ಅಸತ್ಯ, ಆತ್ಮ ಮತ್ತು ದೇಹ, ಶಾಶ್ವತ ಅಶಾಶ್ವತ ಇವುಗಳ ಬೇಧವನ್ನು ಅರಿತಿರುತ್ತಾನೋ ಅವನು. ಇಂಥಾ ವಿವೇಕಿ ವ್ಯಾವಹಾರಿಕ ಬದುಕಿನಿಂದ ವೈರಾಗ್ಯದ ಬದುಕಿನತ್ತ ಹೆಜ್ಜೆ ಹಾಕುತ್ತಾನೆ. ಆಗ ಅವನಿಗೆ ಇಡೀ ಬ್ರಹ್ಮಾಂಡಕ್ಕೆ ಒಬ್ಬನೇ ಅಧಿಪತಿ, ಅವನೇ ಪರಮಾತ್ಮ, ಅವನ ಅಂಶವೇ ನಮ್ಮೊಳಗಿರುವುದು, ಅದೇ ಆತ್ಮ ಎನ್ನುವ ಸತ್ಯದ ಅರಿವುಂಟಾಗಿ ನಾವು ಯಾವ ಪರಮಾತ್ಮನ ಸ್ವರೂಪವಾಗಿ ಬಂದಿದ್ದೇವೋ ಆ ಪರಮಾತ್ಮನನ್ನೇ ಮತ್ತೆ ಸೇರಿಕೊಳ್ಳುವಂತೆ ಬದುಕಬೇಕು ಎನ್ನುವ ಜ್ಞಾನ ಬಂದು ನಮ್ಮೊಳಗೆ ದಿವ್ಯಜ್ಞಾನದ ಅರಿವು ಉಂಟಾಗುತ್ತದೆ. ಅಲ್ಲಿಂದ ಮುಂದೆ ನಮ್ಮ ಪಯಣ ಮುಕ್ತಿಯ ಕಡೆಗೆ. ಅಂಥಾ ಜ್ಞಾನ ಪ್ರತಿಯೊಬ್ಬರಲ್ಲೂ ಮೂಡಲಿ.

● ಬೇಲೂರು ರಾಮಮೂರ್ತಿ

ಕನ್ನಡದ ವೀರ ಸೇನಾನಿ!

ಕನ್ನಡದ ಪರವಾಗಿ ಇವರು ಮಾಡಿದ ಹೋರಾಟ, ಕೈಗೊಂಡ ಕೆಲಸಗಳು ಬಹು ಆಯಾಮದ್ದು. ಕನ್ನಡ ನಾಡಿಗೆ ಇವರ ಕೊಡುಗೆ ಬಹಳ ಪ್ರಮುಖವಾದದ್ದು.

● ರಾ.ನಂ. ಚಂದ್ರಶೇಖರ

ಮೈಸೂರಿನ ಅಗ್ರಮಾನ್ಯ ಕನ್ನಡಪರ ಹೋರಾಟಗಾರ, ಚಿಂತಕ , ನೃಪತುಂಗ ಕನ್ನಡ ಶಾಲೆಯ ಉಪಾಧ್ಯಕ್ಷ ಸ. ರ. ಸುದರ್ಶನ, 17.08.2025ರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರೆಂಬ ಸುದ್ದಿ ಕೇಳಿ ವಿಚಲಿತನಾದೆ. ಮೂರು ದಿನದ ಹಿಂದೆ ಮಾತನಾಡಿ ರಾಜ್ಯ ಸರ್ಕಾರದ ಶಿಕ್ಷಣ ನೀತಿಯ ಬಗ್ಗೆ ಮಾತನಾಡಿ ಕನ್ನಡಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು ಎಂದಿದ್ದರು.

ಇದೇ ಆಗಸ್ಟ್ 6ರಂದು ಕನ್ನಡ ಗೆಳೆಯರ ಬಳಗವು ಎಸ್.ಎಸ್.ಎಲ್.ಸಿ. ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಪಡೆದಿರುವ ಮೈಸೂರು ಜಿಲ್ಲೆಯ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ನೃಪತುಂಗ ಶಾಲೆಯ ಸಭಾಂಗಣದಲ್ಲೇ ವ್ಯವಸ್ಥೆ ಮಾಡಿತ್ತು. ಇಡೀ ಕಾರ್ಯಕ್ರಮದ ವ್ಯವಸ್ಥೆ ಅವರೇ ಮಾಡಿದ್ದರು. ಕಾರ್ಯಕ್ರಮ ತುಂಬಾ ಯಶಸ್ವಿಯಾಗಿ ನಡೆದ ಬಗ್ಗೆ ಖುಷಿಯಾಗಿದ್ದರು. ಕಾರ್ಯಕ್ರಮವನ್ನು ಆಗಸ್ಟ್ 20ರ ನಂತರ ವ್ಯವಸ್ಥೆ ಮಾಡುವಂತೆ ಹೇಳಿದಾಗ ಇಲ್ಲ ಬೇಗ ಮಾಡಿ ಬಿಡೋಣ ಎಂದು ಹಠ ಮಾಡಿ ಕಾರ್ಯಕ್ರಮ ಮಾಡಿದರು.

ಕನ್ನಡದಲ್ಲೇ ಉತ್ತರ ಬರೆದವರು!

ಸುದರ್ಶನ ಮೈಸೂರು ವಿಶ್ವವಿದ್ಯಾನಿಲಯದ ಭೂವಿಜ್ಞಾನ ಸ್ನಾತಕೋತ್ತರ ಪದವಿಯನ್ನು, ಪೂರ್ತಿ ಕನ್ನಡದಲ್ಲಿ ಬರೆದು ಮೂರನೆಯ ರ‍್ಯಾಂಕ್ (ಎಂ ಎಸ್ ಸಿ ಭೂ ವಿಜ್ಞಾನ) ಪಡೆದರು. ಆಗ ನಮಗೆಲ್ಲ ಅವರು ಹೀರೋ. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ದೇ.ಜ.ಗೌ ಅವರು, ಸುದರ್ಶನಗೆ ಪ್ರಸಾರಾಂಗದಲ್ಲಿ ಕೆಲಸ ನೀಡಿದರು. ಕನ್ನಡದಲ್ಲಿ ಎಂ.ಎ. ಮತ್ತು ಕಾನೂನು ಪದವಿಯನ್ನು ಪಡೆದಿದ್ದರು. ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಉಪ ನಿರ್ದೇಶಕರಾಗಿದ್ದ ಸುದರ್ಶನ, ಯಾವ ಮಡಿವಂತಿಕೆಯೂ ಇಲ್ಲದೇ ಕನ್ನಡಕ್ಕಾಗಿ ಹಲವು ನೇರ ಬೀದಿ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ಹೋರಾಟಗಳಲ್ಲೂ ಪಾಲ್ಗೊಳ್ಳುತ್ತಿದ್ದರು. ಕನ್ನಡಕ್ಕಾಗಿ ಜೈಲುವಾಸ, ಪೊಲೀಸ್ ಕಟ್ಟಳೆಗಳನ್ನು ಅನಭವಿಸಿದವರು. ಕನ್ನಡ ವಿಚಾರವಾಗಿ ನ್ಯಾಯಾಲಯದಲ್ಲಿ ಹೋರಾಡಿದವರು. ಎಲ್ಲಕ್ಕೂ ಮಿಗಿಲಾಗಿ ಕನ್ನಡಕ್ಕಾಗಿ ಹೋರಾಡುವವರ ಬಗ್ಗೆ ಅವರು ತೋರುತ್ತಿದ್ದ ಕಾಳಜಿ ಅಪಾರ.

ಗೋಕಾಕ್ ಚಳವಳಿಯ ನಂತರ ನಡೆದ ಎಲ್ಲಾ ಕನ್ನಡ ಹೋರಾಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ಕನ್ನಡನಾಡು-ನುಡಿಯ ಸಮಸ್ಯೆಗಳು

ಬಂದಾಗ ಅವರು ವೈಯಕ್ತಿಕ ಸಮಸ್ಯೆ ಎಂಬಂತೆ ಪರಿತಪಿಸುತ್ತಿದ್ದರು. ಅವರ ಮಗಳು ನುಡಿ (ಪ್ರತಿಭಾವಂತ ಕಲಾವಿದೆ) ನಮ್ಮ ಮನೆ ಸಮೀಪವೇ ಇದ್ದಾರೆ. ಮಗಳ ಮನೆಗೆ ಬಂದಾಗ ತಪ್ಪದೇ ಭೇಟಿಯಾಗಿ ಕನ್ನಡದ ವಿದ್ಯಮಾನವನ್ನು ಚರ್ಚಿಸುತ್ತಿದ್ದೆವು. ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂದು ಛಲಬಿಡದ ತ್ರಿವಿಕ್ರಮನಂತೆ ಹೋರಾಡುತ್ತಿದ್ದ ಸುದರ್ಶನ ಅವರ ಕನ್ನಡ ನಿಷ್ಠೆ ಪ್ರಶ್ನಾತೀತವಾದದ್ದು. 1982ರಿಂದ ಮೈಸೂರು ಕನ್ನಡ ಕ್ರಿಯಾ ಸಮಿತಿಯ ಜೀವನಾಡಿಯಾಗಿದ್ದ ಸುದರ್ಶನ ಅವರು ಕನ್ನಡ ಶಕ್ತಿ ಕೇಂದ್ರದ ಸಂಘಟನಾ ಕಾರ್ಯದರ್ಶಿಯಾಗಿದ್ದರು.

ಚೇತನ ಕನ್ನಡ ಸಂಘ

ವಿದ್ಯಾರ್ಥಿ ದಿಸೆಯಲ್ಲಿಯೇ ಗೆಳೆಯರು ಸೇರಿ ಆರಂಭಿಸಿದ ಚೇತನ ಕನ್ನಡ ಸಂಘದ ಕಾರ್ಯದರ್ಶಿಯಾಗಿ ಮಾಡಿದ ಕನ್ನಡ ಪರಿಚಾರಿಕೆ ಮೈಸೂರಿನ ಕನ್ನಡಿಗರ ಮನದಲ್ಲಿ ಶಾಶ್ವತ ಸ್ಥಾನ ಪಡೆದಿದೆ. ಅರ್ಧ ಶತಮಾನದಿಂದ ಕನ್ನಡ ಚಳವಳಿಯಲ್ಲಿ ತೊಡಗಿಕೊಂಡಿದ್ದ ಸುದರ್ಶನ ಅವರಿಗೆ ಎಲ್ಲ ಕನ್ನಡ ನಾಯಕರ ಪರಿಚಯವಿತ್ತು. ಕನ್ನಡ ಚಳವಳಿಯ ಎಲ್ಲಾ ವಿವರಗಳು ತಿಳಿದಿತ್ತು. ಅಂದಿನಿಂದ ಇಂದಿನವರೆಗೆ ಸತತವಾಗಿ ಕನ್ನಡ ಚಳವಳಿಯಲ್ಲಿ ಭಾಗಿಯಾಗಿದ್ದ ಅವರು ಕನ್ನಡ ಹೋರಾಟಗಾರರ ಒಳ-ಹೊರವನ್ನು ಬಲ್ಲವರಾಗಿದ್ದರು. ಆದರೆ ಅವರ ಬಗ್ಗೆ ಕಹಿ ಮಾತನಾಡಿದವರಲ್ಲ. ಮೈಸೂರಿನ ನೃಪತುಂಗ ಕನ್ನಡ ಶಾಲೆಯು ಸ್ವಂತ ಕಟ್ಟಡ, ತನ್ನದೇ ಆದ ರಂಗ ಮಂದಿರ ಹೊಂದಿದೆ. ಸುಮಾರು ಎರಡು ದಶಕಗಳಿಂದ ಇದೇ ಸಂಸ್ಥೆಯ ಕಾರ್ಯದರ್ಶಿ, ಮೊನ್ನೆಯ ತನಕ ಉಪಾಧ್ಯಕ್ಷರಾಗಿ ಶಾಲೆಯ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಗಣನೀಯವಾದದ್ದು.

ವಿಶ್ವಕೋಶದ ಗೌರವ ಸಂಪಾದಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಣೆಗೊಳ್ಳುತ್ತಿರುವ ಭೂ ವಿಜ್ಞಾನ ವಿಷಯ ವಿಶ್ವಕೋಶದ ಗೌರವ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರು ಸಂಕಲಿಸಿದ 'ಕಾನೂನು ಪದಕೋಶ' ಪ್ರಸಾರಾಂಗದಿಂದ ಪ್ರಕಟವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಯೋಜನೆ ಅಡಿಯಲ್ಲಿ ಗೌರವ ಸಂಪಾದಕರಾಗಿ ನಾಲ್ಕು ಸಂಪುಟಗಳ ಇಂಗ್ಲಿಷ್ ಕನ್ನಡ ನಿಘಂಟನ್ನು ಸಂಕ್ಷಿಪ್ತಗೊಳಿಸಿ, 25000 ಪದಗಳಿರುವ ಸಂಕ್ಷಿಪ್ತ ಇಂಗ್ಲಿಷ್ ಕನ್ನಡ ನಿಘಂಟು ಸಿದ್ಧಪಡಿಸಿದ್ದು, ಅಚ್ಚಿನಲ್ಲಿದೆ. ಅವರು ಸಿದ್ಧಪಡಿಸಿದ ಶಾಲಾ ವಿದ್ಯಾರ್ಥಿಗಳಿಗಾಗಿ ಇಂಗ್ಲೀಷ್ ಕನ್ನಡ ನಿಘಂಟು 15 ಮುದ್ರಣವನ್ನು ಕಂಡಿದೆ.. ನವಸಾಕ್ಷರರು ಹಾಗೂ ಮಕ್ಕಳಿಗಾಗಿ ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ರಾಜ್ಯ ಸರ್ಕಾರದ ಕರ್ನಾಟಕ ವಿಜ್ಞಾನ ಅಕಾಡೆಮಿಯಲ್ಲಿ ಸದಸ್ಯರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಗೋಕಾಕ್ ಚಳವಳಿ ಕುರಿತು ಪುಸ್ತಕ ಬರೆದಿದ್ದಾರೆ.

ಸ.ರ. ಸುದರ್ಶನ ಅವರು ಮಾಡಿದ ಬಹು ಆಯಮದ ಶುದ್ಧ ಕನ್ನಡ ಕಾಯಕಕ್ಕೆ ಸಿಗಬೇಕಾದ ಮಾನ್ಯತೆ ಸಿಗಲಿಲ್ಲ ಎಂದೇ ಹೇಳಬಹುದು. ಅವರು ಎಂದೂ ಬಿರುದು ಬಾವಲಿಗಳನ್ನು ಬಯಸಿದವರಲ್ಲ. ಸನ್ಮಾನ ಪ್ರಶಸ್ತಿ ಎಂದರೆ ದೂರ ಸರಿಯುತ್ತಿದ್ದ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತು 2025ರಲ್ಲಿ 'ಕನ್ನಡ ವೀರ ಸೇನಾನಿ ಮ. ರಾಮಮೂರ್ತಿ' ಪ್ರಶಸ್ತಿ ನೀಡಿತು. ಅರ್ಧ ಶತಮಾನ ಕನ್ನಡಕ್ಕಾಗಿ ಪ್ರಾಮಾಣಿಕವಾಗಿ ಹೋರಾಡಿದ ಸುದರ್ಶನ್ ಅವರ ಹೆಸರು ಉಳಿಯುವಂತೆ ಮಾಡುವ ಕೆಲಸ ಆಗಬೇಕಿದೆ. ಅವರ ಹೋರಾಟದ ಬದುಕಿನ ವಿವಿಧ ಆಯಾಮದ ಕುರಿತು ಸಮಗ್ರ ಮಾಹಿತಿ ಹೊಂದಿರುವ ಒಂದು ಗ್ರಂಥವನ್ನು ತರುವ ಮೂಲಕವಾದರೂ, ಅವರು ಕನ್ನಡಕ್ಕಾಗಿ ಮಾಡಿದ ಹೋರಾಟವನ್ನು ಕನ್ನಡಿಗರಿಗೆ ತಿಳಿಸುವ ಕೆಲಸ ಮಾಡಬೇಕಾಗಿದೆ.

ಮದುಮಕ್ಕಳ ಜಾತ್ರೆ!

● ಲತಾ ಸಂತೋಷ್ ಶೆಟ್ಟಿ ಮುದ್ದುಮನೆ

ನಮ್ಮ ನಾಡಿನಲ್ಲಿ ವೈವಿಧ್ಯಮಯ ಹಬ್ಬಗಳಿವೆ! ಅಂತಹದ್ದೇ ಒಂದು ವಿಶಿಷ್ಟ ಆಚರಣೆ ಎಂದರೆ, 'ಮದುಮಕ್ಕಳ ಜಾತ್ರೆ'! ಪ್ರತಿ ವರ್ಷ ಸಿಂಹ ಸಂಕ್ರಮಣದಂದು, ಉಡುಪಿ ಜಿಲ್ಲೆಯ ಪೆರ್ಡೂರಿನ ಕದಳೀ ಪ್ರಿಯ ಖ್ಯಾತಿಯ ಅನಂತ ಪದ್ಮನಾಭ ದೇವಸ್ಥಾನದಲ್ಲಿ ಜರು ಗುವ ಮದುಮಕ್ಕಳ ಜಾತ್ರೆಯು ಪ್ರಸಿದ್ಧ. ಅಂದು ದೇವ ಸ್ಥಾನದ ಆವರಣದ ಸುತ್ತೆಲ್ಲಾ ನವದಂಪತಿಗಳು ತುಂಬಿ ರುತ್ತಾರೆ. ಸಿಂಹ ಸಂಕ್ರಮಣದ (17.8.2025) ಆಚರಣೆ ಗಳಲ್ಲಿ ಇಲ್ಲಿ ಮದುಮಕ್ಕಳ ಜಾತ್ರೆ ಎಂದು ಬೆಸರುವಾಸಿ ಯಾಗಿದೆ.

ನವ ವಧು ಆಷಾಢದಲ್ಲಿ ಅತ್ತೆಯ ಮನೆಯಿಂದ ತವರು ಮನೆಗೆ ತೆರಳಿ, ವಾಪಸ್ ಅತ್ತೆಯ ಮನೆಗೆ ಬರುವ ಕಾಲ. ಆಷಾಢ ಮಾಸದ ಬಳಿಕ ಬರುವ ಸಿಂಹ ಸಂಕ್ರಮಣದಂದು, ತನ್ನ ಪತಿಯೊಂದಿಗೆ ಪೆರ್ಡೂರಿನ ಈ ದೇಗುಲದಲ್ಲಿ ದೇವರ ದರ್ಶನ ಪೂರೈಸಿ ಮರಳಿ ಗಂಡನ ಮನೆಗೆ ಹೋಗುವುದು ಸಂಪ್ರದಾಯ. ಮದು ಮಕ್ಕಳು ದೇವರ ಸನ್ನಿಧಿಯಲ್ಲಿ ದಾಂಪತ್ಯದ ಪೂಜೆ ಸಲ್ಲಿಸುತ್ತಾರೆ. ಬೆಳಿಗ್ಗೆ 4 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನೂತನ ದಂಪತಿಗಳು ತಮ್ಮ ಹಿರಿಯ ರೊಂದಿಗೆ ದೇವರ ಆರ್ಶಿವಾದ ಪಡೆದು ನಂತರ, ಮದುಮಗಳು ಇಲ್ಲಿಂದಲೇ ಗಂಡನ ಮನೆಗೆ ತೆರಳುವ ಕ್ರಮ.

ಸಿಂಹಸಂಕ್ರಮಣವು, ಪೆರ್ಡೂರು ಅನಂತ ಪದ್ಮನಾಭ ದೇವಸ್ಥಾನದಲ್ಲಿ ವಿಶೇಷ ದಿನ. ಶ್ರಾವಣ ಸಂಭ್ರಮದಲ್ಲಿರುವ ನವ ಜೋಡಿಗಳು ಕೈ ಕೈ ಹಿಡಿದು ಬಂದು ಪ್ರಾರ್ಥನೆ ಸಲ್ಲಿಸುತ್ತಾರೆ. ಮದುಮಕ್ಕಳ ಈ ಜಾತ್ರೆಗೆ ಬರುವ ಸಾವಿರಾರು ಜೋಡಿಗಳನ್ನು ಏಕಕಾಲಕ್ಕೆ ನೋಡುವುದು ಒಂದು ಸೊಬಗು.

ಮದುವೆಯಾದ ಮೊದಲ ವರ್ಷದ ಸಿಂಹ ಸಂಕ್ರಮಣದಂದು ಕಡ್ಡಾಯವಾಗಿ ಬರುವ ಸುತ್ತ ಮುತ್ತಲಿನ ನವ ದಂಪತಿಗಳು, ನಂತರ 12 ವರ್ಷವೂ

ಸಿಂಹಸಂಕ್ರಮಣಕ್ಕೆ ಬಂದು, ದೇವರ ದರ್ಶನ ಪಡೆದರೆ ಮನದ ಆಶೆ ನೆರವೇರುತ್ತದೆ ಎಂಬ ನಂಬಿಕೆ ಇರುವುದರಿಂದ ಹರಕೆ ರೂಪದಲ್ಲಿ ವರ್ಷದ 12 ಸಂಕ್ರಮಣಕ್ಕೂ ಭಕ್ತರು ಇಲ್ಲಿಗೆ ಬರುತ್ತಾರೆ. ಈ ದೇಗುಲದಲ್ಲಿ ಎಲ್ಲಾ ಸಂಕ್ರಾಂತಿಗಳೂ ವಿಶೇಷವಾಗಿದ್ದರೂ, ಸಿಂಹ ಸಂಕ್ರಮಣಕ್ಕೆ ಅದರದ್ದೇ ಆದ ವಿಶೇಷತೆ ಇದೆ.

ಬಾಳೆ ಹಣ್ಣು ಅರ್ಪಣೆ

ಪೆರ್ಡೂರು ಶ್ರೀ ಅನಂತ ಪದ್ಮನಾಭ ದೇವಳಕ್ಕೆ ವರ್ಷದ ಯಾವುದೇ ದಿನಗಳಲ್ಲಿ ಹೋದರೂ ಹರಕೆ ರೂಪದಲ್ಲಿ ದೇವರಿಗೆ ಅರ್ಪಿಸಿದ ಬಾಳೆ ಹಣ್ಣಿನ ಸಿಬ್ಲು, ಹೆಡಗೆಯಲ್ಲಿದ್ದ ಹಣ್ಣುಗಳನ್ನು ಭಕ್ತರಿಗೆ ಹಂಚುವ ದೃಶ್ಯ ಕಾಣ ಸಿಗುತ್ತದೆ. ಬಾಳೆ ಹಣ್ಣಿನ ಸೇವೆಯು ಇಲ್ಲಿನ ವಿಶೇಷ. ಬಾಳೆಗೊಲಿದ ಭಗವಂತನೆಂಬ ಖ್ಯಾತಿಯೂ ಇದೆ. ಇಲ್ಲಿ ಸಾವಿರ ಬಾಳೆ ಹಣ್ಣು , 500 ಬಾಳೆ ಹಣ್ಣು, ಗೊನೆ ಹಣ್ಣು, ಸಿಬ್ಲುಹಣ್ಣು, ಹೀಗೆ ಹಲವು ಹೆಸರಿನ ಬಾಳೆ ಹಣ್ಣಿನ ಹರಕೆ ಸೇವೆ ನಡೆಯುತ್ತದೆ. ಜತೆಗೆ, ಈ ಸ್ಥಳವು ಹುಲಿ ಮತ್ತು ಹಸು ಜೊತೆಯಾಗಿದ್ದ ಸ್ಥಳ ಎಂಬ ನಂಬಿಕೆ ಇದೆ. ಆ ವರ್ಷ ಮದುವೆಯಾದ ದಂಪತಿ ಸೇರಿದಂತೆ, ಸಹಸ್ರಾರು ಜನರು ಸಿಂಹಸಂಕ್ರಮಣದಂದು ಇಲ್ಲಿಗೆ ಬರುತ್ತಾರೆ. ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಕಾಸರಗೊಡು, ಉತ್ತರ ಕನ್ನಡ ಜಿಲ್ಲೆಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಸಂತಾನ ವೃದ್ಧಿ, ಆರೋಗ್ಯವೃದ್ಧಿಗಾಗಿ ಎಳ್ಳೆಣ್ಣೆ ಸಮರ್ಪಿಸುವುದು ಇಲ್ಲಿ ನಡೆದು ಕೊಂಡು ಬಂದ ವಾಡಿಕೆ. ತಿರುಪತಿಗೆ ಹೋಗುವುದಕ್ಕೆ ಕಷ್ಟವಾದ ಭಕ್ತರು ಇಲ್ಲಿ ಹರಕೆ ಸಲ್ಲಿಸಿದರೆ ಅದು ತಿರುಪತಿ ವೆಂಕಟರಮಣನಿಗೆ ಸಲ್ಲುತ್ತದೆ ಎಂಬ ನಂಬಿಕೆ ಇದೆ. ಇಲ್ಲಿ ಒಂದು ಹುತ್ತವಿದ್ದು, ಆ ಜಾಗದಲ್ಲಿ ಅನಂತ ಪದ್ಮನಾಭ ಸ್ವಾಮಿ ಪ್ರತಿಷ್ಠೆಯಾಗಿದೆ. ಹತ್ತಿರದಲ್ಲಿ ಪುಷ್ಕರಣಿ ಇದ್ದು ಅದಕ್ಕೆ ಪದ್ಮತೀರ್ಥ ಎನ್ನುತ್ತಾರೆ.

ಬಿಕಾಂಪ್ಲೆಕ್ಸ್ ಇರುವ ಆಹಾರ

ಖನಿಜಾಂಶ ಮತ್ತು ವಿಟಮಿನ್ ಕೊರತೆಯು ದೊಡ್ಡ ಸಮಸ್ಯೆಯಾಗಿ ಕಾಡಬಹುದು. ಅದರಲ್ಲೂ ಬಿ ಕಾಂಪ್ಲೆಕ್ಸ್ ಕೊರತೆಯು ತೀವ್ರ ತೊಂದರೆಗೆ ದಾರಿ ಮಾಡಬಹುದು. ದೀರ್ಘ ಕಾಲದ ಬಿ ಕಾಂಪ್ಲೆಕ್ಸ್ ಕೊರತೆಯು ರಕ್ತ ಹೀನತೆ, ನರಗಳ ತೊಂದರೆ, ಸುಸ್ತು ಮತ್ತು ಬೇಸರಕ್ಕೂ ಕಾರಣವಾಗಬಲ್ಲದು. ಬಿ12 ಕೊರತೆಯಿಂದ ನರಗಳ ದೌರ್ಬಲ್ಯವೂ ಆಗಬಹುದು ಎನ್ನುತ್ತದೆ ವೈದ್ಯ ವಿಜ್ಞಾನ. ದಿನನಿತ್ಯದ ಆಹಾರದ ಮೂಲಕ ಬಿ ಕಾಂಪ್ಲೆಕ್ಸ್ ವಿಟಮಿನ್, ದೇಹವನ್ನು ಸೇರಿಕೊಳ್ಳುವಂತೆ ನೋಡಿಕೊಳ್ಳಬಹುದು. ಹಸಿರು ತರಕಾರಿ, ಬೀನ್ಸ್, ಬೇಳೆ ಕಾಳುಗಳು ಮತ್ತು ಮೊಳಕೆ ಬರಿಸಿದ ಧಾನ್ಯ, ಮಜ್ಜಿಗೆ ಬಾಳೆಹಣ್ಣು ಮೊದಲಾದವುಗಳಲ್ಲಿ ಅಧಿಕ ಪ್ರಮಾಣದ ಬಿ ಕಾಂಪ್ಲೆಕ್ಸ್ ಲಭ್ಯವಿದೆ.

ಬುದ್ಧನಾಗಬೇಕಾದರೆ ಏನು ಮಾಡಬೇಕು?

ಒಮ್ಮೆ ಒಬ್ಬ ಮನುಷ್ಯ ಝೆನ್ ಮಾಸ್ಟರ್ ಹತ್ತಿರ ಬಂದು ಕೇಳಿಕೊಳ್ಳುತ್ತಾನೆ, ''ಬುದ್ಧ ನಾಗಬೇಕಾದರೆ ನಾನು ಏನು ಮಾಡಬೇಕು?'' ಇಂತಹ ಮಾತೊಂದನ್ನ ಕೇಳುತ್ತಿದ್ದಂತೆಯೇ ಕೆಂಡಾಮಂಡಲನಾದ ಝೆನ್ ಮಾಸ್ಟರ್, ಆ ಮನುಷ್ಯನ ಕಪಾಳಕ್ಕೆ ಜೋರಾಗಿ ಬಾರಿಸುತ್ತಾನೆ.

ಮಾಸ್ಟರ್‌ನ ಅನಿರೀಕ್ಷಿತ ವರ್ತನೆಯಿಂದ ಅಪ್ರತಿಭನಾದ ಆ ಮನುಷ್ಯ, ಮಾಸ್ಟರ್‌ನ ಹಿರಿಯ ಶಿಷ್ಯನ ಬಳಿ ಹೋಗಿ ಪ್ರಶ್ನೆ ಮಾಡುತ್ತಾನೆ, ''ಎಂತಹ ಮನುಷ್ಯ ಇವನು ? ನಾನೊಂದು ಸರಳ ಪ್ರಶ್ನೆ ಕೇಳಿದೆ. ಅವನು ಈ ಪರಿ ಸಿಟ್ಟಾಗುವ ಕಾರಣವೇನಿತ್ತು? ಅವನು ಹೊಡೆತಕ್ಕೆ ನನ್ನ ಕೆನ್ನೆ ಇನ್ನೂ ಉರಿಯುತ್ತಿದೆ. ಬುದ್ಧ ಆಗುವುದು ಹೇಗೆ ಎಂದು ಕೇಳುವುದು ತಪ್ಪಾ? ಇಂಥ ಕ್ರೂರಿ, ಹಿಂಸಾತ್ಮಕ ಮನುಷ್ಯ ಯಾವ ರೀತಿಯ ಝೆನ್ ಮಾಸ್ಟರ್ ?'' ಆ ಮನುಷ್ಯನ ಮಾತು ಕೇಳಿ ಮಾಸ್ಟರ್ ನ ಹಿರಿಯ ಶಿಷ್ಯನಿಗೆ ನಗು ಮತ್ತು ಸಿಟ್ಟು ಒಟ್ಟೊಟ್ಟಿಗೆ.

''ಮಾಸ್ಟರ್ ನ ಸಹಾನುಭೂತಿ, ಅಂತಃಕರಣ ನಿನಗೆ ಅರ್ಥ ಆಗುತ್ತಿಲ್ಲ. ನಿನ್ನ ಮೇಲಿನ ಕರುಣೆಯಿಂದಲೇ ಮಾಸ್ಟರ್ ಅಷ್ಟು ಜೋರಾಗಿ ನಿನಗೆ ಹೊಡೆದದ್ದು. ಮಾಸ್ಟರ್‌ಗೆ ತೊಂಭತ್ತು ವರ್ಷ ವಯಸ್ಸು, ನೀನಿನ್ನೂ ಯುವಕ, ಅವನು ನಿನ್ನ ಕಪಾಳಕ್ಕೆ ಹೊಡೆದಾಗ ನಿನ್ನ ಕೆನ್ನೆಗಿಂತ ಹೆಚ್ಚು ಅವನ ಕೈಗಳಿಗೆ ನೋವಾಗಿದೆ. ಮೂರ್ಖ, ಮಾಸ್ಟರ್‌ನ ಅಂತಃಕರಣವನ್ನ ಅರ್ಥ ಮಾಡಿಕೋ, ಇಲ್ಲಿಂದ ವಾಪಸ್ಸಾಗು'' ಆ ಯುವಕ ಅಲ್ಲಿಂದ ಜಾಗ ಬಿಟ್ಟು ಕದಲ ಲಿಲ್ಲ. ಮಾಸ್ಟರ್‌ನ ಹಿರಿಯ ಶಿಷ್ಯನನ್ನು ಮತ್ತೆ ಪ್ರಶ್ನೆ ಮಾಡಿದ.

''ಆದರೆ ಮಾಸ್ಟರ್ ನ ಇಂಥ ಕ್ರೂರ ವರ್ತನೆಯಲ್ಲಿ ನನಗೆ ಯಾವ ಸಂದೇಶವಿದೆ?''

ಮಾಸ್ಟರ್‌ನ ಹಿರಿಯ ಶಿಷ್ಯ ಮತ್ತೆ ತನ್ನ ಮಾತು ಮುಂದುವರೆಸಿದ, ''ಮಾಸ್ಟರ್ ನ ಸಂದೇಶ ತುಂಬ ಸರಳ. ಸ್ವತಃ ಬುದ್ಧ ನಿನ್ನ ಬಳಿ ಬಂದು, ಬುದ್ಧ ಆಗುವುದು ಹೇಗೆ ಎಂದು ಪ್ರಶ್ನೆ ಮಾಡಿದರೆ ನಿನಗೆ ಸಿಟ್ಟು ಬರುತ್ತಿರಲಿಲ್ಲವೇ? ನೀನು ಅವನ ಕಪಾಳಕ್ಕೆ ಹೊಡೆದು ನೀನೇ ಬುದ್ಧ ಎಂದು ಅವನಿಗೆ ನೀನು ನೆನಪಿಸುತ್ತಿರಲಿಲ್ಲವೇ? ಮಾಸ್ಟರ್ ನಿನ್ನ ಜೊತೆ ಮಾಡಿದ್ದೂ ಇದನ್ನೇ. ಗುಲಾಬಿ ತಾನು ಗುಲಾಬಿಯಾಗುವ ಪ್ರಯತ್ನ ಮಾಡಿದರೆ, ಅದರಷ್ಟು ದುಃಖವನ್ನು ಬೇರೆ ಯಾವುದೂ ಅನುಭವಿಸುವುದಿಲ್ಲ. ಅದು ಈಗಾಗಲೇ ಗುಲಾಬಿ, ಅದು ತನ್ನ ಸಹಜ ಸ್ವಭಾವ ಮರೆತಿದೆಯಷ್ಟೇ. ನೆನಪು ಮಾಡಿಕೊಳ್ಳಬೇಕಾದ್ದಷ್ಟೇ ಈಗ ಬೇಕಾಗಿರುವುದು.''

ಝೆನ್ ಪ್ರಕಾರ ಮನುಷ್ಯ ವಿಸ್ಮೃತಿಯಲ್ಲಿದ್ದಾನೆ. ಅವನು ತಾನು ಯಾರು ಎನ್ನುವುದನ್ನ ಮರೆತು ಬಿಟ್ಟಿದ್ದಾನೆ ಅಷ್ಟೇ. ನೆನಪು ಮಾಡಿ ಕೊಳ್ಳ ಬೇಕಾದ್ದಷ್ಟೇ ಈಗಿನ ಅವಶ್ಯಕತೆ. ಈ ವಿಚಾರವನ್ನು ನಾವೆಲ್ಲರೂ ಮತ್ತಷ್ಟು ಆಳವಾಗಿ ಅರ್ಥ ಮಾಡಿಕೊಂಡರೆ ಬಹುಷ್ಯ ನಮಗೆ ಮನುಷ್ಯ ಬದುಕು ಮತ್ತು ಅದರ ಉದ್ದೇಶ ಚೆನ್ನಾಗಿ ಅರ್ಥವಾಗುತ್ತದೆ. ಸ್ವಭಾವತ: ಮನುಷ್ಯರಾಗಿ ಹುಟ್ಟಿದ ನಾವೆಲ್ಲರೂ ಮಾನವೀಯತೆಯ ಎಲ್ಲಾ ಗುಣಗಳನ್ನು ಹೊಂದಿರುತ್ತವೆ. ಆದರೆ ಅನೇಕ ಸಾಂದರ್ಭಿಕ ಕಾರಣಗಳಿಂದ ಅವು ಮಸುಕಾಗಿರುತ್ತವೆ. ನಮ್ಮ ಜೀವನದ ಗುರಿ ಎಂದರೆ ನಾವು ಯಾರು ಎನ್ನುವುದನ್ನು, ನಮ್ಮ ಅಸ್ತಿತ್ವವನ್ನು ಕಂಡು ಕೊಳ್ಳುವುದು. ಮನುಷ್ಯ ಬದುಕಿಗೆ ಬೇಕಾದ ಪ್ರೀತಿ ಪ್ರೇಮ, ಸಹನೆ,ಕರುಣೆ, ಮಮತೆ, ಪ್ರಾಮಾಣಿಕತೆ, ಶಿಸ್ತು ಎಲ್ಲವೂ ನಮ್ಮೊಳಗೆ ಇರುತ್ತದೆ. ಎಂದಿಗೆ ನಾವು ಅದನ್ನು ಕಂಡುಕೊಂಡು ಸಾಕ್ಷಾತ್ಕಾರಗೊಳಿಸಿ ಕೊಳ್ಳುತ್ತೇವೆಯೋ ಅಂದಿಗೆ ನಾವು ಮತ್ತು ಉತ್ತಮ ಸ್ಥರಕ್ಕೆ ತಲುಪುತ್ತೇವೆ. ಆದ್ದರಿಂದ ಜೀವನದಲ್ಲಿ ನಾವು ಯಾರ್ಯಾರೋ ಆಗುವ ಪ್ರಯತ್ನದಲ್ಲಿ ನಮ್ಮನ್ನೇ ಕಳೆದು ಕೊಳ್ಳುವ ಬದಲು, ನಾವು ನಾವಾಗುವ ಪ್ರಯತ್ನ ಮಾಡಬೇಕು. ನಮ್ಮೊಳಗೆ ಇರುವ ಮೂಲ ಗುಣಗಳನ್ನ ಎಂದು ಗುರುತಿಸಿ ಬದುಕಲು ಆರಂಭಿಸುತ್ತೇವೋ ಅಂದಿಗೆ ಸಾರ್ಥಕ ಬದುಕು ನಮ್ಮ ದಾಗುತ್ತದೆ. ನಮ್ಮೊಳಗೆ ಇರುವ ಬುದ್ಧನ ಪರಿಚಯವಾದ ಬೇಕಿದೆ ನಮಗೆ ಹೊಸದಾಗಿ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಎಲ್ಲರಲ್ಲೂ ಇದೆ ಪ್ರೀತಿ ಮತ್ತು ದ್ವೇಷ!

ನರರ ಸ್ವಭಾವ ವಕ್ರಗಳನೆಣಿಸುವುದೇಕೆ
ಗಿರಿ ಕಣಿವೆಗಳ ಗಣಿಸಿ ರೋಷಗೊಳ್ಳುವೆಯೇಂ
ಸುರೆ ಗರಲ ಸುಧೆಗಳ್ ಅಬ್ಧಿಯಲಿ ಸೋದರರಲ್ಲೆ
ಅರಿತೊಗ್ಗು ಸಾಜಕ್ಕೆ - ಮಂಕುತಿಮ್ಮ ॥

ಮನುಷ್ಯನಲ್ಲಿರುವ ಸ್ವಭಾವಗಳಲ್ಲಿರುವ ವಕ್ರಗಳನ್ನಾದರೂ ನಾವೇಕೆ ಏಣಿಸಬೇಕು? ಈ ಭೂಮಿಯ ಮೇಲೆ ಎಲ್ಲವೂ ಸಮನಾಗಿ ಇದೆಯೇ? ಭೂಮಿಯ ಮೇಲೆ ಗಿರಿ, ಕಂದರ, ಸಮತಟ್ಟು, ಸಾಗರ, ಕಣಿವೆ ಹೀಗೆ ಹಲವಾರು ರೀತಿಯಲ್ಲಿ ಭೂಮಿಯು ಇರುವುದನ್ನು ನಾವು ವಕ್ರ ಎಂದು ಕೋಪಗೊಳ್ಳುತ್ತೇವೆಯೇ? ಕ್ಷೀರ ಸಾಗರವನ್ನು ಮಂಥನ ಮಾಡಿದಾಗ ಕಾರ್ಕೋಟಕ ವಿಷವೂ, ಅಮೃತವೂ ಸಹೋದರರಂತೆ ಉದ್ಭವಿಸಲಿಲ್ಲವೇ? ಅದೇ ರೀತಿಯಲ್ಲಿ ಮನುಷ್ಯನ ಗುಣ ಗಳಲ್ಲಿಯೂ ಸಹ ಒಳ್ಳೆಯ ಗುಣ, ಅವ ಗುಣಗಳು ಇದ್ದೇ ಇರುತ್ತವೆ. ಇಂತಹ ಏರು ತಗ್ಗುಗಳು ಸಹಜವೇ ಆಗಿವೆ.

ಮನುಷ್ಯನ ಅಂತರಂಗವದೆಷ್ಟು ಆಳ, ಅಗಲ ಬಲ್ಲವರು ಯಾರಿದ್ದಾರೆ? ಒಬ್ಬೊಬ್ಬರದೂ ಒಂದೊಂದು ಮನಸ್ಥಿತಿ. ಒಬ್ಬ ಪ್ರೇಮಮಯಿ ಎಂದಾದರೆ ಮತ್ತೊಬ್ಬ ಕ್ರೂರಿ, ಮತ್ತೊಬ್ಬ ದಯಾ ಮಯಿ ಎಂದರೆ ಮಗದೊಬ್ಬ ವಕ್ರಬುದ್ಧಿ ಎಂದೆಲ್ಲಾ ಹೇಳುತ್ತೇವೆ. ಆದರೆ ವಾಸ್ತವದಲ್ಲಿ ಎಲ್ಲ ನರರ ಹೃದಯದಲ್ಲಿಯೂ ಕೂಡ ಪ್ರೇಮ, ಸ್ನೇಹ, ಪ್ರೀತಿ, ಕ್ಷಮೆ, ಕರುಣೆ, ನಿಸ್ವಾರ್ಥ, ಅನುಕಂಪ, ಕಾಮ, ಕ್ರೋಧ, ಸ್ವಾರ್ಥ, ಕ್ರೂರ, ಲೋಭ, ಮಾತ್ಸರ್ಯ ಹೀಗೆ ಎಲ್ಲಾ ರೀತಿಯ ಗುಣಗಳು ಮನೆ ಮಾಡಿನಿಂತಿರುತ್ತವೆ. ಯಾವ ವ್ಯಕ್ತಿಯ ಹೃದಯದಲ್ಲಿ ಪ್ರೇಮ, ಪ್ರೀತಿ, ಭಾತೃತ್ವ ಅಧಿಕವಾಗಿರುತ್ತದೆಯೋ ಆತನು ಪ್ರೇಮಮಯಿ ಯಾಗುತ್ತಾನೆ. ಯಾರ ಹೃದಯದಲ್ಲಿ ಸ್ವಾರ್ಥ ಜಾಸ್ತಿ ಇರುತ್ತದೋ ಆತನು ಸ್ವಾರ್ಥಿಯೇ ಆಗುತ್ತಾನೆ. ಹೀಗೆ ಆತನ ಹೃದಯಾಂತರಂಗ ದಲ್ಲಿರುವ ಗುಣಗಳು ಯಾವ ರೀತಿಯ ಹೆಚ್ಚು ಪ್ರಮಾಣ ದಲ್ಲಿರುತ್ತ ವೇಯೋ ಅದೇ ರೀತಿ ನಡೆದುಕೊಳ್ಳುತ್ತಾನೆ.

ಎಲ್ಲ ರಲ್ಲಿಯೂ ಎಲ್ಲ ಗುಣಗಳು ಇದ್ದೇ ಇರುತ್ತವೆ. ಆದುದರಿಂದ ಮನುಷ್ಯನ ಗುಣದಲ್ಲಿ ಇರುವ ಗುಣಾವಗುಣಗಳ ಬಗ್ಗೆ ನಾವೇಕೆ ವಕ್ರತೆಯನ್ನು ಏಣಿಸಬೇಕು? ವಕ್ರತೆಗಳಿದ್ದರೆ ನಾವೇಕೆ ಕೋಪಿಸಿ ಕೊಳ್ಳಬೇಕು ? ಇಂಥಹ ವಕ್ರತೆಯು ಇರು ವಂತದ್ದೇ ಆಗಿರುತ್ತದೆ. ಎಲ್ಲರೂ ನಮ್ಮ ಹಾಗೆಯೇ ಇರಬೇಕು ಎಂದು ನಿರೀಕ್ಷಣೆ ಮಾಡುವುದೂ ಸಹ ಸರಿ ಯಲ್ಲ. ಈ ಭೂಮಿಯು ಎಲ್ಲಾ ಕಡೆಯೂ ಒಂದೇ ಸಮ ನಾಗಿ ಕಂಡು ಬರುತ್ತದೆಯೇ? ಎಂದಿಗೂ ಅದು ಸಮ್ಮತವಾಗುವುದಿಲ್ಲ. ಭೂಮಿಯ ಮೇಲಿನ ಕಣಿವೆ, ಗಿರಿ, ಕಂದರ, ಉಬ್ಬು ತಗ್ಗುಗಳನ್ನು ನಾವು ಎಂದಾದರೂ ಎಣಿಕೆಗೆ ತಗೆದುಕೊಳ್ಳುತ್ತೇವೆಯೇ? ಅದೂ ಸಹ ಇಲ್ಲ. ಈ ಭೂಮಿಯ ಮೇಲೆ ಹೇಗೆ ಉಬ್ಬು ತಗ್ಗು, ಗಿರಿ ಕಂದರಗಳು ಇರುತ್ತವೆಯೋ ಹಾಗೆಯೇ ಮನುಷ್ಯನ ಹೃದಯಾಂತರಾಳದಲ್ಲೂ ಉಬ್ಬು ತಗ್ಗುಗಳು ಇದ್ದೇ ಇರುತ್ತವೆ. ಕ್ಷೀರಸಾಗರ ವನ್ನು ಮಂಥನವನ್ನು ಮಂಥನ ಮಾಡಿದಾಗ ಕಾರ್ಕೋಟಕ ವಿಷವೂ, ಅಮೃತ ಸುದೆಯೂ ಒಮ್ಮೆಲೇ ಅಣ್ಣ ತಮ್ಮಂದಿರ ಹಾಗೆ ಈ ಜಗತ್ತಿಗೆ ಬಂದ ಹಾಗೆಯೇ ಮನುಷ್ಯನ ಹೃದಯ ದಲ್ಲಿಯೂ ಸಹ ಒಳ್ಳೆಯ ಹಾಗೂ ಕೆಟ್ಟ ಗುಣಗಳೂ ಇರುತ್ತವೆ. ಈ ಬಗ್ಗೆ ಹೆಚ್ಚು ಚಿಂತಿತನಾಗದೆ ನಿನ್ನಲ್ಲಿರುವ ಉತ್ತಮ ಗುಣಗಳನ್ನ ಪೋಷಿಸಿ ಕೊಂಡು ಜೀವನ ಮಾಡುವ ಕಲೆಯನ್ನು ರೂಡಿಸಿ ಕೊಳ್ಳುವುದು ಉತ್ತಮ ಎಂಬ ಸಂದೇಶವನ್ನು ಈ ಪದ್ಯದಲ್ಲಿ ನೀಡಿದ್ದಾರೆ.

ಪ್ರತೀ ಮನುಷ್ಯನಲ್ಲಿರುವ ಗುಣ ಮತ್ತು ಅವಗುಣಗಳ ಪ್ರಮಾಣದ ಆಧಾರದ ಮೇಲೆ ಒಂದು ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ. ಕೆಲವು ವ್ಯಕ್ತಿಗಳಿಗೆ ತಮ್ಮಲ್ಲಿ ಇರುವುದು ಹೆಚ್ಚು ಅವಗುಣಗಳು ಎಂದು ಅವರಿಗೆ ಅರಿವಾಗುವುದಿಲ್ಲ. ಕೆಲವರಿಗೆ ಅರಿವಾದರೂ, ಅವರು ಅದನ್ನು ಒಪ್ಪಿಕೊಳ್ಳು ವುದಿಲ್ಲ, ಒಪ್ಪಿಕೊಂಡರೂ ಸಹ ಅವರು ತಿದ್ದಿ ಕೊಳ್ಳುವುದಿಲ್ಲ. ಹಲವರು ಅರಿತುಕೊಳ್ಳು ತ್ತಾರೆ ಆದರೆ ತಮ್ಮ ಅವಗುಣಗಳಲ್ಲಿ ಎಷ್ಟು ಮುಳುಗಿರುತ್ತಾರೆ.

ಹಲವಾರು ಕಾರಣಗಳಿಂದ ಅವರಿಗೆ ಅವುಗಳಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಕೇವಲ ಕೆಲವರು ತಮ್ಮ ಕೆಟ್ಟಗುಣಗಳನ್ನು ಅರಿತು ಒಪ್ಪಿಕೊಂಡು, ತಮ್ಮನ್ನು ತಾವು ಸುಧಾರಿಸಿ ಕೊಳ್ಳಲು ಪ್ರಾಮಾಣಿಕ ಪ್ರಯತ್ನ ಪಡುತ್ತಾರೆ ಮತ್ತು ಸಾಕಷ್ಟು ಸಫಲರೂ ಆಗುತ್ತಾರೆ. ಪ್ರತಿಯೊಬ್ಬರೂ ತಮ್ಮ ಅವಲೋಕನ ತಾವೇ ಮಾಡಿಕೊಂಡು, ತಮ್ಮಲ್ಲಿ ಅವಗುಣಗಳಿದ್ದರೆ, ಅವನ್ನು ಗುರುತಿಸಿ, ಒಪ್ಪಿಕೊಂಡು ತಮ್ಮನ್ನು ತಾವು ಸುಧಾರಿಸಿಕೊಳ್ಳಲು ಪ್ರಯತ್ನ ಮಾಡಿದರೆ ಈ ಜಗತ್ತಿಗೂ, ಈ ಸಮಾಜಕ್ಕೂ ಜೊತೆಗೆ ತಮ್ಮ ಆತ್ಮಸಾಕ್ಷಿಯ ಸಾಕ್ಷಿ ಪ್ರಜ್ಞೆಗೂ ಒಳಿತೇ ಆಗುತ್ತದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2		■	3	4		5
	■		■	6	■		■	
	■	■	7			■	■	
8	9		■		■	10	11	
■		■	12			■		■
13			■		■	14		15
	■	■	16			■	■	
	■	17	■		■	18	■	
19				■	20			

ಎಡದಿಂದ ಬಲಕ್ಕೆ

1. ಸಮೀಪದ ಹಾದಿ (4)
3. ಹೆಬ್ಬಾವು ಅರದ ನಡುವೆ ಬಂದಿದೆ (4)
7. ಬೀಸುವ ಗಾಳಿ (3)
8. ಕುದುರೆಗೆ ಇನ್ನೊಂದು ಹೆಸರು (3)
10. ಗಡಿಯಲ್ಲಿದೆ ವ್ಯಾಯಾಮ ಶಾಲೆ (3)
12. ವನ, ಕಾಡು (3)
13. ಅಪ್ಪಣೆ, ಆಜ್ಞೆ (3)
14. ಅಸಲಿಯಲ್ಲದ್ದು (3)
16. ಮಂದಿಯ ಗುಂಪು (3)
19. ಕುಬೇರನ ಒಂಭತ್ತು ಐಶ್ವರ್ಯಗಳು (4)
20. ಅನ್ಯರಿಗೆ ಮಾಡುವ ಸಹಾಯ (4)

ಮೇಲಿಂದ ಕೆಳಕ್ಕೆ

1. ಅರ್ಥವಿಲ್ಲದ ನುಡಿ (4)
2. ಬಿಸಿಲಿನಿಂದಾದ ಬಾಯಾರಿಕೆ (2)
4. ಎಣ್ಣೆಯ ಜಿಗುಟು (2)
5. ಯುದ್ಧರಂಗದ ವೀರ (4)
6. ನನಸಾಗದ ಇಚ್ಛೆಯನ್ನು ಧ್ವನಿಸುವ ನುಡಿಗಟ್ಟು (7)
9. ವಲ್ಲಭ, ಗಂಡ (3)
11. ರಸಗಳನ್ನು ಆಸ್ವಾದಿಸುವವನು (3)
13. ಗಟ್ಟಿಯಾಗಿ ಅಳುವುದು (4)
15. ಬರೆದುಕೊಳ್ಳುವವನು (4)
17. ಕೆಡುಕು (2)
18. ಬಾವಿ (2)

ಸರಿಯುತ್ತರಗಳು

[illegible]

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಭಾರತದ ಪುರುಷರ ತಂಡಕ್ಕೆ ಬೆಳ್ಳಿ ಪದಕ

ಶೈಮೆಂಟ್: ಭಾರತದ ಪುರುಷರ ಸೀನಿಯರ್ ತಂಡವು ಇಲ್ಲಿ ಸೋಮವಾರ ಆರಂಭವಾದ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ (ರೈಫಲ್/ಪಿಸ್ತೂಲ್/ಶಾಟ್‌ಗನ್) 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿಪದಕ ಗೆದ್ದುಕೊಂಡಿತು. ಆದರೆ ಅನ್ಮೋಲ್ ಜೈನ್ ಅವರು ವೈಯಕ್ತಿಕ ಸ್ಪರ್ಧೆಯಲ್ಲಿ ನಿರಾಸೆ ಮೂಡಿಸಿದರು. ಅನ್ಮೋಲ್ (580), ಅದಿತ್ಯ ಮಲ್ರಾ (579) ಮತ್ತು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಸೌರಭ್ ಚೌಧರಿ (576) ಅವರನ್ನು ಒಳಗೊಂಡ ಪುರುಷರ ತಂಡವು ಒಟ್ಟು 1,735 ಅಂಕಗಳನ್ನು ಗಳಿಸಿತು. ಚೀನಾ ತಂಡವು 1,744 ಅಂಕಗಳೊಂದಿಗೆ ಚಿನ್ನ ಗೆದ್ದಿತು. ಇರಾನ್ (1733) ಕಂಚಿನ ಪದಕ ತಮ್ಮದಾಗಿಸಿಕೊಂಡಿತು. 10 ಮೀ. ಏರ್ ಪಿಸ್ತೂಲ್ ವೈಯಕ್ತಿಕ ವಿಭಾಗದ ಅರ್ಹತಾ ಸುತ್ತಿನಲ್ಲಿ ಅನ್ಮೋಲ್ 580 ಅಂಕಗಳೊಂದಿಗೆ ಏಳನೇ ಸ್ಥಾನದೊಂದಿಗೆ ಫೈನಲ್ ತಲುಪಿದ್ದರು, ಪದಕ ಸುತ್ತಿನಲ್ಲಿ ಒಟ್ಟು 155.1 ಪಾಯಿಂಟ್ಸ್ ಗಳಿಸಿ ಆರನೇ ಸ್ಥಾನ ಪಡೆದರು.

ಐಎಸ್‌ಎಲ್ ಟೂರ್ನಿ ಬಿಕ್ಕಟ್ಟು: ಮತ್ತೆ ವಿಚಾರಣೆ

ದೆಹಲಿ: ಅಖಿಲ ಭಾರತ ಫುಟ್ಬಾಲ್ ಫೆಡರೇಶನ್ (ಎಐಎಫ್‌ಎಫ್) ಮತ್ತು ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) ನಡುವಿನ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಆಗಸ್ಟ್ 22ರಂದು ಸುಪ್ರೀಂ ಕೋರ್ಟ್ ವಿಚಾರಣೆಯನ್ನು ನಿಗದಿಪಡಿಸಿದೆ. ಇತ್ತೀಚೆಗಷ್ಟೇ ಇಂಡಿಯನ್ ಸೂಪರ್ ಲೀಗ್ ಬಿಕ್ಕಟ್ಟಿನ ವಿಚಾರವನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತರಬೇಕು ಹಾಗೂ ಶೀಘ್ರದಲ್ಲೇ ಸಮಸ್ಯೆ ಇತ್ಯರ್ಥ ಮಾಡಬೇಕು ಎಂದು ಎಐಎಫ್‌ಎಫ್‌ಗೆ ಇಂಡಿಯನ್ ಸೂಪರ್ ಲೀಗ್‌ನ (ಐಎಸ್‌ಎಲ್) 11 ಕ್ಲಬ್‌ಗಳು ಮನವಿ ಮಾಡಿತ್ತು. ಪ್ರಸ್ತುತ ಇಂಡಿಯನ್ ಸೂಪರ್ ಲೀಗ್ ಅನ್ನು ನಡೆಸುತ್ತಿರುವ ಎಫ್‌ಎಸ್‌ಡಿಎಲ್ ಮತ್ತು ಡಿಸೆಂಬರ್ 2025ರ ನಂತರ ಎಐಎಫ್ ಮಾಸ್ಟರ್ ರೈಟ್ಸ್ ಒಪ್ಪಂದವನ್ನು ಒಪ್ಪಿ ಕೊಳ್ಳಲು ವಿಫಲವಾಗಿದ್ದು, ಈ ಋತುವಿನ ಲೀಗ್ ಅನ್ನು ಅನಿರ್ದಿಷ್ಟವಾಗಿ ಅಮಾನತುಗೊಳಿಸಲಾಗಿದೆ. ಹಿರಿಯ ವಕೀಲ, ಅಮಿಕಸ್ ಕ್ಯೂರಿ ಗೋಪಾಲ್ ಶಂಕರನಾರಾಯಣನ್ ಅವರು ಎಫ್‌ಎಸ್‌ಡಿಎಲ್ ತನ್ನ ಅಧಿಕಾರಾವಧಿಯಲ್ಲಿ ಲೀಗ್ ಅನ್ನು ಆಯೋಜಿಸಲು ಬದ್ಧವಾಗಿದೆ ಎಂದು ವಾದಿಸಿದ ನಂತರ, ನ್ಯಾಯಮೂರ್ತಿಗಳಾದ ಎ.ಎಸ್. ಚಂದೂರ್ಕರ್ ಮತ್ತು ಪಿ.ಎಸ್. ನರಸಿಂಹ ಅವರ ಪೀಠವು ಶುಕ್ರವಾರಕ್ಕೆ ಪ್ರಕರಣದ ವಿಚಾರಣೆಯನ್ನು ನಿಗದಿಪಡಿಸಿತು.

ಸೂರ್ಯಕುಮಾರ್‌ಗೆ ಸಾರಥ್ಯ | ಶುಭ್‌ಮನ್ ಗಿಲ್‌ಗೆ ಉಪನಾಯಕನ ಪಟ್ಟ

ಏಷ್ಯಾ ಕಪ್‌ಗೆ ಟಿ20 ತಂಡ ಪ್ರಕಟ

ಮುಂಬಯಿ: ಬಹುನಿರೀಕ್ಷಿತ 2025ರ ಏಷ್ಯಾಕಪ್ ಟೂರ್ನಿಗೆ ಭಾರತ ತಂಡ ಪ್ರಕಟಗೊಂಡಿದೆ. 15 ಸದಸ್ಯರ ತಂಡವನ್ನು ಬಿಸಿಸಿಐ ಮತ್ತು ಆಯ್ಕೆ ಸಮಿತಿ ಮಂಗಳವಾರ ಸಭೆ ನಡೆಸಿ ಪ್ರಕಟಿಸಿತು. ಸೂರ್ಯಕುಮಾರ್ ಯಾದವ್ ತಂಡವನ್ನು ಮುನ್ನಡೆಸಲಿದ್ದು, ಅಚ್ಚರಿ ಎಂಬಂತೆ ಟೆಸ್ಟ್ ತಂಡದ ನಾಯಕ ಶುಭಮನ್ ಗಿಲ್‌ಗೆ ಉಪನಾಯಕನ ಸ್ಥಾನ ನೀಡಲಾಗಿದೆ. ಆದರೆ ಶ್ರೇಯಸ್ ಅಯ್ಯರ್ ಮತ್ತು ಸಿರಾಜ್ ಅವರನ್ನು ಕೈಬಿಡಲಾಗಿದೆ.

ಶುಭಮನ್ ಗಿಲ್ ಅವರಿಗೆ ಅವಕಾಶ ಸಿಗುವುದು ಅನುಮಾನ ಎನ್ನಲಾಗಿತ್ತು, ಅನಿರೀಕ್ಷಿತವಾಗಿ ಅವರಿಗೆ ಉಪನಾಯಕ ಸ್ಥಾನವನ್ನು ನೀಡಲಾಗಿದೆ. ಈ ಹಿಂದೆ ಟಿ20 ತಂಡಕ್ಕೆ ಅಕ್ಷರ್ ಪಟೇಲ್ ಉಪನಾಯನಾಗಿದ್ದರು. ಸಂಜು ಸ್ಯಾಮ್ಸನ್ ಜತೆ ಎರಡನೇ ವಿಕೆಟ್ ಕೀಪರ್ ಆಗಿ ಜಿತೇಶ್ ಶರ್ಮಾ ಸ್ಥಾನಗಿಟ್ಟಿಸಿಕೊಂಡಿದ್ದಾರೆ. ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಕೆಳಕ್ರಮಾಂಕದಲ್ಲಿ ಆಡಿದ್ದ ಜಿತೇಶ್, ಹಲವು ಪಂದ್ಯಗಳಲ್ಲಿ ಮಿಂಚಿದ್ದರು, ಹೀಗಾಗಿ ಅವರಿಗೆ ಅವಕಾಶ ಸಿಕ್ಕಿದೆ.

ಭಾರತ ತಂಡದ ವೇಗದ ಬೌಲಿಂಗ್ ವಿಭಾಗವನ್ನು ಜಸ್ ಪ್ರೀತ್ ಬುಮ್ರಾ ಮುನ್ನಡೆಸಲಿದ್ದಾರೆ. ಅವರೊಂದಿಗೆ ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್, ಹರ್ಷಿತ್ ರಾಣಾ ಮತ್ತು ಆಲ್ ರೌಂಡರ್ ಹಾರ್ದಿಕ್ ಪಾಂಡ್ಯ ಕೂಡ ತಂಡದಲ್ಲಿದ್ದಾರೆ. ಟಿ20 ವಿಶ್ವಕಪ್ ಆಡಿದ್ದ ಶಿವಂ ದುಬೆಗೂ ಅವಕಾಶ ನೀಡಲಾಗಿದೆ. ಇತ್ತೀಚೆಗೆ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅತ್ಯಧಿಕ ವಿಕೆಟ್ ಪಡೆದಿದ್ದ ಮೊಹಮ್ಮದ್ ಸಿರಾಜ್ ಅವರನ್ನು

ಕೈಬಿಟ್ಟಿರುವುದು ಅಚ್ಚರಿ ಮೂಡಿಸಿದೆ.

ಕನ್ನಡಿಗ ಪ್ರಸಿದ್ಧ್ ಕೃಷ್ಣ, ವಾಷಿಂಗ್ಟನ್ ಸುಂದರ್, ರಿಯಾನ್ ಪರಾಗ್, ಧ್ರುವ್ ಜುರೆಲ್ ಮತ್ತು ಯಶಸ್ವಿ ಜೈಸ್ವಾಲ್ ಅವರನ್ನು ಸ್ಟ್ಯಾಂಡ್‌ಬೈ ಆಟಗಾರರನ್ನಾಗಿ ಆಯ್ಕೆ ಮಾಡಲಾಗಿದೆ. ಏಷ್ಯಾ ಕಪ್ ಟೂರ್ನಿ ಯುಎಇಯಲ್ಲಿ ಸೆ. 9ರಿಂದ 28ರವರೆಗೆ ನಡೆಯಲಿದೆ.

ಏಷ್ಯಾ ಕಪ್-ಭಾರತ ತಂಡ: ಸೂರ್ಯ ಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಜಿತೇಶ್ ಶರ್ಮಾ (ಕೀಪರ್), ಜಸ್‌ಪ್ರೀತ್ ಬುಮ್ರಾ, ಅರ್ಷ್‌ದೀಪ್ ಸಿಂಗ್, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಸಂಜು ಸ್ಯಾಮ್ಸನ್ (ಕೀಪರ್), ಹರ್ಷಿತ್ ರಾಣಾ, ರಿಂಕು ಸಿಂಗ್.

ಸ್ಟ್ಯಾಂಡ್‌ಬೈ ಆಟಗಾರರು: ಪ್ರಸಿದ್ಧ್ ಕೃಷ್ಣ, ವಾಷಿಂಗ್ಟನ್ ಸುಂದರ್, ರಿಯಾನ್ ಪರಾಗ್, ಧ್ರುವ್ ಜುರೆಲ್, ಯಶಸ್ವಿ ಜೈಸ್ವಾಲ್.

ಗಿಲ್ ಸೇರ್ಪಡೆ ಸಂತಸ: ನಾಯಕ

ಭಾರತ ತಂಡದಲ್ಲಿ ಶುಭಮನ್ ಗಿಲ್ ಸೇರ್ಪಡೆಯು ಸಂತಸ ತಂದಿದೆ ಎಂದು ಭಾರತ ಟಿ-20 ಕ್ರಿಕೆಟ್ ತಂಡದ ನಾಯಕ ಸೂರ್ಯ ಕುಮಾರ್ ಯಾದವ್ ಹೇಳಿದ್ದಾರೆ. 'ವಿಶ್ವಕಪ್ ನಂತರ ಶ್ರೀಲಂಕಾ ಪ್ರವಾಸದಲ್ಲಿ ಗಿಲ್ ಇದ್ದರು, ನಾನು ನಾಯಕತ್ವ ವಹಿಸಿದ್ದೆ. ಗಿಲ್ ಉಪನಾಯಕರಾಗಿದ್ದರು. ಬಳಿಕ ಟೆಸ್ಟ್ ಕ್ರಿಕೆಟ್ ಮತ್ತು ಚಾಂಪಿಯನ್ಸ್ ಟ್ರೋಫಿಯಲ್ಲಿ ಅವರು ನಿರತರಾಗಿದ್ದರಿಂದ ಟಿ-20 ಆಡಲು ಅವಕಾಶ ಸಿಕ್ಕಿರಲಿಲ್ಲ. ಈಗ ಅವರು ತಂಡಕ್ಕೆ ಮರಳಿರುವುದು ಸಂತಸ ತಂದಿದೆ' ಎಂದು ಸೂರ್ಯ ಕುಮಾರ್ ಹೇಳಿದ್ದಾರೆ. ಸಂಜು ಸ್ಯಾಮ್ಸನ್ ಜೊತೆ ಎರಡನೇ ವಿಕೆಟ್ ಕೀಪರ್ ಆಗಿ ಜಿತೇಶ್ ಶರ್ಮಾ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. 'ಐಪಿಎಲ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಚಾಂಪಿಯನ್ ಆಗುವಲ್ಲಿ ಅವರ ಪ್ರದರ್ಶನವು ರಾಷ್ಟ್ರೀಯ ತಂಡಕ್ಕೆ ವಾಪಸ್ ಆಗಲು ನೆರವಾಗಿದೆ' ಎಂದು ಸೂರ್ಯಕುಮಾರ್ ಹೇಳಿದ್ದಾರೆ.

ಚೊಚ್ಚಲ ಸಿನ್ಸಿನಾಟಿ ಪ್ರಶಸ್ತಿ ಗೆದ್ದ ಪೋಲೆಂಡ್ ತಾರೆ | ವೃತ್ತಿಜೀವನದ 24ನೇ ಪ್ರಶಸ್ತಿ

ಸ್ವಿಯಾಟೆಕ್‌ಗೆ ಸಿನ್ಸಿನಾಟಿ ಟೆನಿಸ್ ಪ್ರಶಸ್ತಿ

ಸಿನ್ಸಿನಾಟಿ: ಪೋಲೆಂಡ್ ತಾರೆ ಇಗಾ ಸ್ವಿಯಾಟೆಕ್ ಸಿನ್ಸಿನಾಟಿ ಓಪನ್ ಟೆನಿಸ್ ಮಹಿಳಾ ಸಿಂಗಲ್ಸ್ ವಿಭಾಗದ ನೂತನ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಮೂರನೇ ಶ್ರೇಯಾಂಕಿತೆ ಸ್ವಿಯಾಟೆಕ್‌ಗೆ ಇದು ಚೊಚ್ಚಲ ಸಿನ್ಸಿನಾಟಿ ಪ್ರಶಸ್ತಿಯಾಗಿದೆ. ಸ್ವಿಯಾಟೆಕ್ ಸೆಮಿಫೈನಲ್‌ನಲ್ಲಿ ಎಲೆನಾ ರಿಬಾಕಿನಾ ಅವರನ್ನು ಮಣಿಸಿ ಮೊದಲ ಸಲ ಈ ಕೂಟದ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದರು. ಫೈನಲ್‌ನಲ್ಲಿಯೂ ಅಮೋಘ ಆಟವಾಡಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಮಂಗಳವಾರ ನಡೆದ ಫೈನಲ್ ಪಂದ್ಯದಲ್ಲಿ ಈ ವರ್ಷದ ಎರಡನೇ ಡಬ್ಲ್ಯುಟಿಎ-1000 ಪ್ರಶಸ್ತಿ ನಿರೀಕ್ಷೆಯಲ್ಲಿದ್ದ ಜಾಸ್ಮಿನ್ ಪೌಲಿನಿ ಅವರನ್ನು 7-5, 6-4 ನೇರ ಸೆಟ್ ಅಂತರದಿಂದ ಮಣಿಸಿದರು. ಅವರ ಈ ಗೆಲುವು ಇದೇ ತಿಂಗಳ ಅಂತ್ಯದಲ್ಲಿ ಆರಂಭವಾಗುವ ಯುಎಸ್ ಓಪನ್ ಟೂರ್ನಿಗೆ ಆತ್ಮವಿಶ್ವಾಸ ಹೆಚ್ಚುವಂತೆ ಮಾಡಿದೆ. ಇತ್ತೀಚೆಗೆ ಸ್ವಿಯಾಟೆಕ್ ಚೊಚ್ಚಲ ವಿಂಬಲ್ಡನ್ ಕಿರೀಟ ಕೂಡ ಗೆದ್ದಿದ್ದರು.

ಸ್ವಿಯಾಟೆಕ್ ಅವರ 2025ರ ಋತುವಿನ ಮೂರನೇ ಮತ್ತು ಅವರ ವೃತ್ತಿಜೀವನದ 24ನೇ ಪ್ರಶಸ್ತಿಯಾಗಿದೆ. ಫೈನಲ್ ಪಂದ್ಯದಲ್ಲಿ ಇಬ್ಬರೂ ಆಟಗಾರರು ಅತ್ಯಂತ ಕಠಿಣ ಹೋರಾಟ ನಡೆಸಿದರು. ಪೌಲಿನಿ ಉತ್ತಮ ಆರಂಭ ಪಡೆಯುವ ಮೂಲಕ 3-0 ಮುನ್ನಡೆ ಸಾಧಿಸಿದರು. ಆದರೆ ಅದೇ ಲಯ ಮುಂದುವರಿಸುವಲ್ಲಿ ವಿಫಲರಾದರು. ಮೊದಲ ಸೆಟ್ 56 ನಿಮಿಷಗಳ ತನಕ ಸಾಗಿತು. ಸ್ವಿಯಾಟೆಕ್ ಮತ್ತು ಪೌಲಿನಿ ನಡುವಿನ ಆರನೇ ಮುಖಾಮುಖಿ ಇದಾಗಿತ್ತು. ಎಲ್ಲಾ ಆರು ಮುಖಾಮುಖಿಗಳನ್ನು ಸ್ವಿಯಾಟೆಕ್ ಗೆದ್ದಿದ್ದಾರೆ. ಕೊನೆಯ ಬಾರಿಗೆ ಅವರು 2024 ರ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಪರಸ್ಪರ ಮುಖಾಮುಖಿಯಾಗಿದ್ದರು.

ಏಷ್ಯನ್ ಶೂಟಿಂಗ್ | 10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ಪದಕ

ಕಂಚು ಗೆದ್ದ ಮನು ಭಾಕರ್

ಕಜಕಿಸ್ತಾನ: ಇಲ್ಲಿ ನಡೆದ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್‌ನ ಮಹಿಳಾ ವಿಭಾಗದ ಸ್ಪರ್ಧೆಯಲ್ಲಿ ಭಾರತದ ರಶ್ಮಿಕಾ ಸಹಗಲ್ ಚಿನ್ನ ಗೆದ್ದರೆ, ಡಬಲ್ ಒಲಿಂಪಿಕ್ ಪದಕ ವಿಜೇತೆ ಮನು ಭಾಕರ್ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು, ಇದು ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಮನು ಭಾಕರ್ ಗೆದ್ದ 9ನೇ ಪದಕ.

ಮಂಗಳವಾರ ನಡೆದ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಎಂಟು ಆಟಗಾರರ ಫೈನಲ್‌ನಲ್ಲಿ ಮನು 219.7 ಅಂಕಗಳನ್ನು ಗಳಿಸಿ ಮೂರನೇ ಸ್ಥಾನ ಪಡೆದರು. ಸೀನಿಯರ್ ವಿಭಾಗದಲ್ಲಿ ಮನು ಭಾಕರ್, ಸುರುಚಿ ಸಿಂಗ್ ಮತ್ತು ಪಾಲಕ್ ಒಳಗೊಂಡ ತಂಡ ಫೈನಲ್ ತಲುಪಲು ವಿಫಲವಾದರೂ ಒಟ್ಟು 1730 ಅಂಕಗಳೊಂದಿಗೆ ಮೂರನೇ ಸ್ಥಾನ ಗಳಿಸಿತು.

ಚೀನಾದ ಕ್ವಿಯಾಂಕೆ ಮಾ 243.2 ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದರು, ಕೊರಿಯಾದ ಜಿಯಿನ್ ಯಾಂಗ್ 241.6 ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದರು. ಅರ್ಹತಾ ಸುತ್ತಿನಲ್ಲಿ 584 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದ ನಂತರ ಭಾಕರ್ ಫೈನಲ್ ಪ್ರವೇಶಿಸಿದರು. ಈ ವರ್ಷ ಮೂರು ವಿಶ್ವಕಪ್ ಚಿನ್ನದ ಪದಕಗಳನ್ನು ಗೆದ್ದು ಏಷ್ಯನ್ ಚಾಂಪಿಯನ್‌ಶಿಪ್‌ಗೆ ಪ್ರವೇಶಿಸಿದ್ದ



ಸುರುಚಿ, 574 ಅಂಕಗಳೊಂದಿಗೆ 12ನೇ ಸ್ಥಾನ ಪಡೆದ ನಂತರ ಸ್ವಲ್ಪದರಲ್ಲೇ ಅವಕಾಶ ವಂಚಿತರಾದರ., ಆದರೆ ಪಾಲಕ್ 573 ಅಂಕಗಳೊಂದಿಗೆ 17ನೇ ಸ್ಥಾನ ಪಡೆದರು.

ಈ ಪ್ರಶಸ್ತಿ ಗೆಲ್ಲುವ ಮೂಲಕ, ಒಲಿಂಪಿಕ್ ಯಶಸ್ಸಿನ ಒಂದು ವರ್ಷದ ನಂತರವೂ ಭಾಕರ್ ಉತ್ತಮ ಲಯದಲ್ಲಿದ್ದಾರೆಂದು ತೋರಿಸಿದ್ದಾರೆ. ಈ ಋತುವಿನ ಆರಂಭದಲ್ಲಿ, ಏಪ್ರಿಲ್‌ನಲ್ಲಿ ನಡೆದ ಲಿಮಾ ಲೆಗ್ ವಿಶ್ವಕಪ್‌ನಲ್ಲಿ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಆದಾಗ್ಯೂ, ಜೂನ್‌ನಲ್ಲಿ ನಡೆದ ಮ್ಯೂನಿಚ್ ವಿಶ್ವಕಪ್‌ನಲ್ಲಿ 25 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಆರನೇ ಸ್ಥಾನ ಪಡೆದಿದ್ದರು.

3ನೇ ಸ್ಥಾನಕ್ಕೇರಿದ ಪ್ರಜ್ಞಾನಂದ

ಹೊಸ ಮೈಲಿಗಲ್ಲು | 2025ರ ಗಮನಾರ್ಹ ಸಾಧನೆ

ದೆಹಲಿ: ಸೇಂಟ್ ಲೂಯಿಸ್‌ನಲ್ಲಿ ನಡೆದ ಸಿಂಕ್‌ಫೀಲ್ಡ್ ಕಪ್‌ನ ಆರಂಭಿಕ ಸುತ್ತಿನಲ್ಲಿ ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರನ್ನು ಸೋಲಿಸಿದ ಆರ್. ಪ್ರಜ್ಞಾನಂದ ಫಿಡೆ ರ್‍ಯಾಂಕಿಂಗ್‌ನಲ್ಲಿ ವಿಶ್ವದ ನಂ. 3ಕ್ಕೆ ಏರುವ ಮೂಲಕ ವೃತ್ತಿಜೀವನದ ಹೊಸ ಮೈಲಿಗಲ್ಲನ್ನು ತಲುಪಿದರು. 20 ವರ್ಷ ವಯಸ್ಸಿನ ಪ್ರಜ್ಞಾನಂದ ಮೂರು ವರ್ಷಗಳ ಅವಧಿಯಲ್ಲಿ ಗುಕೇಶ್ ವಿರುದ್ಧ ಮೊದಲ ಗೆಲುವು ಸಾಧಿಸಿದ್ದರು. ಸಿಂಕ್ ಫೀಲ್ಡ್ ಕಪ್ ಗ್ರ್ಯಾಂಡ್ ಚೆಸ್ ಟೂರ್‌ನ ಕೊನೆಯ ಹಂತವಾಗಿದ್ದು, 2025ರ ಚೆಸ್ ಕ್ಯಾಲೆಂಡರ್‌ನಲ್ಲಿ ಗಮನಾರ್ಹ ಸ್ಥಾನವನ್ನು ಹೊಂತ್ತು. ರೊಮೇನಿಯಾದಲ್ಲಿ ನಡೆದ ಸೂಪರ್‌ಬೆಟ್ ಚೆಸ್ ಕ್ಲಾಸಿಕ್‌ನ ಗೆಲುವು ಸೇರಿದಂತೆ ವರ್ಷವಿಡೀ ಶ್ರೇಷ್ಠ ಪ್ರದರ್ಶನ ನೀಡುವ ಮೂಲಕ ಪ್ರಜ್ಞಾನಂದ ಸರ್ವಾಂಗೀಣ ಪ್ರದರ್ಶನ ನೀಡಿದ್ದರು.

ಸೆಪ್ಟೆಂಬರ್ 1ರಂದು ಪ್ರಕಟವಾಗಲಿರುವ ಅಧಿಕೃತ ಫಿಡೆ ಶ್ರೇಯಾಂಕದಲ್ಲಿ ಅಗ್ರ ಮೂರು ಸ್ಥಾನ ಪಡೆಯಲು ಪ್ರಜ್ಞಾನಂದ ಅವರಿಗೆ ಉತ್ತಮ ಅವಕಾಶವಿದೆ. ಅವರ ರೇಟಿಂಗ್ ಈಗ 2784ರಷ್ಟಿದ್ದು, ಮ್ಯಾಗ್ನಸ್ ಕಾರ್ಲ್ಸನ್ ಮತ್ತು ಹಿಕಾರು ನಕಮುರಾ ಮೊದಲ ಎರಡು ಸ್ಥಾನದಲ್ಲಿದ್ದಾರೆ.

ಸಿಂಕ್‌ಫೀಲ್ಡ್ ಕಪ್ ಪಂದ್ಯದ ನಂತರ ಮಾತನಾಡಿದ ಪ್ರಜ್ಞಾನಂದ, 'ಸಿಂಕ್ ಫೀಲ್ಡ್ ಕಪ್‌ನಲ್ಲಿ ಇದು ನನ್ನ ಮೊದಲ ಗೆಲುವು. ಕಳೆದ ವರ್ಷ ನಾನು ಒಂಬತ್ತು ಪಂದ್ಯಗಳಲ್ಲಿ ಡ್ರಾ ಸಾಧನೆ ಮಾಡಿದ್ದೇನೆ, ಹಾಗಾಗಿ ನಾನು ಅನೇಕ ಗೆಲುವಿನ ಅವಕಾಶ ಕಳೆದುಕೊಂಡಿದ್ದೆ, ಈ ಬಾರಿ ಉತ್ತಮ ಗೆಲುವು ಸಾಧಿಸಿದೆ' ಎಂದರು.

ಬಾಂಗ್ಲಾ, ಕಜಕಸ್ತಾನಕ್ಕೆ ಅವಕಾಶ

ರಾಜಗೀರ್: ಪುರುಷರ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಪಾಕಿಸ್ತಾನ ಮತ್ತು ಒಮನ್ ತಂಡಗಳ ಸ್ಥಾನದಲ್ಲಿ ಬಾಂಗ್ಲಾದೇಶ ಮತ್ತು ಕಜಕಸ್ತಾನ ತಂಡಗಳು ಆಡಲಿವೆ. ಮಂಗಳವಾರ ವೇಳಾಪಟ್ಟಿ ಬಿಡುಗಡೆ ಮಾಡಲಾಗಿದ್ದು, ಟೂರ್ನಿಯು ನಿಗದಿಯಂತೆ ಇದೇ 29ರಿಂದ ಸೆಪ್ಟೆಂಬರ್ 7ರತನಕ ನಡೆಯಲಿದೆ. ಅತಿಥೇಯ ಭಾರತವು, ಚೀನಾ, ಜಪಾನ್ ಮತ್ತು ಕಜಕಸ್ತಾನ ತಂಡಗಳೊಂದಿಗೆ ಎ ಗುಂಪಿನಲ್ಲಿದೆ. ಹಾಲಿ ಚಾಂಪಿಯನ್ ಕೊರಿಯಾ, ಮಲೇಷ್ಯಾ, ಚೀನಾ ತೈಪಿ ಮತ್ತು ಬಾಂಗ್ಲಾದೇಶ ತಂಡಗಳು ಬಿ ಗುಂಪಿನಲ್ಲಿವೆ. ಎಂಟು ತಂಡಗಳ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ತಂಡವು, ಬೆಲ್ಜಿಯಂ ಮತ್ತು ನೆದರ್ಲೆಂಡ್‌ನಲ್ಲಿ ನಡೆಯಲಿರುವ 2026ರ ವಿಶ್ವಕಪ್‌ನಲ್ಲಿ ಆಡುವ ಅರ್ಹತೆ ಸಂಪಾದಿಸಲಿದೆ. ಗುಂಪು ಹಂತದ ಪಂದ್ಯಗಳ ನಂತರ ಸೆ. 3ರಿಂದ 6ರ ವರೆಗೆ ಸೂಪರ್ ಫೋರ್ ಹಂತದ ಪಂದ್ಯಗಳು ನಡೆಯಲಿವೆ. ಇದರಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಫೈನಲ್ ಆಡಲಿವೆ. ಫೈನಲ್ ಪಂದ್ಯ ಸೆ. 7ರಂದು ನಿಗದಿಯಾಗಿದೆ. ಸೂಪರ್ ಫೋರ್‌ನಲ್ಲಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆಯುವ ತಂಡಗಳ ನಡುವಣ ಪಂದ್ಯ ಮತ್ತು 5 ಮತ್ತು 6ನೇ ಸ್ಥಾನಕ್ಕೆ ನಡೆಯಲಿರುವ ಪಂದ್ಯವೂ ಅಂದೇ ನಡೆಯಲಿದೆ.

ವಿಟಾಕೀಸ್

ಮಾಲಿವುಡ್‌ಗೆ ಮುತ್ತಣ್ಣ

ಶ್ರೀಕಾಂತ್ ಹುಣಸೂರು ನಿರ್ದೇಶನದ ಸನ್ ಆಫ್ ಮುತ್ತಣ್ಣ ಟೈಟಲ್ ನಲ್ಲಿಯೇ ಗಮನಸೆಳೆದಿದೆ. ಅಪ್ಪ ಮನಗನ ಬಾಂಧವ್ಯದ ಜತೆಗೆ ಕೌಟುಂಬಿಕ ಕಥೆಯನ್ನು ಹೊತ್ತುಬಂದಿರುವ ಈ ಸಿನಿಮಾದಲ್ಲಿ ಪ್ರಣಮ್ ದೇವರಾಜ್ ನಾಯಕನಾಗಿ ನಟಿಸಿದ್ದು, ರಂಗಾಯಣ ರಘು ನಾಯಕನ ತಂದೆಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಖುಷಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಮುತ್ತಣನಿಗೆ ಕನ್ನಡ ಮಾತ್ರವಲ್ಲ ಮಾಲಿವುಡ್ ನಲ್ಲಿಯೂ ಬೇಡಿಕೆ ಹೆಚ್ಚಾಗಿದ್ದು ಅಲ್ಲಿಯೂ ರಿಲೀಸ್ ಆಗಲಿದೆ. ಹಾಗಾಗಿ ಈ ವಾರ ರಿಲೀಸ್ ಆಗಬೇಕಿದ್ದ ಸಿನಿಮಾದ ಬಿಡುಗಡೆಯನ್ನು ಮುಂದೂಡಲಾಗಿದ್ದು ಸೆಪ್ಟೆಂಬರ್ 5 ರಂದು ಕನ್ನಡ ಹಾಗೂ ಮಲೆಯಾಳಂನಲ್ಲಿ ಏಕ ಕಾಲದಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. ಟೀಸರ್ ಹಾಗೂ ಹಾಡುಗಳ ಮೂಲಕ ಪ್ರೇಕ್ಷಕರನ್ನು ಸೆಳೆದಿರುವ ಈ ಚಿತ್ರದ ಟ್ರೇಲರ್ ಇದೇ ಶುಕ್ರವಾರ ಬಿಡುಗಡೆಯಾಗಲಿದೆ.

ಸಚಿನ್ ಬಸ್ರೂರು ಸಂಗೀತವಿರುವ ಅನ್ ಆಫ್ ಮುತ್ತಣ್ಣ ಸಿನಿಮಾದ ಹಾಡುಗಳಿಗೆ ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ ಬರೆದಿದ್ದಾರೆ. ಕೃಷ್ಣ ಛಾಯಾಗ್ರಹಣ ಹಾಗೂ ಹರೀಶ್ ಕೊಮ್ಮೆ ಸಂಕಲನ ಈ ಚಿತ್ರಕ್ಕಿದೆ. ಪುರಾತನ ಫಿಲಂಸ್ ನಲ್ಲಿ ಚಿತ್ರ ನಿರ್ಮಾಣವಾಗಿದೆ.

ಕಂದೀಲು ಬೆಳಗಿದ ನಾಗೇಶ್

ಪ್ರಸ್ತುತ ಚಿತ್ರರಂಗದಲ್ಲಿ ಕೆಲವು ಹಿರಿಯ ಪ್ರತಿಭೆಗಳು ಸಾಧನೆ ಮಾಡಿದ್ದರೂ, ಎಲೆಮರೆ ಕಾಯಿಯಂತೆ ಉಳಿದುಕೊಂಡಿದ್ದಾರೆ. ಅಂತಹವರಲ್ಲಿ ಎನ್.ನಾಗೇಶ್ ಕೂಡ ಒಬ್ಬರು. ನಾಗೇಶ್ ಚಿತ್ರರಂಗದಲ್ಲಿ ಸಂಕಲನಕಾರರಾಗಿ ಗುರುತಿಸಿಕೊಂಡಿದ್ದು, ಅದರ ಜತೆಗೆ ಒಳ್ಳೆಯ ಬರಹಗಾರರಾಗಿಯೂ ಪ್ರಸಿದ್ಧಿ ಪಡೆದಿದ್ದಾರೆ. ನಾಗೇಶ್ ಹೆಣೆದ ಕಥೆಗಳು ಸಿನಿಮಾ ರೂಪ ಪಡೆದಿವೆ. ಅದರಲ್ಲಿ ಇತ್ತೀಚೆಗೆ ರಾಷ್ಟ್ರಪ್ರಶಸ್ತಿಗೆ ಭಾಜನವಾದ ಕಂದೀಲು ಸಿನಿಮಾದ ಕಥೆಯೂ ನಾಗೇಶ್ ಅವರೇ ರಚಿಸಿದ್ದು ಎಂಬುದು ವಿಶೇಷ. ಬಾಲ್ಯದಿಂದಲೂ ಕಥೆ ಬರೆಯುವಲ್ಲಿ ಅಭಿರುಚಿ ಹೊಂದಿದ್ದ ನಾಗೇಶ್, ಶಿಕ್ಷಣ ಮುಗಿಸಿ ಸಿನಿಮಾರಂಗದತ್ತ ಮುಖ ಮಾಡಿದರು.

ಖ್ಯಾತ ನಟ, ನಿರ್ದೇಶಕ ಕಾಶಿನಾಥ್ ಅವರ ಜತೆಗೆ ಚಿತ್ರರಂಗಕ್ಕೆ ಬಂದ ನಾಗೇಶ್, ಪಿ.ಹೆಚ್.ವಿಶ್ವನಾಥ್, ಗಿರೀಶ್‌ಕಾಸರವಳ್ಳಿ, ಪ್ರೇಮಾಕಾರಂತ್ ಸಿನಿಮಾಗಳಲ್ಲಿ ಕಾರ್ಯನಿರ್ವಹಿಸಿದರು. ಬಳಿಕ ಹಲವು ಸಾಕ್ಷ್ಯ ಚಿತ್ರಗಳು, ಜಾಹೀರಾತು, ಧಾರವಾಹಿಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದರು. ಕೆಲವು ಧಾರಾವಾಹಿ ತಂಡದಲ್ಲಿ ಸಂಕಲನಕಾರರಾಗಿ ಕಾರ್ಯನಿರ್ವಹಿಸಿ ಮೆಚ್ಚುಗೆ ಪಡೆದರು. ಕೋತಿರಾಜ್ ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆಯುವ ಜತೆಗೆ ಸಹಾಯಕ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದರು. ರಾಘವೇಂದ್ರ ರಾಜ್‌ಕುಮಾರ್ ನಟನೆಯ ರಾಜತಂತ್ರ ಸೇರಿದಂತೆ ಸುಮಾರು ಮೂವತ್ತಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಕಲನಕಾರನಾಗಿ ಕಾರ್ಯನಿರ್ವಹಿಸಿದ್ದಾರೆ.

2019ರಲ್ಲಿ ಗೋಪಾಲಗಾಂಧಿ ಸಿನಿಮಾಕ್ಕೆ ಚಿತ್ರಕಥೆ, ಸಂಭಾಷಣೆ ಬರೆದು ಮೊದಲ ಬಾರಿಗೆ ನಿರ್ದೇಶನ ಮಾಡಿದರು. ಅದ್ಭುತವಾಗಿ ಮೂಡಿಬಂದ ಗೋಪಾಲ ಗಾಂಧಿ ಸಿನಿಮಾ ಪ್ರಥಮ ಅತ್ಯುತ್ತಮ ಚಿತ್ರ, ರಾಜ್ಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಇತ್ತೀಚೆಗೆ ಎಪ್ಪತ್ತೊಂದನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಘೋಷಣೆಯಾಗಿದ್ದು, ಕಂದೀಲು ಸಿನಿಮಾಕ್ಕೆ ಪ್ರಾದೇಶಿಕ ವಿಭಾಗದಲ್ಲಿ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಲಭಿಸಿದೆ. ಈ ಚಿತ್ರಕ್ಕೆ ನಾಗೇಶ್ ಅವರದ್ದೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಸಂಕಲನದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ ಎಂಬುದು ಹೆಮ್ಮೆಯ ವಿಷಯವಾಗಿದೆ. ನೈಜ ಘಟನೆಯಾಧಾರಿಸಿ ಬೇಲಿ ಹೂ ಸಿನಿಮಾ ಸೆಟ್ಟೇರಿದ್ದು, ಈ ಸಿನಿಮಾಗೆ ನಾಗೇಶ್ ಅವರೇ ಸಂಭಾಷಣೆ ಬರೆದಿದ್ದಾರೆ. ಈ ಚಿತ್ರಕ್ಕೆ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ವಿಶೇಷ ಜ್ಯೂರಿ ಪ್ರಶಸ್ತಿಯೂ ಲಭಿಸಿದೆ. ಸದ್ಯ ನಾಗೇಶ್ ಸಂಸ್ಕಾರ ಭಾರತ ಚಿತ್ರವನ್ನು ನಿರ್ದೇಶನ ಮಾಡಿದ್ದು, ಈ ಸಿನಿಮಾದ ಬಿಡುಗಡೆಗೆ ಸಿದ್ದವಾಗಿದೆ. ಸಮಾಜಮುಖಿಯಾಗಿ ಸಿನಿಮಾಗಳತ್ತ ಗಮನಹರಿಸುವ ನಾಗೇಶ್, ಸಮಾದ ಒಳಿತನ್ನು ಬಯಸುವ, ವೈಚಾರಿಕತೆಯನ್ನು ಸಾರುವ ಸ್ಟೋರಿಯನ್ನು ಆಯ್ದುಕೊಂಡು ನಿರ್ದೇಶನ ಮಾಡಬೇಕು ಎಂಬುದು ನಾಗೇಶ್ ಅವರ ಆಸೆಯಾಗಿದೆ. ಅಂತಹ ಕಥೆಗಳನ್ನು ಹೆಣೆದಿದ್ದು ನಿರ್ದೇಶನಕ್ಕೆ ಸಿದ್ಧತೆ ನಡೆಸಿದ್ದಾರೆ.

ದೇಶ ಭಕ್ತಿ ಸಾರುವ ಭರತ್ ನಾಮ್ ಸಮ್ಮಾನ್

ಭಾರತ್ ಕೋ ಭಾರತ್ ಹೀ ಬೋಲಾ ಜಾಯೇ ಇಂಡಿಯಾ ನಹಿ ಎಂಬ ಅಭಿಯಾನ ಆರಂಭವಾಗಿದ್ದು, ಈ ಅಭಿಯಾನದ ಭಾಗವಾಗಿ ಭಾರತ್ ಈಸ್ ಭಾರತ್ ನಾಟ್ ಇಂಡಿಯಾ ಎಂಬ ಶೀರ್ಷಿಕೆಯಲ್ಲಿ ಭರತ್ ನಾಮ್ ಸಮ್ಮಾನ್ ಆಲ್ಬಂ ರಿಲೀಸ್ ಆಗಿದೆ. ವಿಶೇಷ ಎಂದರೆ ಈ ಹಾಡು ಭಾರತದ ಇಪ್ಪತ್ತೆರಡು ಭಾಷೆಗಳಲ್ಲಿ ರಿಲೀಸ್ ಆಗಿದೆ. ಕನ್ನಡ, ಹಿಂದಿ, ಇಂಗ್ಲಿಷ್, ರಾಜಸ್ಥಾನಿ ಹೀಗೆ ಭಾರತದ ಬಹುತೇಕ ಎಲ್ಲಾ ಭಾಷೆಗಳಲ್ಲೂ ಈ ಗೀತೆ ಮೂಡಿಬಂದಿದ್ದು, ಖ್ಯಾತ ಸಂಗೀತ ನಿರ್ದೇಶಕ ದಿಲೀಪ್ ಸೇನ್ ಲತಾ ಹಯಾ ಸಂಗೀತ ಸಂಯೋಜಿಸಿದ್ದಾರೆ. ಮೊಹಮ್ಮದ್ ಸಲಾಮತ್, ದೀಪಕ್, ರೇಖಾ ರಾವ್ ಮೊದಲಾದವರು ಹಾಡಿಗೆ ದನಿಯಾಗಿದ್ದಾರೆ. ಸ್ವಾತಂತ್ರೋತ್ಸವದ ಮಾಸದಲ್ಲೇ ಈ ಗೀತೆ ಕೇಳುಗರ ಮುಂದೆ ಬಂದಿದ್ದು, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಈ ಮ್ಯೂಸಿಕ್ ಆಲ್ಬಂ ಅನ್ನು ಬಿಡುಗಡೆಗೊಳಿಸಿದರು.

ಇನ್ನು ಈ ಮ್ಯೂಸಿಕ್ ಆಲ್ಬಂನ ಕನ್ನಡ, ಹಿಂದಿ, ಇಂಗ್ಲೀಷ್ ಮತ್ತು ರಾಜಸ್ಥಾನಿ ಭಾಷೆಗಳಲ್ಲಿ ಗಮನಸೆಳೆಯುತ್ತಿರುವ ಈ ವಿಡಿಯೊದಲ್ಲಿ ಕನ್ನಡ ಚಿತ್ರರಂಗದಲ್ಲಿ ನಟರಾಗಿ, ನಿರ್ಮಾಪಕರಾಗಿ ಮತ್ತು ಸಮಾಜ ಸೇವಕರಾಗಿ ಗುರುತಿಸಿಕೊಂಡಿರುವ ಮಹೇಂದ್ರ ಮುಣೋತ್ ಕಾಣಿಸಿಕೊಂಡಿದ್ದಾರೆ. ಈ ಗೀತೆಗೆ ಗಗನ್ ಛಾಯಾಗ್ರಹಣ ಕಾರ್ಯನಿರ್ವಹಿಸಿದ್ದು, ನಿರ್ದೇಶಕ ಬಿ.ಪಿ.ಹರಿಹರನ್ ಈ ಗೀತೆಯನ್ನು ನಿರ್ದೇಶಿಸಿದ್ದಾರೆ. ಕರ್ನಾಟಕದಿಂದ ರಾಜಸ್ಥಾನದವರೆಗೆ ಹಲವು ತಾಣಗಳಲ್ಲಿ ಈ ಹಾಡನ್ನು ಚಿತ್ರೀಕರಿಸಲಾಗಿದ್ದು, ಮಹೇಂದ್ರ ಮುಣೋತ್ ಜತೆಗೆ ನೂರಾರು ಪ್ರಾದೇಶಿಕ ಭಾಷಾ ಕಲಾವಿದರು ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯ ದೇಶಭಕ್ತಿ ಭಾವನೆಗಳನ್ನು ಪ್ರೇರೇಪಿಸುವಂತಿರುವ ಈ ಗೀತೆಗೆ ಎಲ್ಲೆಡೆಯಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ.



ರೋಚಕಕಥೆಯ ಶೋಧ

ಅಯ್ಯನ ಮನೆಯ ಬಳಿಕ ಕನ್ನಡದಲ್ಲಿಯೂ ಸಾಕಷ್ಟು ವೆಬ್ ಸೀರೀಸ್‌ಗಳು ಸೆಟ್ಟೇರಿವೆ, ಅದರಲ್ಲಿ ಶೋಧ ವೆಬ್ ಸೀರೀಸ್ ಕೂಡ ಒಂದಾಗಿದ್ದು ಇನ್ನೇನು ಪ್ರಸಾರವಾಗಲಿದೆ. ಕೆಆರ್ ಜಿ ಸ್ಟುಡಿಯೋಸ್‌ನಲ್ಲಿ ಶೋಧ ವೆಬ್ ಸೀರೀಸ್ ನಿರ್ಮಾಣವಾಗಿದ್ದು, ಸುನೀಲ್ ಮೈಸೂರು ನಿರ್ದೇಶನ ಮಾಡಿದ್ದಾರೆ. ಸಸ್ಪೆನ್ಸ್, ಸೈಕಾಲಾಜಿಕಲ್ ಥ್ರಿಲ್ಲರ್ ಕಥೆಯ ಸ್ಟೋರಿ ಈ ವೆಬ್ ಸೀರೀಸ್‌ನಲ್ಲಿದ್ದು, ಪವನ್, ಕುಮಾರ್, ಸರಿ ರವಿಕುಮಾರ್, ಸಪ್ತಮಿ ಗೌಡ, ಅರುಣ್ ಸಾಗರ್, ಅನುಷಾ ರಂಗನಾಥ್ ಮುಂತಾದವರು ಶೋಧದಲ್ಲಿ ಅಭಿನಯಿಸಿದ್ದಾರೆ.

ನಾನು ಹಿಂದಿಯಲ್ಲಿ ಸಿರೀಸ್ ಮಾಡಿದ್ದೆ. ಕನ್ನಡದಲ್ಲಿಯೂ ಮಾಡಬೇಕು ಎಂದಾಗ ರಿಜೆಕ್ಟ್ ಆಗುತ್ತಿತ್ತು. ಜೀ5ನಲ್ಲಿ ವೆಬ್ ಸಿರೀಸ್ ಮಾಡುತ್ತಿದ್ದಾರೆ ಎಂದಾಗ ಖುಷಿಯಾಯಿತು. ಶೋಧದಲ್ಲಿ ನಟಿಸುವ ಅವಕಾಶ ಬಂದಾಗ ಸಂತಸದಿಂದ ಸಮ್ಮತಿಸಿದೆ. ವೆಬ್ ಸಿರೀಸ್‌ನಲ್ಲಿ ಒಳ್ಳೊಳ್ಳೆಯ ಕಥೆಗಳನ್ನು ಹೇಳಬಹುದು ಎಂದು ಪವನ್ ಕುಮಾರ್ ತಿಳಿಸಿದರು. ಶೋಧದಲ್ಲಿ ಆರು ಎಪಿಸೋಡ್‌ಗಳಿದ್ದು, ಈ ವೆಬ್ ಸರಣಿಗೆ ಸುಹಾಸ್ ನವರತ್ನ ಕಥೆ ಬರೆದಿದ್ದಾರೆ. ಶೋಧ ಆಗಸ್ಟ್ 29ರಿಂದ ಜೀ5 ಒಟಿಟಿಯಲ್ಲಿ ಪ್ರಸಾರವಾಗಲಿದೆ. ಅಯ್ಯನ ಮನೆ ಮೂಲಕ ಚಿಕ್ಕಮಗಳೂರು ಭಾಗದ ಕಥೆಯನ್ನು ಉಣಬಡಿಸಿತ್ತು. ಈಗ ಶೋಧ ಮೂಲಕ ಕೊಡಗಿನ ಭಾಗದ ಕಥೆ ಹೇಳೋದಿಕ್ಕೆ ಹೊರಟಿದೆ. ಮುಂದಿನ ದಿನಗಳಲ್ಲಿ ಉತ್ತರ ಕರ್ನಾಟಕ, ಕರಾವಳಿ, ಉತ್ತರ ಕನ್ನಡ ಹೀಗೆ ರಾಜ್ಯದ ಬೇರೆ ಬೇರೆ ಭಾಗದ ಅದರಲ್ಲಿಯೂ ನೆಲಮೂಲದ ಕಥೆಗಳನ್ನು ಪ್ರೇಕ್ಷಕರ ಮುಂದೆ ಹರವಿಡಲು ಸಿದ್ಧವಾಗಿದೆ.